ಸಂಪುಟ ೩
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ
೧೯೭೧

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೩

ಸಂಕ್ರಮಣ ಸಂಚಿಕೆ

ಕ್ರಿ.ಶ. ೧೯೭೧ ಶಾ.ಶ. ೧೮೯೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೩, ಸಂಚಿಕೆ : ೩
ಜನೆವರಿ ೧೯೭೧

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ್ ರೋಡ್, ಹುಬ್ಬಳ್ಳಿ – ೨೦



ಪುನರಾಯ್ಕೆಗೊಂಡ ನಮ್ಮ ಕುಲಪತಿಗಳು

ಪರಿವಿಡಿ

ದೀಪಾವಳಿ

೧

ಅಲ್ಲಲ್ಲಿ ಹುಲ್ಲು ಹಳದಿಗೆ ತಿರುಗಿ, ಗದ್ದೆಯಲಿ ನೆಲ್ಲು ತೆನೆಹಾಯ್ದು
ಗಾಳಿಯುದ್ದಕು ಬಾಗಿ ಬಾಚುತ್ತ ಬಿಸಿಲಿನಲಿ ಮಿರಿ ಮಿರಿ ಮಿಂಚಿ;
ಆಕಾಶದಲ್ಲಿ ಸ್ವಾತಿಯು ಮೋಡ ಸುರಿದು ಹಿಂಜರಿದು
ಕ್ಷಿತಿಜದಂಚಿನಲಿ ಸಂಜೆಯು ಸೂರ್ಯ ಝಗಝಗಿಸಿ
ಅಲ್ಲೊಂದು ಇಲ್ಲೊಂದು ಚಿಕ್ಕೆ ಕುತೂಹಲದಿ ಕಣ್ಣುತೆರೆದಾಗ
ಬೆಳ್ಳಗೆ ಮಂಜು ಮುಸುಕಿನಲಿ ಬಂತು ದೀಪಾವಳಿ.

೨

ಗೋದಿ ಸಸಿ ನಾಟಿ, ಜೋಳದ ತುಂಬುತೆನೆ ತಲೆದೂಗಿ
ಹುಚ್ಚೆಳ್ಳು ಹಚ್ಚಹಸುರಿಗೆ ಅಚ್ಚಬಂಗಾರದಂಚಾಗಿ:
ದನಕರುಗಳೆಲ್ಲ ಮೇದು ಮೇಲುಕಾಡಿಸುತ ಬರುವಾಗ
ಕೆರೆಯಂಚಿನಲ್ಲಿ ಸಾಲಾಗಿ ಕುಳಿತ ಬೆಳ್ಳಕ್ಕಿ ಬಾನಿಗೆ ಹಾರಿ,
ನಸುಗಪ್ಪಿನಲ್ಲಿ ತೊಗಲಬಾವಲಿ ಹಿಂಡ ಹಿಂಬಾಲಿಸುತ
ಮನೆಮನೆಯ ಶಿವನಬುಟ್ಟಿಗೆ ಇಳಿದು ಬಂತು ದೀಪಾವಳಿ.

೩

ನೆಲದ ಹುಲ್ಲಿನ ಮೇಲೆ ಮುಗಿಲ ಮಲ್ಲಿಗೆ ಜಗುಳಿ
ಹೊನ್ನವರೆ, ಅಡಿಕೆ, ಗೊರಟಿಗೆ, ಚೆಂಡು ದುಂಡಗೆ ಅರಳಿ,
ಬೇಲಿಗುಂಟ ಬಿಳಿ, ಹಳದಿ, ಕೆಂಪು, ಜಾಂಬಳಿ, ನೀಲಿ ಹೂಗಳ ಮೇಲೆ
ಕುಳಿತ ಪಾತರಗಿತ್ತಿ ಬೆಂಬತ್ತಿ ಮಕ್ಕಳಾಡಿರಲು,
ನೂರು ಸಲ ಗುಬ್ಬಿ ಗೂಡಿಗೆ ಮರಳಿ ಗುಟುಕಿಡಲು
ಅಕ್ಕರತೆಯಲಿ ಮರಿಗೆ ರೆಕ್ಕೆ ಮೂಡಿಸಿ ಬಂತು ದೀಪಾವಳಿ.

೪

ಸಂದಿಗೊಂದಿಯು ಕಸ–ಧೂಳಿ–ಜೊಂಡಿಗ–ಜೇಡಬಲೆ ಗುಡಿಸಿ
ಸುಣ್ಣಬಣ್ಣವ ಹಚ್ಚಿ, ಹಳೆಯ ತಲೆದಿಂಬಿಗೆ ಹೊಸ ಚೀಲ ತೊಡಿಸಿ,
ಹರಕು–ಮುರುಕು ಸಾಮಾನುಗಳ ಗಂಟುಕಟ್ಟಿ ಮೂಲೆಗೆ ಇರಿಸಿ,
ಸ್ನೇಹಿತರ ಬಳಗಕ್ಕೆ ರೇಡಿಮೇಡ್ ಶುಭಾಶಯವ ಕಳಿಸಿ,
ವಿಶೇಷ ಸಂಚಿಕೆಯ ಮುಖಪುಟದಲ್ಲಿ ಹೆಣ್ಣಿನ ವಿಚಿತ್ರ ಭಂಗಿ ಕಂಡಾಗ
ಮುಸಿ ಮುಸಿ ನಕ್ಕು, ಇದ್ದುದರಲ್ಲೆ ಖುಶಿಯಾಗಿ ಬಂತು ದೀಪಾವಳಿ.

೫

ಹೊಲ, ಗದ್ದೆ, ಗಿರಣಿ, ಗಣಿ, ಕಚೇರಿ ಕಾರ್ಖಾನೆಯಲಿ ಬೆವರು ಸುರಿಸಿ,
ಸಂಪು, ಹರತಾಳ, ಕೊಲೆ, ಸುಲಿಗೆ, ಅಪಘಾತ. ರಕ್ತಕುಂಕುಮವಿರಿಸಿ,
ವಿಧಾನಸಭೆಯ ವಿಧಿಯಿರದ ಗೊಂದಲದೊಳಗೆ ಸಿಕ್ಕು ಪಾರಾಗಿ
ಪಕ್ಷಾಂತರಕ್ಕೆ ಮನಸೋಲದೆ ತನ್ನ ಹಾದಿಯ ತಾನು ಹಿಡಿದು–
ಕಲ್ಲಿನೇಟಿಗೆ ಎಲ್ಲ ವಿದ್ಯುದ್ದೀಪ ಒಡೆದು ಚೂರಾಗಿರಲು
ಹಣತೆಗಳ ಹುಡುಹುಡುಕಿಕೊಂಡು ಬಂತು ದೀಪಾವಳಿ.

೬

ಹಲವಾರು ಸಲ ಮಾವನಮನೆಗೆ ಬಂದ ಅಳಿಯನಂತೆ
ಭೆಟ್ಟಿಯಾದಾಗೊಮ್ಮೆ 'ಚಹಕುಡಿಸಪಾ' ಎನುವ ಗೆಳೆಯನಂತೆ
ದಿನ ದಿನವು ಪತ್ರಿಕೆಯಲ್ಲಿ ಬರುವ ವಾಚಕರ ಪತ್ರಗಳ ದೂರಿನಂತೆ
ಹೊಸ್ತಿಲ ತೊಳೆವ ಮೊದಲೆ ಬಾಗಿಲಲಿ ಸಪ್ಲಳಾಗುವ ಹಾಲಿನ ಬಾಟ್ಲಿಯಂತೆ
ಬಹುದಿನದ ಮೇಲೆ ಬಂದ ಕವನಸಂಕಲನದ ತಿದ್ದಿದೆರೆಡನೆಯ ಆವೃತ್ತಿಯಂತೆ
ಬರುವ ಕಾಲಕ್ಕೆ ಬಂತು ದೀಪಾವಳಿ.

★ ಚೆನ್ನವೀರ ಕಣವಿ

ಕೆಲವು ವಚನಗಳು

ಒಂದು ಆಲೋಚನೆ

ಮಹಾಕಾವ್ಯ ರೂಢವಾಗಿದ್ದ ಕಾಲದಲ್ಲಿಯೂ ವಚನಗಳು ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿರುವುದು ತುಂಬ ಗಮನಾರ್ಹವಾಗಿದೆ. ಭಾವವೆಂದರೆ ಭಾವಕ್ಕೆ ಅಂಟಿಕೊಳ್ಳದೆ, ಕಾವ್ಯದ ಅತೀತಕ್ಕೆ ಸಿಕ್ಕು ಇಲ್ಲವೆ ಕಾವ್ಯ ಅಲ್ಲದ್ದಕ್ಕೆ ಜೋತು ಬೀಳದೆ ಒಂದು ಬಗೆಯ ಸಮತೂಕವನ್ನು ಕಾಯ್ದುಕೊಂಡು ಅರ್ಥಶೋಧನೆಯಲ್ಲಿ ವಚನಗಳು ಯಶಸ್ಸನ್ನು ಸಂಪಾದಿಸಿವೆ. ವಚನಗಳು ಕಾವ್ಯಕ್ಕೆ ಒಂದು ಹೊಸ ಆವರಣ (a new pattern)ವನ್ನು ನಿರ್ಮಿಸಿರುವುದಲ್ಲದೆ ಭಾಷೆಯ ಬಳಕೆ ಹಾಗೂ ಅಭಿವ್ಯಕ್ತಿ ಕ್ರಮದಲ್ಲಿಯೂ ಸಾಮೀಪ್ಯತೆಯನ್ನು ತೋರಿವೆ. ಬಾಹ್ಯ ಹಾಗೂ ಆಂತರಿಕ ಅನುಭವವನ್ನು ಕ್ರೋಢೀಕರಿಸಿಕೊಂಡು, ವ್ಯಕ್ತಿ ಪ್ರಜ್ಞೆಯ ಅಚ್ಚಿನೊಳಗಿಂದ ಹೊರಬಿದ್ದ ವಚನಗಳು ಆಯಾಯ ವಚನಕಾರರ ದೃಷ್ಟಿ-ಧೋರಣೆಗಳನ್ನು ನಿವೇದಿಸುತ್ತವೆ. ವಚನಕಾರರು ಧಾರ್ಮಿಕ-ಆಧ್ಯಾತ್ಮಿಕ ವಿಚಾರಗಳಿಂದ ಪ್ರೇರಿತರಾಗಿದ್ದರೂ ಅವರು ಕವಿ ಸಹಜವಾದ ನಿರಂಕುಶತ್ವವನ್ನು ಕಳೆದುಕೊಂಡಿಲ್ಲ. ಹೇರಳವಾಗಿ ರಚಿತವಾಗಿರುವ ವಚನಗಳನ್ನು ಅನುಲಕ್ಷಿಸಿದರೆ ಸಾಮಾನ್ಯ ಮಾತು ಕೂಡ ವಚನ ಇಲ್ಲವೆ ಕಾವ್ಯದ ಮಟ್ಟಕ್ಕೆ ಏರಿದ್ದು ಅದು ಉನ್ನತ ಸಾಮಾಜಿಕ ಪ್ರಜ್ಞೆಗೆ ದ್ಯೋತಕವಾಗಿದೆ. ಕಾವ್ಯವೆಂಬುದು ದೇವ-ಭಾಷೆಯನ್ನಾಡಬೇಕೆಂದು, ಭಾಷೆ ಆ ಮಟ್ಟಕ್ಕೆ ಏರಬೇಕೆಂಬುದು ಕಾವ್ಯ-ತತ್ವಜ್ಞರ ಅಭಿಮತ.

'Poetry is to speak the language of God' ಎಂದು ಹೇಳಿದ್ದು ಈ ಅರ್ಥದಲ್ಲಿಯೇ. ಅಲ್ಲಮ ಪ್ರಭುವಿನ ಉನ್ನತಮಟ್ಟದ ವಚನಗಳು ಆಧ್ಯಾತ್ಮಿಕ ಅನುಭಾವದ ಸಂವೇದನೆಗಳಾಗಿದ್ದು ಅವು ಬೌದ್ಧಿಕ ಹಕ್ಕು ಸ್ಥಾಪಿಸಿಕೊಂಡಿವೆ. ವಚನಗಳಲ್ಲಿ ನಿತ್ಯರೂಢಿಯ ಭಾಷಾ ಪ್ರಯೋಗಕ್ಕೆ ಪುರಸ್ಕಾರ ಲಭ್ಯವಾಗಿ, ಕನ್ನಡ ಭಾಷೆ ಪರೆ ಕಳಚಿಕೊಂಡು ಸತ್ವಪೂರ್ಣ ಹಾಗೂ ಗತಿ ಶೀಲವಾದ ಇನ್ನೊಂದು ಅವಸ್ಥೆಯನ್ನು ಹೊಂದಿದ್ದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಬಹುಪಾಲು ವಚನಗಳಲ್ಲಿ ಆಡುಮಾತನ್ನು ಆಡುಮಾತಿನ ಲಯವನ್ನು ರೂಢಿಸಿಕೊಳ್ಳುವ ಪ್ರಯತ್ನವಿದ್ದು ಆ ಕಾಲದ ಸಾಮಾಜಿಕ ಹಾಗೂ ಧಾರ್ಮಿಕ ಜೀವಂತ ಪ್ರಜ್ಞೆಯನ್ನು ಅಳವಡಿಸಿಕೊಂಡು ವಚನಗಳು ರಚಿತವಾಗಿವೆ. ವಚನಗಳ ಗದ್ಯತ್ವ, ರೂಪಕ ನಿರ್ಮಾಣ ಕೌಶಲ್ಯ ಹಾಗೂ ಸಾಂಕೇತಿಕತೆ-ಇವು ಅಲ್ಲದೆ ಅವುಗಳ ಸ್ವಚ್ಛಂದ ಚೌಕಟ್ಟು, ಇವು ಇಂದಿನ ಹೊಸ ಕವಿಗಳ ಗಮನವನ್ನೂ ಸೆಳೆಯುವ ಹಾಗಿವೆ. ಸಂಸ್ಕೃತದ

ಒತ್ತಡಕ್ಕೆ ಸಿಲುಕಿ ಉಸಿರುಗಟ್ಟಿ ಹೋಗುತ್ತಿದ್ದ ಕನ್ನಡ ಭಾಷೆಗೆ ವಚನಗಳು ಹೊಸ ಜೀವವನ್ನು ತುಂಬುವ ಮಂತ್ರವಾಗಿ ಪರಿಣಮಿಸಿದುವು. ವಚನಕಾರರು ತಮ್ಮ ಅನುಭವ ಹಾಗೂ ಅನುಭಾವದ ಸ್ತರಗಳನ್ನು ಗುರುತಿಸಿಕೊಂಡು ಅವನ್ನು ಸುವ್ಯವಸ್ಥಿತವಾದ ಕ್ರಮದಲ್ಲಿ ವಿಂಗಡಿಸಿ ಹೇಳಿದ್ದುಂಟು.

ಅಲ್ಲಮಪ್ರಭುವಿನ ಉನ್ನತ ಹಾಗೂ ಉದಾತ್ತ ಜೀವನ ಹಲವು ಕಾವ್ಯ, ಕಥೆಗಳಿಗೆ ಸ್ಫೂರ್ತಿ-ಪ್ರೇರಣೆಗಳನ್ನು ಇತ್ತಿದೆ. ಅಲ್ಲಮಪ್ರಭು ಶೂನ್ಯ ಸಿಂಹಾಸನವನ್ನು ಅಲಂಕರಿಸಿದ ಏಕಮಾತ್ರ ವ್ಯಕ್ತಿ. ಪ್ರಭುವಿನ ವಚನಗಳಲ್ಲಿ ಅಭಿವ್ಯಕ್ತವಾಗಿರುವ ಉನ್ನತ ನಿಲುವು ಈಗಲೂ ಹಲವರಿಗೆ ಅರ್ಥವಾಗುವುದಿಲ್ಲ. ಜ್ಞಾನ, ವೈರಾಗ್ಯ ಹಾಗೂ ಯೋಗ–ಈ ಕ್ಷೇತ್ರಗಳಲ್ಲಿನ ಅನುಭವ ಅನುಭಾವವಾಗಿ ಮಾರ್ಪಟ್ಟು ಅದೆಲ್ಲವೂ ಅವನ ವಚನಗಳಲ್ಲಿ ಪ್ರಕಟವಾಗಿದೆ. ಅಲ್ಲಮನ ವಚನಗಳು ವೈಚಾರಿಕ ಮಟ್ಟದ ಒಗಟುಗಳಂತಿವೆ. ಬೆಡಗಿನ ವಚನಗಳಲ್ಲಿ ಸಹಜವಾಗಿ ಅರ್ಥವಾಗಲಾರದಂತಹ ಬೆಡಗು, ರಹಸ್ಯ-ಹುದುಗಿದ್ದ ಕಾರಣದಿಂದಲೇ ಅವು ಸುಲಭವಾಗಿ ಗ್ರಾಹ್ಯವಾಗುವಂತಿಲ್ಲ. ಅಂಥ ಬೆಡಗಿನ ವಚನಗಳು ರೂಪಕ-ಸಂಕೇತಗಳನ್ನು ಸುತ್ತಿಕೊಂಡು ನಿಬಿಡವಾಗಿರುತ್ತವೆ. ಜ್ಞಾನದ ಸರ್ವತೋಮುಖ ತಿಳಿವಳಿಕೆಯಿಲ್ಲದೆ ಪ್ರಭುವಿನ ಬೆಡಗಿನ ಮಾತುಗಳನ್ನು ಅರ್ಥಮಾಡಿಕೊಳ್ಳುವದು ಕಷ್ಟ.

ರಕ್ಕಸಿಗಿಬ್ಬರು ಮಕ್ಕಳು. ತೊಟ್ಟಿಲ ಮೇಲೈವರು
ರಕ್ಕಸಿ ಬಾಣತಿಯೆಂದರೆ ಮಕ್ಕಳಗಿನ್ನೆಂತೋ?
ತೊಟ್ಟಿಲ ತೂಗುವೆ. ಜೋಗುಳ ಪಾಡುವೆ
ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು.
ಇದೇನು ಹೇಳಾ ಗುಹೇಶ್ವರಾ.

ಇಲ್ಲಿ ರಕ್ಕಸಿ ಎಂದರೆ ಮಾಯೆ. ಜೀವ ಪ್ರಾಣ ಇವು ಆಕೆಯ ಎರಡು ಮಕ್ಕಳು. ಪಂಚಮಹಾಭೂತಗಳಿಂದ ಕೂಡಿದ ತನುವೇ ತೊಟ್ಟಿಲು. ತಾಯಿ ರಕ್ಕಸಿಯಾದ ಮೇಲೆ ಅವಳಿಗೆ ತನ್ನ ಮಕ್ಕಳ ಬಗ್ಗೆ ವಾತ್ಸಲ್ಯ-ಮಮತೆ ಹುಟ್ಟಿಕೊಳ್ಳುವುದು ಹೇಗೆ ಸಾಧ್ಯ? ತಾಯಿ ತನ್ನಿಂದ ಹುಟ್ಟಿದವರನ್ನೇ ನುಂಗಲಾರಂಭಿಸಿ ರಕ್ಕಸಿಯಾಗಿ ಬಿಟ್ಟರೆ ಮಕ್ಕಳ ಗತಿ ಏನು? ಮಾಯೆ ಹೀಗೆ ಎಂದಿನಿಂದಲೂ ತೊಟ್ಟಿಲು ತೂಗುತ್ತ, ತನ್ನಿಂದ ಹುಟ್ಟಿದವರನ್ನೇ ಭಕ್ಷಿಸುತ್ತ ಬಂದಿದ್ದಾಳೆ. ಮಾಯೆಯಿಂದ ಆವೃತವಾದ ಮನುಷ್ಯ ಜೀವಿತದ ದುಃಸ್ಥಿತಿಯನ್ನು ಬಣ್ಣಿಸುವುದು ಈ ವಚನದ ಉದ್ದೇಶ. ವಚನದ ಕೊನೆಯಲ್ಲಿ ಬರುವ 'ಇದೇನು ಹೇಳಾ ಗುಹೇಶ್ವರಾ' ಎಂಬ ಉಕ್ತಿಯೇ ಇದೊಂದು ಒಗಟು ಎಂಬುದನ್ನು ಸ್ಪಷ್ಟ ಪಡಿಸುತ್ತದೆ.

ಗಗನದ ಮೇಲೊಂದು ಭಿನ್ನದ ಗಿಳಿ ಹುಟ್ಟಿ
ಸಯು ಸಂಭ್ರಮದಲ್ಲಿ ಮನೆಯ ಮಾಡಿತ್ತು.
ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು.

ಆತ್ಮವೆಂಬುದು ಆಕಾಶವಿದ್ದ ಹಾಗೆ. ಜೀವ ಎನ್ನುವುದೊಂದು ಗಿಳಿ. ಅದು ಸಂಸಾರ ಸಂಭ್ರಮದಲ್ಲಿ ಮನೆ ಮಾಡಿದ್ದು. ಆ ಗಿಳಿಯು (ಇಪ್ಪತ್ತೈದು ತತ್ವಗಳಿಂದೊಡಗೂಡಿದ್ದರಿಂದ) ಇಪ್ಪತ್ತೈದು ಗಿಳಿಯಾಯಿತ್ತು ಹೀಗೆ ಗಿಳಿಯ ರೂಪಕ ಕಟ್ಟಿ ಬ್ರಹ್ಮ, ವಿಷ್ಣು, ರುದ್ರ ಈ ಮೂವರೂ ಆ ಗಿಳಿಗೆ ತುತ್ತಾದರೆಂದು- ಈ ಪದ್ಯದಲ್ಲಿ ಹೇಳಿದ್ದುಂಟು.

i) ನೆಲದ ಬೊಂಬೆಗೆ ಜಲದ ಬೊಂಬೆಯನುಡಿಸಿ ಹಲವು ಪರಿಯಾಶ್ರಮ
ದಲ್ಲಿ ಉಲಿವ ಗೆಜ್ಜೆಯ ಕಟ್ಟಿ

ii) ಕಾಲುಗಳೆರಡು ಗಾಲಿ ಕಂಡಯ್ಯ ದೇಹವೆಂಬುದು ತುಂಬಿದ ಬಂಡಿ
ಕಂಡಯ್ಯ. ಬಂಡಿಯ ಹೊಡೆವವರೈವರು ಮಾನಿಸರು.

iii) ನೆಲವಿಲ್ಲದ ಭೂಮಿಯ ಮೇಲೊಂದು ಗಿಡವು ಹುಟ್ಟಿತ್ತು ಸಿಡಿಲ
ಬಣ್ಣದವೆಂಟು ಹೂವಾದವು ನೋಡಾ

ಅಲ್ಲಮ ಪ್ರಭುವಿನ ಇಂಥ ಮಾತುಗಳಲ್ಲಿ ಉನ್ನತ-ಕಲ್ಪನಾ ಶಕ್ತಿ ಮಾತ್ರವಲ್ಲದೆ ಕಾವ್ಯಶಕ್ತಿಯೂ ಸಮ್ಮಿಳಿತವಾಗಿದ್ದು ಅವು ಬುದ್ಧಿ ಶಕ್ತಿಗೆ ಚಾಲನೆಯನ್ನು ಒದಗಿಸುತ್ತವೆ. ಹಲವು ನಿರಾಕಾರ ಹಾಗೂ ನಿರವಯವ ವಿಷಯಗಳಿಗೆ ರೂಪ, ಆಕಾರ ಕಲ್ಪಿಸಿ ಹೇಳುವುದು ಪ್ರಭುವಿಗೆ ಸುಲಭ ಸಾಧ್ಯವಾಗಿಬಿಟ್ಟದೆ.

ಗುಂಡಿಯನ್ನೊತ್ತಿದರೆ ವಿದ್ಯುದ್ದೀಪ ಬೆಳಕು ಸುರಿಯುವಂತೆ ಇಂಥ ವಚನಗಳ ಅರ್ಥ ಹೊಳೆದಾಗ ಒಂದು ಬಗೆಯ ನವೀನ ಅನುಭವವುಂಟಾಗುತ್ತದೆ. ಪ್ರಭುವಿನ ವಚನಗಳಲ್ಲಿ ಆಧ್ಯಾತ್ಮಿಕ ಪ್ರಜ್ಞೆ, ಅನುಭಾವದ ದ್ರವ್ಯವೇ ಹೆಚ್ಚಾಗಿದ್ದರೂ–ಆಕಾಶ ಹಾಗೂ ಅದರಾಚೆಯ ಅನುಭವದ ಮಾತುಗಳು ಮೇಲಿಂದ ಮೇಲೆ ಕೇಳಿಸಿದರೂ ಪದ್ಯಗಳಿಗಾಗಿ ಆಯ್ದುಕೊಳ್ಳುವ ರೂಪಕ ಹಾಗೂ ಸಂಕೇತ ಇತ್ಯಾದಿ ನೆಲ-ಜಲದ ಸಂವೇದನೆಗಳನ್ನು ಸುತ್ತಿಕೊಂಡು ನಿರ್ಮಾಣಗೊಂಡಿರುವುದು ಗಮನಾರ್ಹವಾಗಿದೆ.

ವಿಚಾರವನ್ನು ಎಲ್ಲಿಯೋ ಹುದುಗಿಟ್ಟು ಅದರ ಸುತ್ತು ಶಬ್ದಾರ್ಥಗಳ ವ್ಯೂಹ ರಚಿಸುವ ವಿಧಾನ ಅತ್ಯಂತ ಜಟಿಲವಾದದ್ದು. ಶಬ್ದಾರ್ಥಗಳ ದ್ವಾರ ತೆರೆಯುತ್ತ ಹೋದಂತೆ ಅನುಭವದ ಸುರುಳಿ ಬಿಚ್ಚುತ್ತ ಹೋಗುತ್ತದೆ–ಜೆಡಗಿನ ವಚನಗಳಲ್ಲಿ.

ಧರೆಯಗಲ ಜಲಕ್ಕೆ ಕರಿಯ ನೂಲಿನ ಜಾಲ
ಕಱಿಯ ಕಬ್ಬಿಲ ಹೊಕ್ಕು ಸೇದುತ್ತಿರಲು ಕರಕ್ಕೈದಯಲಿಗಾಳ;
ಸೂಕ್ಷ್ಮವಿಚಾರದಿಂದಱಿದುಕೊಂಡಡೆಗಾಳಕ್ಕೆ ಹೊರಗಾಯಿತ್ತು.
ಹರಿವಜಲಂಗಳು ಬತ್ತಿ ಬೇಸಿಗೆಯ ಉಷ್ಣತೋಱಿ
ಬಳಿಯ ಮಳಲಲ್ಲಿಗಲ್ಲಿಗೆ ಕಾಣಬರುತ್ತಿರಲು
ಕಱಿಯ ಕಬ್ಬಿಲ ಬಂದು ಉಱಿಯ ಮೆಟ್ಟಿನೋಡಿ ಕಾಣದೆ
ಮರಳ ಜಾಲವ ಹೊತ್ತುಕೊಂಡು ಹೋಹಾಗ, ದಂಗಟನ
ಪುಣಜೆಯರು
ಹೊಂಗಱಿಯ ಬಿಲ್ಲುಕೋಲನೊಂದು ಕೈಯಲಿಪಿಡಿದು
ಒಂದು ಕೈಯಲಿ ಬಿದಿರಕ್ಕಿಯ ಪಿಡಿದು ಮುಂದೆ ಬಂದಾಡುತಿರೆ
ಕಂಗಳ ಮುತ್ತು ಸಡಿಲಿ ಪಾದದ ಮೇಲೆ ಬೀಳುತಿರೆ
ಅಂಗೈಯೊಳಗೊಂದು ಹಱಿದ ತಲೆ ಮೂಡಲು
ದಂಗಟನ ಹೊತ್ತು ಕುಣಿದಾಡುತಿರಲು ಸಿಂಗರಸಮಯವಾಯಿತ್ತು
ಕೂಡಲ ಚನ್ನಸಂಗಯ್ಯನಲ್ಲಿ ಭಕ್ತ್ಯಂಗನೆಯ ನಾವಿಂದು
ಕಂಡೆವಯ್ಯಾ.

—ಚೆನ್ನ ಬಸವಣ್ಣನವರಿಂದ ರಚಿತವಾದ ಈ ಪದ್ಯದಲ್ಲಿ ಸಂಕೇತ, ರೂಪಕ, ಪ್ರತಿಮೆ—ಇತ್ಯಾದಿ ಒಂದರೊಳಗೊಂದು ಹೆಣೆಯಲ್ಪಟ್ಟು ಇಡೀ ಪದ್ಯವನ್ನು ಒಂದು ಹೊಸ ಅರ್ಥದಲ್ಲಿ ಜೀವಂತಗೊಳಿಸುತ್ತವೆ.

ಇಲ್ಲಿಯ ೩ನೆಯ ಹಾಗೂ ೧೩ನೆಯ ಸಾಲುಗಳನ್ನು ಹೊರತುಪಡಿಸಿದರೆ, ಇದೊಂದು ರೂಪಕ ಪ್ರತಿಮೆಗಳನ್ನು ಸುತ್ತಿಕೊಂಡು ನಿಂತ ಸಾಂಕೇತಿಕ ಪದ್ಯವಾಗುತ್ತದೆ. ಭಕ್ತನ ಆಂತರಿಕ ಅನುಭವ ಈ ಪದ್ಯದ ಮೂಲದ್ರವ್ಯ. ಭಕ್ತನ ಅನನ್ಯ ಜೀವನ ಅನುಭವ ಇಲ್ಲಿ ಸಂಕೇತ, ರೂಪಕ ಹಾಗೂ ಪ್ರತಿಮೆಗಳ ಮುಖಾಂತರ ಅಭಿವ್ಯಕ್ತಗೊಂಡದ್ದರಿಂದ ಪದ್ಯ ಕ್ಲಿಷ್ಟವೆನ್ನಿಸುವುದು ಅಸ್ವಾಭಾವಿಕವೇನಲ್ಲ. ೩ನೆಯ ಹಾಗೂ ೧೩ನೆಯ ಸಾಲುಗಳಲ್ಲಿನ ಮಾತಿನ ಜಾಡು ಹಿಡಿದು ಪದ್ಯಾರ್ಥವನ್ನು ತಿಳಿದುಕೊಳ್ಳಲನುವಾಗುತ್ತದೆ.

i) ಕೈಯಲ್ಲಿ ಗಾಳ ಹಿಡಿದುಕೊಂಡು ಆಗಮಿಸುವ ಕಱಿಯ ಕಬ್ಬಿಲ ಇಲ್ಲಿ ಸಾವಿನ ಸಂಕೇತವಾಗಿದ್ದು—ಅದಕ್ಕೊಂದು ಆಕಾರವೂ ಪ್ರಾಪ್ತವಾಗಿದೆ. ಕರಿಯ ಎನ್ನುವ ವಿಶೇಷಣ ಸಾವಿನ ಘೀಕರತೆಯನ್ನು ಸೂಚಿಸುತ್ತದೆ. ಯಮ ಕೋಣದ ಮೇಲೆ ಕುಳಿತು, ಕೈಯಲ್ಲಿ ಪಾಶ ಹಿಡಿದು ಬರುವ ಪ್ರಸ್ತಾಪ ಇಲ್ಲಿಲ್ಲ. ಇಲ್ಲಿಯ ಸಾವು ಕೈಯಲ್ಲೊಂದು ಗಾಳ ಹಿಡಿದುಕೊಂಡು ಜೀವ

ಗಳನ್ನು, ಆತ್ಮಗಳನ್ನು ತನ್ನ ಬಲೆಗಿಕ್ಕಿಕೊಳ್ಳಲು ಹೊಂಚಿದ್ದು. ಬಲೆಗೆ ಬೀಳುವ ಜೀವಗಳನ್ನು (ಹೊಕ್ಕು ಸೇದು) ಕೊಲ್ಲುವುದರಲ್ಲಿಯೇ ಅವನಿಗೆ ತೃಪ್ತಿ ಅಥವಾ ಆಟ. ಭಕ್ತರು ತಮ್ಮ ಸಾಧನೆಯನ್ನು ಮುಂದುವರಿಸಿ, ಸೂಕ್ಷ್ಮ ವಿಚಾರದಿಂದ ಹುಟ್ಟು—ಸಾವುಗಳನ್ನು ಅರ್ಥಮಾಡಿಕೊಂಡು ಕಜೀಯ ಕಬ್ಬಿಲ ಎಸೆಯುವ ಗಾಳದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು ಈ ಪದ್ಯದವಿಚಾರಗಳಲ್ಲಿ ಒಂದು.

ii) ಕೆಲವರು ಸುಖೋಪಭೋಗಗಳನ್ನು ಅನುಭವಿಸುವುದರಲ್ಲಿಯೇ ತೃಪ್ತರಾಗಿರುತ್ತಾರೆ. ಪುರುಷನ ಜೊತೆಗಿರುವ ಪ್ರಕೃತಿಯ ಸಂಬಂಧ ಅತಿ ಗಾಢವಾಗಿದ್ದು,—ಪ್ರಕೃತಿಯೊಡ್ಡುವ ಛಾಯೆಯಲ್ಲಿ ಒಮ್ಮೊಮ್ಮೆ ಪುರುಷ ಶಕ್ತಿಯ ಆಟ ಸಾಗದ ಹಾಗಾಗುತ್ತದೆ. ಧರೆಯ ಮೇಲಿನ ಜಲ ಬತ್ತಿಹೋಗಿ ಮಳಲು ತೆರೆದುಕೊಳ್ಳುವಂತೆ ಜಲದ ಹಾಗೆ ಹರಿಯುವ ರಸಗಳೆಲ್ಲವೂ ಬತ್ತಿ ಹೋಗಿ ಬದುಕು ಚೈತನ್ಯವಿಹೀನವಾಗುತ್ತದೆ. ದೇಹವು ತನ್ನೆಲ್ಲ ಬಣ್ಣವನ್ನು ಕಳೆದುಕೊಂಡು ತೇಜೋವಿಹೀನವಾದಾಗ — ಅದು ಮರುಭೂಮಿಯನ್ನು ಹೋಲುತ್ತದೆ.

ಮನುಷ್ಯನ ಆತ್ಮವೆಂಬುದು ಅವಿನಾಶಿ. ಸಾವು ಎಂಬುದು ಮನುಷ್ಯ ಜೀವನದಲ್ಲಿ ಒಂದು ಸಾಮಾನ್ಯ ಘಟನೆ ಎನ್ನಿಸಿಬಿಡುತ್ತದೆ. ಆತ್ಮವಿಲ್ಲದ ದೇಹ ಬಿಳಿಯ ಮಳಲಿನಂತೆ. ಸಾವು ಜೀವವನ್ನು ಒಯ್ಯುತ್ತದೆಂದರೂ ಅದು ಹೊತ್ತೊಯ್ಯುವುದು ಮಳಲ ದೇಹವನ್ನು ಮಾತ್ರ. ಈ ವಿಚಾರವನ್ನಿಟ್ಟುಕೊಂಡು ಚೆನ್ನಬಸವಣ್ಣನವರು 'ಉರಿಯು ಮುಟ್ಟಿ ನೋಡಿ ಕಾಣದ' ಎಂದಿರುವುದು ಸಾವಿನ ದುರ್ಬಲತೆಯನ್ನು ಸೂಚಿಸುವುದಾಗಿದೆ.

iii) ದುಂಗಟನ ಪುಣಜಿಯರು—ಇಲ್ಲಿ ಮಾಯೆ—ಹಾಗೂ ಮೋಹಕ್ಕೆ ಸಂಕೇತವಾಗಿದ್ದು ಅವರು ಇಂದ್ರಿಯಗಳನ್ನು ಹೋಲುತ್ತಾರೆ. ಜೇಡ ಸ್ತ್ರೀಯರಾಗಿ ಇಲ್ಲಿ ಕಾಣಿಸಿಕೊಳ್ಳುವ ಈ ರೂಪಕ ಅತ್ಯಂತ ಆಕರ್ಷಕವಾಗಿದೆ. 'ಹೊಂಗ ಚೀಣಿಯ ಬಿಲ್ಲು ಕೋಲು'—ಅವರ ಆಕರ್ಷಣೆಗೆ ಪ್ರತೀಕವಾಗಿದೆ. ಒಂದು ಕೈಯಲ್ಲಿ ಆಕರ್ಷಣೆ ಇನ್ನೊಂದು ಕೈಯಲ್ಲಿ (ಬಿಡಿರಕ್ಕಿ—ಸತ್ತ ಮೇಲೆ ಶವದ ಮೇಲೆ ಒಗೆಯುವ ಅಕ್ಕಿ) ವಿಕರ್ಷಣೆ ಇವೆರಡು ಹಿಡಿದು ಮರಳ ದೇಹವನ್ನು ಹೊತ್ತೊಯ್ಯುವ ಜಾಲಗಾರನೆದುರು ತಮ್ಮೆಲ್ಲ ಬಿಂಕ—ಬಿನ್ನಾಣಗಳನ್ನು ಪ್ರದರ್ಶಿಸುತ್ತಾರೆ ಕಂಗಳ ಮುತ್ತು ಸುರಿಸಿ ಸಂತೋಷ ಹಾಗೂ ದುಃಖ ಇವೆರಡನ್ನೂ ಪ್ರದರ್ಶಿಸುತ್ತಾರೆ. ಇಲ್ಲಿ ಬಂದಿರುವ ದುಂಗಟಿ ವ್ಯಾಮೋಹಕ್ಕೆ ಸಂಕೇತ.

iv) ‘ಅಗ್ನಿಯೊಳಗೊಂದು ಹಱಿದ ತಲೆ ಮೂಡಲು’— ಎಂಬುದು ಲಿಂಗ ಸಾಕ್ಷಾತ್ಕಾರಕ್ಕೆ ಸಂಬಂಧಪಟ್ಟುದು. ಭಕ್ತನಿಗೆ ಲಭ್ಯವಾಗುವ ಸಿದ್ಧಿಯು ಫಲ ಅದು. ಹರಿವ ಜಲಂಗಳು ನಿಂತ ಹೋದ ಮೇಲೆ ಈ ಸ್ಥಿತಿ ಪ್ರಾಪ್ತವಾಗುವುದು. ಭಕ್ತಿ ಪರವಶತೆಯು ಬಣ್ಣನೆ ಇದರಲ್ಲಿದೆ. — ಈ ಪದ್ಯದಲ್ಲಿ ಗಮನಿಸಬೇಕಾದುದು—ಧರೆಯುಗಲ ಜಲಕ್ಕೆ ಕರಿಯು ನೂಲಿನ ಜಾಲವನ್ನೊಡ್ಡಿರುವ ಜಾಲಗಾರನ ಪ್ರತಿಮೆ; ಅದೇ ಪದ್ಯದ ಉದ್ದಕ್ಕೂ ಅರ್ಥಗಳನ್ನು ಸುತ್ತಿಕೊಂಡು ಬೆಳೆಯುತ್ತ ಹೋಗಿದೆ. ಭಕ್ತ್ಯಂಗನೆಯು ನೆವದಲ್ಲಿ ಇಲ್ಲಿ ಒಂದು ಹೊಸ ರೂಪಕ, ಹೊಸ ಪ್ರತಿಮೆ ನಿರ್ಮಾಣವಾಗಿ ಅದು ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ. ಇಂಥ ವಚನಗಳ ರಚನಾಕ್ರಮದ ಕುರಿತು ಆಲೋಚಿಸಿದಾಗ ಪದ್ಯಗಳ ಚೌಕಟ್ಟು, ನವೀನ ರೂಪಕ ಹಾಗೂ ಸಂಕೇತಗಳು, ಭಾಷಾ ಪ್ರಯೋಗ ಇವು ಸಹಜವಾಗಿಯೇ ಆಸಕ್ತಿಯನ್ನು ಕೆರಳಿಸುತ್ತವೆ. ವಚನಗಳ ಗದ್ಯತ್ವ ಭಾವ ತೀವ್ರತೆಯನ್ನು ಕಡಿಮೆ ಮಾಡಿ—ಒಂದು ವಿಶಿಷ್ಟ ತಿಳಿವಳಿಕೆ ಅಥವಾ ವಿಚಾರವನ್ನು ಹುಟ್ಟಿಸುವಲ್ಲಿ ಸಹಾಯಕವಾಗುತ್ತದೆ. ಈ ಕೆಲವು ಗಮನಾರ್ಹ ಅಂಶಗಳಿಂದ ಇಂಥ ವಚನಗಳು ವಿಚಾರ ಪ್ರಚೋದನೆಗಳನ್ನು ಒದಗಿಸುತ್ತವೆ.

★ ಬುದ್ದಣ್ಣ ಹಿಂಗಮಿರೆ

ಹೊರಟುಹೋದವನು

ರಾತ್ರಿ ಹನ್ನೆರಡು ಗಂಟೆ ಈಗ.

ಮೇಲ್ ಟ್ರೇನು ಪೂನಾ ಸ್ಟೇಷನ್ ಬಿಟ್ಟು ಪೂರಾ ಒಂದು ತಾಸು ಕಳೆಯಿತು. ಇನ್ನೂ ಲೋಂಡಾ ಬರಲು ಬಹಳಷ್ಟು ಹೊತ್ತು ಕಳೆಯಬೇಕು. ಏನು ಮಾಡುವುದು ಅಲ್ಲಿಯ ತನಕ ರಾತ್ರಿಯೆಲ್ಲ?

'ರಾತ್ರಿ ಖಿಡಕೀಬಾಗಲಾ ಹಾಕ್ಕೊಂಡು ನಿನ್ನ ಬರ್ಥ್‌ಮ್ಯಾಲ ಮಲಗಿ ಬಿಡು. ಇಲ್ಲಂದರ ಗಾಳಿ ಬಡಿದು ತಂಪಾದೀತು. ಮುಂಜಾನೆ ಮಿರಜ್ ಸ್ಟೇಷನ್‌ದಾಗ ಚಹಾ ತಗೋ. ಆಮ್ಯಾಲೆ ಲೊಂಡಾದೊಳಗ ಊಟ... ...'—

ಸ್ಟೇಷನ್ನಿಗೆ ಕಳಿಸಲು ಬಂದಿದ್ದ ಸತೀಸ ಹೇಳಿದ, ಪ್ರತಿಸಲ ತಾನು ಹುಬ್ಬಳ್ಳಿಗೆ ಹೊರಡುವಾಗ ಹೇಳುವ ಹಾಗೆ. ಬಹಳ ಕಾಳಜೀ ಮಾಡುವ ರಿಪಿ ರಿಪಿ ಗಂಡ ಅವನು.

'ಹ್ಞೂ ಹ್ಞೂ' ಅಂದಿದ್ದಳು ತಾನು, ಪ್ರತಿಸಲ ಅನ್ನುವ ಹಾಗೆ. ಟ್ರೇನು ಹೊರಟ ನಂತರ ಕಿಡಕಿ ತೆರೆದು ಭರ್ರನೆ ಬೀಸುತ್ತಿರುವ ಗಾಳಿಗೆ ಮುಖಕೊಟ್ಟು ಕೂತಿದ್ದಳು, ಪ್ರತಿಸಲ ಕೂಡುವ ಹಾಗೆ.

'ನಾಲ್ಕು ದಿವಸದಾಗ ತಿರಿಗಿ ಬರ್ತೀವಲ್ಲ? ಟೆಲಿಗ್ರಾಮು ಕೊಡ್ಲಿಕ್ಕೆ ಮರೀ ಬ್ಯಾಡ. ನಾ ಸ್ಟೇಷನ್ನಿಗೆ ಬಂದಿರ್ತೀನಿ'— ಅಂದಿದ್ದ ಅವನು. ಇದೂ ಪ್ರತಿಸಲ ಅನ್ನುವ ಹಾಗೆ.

'ಹುಬ್ಬಳ್ಳಿಯೊಳಗ ಏನದ ಅಂತ ವರ್ಷಕ್ಕ ಎರಡುಮೂರು ಸರೆ ತಪ್ಪದೇ ಹೋಗ್ತೀಯೋ ಏನೋ! ತಂದೀತಾಯೀ ಇದ್ದಾಗ ಬ್ಯಾರೇ ಇತ್ತು. ಈಗೇನದ ಅಲ್ಲೆ? ಸುಮ್ಮನ ಆಯಾಸ ಮಾಡಕೋತೀ' ಅಂದಿದ್ದ ಕೊನೆಗೆ. ಟ್ರೇನು ಹೊರಡುವ ಸಮಯಕ್ಕೆ. ಇದೂ ಪ್ರತಿಸಲ ಅನ್ನುತ್ತಿದ್ದ ಹಾಗೆಯೇ: ತಮ್ಮಿಬ್ಬರ ಲಗ್ನವಾದ ನಂತರ ಕಳೆದ ಹನ್ನೆರಡು ವರ್ಷಗಳಲ್ಲಿ ಪ್ರತಿಸಲ ತಾನು ಹುಬ್ಬಳ್ಳಿಗೆ ಹೊರಡುವಾಗಲೂ ಅನ್ನುತ್ತಿದ್ದ ಹಾಗೆ. ಅವನ ಎಲ್ಲ ಮಾತಿಗೂ ಪ್ರೀತಿಯ ಎಚ್ಚರಿಕೆಗೂ ತನ್ನ ಪ್ರತಿಸಲದ ಉತ್ತರ ಬರೇ ಹ್ಞೂ ಹ್ಞೂ.

ನೀರಾ, ವಾಠಾರ, ಸಾತಾರೆ— ಕತ್ತಲಲ್ಲಿ ಒಂದೊಂದೇ ಸ್ಟೇಷನ್ನುಗಳು ಸದ್ದಿಲ್ಲದೆ ಸರಿದು ಹೋಗುತ್ತಿವೆ. ತನಗೆ ಚಿರಪರಿಚಿತವಾಗಿರುವ ದಾರಿ ಇದು. ವರ್ಷದಲ್ಲಿ ಎರಡು–ಮೂರು ಸರೆ ತಪ್ಪದೆ ಹನ್ನೆರಡು ವರ್ಷಗಳಿಂದಲೂ ಹೋಗಿ ಬರುತ್ತಲಿರುವ ದಾರಿ— 'ಯಾಕ ಸುಮ್ಮನ ಆಯಾಸ ಮಾಡಿಕೋತೀ... ...' ಯಾಕೆ ಹೋಗುತ್ತಿದ್ದೆ?

—ಮೊದಲು ಅವ್ವ-ಅಪ್ಪ ಇದ್ದರು ಹುಬ್ಬಳ್ಳಿಯಲ್ಲಿ. ತನ್ನ ಲಗ್ನವಾದ ವರ್ಷವೆ ಅವ್ವನಿಗೆ ಸೀರಿಯಸ್ ಬ್ಲಡ್‌ಪ್ರೆಶರ್ ಆಯಿತು. ಒಂದೇ ಸವನೆ ಕೆಮ್ಮು ಹತ್ತಿ ಶ್ವಾಸಸಿಕ್ಕಿಹಾಕಿಕೊಂಡು, ಈಗಲೇ ಸತ್ತೇಬಿಡುವಳೇನೋ ಎಂದು ಆಸೆ ಹುಟ್ಟಿಸಿ, ಮತ್ತೆ ನೆಟ್ಟಗಾಗಿ, ಮತ್ತೆ ಹೀಗೇ ಆಗಿ, ನಾಲ್ಕು ತಿಂಗಳು ಒದ್ದಾಡಿ ಕಡೆಗೆ ಸತ್ತಳು ಅವ್ವ. ಅವ್ವನ ಹೆಣದ ಮೇಲೆ ಬಿದ್ದು ಅತ್ತರು ತಮ್ಮ-ತಂಗಿ-ಅಕ್ಕ ಎಲ್ಲರೂ. ಸುಮ್ಮನೇ ಕೂತಿದ್ದ ತನ್ನನ್ನು ನೋಡಿ ಕೂಡಿದ ಆಪ್ತರಲ್ಲಿನ ಇಬ್ಬರು ಮುದುಕಿಯರು ಗುಸುಗುಸು ಪಿಸುಪಿಸು ನಡೆಸಿದಾಗ ಎಂದಿನಂತೆ ಕೇಳದೆಯೇ ನೆರವಿಗೆ ಬಂದಿದ್ದ ಸತೀಶ, 'ಈಕೀಗೆ ಭಾಳ ಶಾಕ್ ಆಗೇದ್ರೀ ರವಾಬಾಯರ, ಅದಕ್ಕs ಕಣ್ಣಾಗ ನೀರು ಬರವೊಲ್ಲವು. ಅವ್ವನ ಮ್ಯಾಲೆ ಭಾಳ ಜೀವ ಈಕೀಗೆ,' ಸತೀಶನ ಲಾಜಿಕ್ ಎಂದಿನಂತೆ ಆಗಲೂ ತಪ್ಪಾಗಿತ್ತು.

ಅವ್ವ ಇದ್ದಾಗ ಅವಳ ಮೇಲೆ ಮಕ್ಕಳ ಮೇಲೆ, ಜಗತ್ತಿನ ಮೇಲೆಲ್ಲ ಜೋರು ಮಾಡುತ್ತಿದ್ದ ಆ ಮುದುಕ, ಅಪ್ಪ, ಅವ್ವ ಸತ್ತ ಕೂಡಲೆ ಮೆತ್ತ-ಗಾದದ್ದು ನೋಡಿ ಮಜಾ ಅನಿಸಿತ್ತು. ತಾನು ಅಲ್ಲಿರುವ ತನಕ ದಿನವೂ ಅಪ್ಪನಿಗೆ ಗೊತ್ತಾದ ಹಾಗೆ ಅವನ ಕೋಲು ಬಚ್ಚಿಡುವುದು, ಸಂಧ್ಯಾವಂದನೆಗೆಂದು ಇಟ್ಟ ಮಡಿನೀರನ್ನು ಮುಟ್ಟಲು ಅಕ್ಕನ ಮಕ್ಕಳಿಗೆ ಹುರುಪು ಕೊಡುವುದು, ಅಪ್ಪನಿಗೆ ಸೇರದ ಖಾರವನ್ನು ಅಡಿಗೆಗೆ ಹೆಚ್ಚಾಗಿ ಹಾಕುವುದು, ಅವನ ಪ್ರೀತಿಯ ಭಗವ-ದ್ಗೀತೆಯ ಮೇಲೆ ನಾಯಿ ಬಿಟ್ಟು ಹೊಲಸು ಮಾಡಿಸುವುದು— ಹೀಗೆಲ್ಲ ಮಾಡಿದ್ದು ನೆನಪಾಗಿ ತುಟಿಗಳು ಅಗಲವಾದವು.

ಅಪ್ಪ ಮುಂದೆ ಮೂರೇ ತಿಂಗಳಲ್ಲಿ ಹಾಸಿಗೆ ಹಿಡಿದಿದ್ದ. ಅವನ ದೇಹ ಆ ಹಾಸಿಗೆಯೊಂದಿಗೇ ಒಂದಾದಷ್ಟು ಬಡಕಲಾಗಿದ್ದರೂ ಧ್ವನಿ ಮಾತ್ರ ಇನ್ನೂ ದೊಡ್ಡದಿತ್ತು. "ನೀವೆಲ್ಲಾ ನಾ ಗೊಟಕ್ ಅನ್ನೋ ದಾರೀ ಕಾಯತೀರೋ ಸೂಳೇಮಕ್ಕಳಿರಾ, ನಾ ನಿಮಗ ಭಾರ ಆಗೀನ್ರೋ' ಎಂದೆಲ್ಲ ಅವನು ಕಿರಿಚು ತ್ತಿದ್ದಾಗ ಅವನ ಅಪರೋಕ್ಷಜ್ಞಾನದ ಅಗಾಧತೆಯ ಬಗ್ಗೆ ಮೆಚ್ಚುಗೆ ಅನಿಸುತ್ತಿತ್ತು.

ಮುಂದೆ ಒಂದು ಮುಂಜಾನೆ ಅಪ್ಪ ಎದ್ದಿರಲೇ ಇಲ್ಲ. 'ಅಪ್ಪಾ, ಅಪ್ಪಾ, ಕಣ್ಣು ತಗೀಯಪ್ಪಾ' ಎಂದು ಬೊಬ್ಬಿರಿಸಿದ್ದ ತಮ್ಮ. ಅಪ್ಪ ನಿದ್ದೆಯಲ್ಲೇ ಸತ್ತು ಪುಣ್ಯವಂತನಾಗಿದ್ದ. ತಮ್ಮ ಸುಳ್ಳೇ ಡಾಕ್ಟರನ್ನು ಕರೆಯಲು ಓಡಿದ್ದ.

'ಸ್ಲೀಪಿಂಗ ಪಿಲ್ಸ್ ಓವ್ಹರ್ ಡೋಜಾಗಿದೆ'—ಅಂದಿದ್ದರು ಫ್ಯಾಮಿಲಿ ಡಾಕ್ಟರು,

'ನಿನ್ನೆ ರಾತ್ರಿ ಯಾರು ಅವರಿಗೆ ಔಷಧ ಕೊಟ್ಟಿದ್ದು?'

'ನಾನು' ಎಂದಿದ್ದೆ ತಾನು ದೃಢವಾಗಿ, 'ನೀವು ಹೇಳಿದ್ದ ಮಿಕ್ಸ್ಚರ್ ಮತ್ತ ದಿನಾ ಕೊಡುಹಾಂಗ ಒಂದು ಗುಳಿಗಿ ಕೊಟ್ಟೇನಿ.......'

—ಹೆಂಡತಿ ಅಗಲಿದ ದುಃಖದಿಂದಲೋ ಜಡ್ಡಿನ ಬಾಧೆ ತಾಳದಂತಾಗಿಯೋ ಅಪ್ಪ ಬೇಕೆಂತಲೇ ಸ್ಲೀಪಿಂಗ್ ಪಿಲ್ಸ್ ತೆಗೆದುಕೊಂಡು ಸತ್ತಿರಬೇಕೆಂದು ಘೋರ ತಾಪದಾಯಕ ಅರಿವಿನಿಂದಾಗಿ ಎಲ್ಲರೂ ಬಹಳ ಅತ್ತರು.

—ಸುಮ್ಮನೆ ಕೂತಿದ್ದ ನನ್ನನ್ನೇ ನೋಡಿ ಗಾಬರಿಯಿಂದ ಹತ್ತಿರ ಬಂದು ಬೆನ್ನು ತಟ್ಟಿದ್ದ ಸತೀಶ, 'ನಿನಗ ಭಾಳ ದುಃಖ ಆಗೇದಂತ ನನಗ ಗೊತ್ತದ. ಆದರೇನು ಮಾಡೂದು ಜೀವನದಾಗ ಇವೆಲ್ಲ ಜರೂರ. ಸಮಾಧಾನ ಮಾಡಿಕೋ. ಧೈರ್ಯಾ ತಂದುಕೋ.' ಈ ಮನುಷ್ಯ ತನ್ನನ್ನು ತಪ್ಪು ತಿಳಿಯುವುದಕ್ಕೂ ಒಂದು ಮಿತಿ ಬೇಡವೇ ಎನಿಸಿ, ಕೆಟ್ಟೆನಿಸಿ, ಆಗ ಅಳು ಬಂದಿತ್ತು.

ಆದರೆ ಅಂದಿನ ರಾತ್ರಿ ಅಪ್ಪನಿಗೆ ಒಂದೇ ಗುಳಿಗೆ ಕೊಟ್ಟಿದ್ದೆನೋ ಅಥವಾ ಕೈತಪ್ಪಿ ಇಲ್ಲವೆ ಮರವೆಯಿಂದ ಇಲ್ಲವೆ ಗೊತ್ತಾಗದೆ ಇಲ್ಲವೆ ಏನೋ ಆಗಿ ಹೆಚ್ಚು ಕೊಟ್ಟಿದ್ದೆನೋ ತನಗೆ ಈಗಲೂ ನೆನಪಾಗಿಲ್ಲ........

ಈಗ ರಾತ್ರಿ ಎರಡು ಗಂಟೆ.

ದಟ್ಟಕತ್ತಲು ಹೊರಗೆ. ಈಗಲೇ ಮಲಗಿ ಸ್ವಲ್ಪ ನಿದ್ದೆ ಮಾಡಬೇಕು. ಇಲ್ಲವಾದರೆ ಹಗಲಾದಾಗ ನಿದ್ದೆ ಹತ್ತಿ ಲೋಂಡಾ ಬಂದಾಗ ಎಚ್ಚರಾಗದೇ ಹೋದೀತು.

ಛೆ, ಸುಳ್ಳೆ ಹೆದರಿಕೆ ತನಗೆ. ಎಷ್ಟೋ ಸಲ ಪೂನಾದಿಂದ ಹುಬ್ಬಳ್ಳಿಗೆ, ಹುಬ್ಬಳ್ಳಿಯಿಂದ ಪೂನಾಕ್ಕೆ ಪ್ರವಾಸ ಮಾಡುವಾಗ ಪೂರಾ ಹದಿನಾಲ್ಕು ತಾಸು ತಾನು ನಿದ್ರಿಸಿದ್ದುಂಟು. ಆದರೂ ಲೋಂಡಾ ಬಂದಾಗ ಮಾತ್ರ ತಾನಾಗಿ ಎಚ್ಚರಾಗುವುದು. ಪ್ರತಿ ಸಲ ಹಾಗೆಯೆ. ಪೂನಾದಲ್ಲಿ ಮನೆಯೊಳಗೆ ಎಷ್ಟೋ ಸಲ ಮಕ್ಕಳ ಪರೀಕ್ಷೆ ಇದ್ದಾಗ. ಸತೀಶನಿಗೆ ಆಫೀಸಿನಲ್ಲಿ ಕೆಲಸ ಜಾಸ್ತಿ ಇದ್ದಾಗ ಎಲ್ಲಾ ಹಾಗೇ ಚೆಲ್ಲಿಬಿಟ್ಟು ತಾನು ಹುಬ್ಬಳ್ಳಿಗೆ ಬರುತ್ತಿದ್ದುದುಂಟು. ಬಂದರೆ ಒಂದೂ ಎರಡು ದಿನಕ್ಕಿಂತ ಹೆಚ್ಚಿಗೆ ಇರಲಿಕ್ಕೆ ಆಗಿಲ್ಲ ತನಗೆ. ಇಲ್ಲಿಗೆ ಬಂದಾಗ ಯಾಕೆ ಬಂದೆನೋ ಅನಿಸುವುದು. ಬರಿದಾದ ಮನಸ್ಸು, ಬರಿದಾದ ತಲೆ ಹೊತ್ತು ಬಂದಷ್ಟೇ ಗಡಿಬಿಡಿ ಅಸಮಾಧಾನದಿಂದ ತಿರುಗಿ ಹೊರಡುತ್ತಿದ್ದೆ. ಆದರೆ ಈ ಬರಿದೋ ಬರಿದನ್ನು ಏನೋ ತುಂಬಿದಂತೆ ಅನಿಸುವದು, ಈ ಕೊನೆ ಮೊದಲಿಲ್ಲದ ಅತೃಪ್ತಿ— ಅಶಾಂತಿ ಇಲ್ಲದಂತಾಗುವುದು— ನಡುವೆ ಎಲ್ಲೋ ಒಂದು ಇಪ್ಪತ್ತು ನಿಮಿಷ—'

'ಬಾಯಿಸಾಬ್‌ಕೊ ಖಾನಾ ಲಾವ್ವೂ ?'

ಇದೇನು ಲೋಂಡಾ ಬಂದೇ ಬಿಟ್ಟಿತೇ ಎಂದು ತಟ್ಟನೆ ಎದ್ದಳು ಆಕೆ. ಇಲ್ಲ. ಇನ್ನೂ ಮಧ್ಯ ರಾತ್ರಿ. ಲೋಂಡಾ ಬರುವುದು ಮಧ್ಯಾಹ್ನ. ಹಾಗಾದರೆ ಈ ಧ್ವನಿ?

ಹನ್ನೆರಡು ವರ್ಷಗಳಿಂದ ಪರಿಚಿತವಾಗಿದ್ದ ಧ್ವನಿ, ತಾನು ಹುಬ್ಬಳ್ಳಿಗೆ ಪ್ರತಿ

ಸಲ ಹೋಗುವಾಗೊಮ್ಮೆ ತಿರುಗಿ ಬರುವಾಗೊಮ್ಮೆ ತಪ್ಪದೆ ಕೇಳಿಬರುತ್ತಿದ್ದ ಧ್ವನಿ.

ಅವನೊಬ್ಬ ಮಿಠಾಯಿ ಮಾರುವ ಮನುಷ್ಯ. ಲೋಂಡಾ ಸ್ಟೇಷನ್ ಮೇಲೆ ಪ್ರತಿ ಟ್ರೇನು ಬಂದಾಗ ಪ್ಲ್ಯಾಟ್‌ಫಾರ್ಮಿನ ಈ ಕೊನೆಯಿಂದ ಆ ಕೊನೆಯ ವರೆಗೆ ಮಿಠಾಯಿಯ ಗಾಡಿಯನ್ನು ನೂಕಿಕೊಂಡು ಹೋಗಿ ಮಾರುವ ಮನುಷ್ಯ. ಊಟದ ಹೋಟೆಲಿನಿಂದ ಊಟ ತಂದುಕೊಡುವುದೇನೂ ಅವನ ಕೆಲಸವಲ್ಲ. ಆದರೂ ಪ್ರತಿಸಲ ಈ ದಾರಿಯಲ್ಲಿ ಬಂದಾಗ ಅವನು ಬಂದು ಹಾಜರಾಗುತ್ತಾನೆ; ಹೋಟಲಿನಿಂದ ಊಟ ತಂದು ಕೊಡುತ್ತಾನೆ; ಒಳ್ಳೆಯ ಮಿಠಾಯಿ ಕೊಡುತ್ತಾನೆ; ತಾನು ಊಟ ಮಾಡುತ್ತಿರುವಷ್ಟು ಸಮಯವೂ ವಿನಯದಿಂದ ಪಕ್ಕದಲ್ಲಿ ನಿಂತಿರುತ್ತಾನೆ; ಬಿಲ್ಲು ಕೊಟ್ಟಾಗ ಬಾಗಿ ಸ್ವೀಕರಿಸಿ ಸಲಾಮ್ ಮಾಡುತ್ತಾನೆ; ಟ್ರೇನು ಹೊರಟಾಗ ಪ್ಲಾಟ್‌ಫಾರ್ಮಿನ ಕೊನೆಗೆ ನಿಂತು ಮರೆಯಾಗುವ ವರೆಗೂ ಕೈ ಬೀಸುತ್ತಾನೆ........

ತನ್ನ ಜೊತೆ ಮಕ್ಕಳು ಯಾರಾದರೂ ಬಂದಿದ್ದರೆ ಅವರೂ ಹುರುಪಿನಿಂದ ಕಿಡಕಿಯೊಳಗೆ ಮುಖ ಹಾಕಿ ಅವನು ಕಾಣುತ್ತಿರುವ ವರೆಗೂ ತಿರುಗಿ ಕೈ ಬೀಸುತ್ತಾರೆ.

'ಈ ಮಿಠಾಯಿವಾಲಾ ನೋಡು ಸ್ವಲ್ಪೂ ಬದಲಾಗಿಲ್ಲ. ನಮ್ಮ ಲಗ್ನಾದ ಹೊಸದಾಗಿ ಹ್ಯಾಂಗಿದ್ನೋ ಈಗೂ ಹಾಂಗs ಕಾಣಸ್ತಾನ ಅಲ್ಲs ?' ಅಂದಿದ್ದ ಒಮ್ಮೆ ಸತೀಶ.

ಹೌದು. ತನ್ನ ಲಗ್ನವಾದ ನಂತರ ಮೊದಲ ಸಲ ಸತೀಶನೊಂದಿಗೆ ಹುಬ್ಬಳ್ಳಿಯಿಂದ ಪೂನಾಕ್ಕೆ ಹೊರಟಾಗ, ಹನ್ನೆರಡು ವರ್ಷಗಳ ಹಿಂದೆ, ಲೋಂಡಾ ಸ್ಟೇಷನ್ ಮೇಲೆ ಇವನನ್ನು ಮೊದಲು ನೋಡಿದ್ದು. ಟ್ರೇನಿನಲ್ಲಿ ಫರ್ಸ್ಟ್‌ಕ್ಲಾಸ್ ಕಂಪಾರ್ಟಮೆಂಟನಲ್ಲಿ ತನ್ನನ್ನು ಒತ್ತರಿಸಿ ಕೂತಿದ್ದ ಸತೀಶನ ಕೈ-ಬಾಯಿ ಎರಡಕ್ಕೂ ಪುರಸೊತ್ತಿರಲಿಲ್ಲ. ತನಗೋ ಒಂದು ಬಗೆಯ ಮಂಪರ ಸಾವಿನಷ್ಟು ಶೀತಲವಾದ ನಿರ್ಲಿಪ್ತ ಮಂಪರು. ದಣಿದು ಮಲಗಿ ಗಾಢ ನಿದ್ರೆಯಲ್ಲಿದ್ದಾಗ ಮೈ ಜುಮ್ಮೆನ್ನಿಸುವ ಅಂಜಿಕೆ ಬರಿಸುವ ಕನಸು ಕಂಡು ಬೆಚ್ಚಿ ಎಚ್ಚತ್ತಂತಾಗಿತ್ತು ಲೋಂಡಾ ಸ್ಟೇಷನ್ ಮೇಲೆ ಈ ಮಿಠಾಯಿವಾಲಾನನ್ನು ನೋಡಿದಾಗ.

ಹೊಸ ಹೆಂಡತಿಗಾಗಿ ಹಲವಾರು ಮಿಠಾಯಿ ವ್ಯಾಪಾರ ಮಾಡುವುದರಲ್ಲಿ ತೊಡಗಿದ್ದ ಸತೀಶ, ಅವನೊಂದಿಗೆ. ತಾನು ಸಭ್ಯತೆ ಮರೆತು ಅವನನ್ನು ನೋಡುತ್ತಿದ್ದೆ ...... ಅಪರಿಚಿತನಾದ ಈ ಮಿಠಾಯಿವಾಲಾನ ಕಣ್ಣಲ್ಲಿ ತನಗೆ ಹಿಂದೊಂಮ್ಮೆ ಪರಿಚಿತವಾಗಿದ್ದ ಬೆಳಕು. ತಾನು ಪ್ರಯತ್ನಪಟ್ಟು ಮರೆತಿದ್ದ, ಅವ್ವ-ಅಪ್ಪ ಜಗತ್ತು ಸೇರಿ ಜುಲುಮೆಯಿಂದ ಮರೆಸಿದ್ದ ಬೆಳಕು........

ಟ್ರೇನು ನಿಧಾನವಾಗಿ ಹೊರಟು ನಂತರ ಒಮ್ಮೆಲೆ ವೇಗ ಹೆಚ್ಚಿಸಿತ್ತು. 'ಏನಷ್ಟು ವಿಚಾರ ಮಾಡತೀ? ನನಗೆ ಹೇಳು. ನಿನ್ನ ಎಲ್ಲಾ ಚಿಂತಿ-ದುಃಖ ನನಗ ಕೊಡು. ನನ್ನ ಸುಖಾ ನೀ ತಗೋ.'— ಅಂದಿದ್ದ ಸತೀಶ. ಯಾವ ಪುಸ್ತಕದಲ್ಲಿ ಓದಿದ್ದನೋ. ಅವನ ಎರವಲು ಜ್ಞಾನದ ಬಗೆಗೆ ಜುಗುಪ್ಸೆ ಅನಿಸಿದ್ದರೂ ಅವನ ಎದೆಯ ಆಸರೆ ಹಿತವೆನ್ನಿಸಿತ್ತು,

'ನೀ ಯಾತರ ಸಲುವಾಗಿ ಇಷ್ಟು ಚಿಂತೆ ಮಾಡತೀ ನನಗ ಹೇಳು. ನಿನ್ನ ಹಿಂದಿನ ಜೀವನದಾಗ ಏನರೆ ಆಗಿತ್ತೇನು? ಹಾಂಗೇನರೆ ಇದ್ದರ ನನಗ ಹೇಳು. ನಾ ನಿನ್ನನ್ನ ತಪ್ಪು ತಿಳಿಯೂದಿಲ್ಲ. ನಾ ನಿನ್ನ ಕ್ಷಮಾ ಮಾಡತೀನಿ.'— ಅಂದಿದ್ದ ಹೊಸದಾಗಿ ಮದುವೆಯಾಗಿದ್ದ ಗಂಡ ಸತೀಶ. ಅವನ ದನಿಯಲ್ಲಿ ಹೆಂಡತಿಯ ದುಃಖ ಅರಿತು ಪಾಲುಗೊಳ್ಳುವ ಕಳಕಳಿಗಿಂತಲೂ ಅವಳ ತಪ್ಪು ಕ್ಷಮಿಸಿ ಉದಾರತೆ ತೋರಿಸುವ ಕ್ಷುಲ್ಲಕ ಆತುರವೇ ಹೆಚ್ಚಾಗಿ ಕಂಡು ಬೇಸರಬಂದಿತ್ತು ತನಗೆ.

—ಈಗ ಬೆಳಗಿನ ಐದು ಗಂಟೆ.

ಇನ್ನಾದರೂ ಸ್ವಲ್ಪ ಮಲಗಬೇಕು, ಒಂದು ತಾಸಿನ ಮಟ್ಟಿಗಾದರೂ. ಮಿರಜ ಬಂದಾಗ ಎದ್ದು ಚಹಾ ತಗೊಳ್ಳಬಹುದು.

ಸತೀಶ ಯಾವಾಗಲೂ ಹಾಗೆಯೆ. ಕ್ಷಮಿಸುವ, ಉದಾರತೆ ತೋರಿಸುವ, ಸಮಾಧಾನಪಡಿಸುವ, ರಕ್ಷಿಸುವ, ತಪ್ಪು ಕಡೆಗಣಿಸುವ ಆಸಾಮಿ ಮನುಷ್ಯ. ಹಿಂದೆ ತಮ್ಮ ಲಗ್ನವಾದ ಹೊಸದರಲ್ಲಿ ಒಮ್ಮೆ ಯಾರೋ ಹುಬ್ಬಳ್ಳಿಯಿಂದ ತನ್ನ ಇತಿಹಾಸದ ಬಗ್ಗೆ ವರ್ಣರಂಜಿತವಾದ ಅನಾಮಧೇಯ ಪತ್ರ ಬರೆದಾಗ ಅದನ್ನು ತನ್ನೆದುರಿಗೇ ಓದಿ ಹರಿದುಹಾಕಿ ನಕ್ಕುಬಿಟ್ಟಿದ್ದ ಆತ 'ಕಾಲೇಜಿನ್ಯಾಗಿದ್ದಾಗ ಏನೇನರೆ ಆಗಿರ್ತಾವ. ನಾ ನಿನ್ನ ಹಿಂದಿನ ತಪ್ಪೆಲ್ಲಾ ಕ್ಷಮಾ ಮಾಡಿಬಿಟ್ಟೇನಿ. ನಿನ್ನ ಮ್ಯಾಲೆ ನನಗ ಪೂರಾ ವಿಶ್ವಾಸ ಅದ ಇನ್ನ ಮುಂದ ನೀ ನನಗ loyal ಇದ್ದರ ಮುಗಿದೀತು' ಅವನ ಈ ಮನೋಭಾವ, ಹೆಂಡತಿಯ ದೋಷಗಳನ್ನು ಮನ್ನಿಸಿ ಹೊಟ್ಟೆಯಲ್ಲಿ ಹಾಕಿಕೊಳ್ಳುವ ಈ protective instinct—ತನ್ನೊಳಗೆ ಬೆಂಕಿ ಹೊತ್ತಿಸುತ್ತದೆ. ನನಗೆ ಬೇಡ ನಿನ್ನ ಕ್ಷಮೆ, ನನಗೆ ಬೇಡ ನಿನ್ನ ದಯೆ, ನನಗೆ ಬೇಡ ನಿನ್ನ ಸಹಾನುಭೂತಿ— ಎಂದೆಲ್ಲ ಒದರಬೇಕೆನಿಸುತ್ತದೆ……

ಎಷ್ಟೋ ಸಲ ತಾನು ಕ್ಲಬ್ಬಿಗೆ ಹೋಗಿ ರಾತ್ರಿ ತಡವಾಗಿ ಮನೆಗೆ ಬಂದರೂ ಅವನಿಗೆ ಸಿಟ್ಟು ಬರುವುದಿಲ್ಲ. ಅವನ ಗೆಳೆಯರೊಂದಿಗೆ ತಿರುಗಿದರೂ ಅವನು ಏನೂ ಅನ್ನುವುದಿಲ್ಲ. ಆ ಗೆಳೆಯರ ಹೆಂಡಂದಿರಿಗೆಲ್ಲ ಮಾತ್ರ ತನ್ನ ಮೇಲೆ ವಿಪರೀತ ಸಿಟ್ಟು ಅಸೂಯೆ. ಅವರೆಲ್ಲ ಕೂಡಿದಾಗ ಮರೆಯದೆ ಚರ್ಚಿಸುವ, ದೂಷಿಸುವ ವಸ್ತು ತಾನು, ಹುಂ; ಗಂಡಂದಿರ ಬಗ್ಗೆ ನಂಬಿಕೆಯಿರದ ದುರ್ದೈವೀ ಹೆಂಡಂದಿರು ಸುಂದರಿಯರಾದ ಇತರ ಹೆಂಗಸರನ್ನು ದೂಷಿಸುವುದರಿಂದಲ್ಲದೆ ಹೋದರೆ ಇನ್ನಾವುದರಿಂದ ತೃಪ್ತಿ ಹೊಂದಬೇಕು?

ಎಲ್ಲ ಕೇಳಿ, ಎಲ್ಲ ನೋಡಿ,, 'ನಿನ್ನ ಮೇಲೆ ವಿಶ್ವಾಸವಿದೆ' ಅನ್ನುವ ಸತೀಶನನ್ನು ಎತ್ತಿ ಅವನ ಫ್ಯಾಕ್ಟರಿಯೊಳಗೆ ಜೆಂಕಿಯುಗುಳುವ ಬಂಬಿನಲ್ಲಿ ಹಾಕಬೇಕು ಅನ್ನಿಸುವುದು... ...

—ಆದರೆ ಬಹುಶಃ ಇದರಲ್ಲಿ ಅವನ ತಪ್ಪಿಲ್ಲ, ಅವನಿಗೆ ತನ್ನ ಹೆಂಡತಿಯ ಬಗೆಗಿನ ಸತ್ಯವನ್ನು ಅರಿತು ಎದುರಿಸುವ ಧೈರ್ಯವಿರಲಾರದು, ಅಂತೆಯೆ ಅವಳ ತಪ್ಪನ್ನು ತಾನು ಕ್ಷಮಿಸಿದ್ದೇನೆಂದುಕೊಂಡು, ಇಷ್ಟೆಲ್ಲ ಆದರೂ ಅವಳನ್ನು ಬಿಡದೆ ಪ್ರೀತಿಸುತ್ತಿರುವೆನೆಂದುಕೊಂಡು. ಅವಳಿಗಾಗಿಯೇ ಅವಳೊಂದಿಗಿದ್ದು ಅವಳನ್ನು ಜಗತ್ತಿನ ಎಲ್ಲ ದುಃಖ-ಕಷ್ಟಗಳಿಂದ ಕಾಯುತ್ತಿರುವೆನೆಂದುಕೊಂಡು, ಅವಳಿಗಾಗಿ ತ್ಯಾಗಮಾಡುತ್ತಿರುವೆನೆಂದುಕೊಂಡು ಸಮಾಧಾನದಿಂದಿದ್ದಾನೆ ಅವನು.

ಹ್ಞ— ತ್ಯಾಗ. ಪ್ರೀತಿಸುವ ವ್ಯಕ್ತಿಯಲ್ಲಿ ನಂಬಿಕೆಯಿದ್ದಾಗ ಮಾಡುವ ತ್ಯಾಗಕ್ಕಿಂತಲೂ, ನಂಬಿಕೆಯಿಲ್ಲದೇ ಬರೇ ನೀತಿಗಾಗಿ ಮಾಡುವ ತ್ಯಾಗ ದೊಡ್ಡದೆಂದು ಹಿಂದೆಂದೋ ಕೇಳಿದ ನೆನಪು. ಸತೀಶನಿಗೆ ತನ್ನಲ್ಲಿ ನಂಬಿಕೆಯಿಲ್ಲವೆಂದು ತನಗೆ ಗೊತ್ತಿದೆ. ಹಾಗಾದರೆ ಪ್ರೀತಿಯಿರಬಹುದೇ ?

ಯಾಕೋ ಇಷ್ಟು ವರ್ಷಗಳ ನಂತರ ಒಮ್ಮೆಲೆ ಅವನ ಬಗ್ಗೆ 'ಪಾಪ!' ಅನಿಸುತ್ತಲಿದೆ....

ಬೆಳಗು. ಮಿರಜ ಸ್ಟೇಶನ್ ಬಂತು. ಚಹಾ-ಕಾಫಿ-ವಡೆಗಳ ಧಾಂದಲೆ....

—'ಅಷ್ಟದೂರದಿಂದ ಇಷ್ಟೆಲ್ಲಾ ತ್ರಾಸು ಸಹನ ಮಾಡಿಕೊಂಡು ನೀ ಒಬ್ಬಾಕಿ ನೋಡವಾ ಇಲ್ಲೀ ತನಕಾ ಬಂದು ನಮ್ಮನ್ನ ನೋಡೂವಾಕಿ. ಉಳಿದ ಅಕ್ಕಾ-ತಂಗೇರು ಲಗ್ನಾದಕೂಡಲೆ ತವರಮನಿ ಮರತಬಿಟ್ಟಾರ. ನೀ ಮಾತ್ರ ಸ್ವಲ್ಪೂ ಬದಲಾಗಿಲ್ಲ. ಅವ್ವಾ-ಅಪ್ಪಾ ತೀರಿಕೊಂಡ ಮ್ಯಾಲೂ ನಿನಗ ತವರ ಮನೀ ಮ್ಯಾಲಿನ ಪ್ರೀತಿ ಹಾಂಗ ಅದ. ತಪ್ಪದ ಬಂದು ಭೆಟ್ಟಿ ಆಗತೀ.'— ಅನ್ನುತ್ತಾನೆ ಹುಬ್ಬಳ್ಳಿಯಲ್ಲಿಯ ತಮ್ಮ ತಾನು ಅಲ್ಲಿಗೆ ಹೋದ ಪ್ರತಿಸಲ. ಅವನ ಹೆಂಡತಿ ಮನೆತುಂಬ ಓಡಾಡಿ ಸಿಹಿತಿಂಡಿ ಮಾಡುತ್ತಾಳೆ, ಮಧ್ಯಾನ್ಹ ಊಟ ಮುಗಿಸಿ ಅಡ್ಡಾದಾಗ ಮೆಲ್ಲನೆ ಹೇಳುತ್ತಾಳೆ, 'ನಮ್ಮ ಸುಶೀಗೆ ಪರಕಾರ ಹರದುಹೋಗ್ಯಾವ ನೋಡಿದ್ರೆಲಾ ವೈನ್ಸ, ಹ್ಯಾಂಗೂ ಬಂದೀರಿ, ಒಂದ ಜೋಡು ಹೊಲಿಸಿ ಬಿಡ್ರಿ, ನೀವು ಕೊಟ್ಟ ಅರಿವಿ ಹಾಕ್ಕೊಂಡ ಬೆಳದಾವ ನನ್ನ ಮಕ್ಕಳು.' ಸಂಜೆ ವಾಕಿಂಗ್ ಮುಗಿಸಿ ಬಂದ ತಮ್ಮ ಹೇಳುತ್ತಾನೆ. 'ಹಿತ್ತಲ ಕಡೆಯ ಮಾಳಗಿ ಬೀಳಲಿಕ್ಕಾಗೇದ ಅಕ್ಕಾ, ರಿಪೇರಿ ಮಾಡಸದಿದ್ರ ಮಳೆಗಾಲ ಕಳೆಯೋದು ಕಠಿಣ ಅದ. ಈ ತುಟ್ಟಿಕಾಲದಾಗ ಎಲ್ಲಾ ನಿಭಾಯಿಸೋದು ಅಂದ್ರ—'

—ಹೀಗೇ ಕೊನೆಯಿಲ್ಲದ ಗೋಳಿನ ಕತೆ ದೇವರೇ, ಯಾಕೆ ಬಂದೆ ಇಲ್ಲಿಗೆ ಎನ್ನಿಸಿಬಿಡುತ್ತದೆ. ಹೇಗೋ ಎರಡು ದಿನ ಕಳೆದು ತಿರುಗಿ ಊರಿಗೆ

ಹೊರಡುತ್ತಾಳೆ ತಾನು, ಸ್ವಲ್ಪ ಹಣ ತಮ್ಮನ ಕೈಯಲ್ಲಿಟ್ಟು, ‘ಮತ್ತೆ ಊರಿಗೆ ಹೋಗಿ ಕಳಿಸುತ್ತೇನೆಂದು ಆಶ್ವಾಸನೆ ಕೊಟ್ಟು, ತುಂಬಿದ ಬೇಸರದಿಂದ ಟ್ರೇನು ಹತ್ತುತ್ತಾಳೆ. ಲೋಂಡಾ ಬಂದೀತೇ ಎಂದು ಕಾಯುತ್ತಾಳೆ. ‘ಬಾಯಿ ಸಾಬ್‌ಕೊ ಖಾನಾ ಲಾವ್ನಾ ?’ ಎಂದು ಕೇಳುತ್ತಾನೆ ಕಿಡಿಕಿಯಾಚೆಯಿಂದ ಆ ಮಿಠಾಯಿವಾಲಾ, ಅಷ್ಟೇ ಅವನು ಮಾತಾಡುವುದು. ತಾನು “ಹ್ನೂ” ಅಂದ ಕೂಡಲೇ ಮಿಠಾಯಿಯ ಗಾಡಿ ಅಲ್ಲಿ ಬಿಟ್ಟು ಓಡುತ್ತಾನೆ........ತಿರುಗಿ ತನ್ನ ಟ್ರೇನು ಹೊರಟಾಗ ಪ್ಲ್ಯಾಟ್‌ಫಾರ್ಮಿನ ತುದಿಗೆ ನಿಂತು ಕೈ ಬೀಸುತ್ತಾನೆ....

“ನಿಂದೂ ತವರಮನೀ ಸಲುವಾಗಿ ಭಾಳ ಅಂತಃಕರಣ. ಇಷ್ಟು attachment ಇರವ್ರು ಅಗದೀ ಕಡಿಮಿ”—ಅನ್ನುತ್ತಾನೆ ಗಂಡ.

—ಹತ್ತು ಗಂಟೆ.

ಬಿಸಿಲು ಏರತೊಡಗಿದೆ. ಕಿಡಿಕಿಗುಂಟ ಒಳಗೆ ಇಳಿದುಬಂದಿದೆ. ಕಿಡಿಕಿ ಮುಚ್ಚಲು ಮನಸ್ಸಿಲ್ಲ.

“ಬಿಸಿಲು ನಿಮಗೆ ಒಳ್ಳೇದಲ್ಲ”—ಮೊನ್ನೆ ಹೇಳಿದ್ದರು ಡಾಕ್ಟರು ತನಗೆ. ಬಹಳ ಆತ್ಮವಿಶ್ವಾಸದ ಮನುಷ್ಯ ಆ ಡಾಕ್ಟರು. ಸತೀಶನ ಆಪ್ತಗೆಳೆಯನಂತೆ. ಹಹ್ಹಹ್ಹ, ಹೇಗೆ ಗೋಳುಗುಟ್ಟಿಸಿದ್ದೆ ಅವನನ್ನು ತಾನು ಹತ್ತು ವರ್ಷಗಳ ಹಿಂದೊಮ್ಮೆ!

ಹತ್ತು ವರ್ಷಗಳ ಹಿಂದೆ ಮೊದಲ ಸಲ ತಾನು ಬಸಿರಿಯಾದಾಗ ಸತೀಶ ನಿಗಿಂತ ಹೆಚ್ಚು ಸಂಭ್ರಮಪಟ್ಟಿದ್ದ ಅವನು. “ನಮ್ಮ ಸತೀಶಗ ಮಕ್ಕಳ ಮ್ಯಾಲೆ ಭಾಳ ಪ್ರೀತಿ ಭಾಭಿ. ನೀವು ನಿಮ್ಮ ಸಲುವಾಗಿ ಭಾಳ ಕಾಳಜಿ ತಗೋಬೇಕು.” ದಿನಾ ತಪ್ಪದೆ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದ ಅವನು. “ಎಲ್ಲಾ ನಿನ್ನ ಜವಾಬ್ದಾರಿ ನೋಡಪಾ” ಎನ್ನುತ್ತಿದ್ದ ಸತೀಶ.

ಮುಂದೆ ನಾಲ್ಕು ತಿಂಗಳ ನಂತರ ಒಂದು ದಿನ ಆಕಸ್ಮಿಕವಾಗಿ ಗರ್ಭಪಾತ ವಾದಾಗ ಸತೀಶ ಕಂಗೆಟ್ಟು ತಲೆಮೇಲೆ ಕೈಹೊತ್ತು ನಿರ್ಜೀವನಂತೆ ಕೂತಿದ್ದ. ‘ಏನಾದರೂ ಅಪಥ್ಯ ಮಾಡಿದಿರಾ ಭಾಭಿ?’ ಎಂದು ಉತ್ಕಂಠೆಯಿಂದ ಕೇಳಿದ್ದ ಈ ಡಾಕ್ಟರು. ‘ಇಲ್ಲಪಲ್ಲ’—ಎಂದಿದ್ದೆ, ವಿಜಯದ ಆನಂದದಿಂದ. ಆ ಆಘಾತ ದಿಂದ ಮುಂದೆ ತಿಂಗಳುಗಳವರೆಗೆ ಸತೀಶ ಮಂಕಾಗಿದ್ದ. ಆ ಡಾಕ್ಟರನ ಪೆಚ್ಚು ಮುಖ ನೋಡಿದಾಗೆಲ್ಲ ಹಾಯೆನಿಸುತ್ತಿತ್ತು........

ಅವನು ವರ್ಜ್ಯವೆಂದು ಹೇಳಿದ್ದ ಪಪ್ಪಾಯಿ ಹಣ್ಣನ್ನು—ದೊಡ್ಡದೊಂದು ಪಪ್ಪಾಯಿ ಹಣ್ಣನ್ನು— ಯಾರಿಗೂ ಗೊತ್ತಾಗದ ಹಾಗೆ ಅಟ್ಟದ ಮೇಲೆ ಕೂತು ತಾನು ತಿಂದದ್ದು ಕಡೆಗೂ ಯಾರಿಗೂ ಗೊತ್ತಾಗಿರಲೇ ಇಲ್ಲ. ಹಹ್ಹ ಹ್ಹ ...

ಇರುವ ಸುಖ ಸಾಲದೆಂದು ಮಕ್ಕಳೊಂದು ಕೇಡು. ಈ ಮಕ್ಕಳು ತನ್ನವೆಂದು ತನಗೆಂದೂ ಅನಿಸಿಲ್ಲ. ಮುಂದೆ ಪಾಪು ಹುಟ್ಟಿದಾಗ ಸತೀಶನಿಗೆಷ್ಟು

ಖುಶಿ—ಎಂದೂ ಯಾರೂ ಮಾಡಲಾರದ್ದೇನನ್ನೋ ತಾನು ಮಾಡಿದ ಹಾಗೆ. ಆ ಮಗು ಸುಮ್ಮನೆ ಬಾಯಿ ಕಿಸಿದಾಗ, ಕೈಕಾಲು ಬಡಿದಾಗ, ಅರ್ಥವಾಗದ ಧ್ವನಿ ಹೊರಡಿಸಿದಾಗ ಇವನಿಗೆಷ್ಟು ಹೆಮ್ಮೆ—"ನಮ್ಮ ಪಾಪು ಬಹಾಳ ಮಿಸ್ಚಿವ್ಹಸ್', ಬಹಾಳ ಶಾಣೆ, ಬಹಾಳ—" ಜಗತ್ತಿನಲ್ಲಿಯ ಎಲ್ಲಾ ಹಡೆದ ವರಿಗೂ ಹೀಗೇ ಅನಿಸುತ್ತದೆ ಕಣೋ ಸತೀಶ—ಎಂದು ಹೇಳಿದ್ದರೆ......

ಹನ್ನೆರಡು ಗಂಟೆ.

ಬಿಸಿಲು ಹೆಚ್ಚಾಗುತ್ತಲೇ ಇದೆ. ಯಾವುದೋ ರೋಡ್‌ಸ್ಟೇಷನ್ ಮೇಲೆ ಗೂಡ್ಸ್‌ಗಾಡಿ ಹಳಿ ತಪ್ಪಿದ್ದರಿಂದ ಒಂದು ತಾಸು ಸುಮ್ಮನೆ ತಡವಾಗಿ ಹೋಯಿತು. ಇಡೀ ರಾತ್ರಿ ನಿದ್ರೆ ಮಾಡಿದ್ದರಿಂದ ಕಣ್ಣು ಭಾರ, ತಲೆ ಭಾರ. ಈ ಸಲ ಹುಬ್ಬಳ್ಳಿಯಲ್ಲಿ ಹೆಚ್ಚು ದಿನ ನಿಲ್ಲಬಾರದು. ತಮ್ಮನ ಸಂಸಾರದ ಗೋಳು ಕೇಳಿ ಕೇಳಿ ಬೇಸರವಾಗಿದೆ. ಕಂಪಾರ್ಟಮೆಂಟನಲ್ಲಿ ವಿಪರೀತ ಸೆಕೆ. ಫ್ಯಾನಿನ ಗಾಳಿಯೆಲ್ಲ ಉಗಿಯಾಗುತ್ತಿದೆ. ಹುಶ್, ಲೋಂಡಾ ಬರಬಾರದೆ....

ಅರ್ಧ ನಿದ್ದೆ, ಅರ್ಧ ಎಚ್ಚರ. ಟ್ರೇನು ನಿಂತಿದೆ. ಲೋಂಡಾ ಸ್ಟೇಷನ್. ಮಧ್ಯಾನ್ಹ ಎರಡು ಗಂಟೆಯಾಗಿರಬೇಕು. ಕಣ್ಣು ತೆರೆಯಲು ಮನಸ್ಸಿಲ್ಲ "ಬಾಯಿಸಾಬ್‌ಕೋ ಖಾನಾ ಲಾವ್ಹೂ?" ನಿರೀಕ್ಷಿಸುತ್ತ ಹಾಗೆ ಕಣ್ಣು ಮುಚ್ಚಿ ಮಲಗಿದ್ದಳು ಆಕೆ.

ಜನರು ಹತ್ತುವ, ಇಳಿಯುವ ಗಡಿಬಿಡಿ ಪೋರ್ಟರುಗಳ ಕೂಗಾಟ. ಚಹಾ-ಕಾಫಿ ಮಾರುವ ಹುಡುಗರ ಚೀರುದನಿ. ಯಾರದೋ ಮಗು ಅಳುವ ಸ್ವರ. ಯಾರೋ ಗಟ್ಟಿಯಾಗಿ ನಕ್ಕ ಹಾಗೆ. ಒಟ್ಟು ಗದ್ದಲೋ ಗದ್ದಲ.. ....

ಆದರೆ ಊಹ್ಞೂ, ಮಿಠಾಯಿವಾಲಾ ಬಂದೇ ಇಲ್ಲ. ಆಕೆ ತಟ್ಟನೆ ಎದ್ದು ಕಿಡಿಕಿಯಿಂದ ಹೊರಗೆ ಹಣಿಕಿದಳು—ಪ್ಲ್ಯಾಟಫಾರ್ಮಿನ ಈ ಕೊನೆಯಿಂದ ಆ ಕೊನೆಯುವರೆಗೂ, ಗದ್ದಲವೇನೋ ಬಹಳಷ್ಟಿತ್ತು. ಆದರೂ ಆವನು ಇದ್ದಿದ್ದರೆ ಇದ್ದಲ್ಲಿಂದಲೇ ತನ್ನ ಗಾಡಿ ಸಹಿತವಾಗಿ ಕಾಣಿಸುತ್ತಿದ್ದ. ಎಲ್ಲಿ ಆವನು? ಮೈಯಲ್ಲಿ ನೆಟ್ಟಗಿಲ್ಲವೇ? ಊರಿಗೆ ಹೋಗಿದ್ದಾನೆಯೋ? ಈ ಕೆಲಸ ಬಿಟ್ಟು ಬಿಟ್ಟನೇ?

ಛೇ, ಈ ಯಾವುದನ್ನು ಒಪ್ಪಲು ಆಗುವುದಿಲ್ಲ. ಅವನು ಇಲ್ಲೆಲ್ಲಾದರೂ ಇರಲೇಕು.

ಆವಳು ಟ್ರೇನು ಇಳಿದು ಪ್ಲ್ಯಾಟ್‌ಫಾರ್ಮ ಮೇಲೆಲ್ಲ ಅಡ್ಡಾಡಿದಳು. ಊಟದ ಮನೆಯ ಒಳಗೆ ಹೊಕ್ಕು ನೋಡಿದಳು. ಪ್ಲ್ಯಾಟಫಾರ್ಮುಗಳಾಚೆ ದೂರದಗುಂಟ ಕಣ್ಣು ಹರಿಸಿದಳು. ಅವನು ಎಲ್ಲೂ ಇಲ್ಲ.

ಎದುರಿಗೊಬ್ಬ ಸಣ್ಣ ಹುಡುಗ—ನೀರು ಹೊರುವ ಹುಡುಗ, ಹಲವಾರು ಸಲ ಮಿಠಾಯಿವಾಲಾನೊಂದಿಗೆ ಕಂಡ ನೆನಪು—ಬರುತ್ತಿದ್ದಾನೆ.

" ಏ ಹುಡುಗಾ, ಸ್ವಲ್ಪ ಬಾಪ್ಪಾ."

ಏನೆಂದು ವಿಚಾರಿಸುವುದು ಇವನನ್ನು ? ಮಿಠಾಯಿವಾಲಾ ಎಲ್ಲಿ ಎಂದೆ ? ನಿಮಗೇಕೆ ಬೇಕೆಂದು ಅವನು ಕೇಳಿದರೆ ?

" ಇಲ್ಲಿ ಒಬ್ಯಾತ ಗಾಡಿಯಲ್ಲಿ ಮಿಠಾಯಿ ಇಟ್ಕೊಂಡು ಮಾರುತ್ತಿದ್ದನಲ್ಲ...."

" ಓ, ಶಿವಿದಾದಾನೇ ?"—ಆ ಹುಡುಗ ಹಲ್ಕಿರಿದು ಹೇಳಿದ, "ಅವನು ಹೋಗಿ ಬಿಟ್ಟನಲ್ಲ ಬಾಯಿಸಾಬ್ ? "

" ಅಂದರ್‍ಯ?"—ಎದೆಯಲ್ಲೇನೋ ನೋವು.

" ಹಳ್ಳಿಯೊಳಗ ಅವನ ಅಪ್ಪಾ ಸತ್ಹೋದ್ರು. ಮನೆ ನೋಡ್ಕೊಳ್ಳಿಕ್ಕೆ ಅಂತ ಶಿವಿದಾದಾ ಹೋಗಿಬಿಟ್ಟ. ನಿಮಗ ಮಿಠಾಯಿ ಬೇಕೇನ್ರಿ ಬಾಯಿ? ಬೇರೆ ಛಲೋ ತಂದ್ಕೊಡ್ತೀನಿ."

" ಬ್ಯಾಡಪ್ಪ ಬ್ಯಾಡ. ನಿನ್ನ ಶಿವಿದಾದಾ ತಿರುಗಿ ಬರೋದಿಲ್ಲೇನು ಹಂಗಾರ ?"

" ಇನ್ನ್ಯಾಕ ಬರ್ತಾನ್ರಿ ಬಾಯಿ ?"

—ಮಿಠಾಯಿವಾಲಾ ಇನ್ನು ಬರುವುದಿಲ್ಲ. ತಾನೀಗ ಹುಬ್ಬಳ್ಳಿಗೆ ಹೋದರೂ ತಿರುಗಿ ಬರುವಾಗ ಅವನು ಬರುವುದಿಲ್ಲ. ಮುಂದೆ ಎಂದಾದರೂ ತಾನು ಮತ್ತೆ ಈ ದಾರಿಯಿಂದ ಬಂದರೆ ಅವನು ಬರುವುದಿಲ್ಲ. ಅವನಿನ್ನು ಎಂದೂ ಬರುವುದಿಲ್ಲ. ಇನ್ನೆಂದೂ ಅವನ ಕಣ್ಣುಗಳಲ್ಲಿಯ ತನಗೆ ಪ್ರಿಯವಾದ ಬೆಳಕನ್ನು ತಾನು ನೋಡುವಂತಿಲ್ಲ....ಆ ಬೆಳಕು ಹಿಂದೆ, ಬಹಳ ಹಿಂದೆ, ತಾನು ಕಾಲೇಜಿನಲ್ಲಿದ್ದಾಗ ತನಗೆ ಶೆಲಿ ಕಲಿಸುತ್ತಿದ್ದ ಪ್ರೊಫೆಸರನ ಕಣ್ಣಲ್ಲಿ ಇದ್ದಂತಹದೇ ಬೆಳಕು... ಶೆಲಿ ಕಲಿಸಿದವನು ತನ್ನ ಪಾಲಿಗೆ ಸತ್ತು ಹಾಳಾಗಿ ಹೋದ ನಂತರದ ವರ್ಷಗಳ ತುಂಬ ಕವಿದಿದ್ದ ಕತ್ತಲನ್ನು ಹರಿಸಿದ್ದ ಬೆಳಕು ಈ ಮಿಠಾಯಿವಾಲಾನ ಕಣ್ಣಲ್ಲಿ.

ಜಗತ್ತು ತನಗೆ ಬಹಳ ಅನ್ಯಾಯ ಮಾಡಿತ್ತು. ತನ್ನ ಬೆಳಕನ್ನು ಕಸಿದು ಕೊಂಡಿತ್ತು. ತನ್ನನ್ನು ಕೊನೆಯಿಲ್ಲದ ಕತ್ತಲರೂಪದಲ್ಲಿ ನೂಕಿತ್ತು—ಅಂದಿನಿಂದ ಸುರುವಾಗಿತ್ತು. ತನ್ನಲ್ಲಿ ಈ ದಾಹ... ಸೇಡು—ಎಲ್ಲರ ಮೇಲೆ ಸೇಡು... ಅವ್ವ-ಅಪ್ಪ-ಮಕ್ಕಳು-ಸತೀಶ-ಡಾಕ್ಟರು ಎಲ್ಲರೂ ವಿಲಿ ವಿಲಿ ಒದ್ದಾಡಬೇಕು.... ಒಂದು ಕ್ಷಣದ ಶಾಂತಿ ಸಹ ಇವರ ಪಾಲಿಗೆ ಇಲ್ಲದಂತಾಗಬೇಕು....

ಆದರೆ ಈಗ—

ಬಹಳ ಕಾಲದಿಂದ ಬೆನ್ನಮೇಲಿದ್ದುದೊಂದು ಭಾರ ತಟ್ಟನೆ ಕಳಚಿಬಿದ್ದು ಬೆನ್ನು ನೇರವಾದಾಗ ಒಂದು ಕ್ಷಣ ನಡೆಯಲಾಗದೆ ಮುಗ್ಗರಿಸಿದಂಥ ಅನುಭವ. ಶೆಲಿ ಕಲಿಸಿದ ಪ್ರೊಫೆಸರು ಮತ್ತೊಮ್ಮೆ ಸತ್ತುಹೋದ ಅನುಭವ....?

ಹ್ಞ, ಸರಿ.

ಎದುರಿಗೆ ಪೂನಾಕ್ಕೆ ಹೊರಡಲು ಜನತಾ ಎಕ್ಸ್‌ಪ್ರೆಸ್ ಸಿದ್ಧವಾಗಿ ನಿಂತಿತ್ತು. ಮೇಲ್‌ನಿಂದ ಸೂಟ್‌ಕೇಸ್ ಇಳಿಸಿಕೊಂಡು ಆಕೆ ನಿಃಶಬ್ದವಾಗಿ ಎಕ್ಸ್‌ಪ್ರೆಸ್ ಹತ್ತಿದಳು.

ನಸುಕಿನ ಆರೂವರೆಗೆ ಮನೆಗೆ ಬಂದಿಳಿದ ಹೆಂಡತಿಯನ್ನು ನೋಡಿ ಆಶ್ಚರ್ಯವಾಯಿತು. ಸತೀಶನಿಗೆ, "ಅರೆ, ಇದೇನಿದು? ಹುಬ್ಬಳ್ಳಿ ಮುಟ್ಟದೆ ಅರ್ಧಾಹಾದಿಗೇ ತಿರುಗಿ ಬಂದ್ಯೇನು?"

"ಹ್ಞೂ," ಎಂದಳು ಆಕೆ, "ಇನ್ನೇನು ನಾ ಹುಬ್ಬಳ್ಳಿಗೆ ಹೋಗೋದಿಲ್ಲ."

ಯಾಕೆ, ಏನು ಎಂದೆಲ್ಲ ಕೇಳುವ ಮನುಷ್ಯನೇ ಅಲ್ಲ ಸತೀಶ. "ಛಲೋ ಆತು ಬಿಡು" ಎಂದ ಆತ ಅವಳ ಕೈಯಿಂದ ಸೂಟ್‌ಕೇಸು ಇಸಿದುಕೊಳ್ಳುತ್ತ.

★ ವೀಣಾ

ಪರಮಾಣು ಶಕ್ತಿ

(ಉಗಮ ಉತ್ಪಾದನೆ ಮತ್ತು ಉಪಯೊಗ)

ಮನುಷ್ಯ ಜೀವನದಲ್ಲಿ ವಿವಿಧಶಕ್ತಿಗಳ ಅವಶ್ಯಕತೆ ಇದೆ. ಇದು ನಿರ್ವಿವಾದ. ಮನುಷ್ಯನಿಗೆ ಬರಿ ದೈಹಿಕ ಶಕ್ತಿ ಇದ್ದರೆ ಸಾಲದು. ಬುದ್ಧಿಶಕ್ತಿಯೂ ಅವಶ್ಯ. ನೀರು ರಭಸವಾಗಿ ಒಂದೇ ಪಾತಳಿಯ ಮೇಲೆ ಹರಿದು ಸಮುದ್ರ ಸೇರಿದರೆ ಜಲಶಕ್ತಿಯ ಅರಿವಾಗದು. ಪಾತಳಿಯು ಉನ್ನತವಾಗಿ ಜಲಪಾತವಾಗಿ ಕೆಳಗೆ ಧುಮುಕಿದರೆ ಮಾತ್ರ ಆದರ ಮಹತ್ವ ಗೊತ್ತಾಗುವದು. ವಿದ್ಯುಚ್ಛಕ್ತಿಯ ಮುಖಾಂತರ ವಾಯುಶಕ್ತಿಯನ್ನು ತಿಳಿಯಬೇಕಿದ್ದರೆ ಅದರಿಂದ ಚಲಿಸುವ ಯಂತ್ರವನ್ನು (Wind mill) ಪವನಚಕ್ರ ನೋಡಬೇಕು; ಭೂಮಿಯಲ್ಲಿಯ ನೀರನ್ನು ನೆಲದ ಮೇಲೆ ತಂದುಬಿಡುವ ಶಕ್ತಿ ವಾಯುವಿನಲ್ಲಿದೆ. ಇಷ್ಟೇಕೆ ಗಾಳಿಯು ಅತ್ಯಂತ ರಭಸದಿಂದ ಬೀಸಿದಾಗ ಬಲಿಷ್ಠವಾದ ವಿಮಾನಗಳೂ ಹಾರಾಡವು. ವಿದ್ಯುಚ್ಛಕ್ತಿಯ ಉಪಯೋಗ ಹಾಗೂ ಮಹತ್ವವಂತೂ ಅಸಂಖ್ಯಾತ ಗ್ರಾಮಸ್ಥ ಭಾರತೀಯರಿಗೆ ಈಗಾಗಲೇ ಆಗಿದೆ. ರಸಾಯನ ಶಕ್ತಿಯೂ ಮನುಷ್ಯ ಜೀವನದ ಪ್ರತಿಕ್ಷಣವನ್ನು ಅವನಿಗೆ ಅರಿವಾಗದಂತೆಯೇ ಸುಗಮವಾಗಿ ಮಾಡುತ್ತದೆ. ಇನ್ನುಳಿದ ಅತ್ಯಾಧುನಿಕ ಅನುಪಮ ರೂಪವೆಂದರೆ ಪರಮಾಣುಶಕ್ತಿ.

ಪ್ರಪಂಚದಲ್ಲಿ ನಾವು ನೋಡುವ ಅಸಂಖ್ಯಾತ ವಸ್ತುಗಳಲ್ಲಿ ವಿಭಿನ್ನತೆ, ವಿವಿಧತೆ ಇದೆ. ಸೂಕ್ಷ್ಮವಾಗಿ ನೋಡುವವರಿಗೆ ಎದ್ದು ಕಾಣುವಂತಿದೆ. ಈ ಭಿನ್ನತೆಯ ಹಿನ್ನೆಲೆಯಲ್ಲಿ ಏನಾದರೂ ಒಂದು ಮೂಲಭೂತವಾದ ಸಾಮ್ಯವಿದೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ಕೊಟ್ಟಾಗ ನಮ್ಮ ಕುತೂಹಲ ಇನ್ನೂ ಹೆಚ್ಚಬಹುದು. ವೈಜ್ಞಾನಿಕ ವಿವರಗಳನ್ನು ತಿಳಿಯಲು ಮನುಷ್ಯ ದೇಹದಲ್ಲಿಯ ಅದೇ ರಕ್ತ ಆಪಾದಮಸ್ತಕದ ವರೆಗೂ ವಿವಿಧ ಅವಯವಗಳನ್ನು ವಿವಿಧೋದ್ದೇಶಗಳಿಗಾಗಿ ಪೋಷಿಸುವದಿಲ್ಲವೇ—ಅದರಂತೆ ಭಾರತೀಯ ತತ್ವಶಾಸ್ತ್ರಜ್ಞರು ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ ಎಂಬ ಪಂಚ ಭೂತಗಳಿಂದ ಪ್ರಪಂಚದಾದ್ಯಂತವೂ ವಿವಿಧ ವಸ್ತುಗಳ ರಚನೆಯಾಗಿದೆ ಎಂದು ಹೇಳಿದರು. ಆದರೆ ಮೂಲಭೂತ ಪದಾರ್ಥವೆಂದರೇನು ಮತ್ತು ಅವುಗಳ ಗುಣಧರ್ಮಗಳೇನು ಎಂದು ಯಾರೂ ವೈಜ್ಞಾನಿಕ ವಿವರಗಳನ್ನು ಹೇಳಲಿಲ್ಲ. ಆದರೆ ಹದಿನೇಳನೆಯ ಶತಮಾನದಲ್ಲಿ ರಾಬರ್ಟ ಬಾಯಿಲ್ ಎಂಬ ವಿಜ್ಞಾನಿಯು ಮೂಲಭೂತ ಪದಾರ್ಥಗಳಲ್ಲಿರಬೇಕಾದ ಗುಣಧರ್ಮಗಳನ್ನು ವಿವರಿಸಿದ. ಯಾವ ಪದಾರ್ಥವನ್ನು ಬೇರ್ಪಡಿಸಲು ಸಾಧ್ಯವಿಲ್ಲವೋ ಅದು ಮೂಲಭೂತ ಪದಾರ್ಥ; ಹಾಗೆ ಬೇರ್ಪಡಿಸಲು

ಸಾಧ್ಯವಾದುದು ಸಂಯುಕ್ತವೆನಿಸುವದು. ಉದಾಹರಣೆಗಾಗಿ ಹೇಳುವದಾದರೆ ನೀರು, ಆಮ್ಲಜನಕ ಹಾಗು ಜಲಜನಕಗಳ ರಾಸಾಯನಿಕ ಸಂಯುಕ್ತ. ನೀರಿನ ಈ ಎರಡು ಅಂಶಗಳನ್ನು ಬೇರ್ಪಡಿಸುವದು ಸಾಧ್ಯವಿದೆ. ತೇಜಸ್ ಎಂಬುದನ್ನು ಪದಾರ್ಥವೆಂದಾಗಿ ತಿಳಿಯಲು ಆಧಾರಗಳಿಲ್ಲ. ಅದು ಶಕ್ತಿಯ ಕೇವಲ ಒಂದು ರೂಪ ಮಾತ್ರ; ಕಾಲಕ್ರಮೇಣ ಬಂಗಾರ, ಬೆಳ್ಳಿ, ಸೀಸ, ತಾಮ್ರ, ಇದ್ದಲು, ರಂಜಕ, ಗಂಧಕ, ಪಾದರಸ ಇತ್ಯಾದಿಗಳು ಮೂಲಭೂತ ವಸ್ತುಗಳೆಂದು ಗೊತ್ತಾಯಿತು. ಅದರಂತೆಯೇ ನೀರು, ಎಣ್ಣೆ, ಉಪ್ಪು ಇತ್ಯಾದಿಗಳು ಸಂಯುಕ್ತ ಗಳೆಂದು ಗೊತ್ತಾಯಿತು. ಮುಂದೆ ವಿಜ್ಞಾನದ ವಿಕಾಸವಾದಂತೆ ಮೂಲಭೂತ ತತ್ವಗಳಲ್ಲಿಯೂ ಕೊಂಚ ಮಾರ್ಪಾಟವಾಗಿದೆ. ಇವೆಲ್ಲವುಗಳಿಗೂ ಪ್ರಾಯೋಗಿಕ ಆಧಾರಗಳಿವೆ.

ಪ್ರಾರಂಭದಲ್ಲಿಯೇ ಅಣು ಪರಮಾಣುಗಳ ರಚನೆಯ ರೀತಿಯನ್ನು ಸ್ವಲ್ಪ ದರಲ್ಲಿಯೇ ತಿಳಿದುಕೊಳ್ಳುವದು ಒಳಿತು. ಒಂದು ಉಪ್ಪಿನ ಹರಳನ್ನು ತೆಗೆದು ಕೊಂಡು ಅದನ್ನು ವಿಭಾಗ ಮಾಡುತ್ತ ಹೋದರೆ ನಾವು ಒಂದು ಘಟ್ಟಕ್ಕೆ ಬಂದು ನಿಲ್ಲುತ್ತೇವೆ. ಆ ಉಪ್ಪಿನ ಕಣವು ಅವಿಭಜನೀಯವಾಗುವದಲ್ಲದೆ ಅದ ಕ್ಕಿರಬೇಕಾದ ರಾಸಾಯನಿಕ ಸಂಯುಕ್ತದ ಗುಣಧರ್ಮಗಳು ಯಾವ ವ್ಯತ್ಯಾಸ ವನ್ನೂ ಹೊಂದದೇ ಹಾಗೆಯೇ ಇರುವವು. ಈ ಕಣಕ್ಕೆ 'ಅಣು' (Molecule) ಎಂದು ಹೆಸರು. ಇದೇ ಕಣವನ್ನು ಮುಂದೆ ರಾಸಾಯನಿಕವಾಗಿ ಸಾಧ್ಯವಿರುವ ಯಾವುದಾದರೂ ಒಂದು ವಿಧಾನದಿಂದ ಇನ್ನೂ ವಿವರವಾಗಿ ಬೇರ್ಪಡಿಸಿದರೆ ನಮಗೆ ಸಿಗುವದು 'ಸೋಡಿಯಂ' ಮತ್ತು 'ಕ್ಲೋರಿನ್' ಎಂಬ ಎರಡು ಅಣುಗಳಿಗಿಂತಲೂ ಭಿನ್ನವಾದ ಮತ್ತು ಅಣುವಿನ ಗುಣಧರ್ಮಗಳನ್ನು ಕಳೆದು ಕೊಂಡ ಪರಮಾಣುಗಳು (Atoms) ಪರಮಾಣುವಾದಕ್ಕನುಗುಣವಾಗಿ ಈ ಪರಮಾಣುಗಳು ಅವಿಭಜನೀಯವಾದವುಗಳು, ವಿಭಜನೆಯ ಪರಮಸ್ಥಿತಿ ಮುಟ್ಟಿದಂಥವುಗಳು.

ಸಾಮಾನ್ಯವಾಗಿ ಪರಮಾಣುವಿನಲ್ಲಿ ಒಂದು ಅತಿ ಚಿಕ್ಕದಾದ ಬೀಜವಿದ್ದು (Nucleus) ಅದರ ವ್ಯಾಸವು ಸುಮಾರು ೧–೨ × ದಶಲಕ್ಷ ಕೋಟಿಯಲ್ಲಿಯ ಒಂದು ಭಾಗ ಸೆಂಟಿಮೀಟರ್‌ಗಳಷ್ಟು ಇರುತ್ತದೆ. ಅದರ ಸುತ್ತಲಿನ ಪ್ರದೇಶ ದಲ್ಲಿಯ ಎಂದರೆ ಒಂದು ಸೆಂಟಮೀಟರಿನ ದಶಕೋಟಿ ಭಾಗಗಳಲ್ಲಿಯ ಒಂದು ಭಾಗ ವ್ಯಾಸದ ವರೆಗೂ ಇಲೆಕ್ಟ್ರಾನುಗಳು ಸುತ್ತುತ್ತಿರುತ್ತವೆ. ಪರಮಾಣು ಬೀಜವೇ ಮತ್ತಿತರ ಮೂಲ ಕಣಗಳಿಂದ (Sub Pavliclos) ಮಾಡಲ್ಪಟ್ಟ ಒಂದು ರಚನೆ. ಈ ಬೀಜದಲ್ಲಿ ಧನವಿದ್ಯುತ್ತುಳ್ಳ ಪ್ರೊಟಾನ್ ಎಂಬ ಮೂಲ ಕಣಗಳೂ ಹಾಗು ವಿದ್ಯುತ್ತಿಲ್ಲದ ನ್ಯೂಟ್ರಾನ್ ಎಂಬ ಮೂಲ ಕಣಗಳೂ ಇರುತ್ತವೆ. ಇವೆರಡರ ದ್ರವ್ಯರಾಶಿ ಒಂದೇ. ಈ ಪರಮಾಣು ಬೀಜದ

ಸುತ್ತಲೂ ವರ್ತುಳದಲ್ಲಿ ತಿರುಗುತ್ತಿರುವ ಇಲೆಕ್ಟ್ರಾನುಗಳಿಗೆ ಋಣವಿದ್ಯುತ್ತಿದ್ದು ಅದರ ದ್ರವ್ಯರಾಶಿ ಮಾತ್ರ ಪ್ರೋಟಾನ್‌ದ ಸಾವಿರದ ಎಂಟು ನೂರ ನಲ್ವತ್ತೇಳು ಭಾಗಗಳಲ್ಲಿಯ ಒಂದು ಭಾಗ. ಲೆಕ್ಕಕ್ಕೆ ಮಾತ್ರ ಅದನ್ನು ಭಾರವಿಲ್ಲವೆಂದೇ ಭಾವಿಸುವ ಪರಿಪಾಠ ೧೯೩೫ರಲ್ಲಿ ಜಪಾನಿನ ವಿಜ್ಞಾನಿ ಯುಕಾವಾ ಎಂಬವರು ಇನ್ನೂ ಒಂದು ಹೊಸ ಮೂಲಕಣವನ್ನು ಸಂಶೋಧಿಸಿದರು. ಪರಮಾಣು ಬೀಜದಲ್ಲಿಯ ನ್ಯೂಟ್ರಾನ್ ಮತ್ತು ಪ್ರೋಟಾನ್‌ಗಳನ್ನು ಒಟ್ಟಿಗೆ ಇಡಲು ಒಂದು ಹೊಸಶಕ್ತಿ ಇರಬಹುದೆಂದೂ ಮತ್ತು ಈ ಹೊಸ ಮೂಲಕಣವಾದ 'ಮೆಸಾನ್' ಈ ಕಾರ್ಯಪೂರೈಸಲು ಶಕ್ಯವಾಗಿದೆ ಎಂದೂ ಗಣಿತಶಾಸ್ತ್ರದ ಆಧಾರದ ಮೇಲೆ ಯುಕಾವಾ ಊಹಿಸಿದರು. ಮೊದಮೊದಲು, ವಿಜ್ಞಾನಿಗಳಿಗೆ, ಈ ಊಹೆಗೂ ಸತ್ಯಕ್ಕೂ ವಿಶೇಷ ಸಂಬಂಧವಿಲ್ಲದಂತೆ ತೋರಿತು. ಮುಂದೆ ಅಮೇರಿಕದ ಭೌತಶಾಸ್ತ್ರಜ್ಞರಾದ ಕಾರ್ಲ್ ಆ್ಯಂಡರಿಸನ್ನರು ಈ ಮೂಲಕಣಗಳನ್ನು ಪ್ರತ್ಯಕ್ಷ ಅಸ್ತಿತ್ವದಲ್ಲಿದ್ದದ್ದನ್ನು ನೋಡಿದರು. ಆ್ಯಂಡರಸನ್ನರ ಲೆಕ್ಕದಂತೆ ಈ ಮೂಲಕಣದ ದ್ರವ್ಯರಾಶಿ ಇಲೆಕ್ಟ್ರಾನ್ ದ್ರವ್ಯರಾಶಿಯ ಇನ್ನೂರುಪಟ್ಟಿನಷ್ಟಿದೆ.

ಪರಮಾಣುಗಳಲ್ಲಿರುವ ವ್ಯತ್ಯಾಸ ಮೂಲಕಣಗಳಿಗೇ ಸೀಮಿತವಾಗಿರುತ್ತದೆ. ಈ ವ್ಯತ್ಯಾಸದ ಉಗಮ ಮೂಲಕಣಗಳ ಸಂಖ್ಯೆಯಲ್ಲಿ ಕಂಡು ಬರುವದು. ಮತ್ತು ಇದರಿಂದಾಗಿಯೇ ನಾವು ಜಗತ್ತಿನಲ್ಲಿಯ ವಿವಿಧ ವಸ್ತುಗಳನ್ನು ನೋಡಲು ಶಕ್ಯವಾಗಿದೆ. ಹಾಗು ಪರಮಾಣು ಶಕ್ತಿಯು ಉಗಮವಾಗಲು ಸಾಧ್ಯವಾಗಿದೆ. ಇದನ್ನು ನಾವು ೧೮೯೬ರಲ್ಲಿ ಫ್ರೆಂಚ್ ಭೌತ ವಿಜ್ಞಾನಿ ಬೆಕೆರಲ್ ಯಶಸ್ವಿಯಾಗಿ ನಡೆಸಿದಸಂಶೋಧನೆಯಲ್ಲಿ ಕಾಣಬಹುದು. ೧೮೯೫ರಲ್ಲಿ ಜರ್ಮನ್ ಭೌತಶಾಸ್ತ್ರ ವಿಜ್ಞಾನಿ ವಿಲ್‌ಹೆಲ್ಮ್ ರಾಂಟ್ಜೆನ್ 'ಕ್ಷ' ಕಿರಣಗಳನ್ನು ಕಂಡುಹಿಡಿದ ಮೇಲೆ ಮರುವರುಷವೇ ಆಕಸ್ಮಿಕವಾದ ಕೆಲವು ಘಟನೆಗಳಿಂದ ಹೊಸ ಧಾತು ಒಂದರಲ್ಲಿ ನೈಸರ್ಗಿಕ ವಿಕಿರಣ ಕ್ರಿಯೆಯು (Radio activity) ಸಾಧ್ಯವಿದೆ ಎಂಬುದು ಗೊತ್ತಾಯಿತು. ಮೇರಿ ಕ್ಯೂರಿ ಹಾಗು ಪಿರ್ ಕ್ಯೂರಿ ದಂಪತಿಗಳ ಸಾಂಘಿಕ ಪ್ರಯತ್ನಗಳ ಮೂಲಕ 'ಪಿಚ್ ಬ್ಲೆಂಡ್'ದಿಂದ ನೈಸರ್ಗಿಕ ವಿಕಿರಣ ಕ್ರಿಯೆಯುಳ್ಳ 'ರೇಡಿಯಂ' ಹಾಗು 'ಪೋಲೋನಿಯಂ' ಎಂಬ ಎರಡು ಧಾತುಗಳು ದೊರೆತವು. ಒಂದು ಟನ್ 'ಪಿಚ್ ಬ್ಲೆಂಡ'ನಲ್ಲಿ 'ರೇಡಿಯಂ'ದ ಪ್ರಮಾಣ ಅತಿ ಸ್ವಲ್ಪವಿದ್ದು ಆದಕ್ಕಾಗಿಯೇ ಅದನ್ನು ಬೇರ್ಪಡಿಸಲು ಇಷ್ಟೊಂದು ಸಮಯ ಹಾಗೂ ವಿಜ್ಞಾನಿಗಳ ನಿರಂತರ ಪ್ರಯತ್ನ ಅವಶ್ಯವಾಯಿತು. ಬೆಕೆರಲ್ ಮತ್ತು ಸಂಗಡಿಗರು ಯುರೆನಿಯಂ ಧಾತುವಿನ ವಿಕಿರಣದಲ್ಲಿ ಬೇರೆ ಬೇರೆ ಕಿರಣಗಳ ಅಂಶಗಳನ್ನು ನೋಡಿದರು— ಹೇಲಿಯಂ ಬೀಜವುಳ್ಳ ಹಾಗೂ ವೇಗದಿಂದ ಚಲಿಸುವ ಅಲ್ಫಾ ಕಿರಣಗಳು; ವೇಗವಾಗಿ ಚಲಿಸುವ ಇಲೆಕ್ಟ್ರಾನ್‌ಗಳಾದ ಬೀಟಾ ಕಿರಣಗಳು; ಕ್ಷ ಕಿರಣಗಳನ್ನು ಹೋಲುವಂಥ

'ಗಾಮಾ' ಕಿರಣಗಳು. ಆಲ್ಫಾ ಮತ್ತು ಬೀಟಾ ಕಿರಣಗಳ ಬಿಡುಗಡೆಯಿಂದ 'ಯುರೇನಿಯಂ'ದ ಪರಮಾಣು ಭಾರದಲ್ಲಿ ಹಾಗೂ ಅಣ್ವಾಂಶದಲ್ಲಿ ವ್ಯತ್ಯಾಸವಾಗಿ ಆ ಧಾತುವು ಬೇರೆ ಬೇರೆ ಧಾತು ಸ್ಥಿತಿಗಳನ್ನು ಮುಟ್ಟಿ ಕೊನೆಗೆ ಸ್ಥಿರವಾದ ಬೀಜ ರಚನೆಯುಳ್ಳ ಸೀಸದ ಸ್ಥಿತಿಗೆ ಬಂದು ಮುಟ್ಟುವದು. ಭಾರವಾದ ಕೆಲವು ಧಾತುಗಳಲ್ಲಿ ಆಂತರಿಕ ಅಸ್ಥಿರ ಬೀಜ ರಚನೆಯಿಂದಾಗಿ ಈ ತರಹದ ದೃಶ್ಯ ಘಟನೆ (Phenomenon) ಸಾಧ್ಯವಿದ್ದರೆ, ಹಗುರಾದ ಧಾತುಗಳಲ್ಲಿ ಪರಮಾಣು ಬೀಜಗಳನ್ನು ಕೆಲವೊಂದು ವಿಧಾನದಿಂದ ಅಸ್ಥಿರ ರಚನೆಗಳಲ್ಲಿ ಪರಿವರ್ತನೆ ಹೊಂದುವಂತೆ ಮಾಡಿದರೆ ಕೃತಕ ವಿಕಿರಣಕ್ರಿಯೆಯು ಸಾಧ್ಯತೆ ಇದೆ ಎಂದು ಊಹಿಸಿ ಪ್ರಯೋಗಗಳ ಮೂಲಕ ಯಶಸ್ವಿಯಾದವರು ರದರ್‌ಫೋರ್ಡರು. ನೈಟ್ರೋಜನ್ ಅನಿಲದ ಮೇಲೆ ಆಲ್ಫಾ ಕಿರಣಗಳನ್ನು ಬೀರಿದಾಗ ಅವರಿಗೆ ಕಂಡದ್ದು ಪ್ರೋಟಾನುಗಳು ಅಥವಾ ಜಲಜನಕದ ಪರಮಾಣು ಬೀಜ ಮತ್ತು ಆಮ್ಲಜನಕದ ಸಮಸ್ಥಾನಿ (Isotope) ಆದರೆ ಭಾರವಾದ ಧಾತುಗಳನ್ನು ತೆಗೆದುಕೊಂಡು ಆಲ್ಫಾಕಣಗಳನ್ನು ಬೀರಿದಾಗ ಪ್ರೋಟಾನ್ ಉತ್ಪಾದನೆಯು ಕಡಿಮೆಯಾಯಿತು. ಕಾರಣ ಪರಮಾಣು ಬೀಜದಲ್ಲಿ ಹೆಚ್ಚಿನ ಭಾರದಿಂದುಂಟಾದ ಹೆಚ್ಚಿನ ಧನ ವಿದ್ಯುತ್ತು ಹಾಗೂ ಆಲ್ಫಾ ಕಣಗಳಲ್ಲಿಯ ಧನವಿದ್ಯುತ್ತುಗಳಲ್ಲಿ ವಿಕರ್ಷಣ ಬಲವು (Force of repulsion) ಹೆಚ್ಚಾಗಿ, ಪ್ರೋಟಾನ್ ಉತ್ಪಾದನೆಯಲ್ಲಿ ವ್ಯತ್ಯಯ ಉಂಟಾಯಿತು. ಇಂಥ ಪ್ರಯೋಗಗಳನ್ನು ರದರ್‌ಫೋರ್ಡರು ವಿಲ್ಸನ್‌ರು ರಚಿಸಿದ 'ಮೇಘಮಂದಿರ'ದಲ್ಲಿ (Wilson's Cloud Chamber) ಮಾಡಿದರು. ಪ್ರಕೃತಿಯಲ್ಲಿಯೇ ಪರಮಾಣುವಿನ ಸ್ವಾಭಾವಿಕ ಪರಿವರ್ತನೆ ನಡೆಯುತ್ತಿರುವಾಗ ಪ್ರಯೋಗಶಾಲೆಯಲ್ಲಿಯೂ ಕೃತ್ರಿಮವಾಗಿ ಇಂಥ ಪರಿವರ್ತನೆ ಸಾಧ್ಯವೆಂಬುದರಲ್ಲಿ ರದರ್‌ಫೋರ್ಡರಿಗೆ ಅಪಾರನಂಬಿಕೆ! ಅವರ ಸಹೋದ್ಯೋಗಿಗಳೂ ಪರಿಮಾಣು ಪರಿವರ್ತನೆಯಲ್ಲಿ ತುಂಬ ಸಹಾಯಕರಾದರು. ಈ ಪರಿವರ್ತನೆಯಲ್ಲಿ ಉಪಯೋಗಿಸಿದ ಕಣಗಳೆಂದರೆ, ೧) ಆಲ್ಫಾ-ಕಣಗಳು ೨) ಪ್ರೋಟಾನುಗಳು ೩) ನ್ಯೂಟ್ರಾನ್‌ಗಳು ೪) ಡ್ಯೂಟ್ರಾನ್‌ಗಳು (೨ ತೂಕವುಳ್ಳ ಜಲಜನಕದ ಪರಮಾಣುವಿನ ಬೀಜಾಣು). ರದರ್‌ಫೋರ್ಡರು ಆಲ್ಫಾಕಣಗಳನ್ನಲ್ಲದೆ ಇತರ ಕಣಗಳನ್ನು ಪರಮಾಣು ಪರಿವರ್ತನೆಯಲ್ಲಿ ಉಪಯೋಗಿಸಿದರು. ಆದರೆ ಉಪಯೋಗಿಸುವ ಕಣಗಳಿಗೆ ಇನ್ನೂ ಹೆಚ್ಚಿನ ವೇಗ ಕೊಡಲು ಪ್ರತ್ಯೇಕ ಉಪಕರಣದ ಅವಶ್ಯಕತೆಯಾಯಿತು. ಕಾಕ್‌ಕ್ರಾಫ್ಟ್ ಮತ್ತು ವಾಲ್ಟನ್ನರು ಯಂತ್ರವೊಂದನ್ನು ತಯಾರಿಸಿದ್ದರಿಂದ ಒಂದು ಲಕ್ಷ ವೋಲ್ಟ್ ವಿದ್ಯುಚ್ಛಕ್ತಿಯಿಂದ ಕಣಗಳಿಗೆ ಸುಮಾರು ಒಂದು ಸೆಕೆಂಡಿಗೆ ಇಪ್ಪತ್ತು ಸಾವಿರ ಮೈಲುಗಳವರೆಗೂ ವೇಗವನ್ನು ಕೊಡಲು ಸಾಧ್ಯ

ವಾಯಿತು. ಈ ಯಂತ್ರದಿಂದಲೇ ವೇಗ ಪಡೆದ ಪ್ರೋಟಾನುಗಳನ್ನು 'ಲಿಥಿಯಂ' ಧಾತುವಿನ ಮೇಲೆ ಬೀರಿದಾಗ ಪರಮಾಣು ಪರಿವರ್ತನೆಯಾಗಿ 'ಹೀಲಿಯಂ' ಉತ್ಪಾದನೆಯಾಯಿತು. ರದರ್‌ಫೋರ್ಡರು ೧೯೩೨ರಲ್ಲಿ ಮಾಡಿದ ಈ ಪ್ರಯೋಗ ಕೃತಕ ಪರಮಾಣು ಪರಿವರ್ತನೆಯಲ್ಲಿ ಮೊದಲನೆಯದೆಂದೇ ಹೇಳಬೇಕು. ಕಣಗಳಿಗೆ ಇನ್ನೂ ಹೆಚ್ಚಿನ ವೇಗ ಕೊಡಲು ಇನ್ನಿತರ ಯಂತ್ರಗಳು ಅಸ್ತಿತ್ವಪಡೆದವು. ೧) ಅರ್ನೆಸ್ಟ್‌ಲಾರೆನ್ಸರ 'ಸೈಕ್ಲೋಟ್ರೋನ್' (Cyclotron) ೨) 'ವಾನ್ ದ ಗ್ರಾಫ್'ರ 'ಲಿನೀಯರ್ ಇಲೆಕ್ಟ್ರೊಸ್ಟ್ಯಾಟಿಕ್ ಎಕ್ಸಿಲಿರೇಟರ್' (Linear Electrostatic Accelerator). ಇತ್ತೀಚಿನ ಅತ್ಯಾಧುನಿಕ ಯಂತ್ರ-ಗಳೆಂದರೆ 'ಸಿಂಕ್ರೊಸೈಕ್ಲೋಟ್ರೊನ್' ಮತ್ತು 'ಸಿಂಕ್ರೊಟ್ರೋನ್'.

೧೯೦೫ ರಲ್ಲಿ ಆಲ್ಬರ್ಟ ಐನ್‌ಸ್ಟೈನ್‌ರು ಹೇಳಿದ ಸಾಪೇಕ್ಷ ಸಿದ್ಧಾಂತದಂತೆ ವಸ್ತುವೇ ಶಕ್ತಿಯು; ವಸ್ತು ಶಕ್ತಿಗಳಿಗೆ ಅಭೇದವು. ಒಂದು ಗ್ರಾಂ ತೂಕವಿರುವ ವಸ್ತುವೊಂದನ್ನು ಶಕ್ತಿಯನ್ನಾಗಿ ಪರಿವರ್ತಿಸಿದರೆ ಆ ಶಕ್ತಿಯು ಒಂದು ದೊಡ್ಡ ಯುದ್ಧದ ಹಡಗವನ್ನು ಭೂಮಿಯ ಸುತ್ತಲೂ ಸುತ್ತು ಹಾಕುವಷ್ಟು ಆಗುವದು. ಈ ಸಿದ್ಧಾಂತವನ್ನು ಪ್ರಯೋಗರೀತ್ಯಾ ಸಿದ್ಧಮಾಡಿದವರು— ಕಾಕ್ರಾಫ್ಟ್ ಮತ್ತು ವಾಲ್ಟನ್. ಪ್ರೋಟಾನ್ ಕಣಗಳನ್ನು ಲೀಥಿಯಂ ಧಾತುವಿನ ಮೇಲೆ ಬೀರಿದಾಗ ಹೀಲಿಯಂ ಪರಮಾಣುಗಳ ಉತ್ಪಾದನೆಯಾಯಿತು. ಲೀಥಿಯಂ ಮತ್ತು ಪ್ರೋಟಾನ್ ತೂಕಕ್ಕಿಂತ ಹೀಲಿಯಂ ತೂಕ ಕಡಿಮೆ ಇದೆ. ಹೀಗೆ ಕಡಿಮೆಯಾದ ತೂಕ ಹೀಲಿಯಂನ ವೇಗ ರೂಪದಲ್ಲಿ ಪರಿವರ್ತನೆ ಹೊಂದಿದೆ. ಈ ವೇಗ ಶಕ್ತಿಯ ತೂಕವನ್ನು ಕಂಡು ಹಿಡಿದರೆ ಮೊದಲು ಕಂಡ ವ್ಯತ್ಯಾಸ ಕಂಡು ಬರದು. ಈ ತರಹದ ಪ್ರಯೋಗಗಳು ಅಷ್ಟೊಂದು ವ್ಯಾವಹಾರಿಕವಾಗಿ ಕಾಣಲಿಲ್ಲ. ಅಸಂಖ್ಯಾತ ಕಣಗಳಲ್ಲಿ ಕೆಲವೇ ಕಣಗಳು ಪರಮಾಣುಗಳನ್ನು ಸಂಧಿಸಿ ಕಡಿಮೆ ಪ್ರಮಾಣದಲ್ಲಿ ಶಕ್ತಿಯನ್ನು ಕೊಡುತ್ತವೆ. ಇದೇ ಹಿನ್ನೆಲೆಯ ಕಾರಣ.

ನ್ಯೂಟ್ರಾನ್ ಕಣಗಳು ಪರಮಾಣುಗಳನ್ನು ಸುಲಭವಾಗಿ ಸಂಧಿಸಿ ಪರಮಾಣು ಪರಿವರ್ತನೆಗೆ ತುಂಬ ಅನುಕೂಲವಾಗುತ್ತಿವೆ. ಈ ಪ್ರಕ್ರಿಯೆಯಲ್ಲಿ ಪರಮಾಣು ಎರಡು ಹೋಳಾಗುವದು ಹಾಗು ಅಧಿಕ ಪ್ರಮಾಣದಲ್ಲಿ ಶಕ್ತಿಯು ಉತ್ಪಾದನೆಯಾಗುವದು. ಪರಮಾಣು ಬೀಜದಲ್ಲಿ ಪ್ರೋಟಾನ ನ್ಯೂಟ್ರಾನ್‌ಗಳು ಇರುತ್ತವಷ್ಟೇ ಅವುಗಳು ಅತ್ತಿತ್ತ ಹರಿದು ಹೋಗದೆ ಒಟ್ಟಿಗೆ ಇರಲು ಬಂಧನ ಶಕ್ತಿಯ ಆವಶ್ಯಕತೆ ಇದೆ. ಇವುಗಳಲ್ಲಿಯ ದೂರೀಕರಣ ಶಕ್ತಿಯು ಹೆಚ್ಚಾಗಿ ಬಂಧನ ಶಕ್ತಿ ಕಡಿಮೆಯಾದರೆ ಬೀಜಾಣುವು ಒಡೆಯುವದು. ಹೀಗೆ ಒಡೆಯುವಾಗ ಶಕ್ತಿಯ ಬಿಡುಗಡೆಯೂ ಆಗುವದು. ಕೆಲವೊಂದು ಪರಮಾಣುಗಳು (ಜೆಳ್ಳಿಗಿಂತ ಹೆಚ್ಚು ತೂಕವುಳ್ಳವುಗಳು) ಎರಡು ಭಾಗವಾದಾಗ ಶಕ್ತಿಯ ವಿಸರ್ಜನವಾಗು

ಪರಮಾಣುಗಳು ಪರಸ್ಪರ ಸೇರಿದಾಗಲೂ
ವದು. ಬೆಳ್ಳಿಗಿಂತ ಕಡಿಮೆ ತೂಕದ ಪರಮಾಣುಗಳು ಪರಸ್ಪರ ಸೇರಿದಾಗಲೂ ಶಕ್ತಿಯು ಬಿಡುಗಡೆ ಸಾಧ್ಯ; ಆದ್ದರಿಂದ ಪರಮಾಣು ಶಕ್ತಿಗಾಗಿ ಹೆಚ್ಚು ತೂಕದ ಪರಮಾಣುಗಳನ್ನು ಒಡೆಯುವಂತೆ ಮಾಡಬೇಕು ಅಥವಾ ಹಗುರವಾದ ಪರಮಾಣುಗಳು ಸೇರಿ ಹೊಸ ಪರಮಾಣು ಅಸ್ತಿತ್ವ ಪಡೆಯುವಂತೆ ಮಾಡಬೇಕು. ಪ್ರಪಂಚದಲ್ಲಿಯ ಎಲ್ಲ ವಸ್ತುಗಳಲ್ಲಿಯೂ ವರ್ಣನಾತೀತ ಶಕ್ತಿ ಅಡಗಿದೆ. ಆದರ ಬಿಡುಗಡೆ ಸಾಧ್ಯವಾದರೆ ಆದೊಂದು ನಿರಂತರವಾದ ಶಕ್ತಿಯ ಉಗಮವಾಗಲು ಸಾಧ್ಯವಿದೆ

ಅಲ್ಯುಮಿನಿಯಂ ಧಾತುವಿನ ಮೇಲೆ ಆಲ್ಫ ಕಣಗಳನ್ನು ಬೀರಿದಾಗ ಒಂದು ಪೌಂಡ ಅಲ್ಯುಮಿನಿಯಂ,ದಿಂದ ಸುಮಾರು ೧೫ ಲಕ್ಷ ಕಿಲೋಕ್ಯಾಲರಿ ಶಕ್ತಿ ಉತ್ಪಾದನೆಯಾಗುವದು. ಒಂದು ಪೌಂಡ ಯುರೇನಿಯಂ 'ಪರಮಾಣು ಒಡೆಯುವಿಕೆಗೆ' ಒಳಗಾದಾಗ ೧೯೦ ಲಕ್ಷ ಕಿಲೋಕ್ಯಾಲರಿ ಶಕ್ತಿ ಸಿಗುವದು. ಪರಮಾಣು ಪರಿವರ್ತನೆಗಿಂತ ಒಡೆಯುವಿಕೆಯಲ್ಲಿಯೇ ಹೆಚ್ಚಿನ ಶಕ್ತಿಲಾಭ ಸಾಧ್ಯ, ಇದು ಪ್ರಯೋಗಗಳಿಂದಲೇ ಸಿದ್ಧವಾಗಿದೆ. ಪರಮಾಣು ಒಡೆಯುವಿಕೆಯು ಒಂದೆ ಸವನೆ ನಡೆಯಲು ಅವಕಾಶಗಳಿದ್ದು ಶಕ್ತಿಯ ಬಿಡುಗಡೆಯೂ ನಿರಂತರವಾಗಿ ನಡೆದೇ ಇರುತ್ತದೆ. ಪರಿಣಾಮವಾಗಿ 'ಧರ್ಮ ಮತ್ತು ಸೆಗ್ರಿ' ಯುವರು ಯುರೇನಿಯಂ ಧಾತುವಿನ ಮೇಲೆ ನ್ಯೂಟ್ರಾನ್ ಕಣಗಳನ್ನು ಬೀರಿದರು. ಅವರು ತಿಳಿದದ್ದು ಬೇರೆ ಹೆಚ್ಚಿನ ಸ್ಥಾನದಲ್ಲಿರುವ ಮೂಲಭೂತ ಧಾತುಗಳ ಉತ್ಪತ್ತಿಯಾಯಿತೆಂದು! ಆದರೆ ಯುರೇನಿಯಂ ಒಂದು ನ್ಯೂಟ್ರಾನ್‌ನನ್ನು ಹೀರಿ 'ಬೇರಿಯಂ ಮತ್ತು ಕ್ರಿಪ್ಟಾನ್' ಎಂಬ ಅರ್ಧ ತೂಕವಿರುವ ಮೂಲ ಭೂತ ಪರಮಾಣುಗಳಲ್ಲಿ ಇಭ್ಭಾಗವಾಯಿತು. ಯುರೇನಿಯಂ ಹಾಗು ನ್ಯೂಟ್ರಾನ್'ಗಿಂತಲೂ ಬೇರಿಯಂ ಮತ್ತು ಕ್ರಿಪ್ಟಾನ್‌ಗಳ ತೂಕವು ಕಡಿಮೆ ಇತ್ತು. ಈ ತೂಕದ ವ್ಯತ್ಯಾಸವೇ ಶಕ್ತಿರೂಪತಾಳಿತ್ತು. ಪರಮಾಣು ಒಡೆಯುವಿಕೆಯನ್ನು ಕಂಡಕ್ಷಣ 'ಬೋರ್' ಎಂಬ ವಿಜ್ಞಾನಿ ಮಂದವೇಗದ ನ್ಯೂಟ್ರಾನ್‌ಗಳನ್ನು ಯುರೇನಿಯಂ ೨೩೫ ರ ಮೇಲೆ ಬೀರಿದಾಗ ಅದು ಹಿಡಿದು ಮತ್ತೆ ಒಂದು ವೇಗ ನ್ಯೂಟ್ರಾನ್‌ಗಳ ಬಿಡುಗಡೆಯಾಯಿತು. ನೈಸರ್ಗಿಕ ಯುರೇನಿಯಂದಲ್ಲಿ ಯುರೇನಿಯಂ ೨೩೮ ನೂರಕ್ಕೆ ೯೯ ರಷ್ಟಿದ್ದು, ಯುರೇನಿಯಂ ೨೩೫ ಇನ್ನುಳಿದ ಒಂದು ಭಾಗದಷ್ಟಿರುತ್ತದೆ. ಮಂದವೇಗದ ನ್ಯೂಟ್ರಾನುಗಳು ಮತ್ತೆ ಯುರೇನಿಯಂ ೨೩೮ನ್ನು ಸಿಡಿಸಲು ಶಕ್ಯವಾಗುವುದಿಲ್ಲ. ಈ ನ್ಯೂಟ್ರಾನುಗಳು ಮತ್ತೆ ೨೩೫ ನ್ನು ಸಂಧಿಸಿ ಒಡೆಯಲು ಅವಕಾಶ ಮಾಡಿಕೊಡುತ್ತವೆ. ಜೊತೆಗೆ ಅತ್ಯಂತ ಹೆಚ್ಚಿನ ಶಕ್ತಿಯೂ ಸಿಗುತ್ತದೆ. ಈ ಸರಪಳಿ ಕ್ರಿಯೆಯು (Chain reaction ಸಾಧ್ಯವಾಗಿ, ಪರಮಾಣು ಶಕ್ತಿಯು ಅಖಂಡವಾಗಿ ಲಭ್ಯವಾಗುತ್ತದೆ. ಯುರೇನಿಯಂ ೨೩೮ ಮತ್ತು

೨೩೫ ಅಣುಭಾರವುಳ್ಳ ಪರಮಾಣುಗಳನ್ನು ಪರಿಶೀಲಿಸಿದಾಗ ಯುರೇನಿಯಂ ೨೩೫ ರಲ್ಲಿ ಅಸ್ಥಿರ ಬೀಜರಚನೆ ಇದ್ದುದು ಕಂಡುಬರುವದು. ನೈಸರ್ಗಿಕ ಯುರೇನಿಯಂನಲ್ಲಿರುವ ಈ ಗುಣವಿಶೇಷದಿಂದಲೇ ಮೊದಲು ಹೇಳಿರುವ ಸರಪಳಿ ಕ್ರಿಯೆಯು ಸಾಧ್ಯ. ಭಾರವಾದ ಪರಮಾಣುಗಳು ಇಬ್ಭಾಗವಾಗಿ ಒಡೆಯುವಂತೆ, ಹಗುರವಾದ ಎರಡು ಪರಮಾಣು ಬೀಜಗಳನ್ನು ಒಂದಾಗಿ ಮಾಡಲೂಬಹುದು. ಆದರೆ ಎರಡು ಬೀಜಗಳಲ್ಲಿ ಧನವಿದ್ಯುಚ್ಛಕ್ತಿ ಇರುವದರಿಂದ, ವಿಕರ್ಷಣಶಕ್ತಿಯು ಬಲವಾಗಿ ಅವು ಒಂದಾಗದೇ ಇರಬಹುದು ಆದರೆ ಅತ್ಯಂತ ಹೆಚ್ಚು ಉಷ್ಣತೆಯ ವಾತಾವರಣದಲ್ಲಿ ಜಲಜನಕವು ಹೀಲಿಯಂ ಆಗಿ ಪರಿವರ್ತನೆ ಹೊಂದಿ ಶಕ್ತಿಯನ್ನು ಹೊರಗೆಡುವುತ್ತಿದೆ. ಸೂರ್ಯನಿಂದ ಬರುತ್ತಿರುವ ಅಪಾರ ಶಕ್ತಿಗೆ ಇದೇ ಆಧಾರವು. ಹೀಗೆ ಜಲಜನಕದ ಪರಮಾಣುಗಳು ಒಂದಾದಾಗ ಹೀಲಿಯಂ ಅಸ್ತಿತ್ವದಲ್ಲಿ ಬಂದು ಶಕ್ತಿಯು ಉಗಮವಾಗುವದು. ಇದೇ ತತ್ತ್ವವನ್ನು ಜಲಜನಕ ಬಾಂಬಿನ ರಚನೆಯಲ್ಲಿ ಉಪಯೋಗಿಸಲಾಗಿದೆ.

ಭಾರತದಲ್ಲಿ ಕೆಲ ದಿನಗಳೊಳಗೆ ಮೂರು ಪರಮಾಣು ವಿದ್ಯುಜ್ಜನಕ ಕೇಂದ್ರಗಳು ಸ್ಥಾಪಿತವಾಗಲಿದ್ದು ಮೊದಲನೆಯದಾದ ತಾರಾಪೂರ್ ಕೇಂದ್ರ ನಾನೂರು ಮೆಗಾವ್ಯಾಟ್ ಶಕ್ತಿ ಕೊಡುವಂಥದ್ದು ಈಗಾಗಲೇ ಕಾರ್ಯಾರಂಭ ಮಾಡಿದೆ ಇದರಲ್ಲಿ ಯುರೇನಿಯಂ ೨೩೫ ಹೆಚ್ಚು ಪ್ರಮಾಣದಲ್ಲಿದ್ದ ಯುರೇನಿಯಂ ಉಪಯೋಗಿಸಲಾಗಿದೆ. ರಾಣಾ ಪ್ರತಾಪ ಸಾಗರದಲ್ಲಿಯ ಕೇಂದ್ರದಲ್ಲಿ ನೈಸರ್ಗಿಕ ಯುರೇನಿಯಂನ್ನು ಉಪಯೋಗಿಸಲಾಗುವದು. ಮದ್ರಾಸದ ಕಲ್ಪಾಕಂನಲ್ಲಿಯೂ ಕೇಂದ್ರದ ರಚನೆ ರಾಣಾ ಪ್ರತಾಪಸಾಗರದಲ್ಲಿಯಂತೆಯೇ ಇರುವದು. ಅಪ್ಸರ ರಿಯಾಕ್ಟರಿನಲ್ಲಿ ಯುರೇನಿಯಂ ೨೩೫ ರ ಪ್ರಮಾಣ ಹೆಚ್ಚುಳ್ಳ ಯುರೇನಿಯಂ ಉಪಯೋಗಿಸಲಾಗಿದೆ. ಸೌಮ್ಯಕಾರಿಯೆಂದು (Moderator) ಅಭಾರ ಜಲವನ್ನೇ ಉಪಯೋಗಿಸಲಾಗಿದೆ. ಆದರೆ 'ಸೈರಸ್' ಮತ್ತು 'ಜರಲಿನ'ಗಳಲ್ಲಿ ನೈಸರ್ಗಿಕ ಯುರೇನಿಯಂ ಉಪಯೋಗವಾಗಿದ್ದು, ಸೌಮ್ಯಕಾರಿಯೆಂದು ಭಾರಜಲವನ್ನು ಉಪಯೋಗಿಸಲಾಗಿದೆ. ಸೌಮ್ಯಕಾರಿ ಭಾರಜಲವನ್ನು ಪಂಜಾಬಿನ ನಾಂಗಲ್‌ನಲ್ಲಿ ಉತ್ಪಾದಿಸಲಾಗುತ್ತಿದೆ.

ಭಾರತದಲ್ಲಿ ಬಿಹಾರ ರಾಜ್ಯದ ಜಾಡುಗುಡಾದಲ್ಲಿ ಯುರೇನಿಯಂ ಅದಿರು ದೊಡ್ಡ ಪ್ರಮಾಣದಲ್ಲಿ ಸಿಗುತ್ತದಲ್ಲದೆ, ಪ್ರತಿದಿನವೂ ಒಂದು ಸಾವಿರ ಟನ್ ಅದಿರನ್ನು ಯುರೇನಿಯಂ ಪ್ರತ್ಯೇಕಿಸಲು ಉಪಯೋಗಿಸಲಾಗುತ್ತಿದೆ. ಥೋರಿಯಂ ಆದರಂತೂ, ಜಗತ್ತಿನ ಇನ್ನಿತರ ದೇಶಗಳೊಂದಿಗೆ ತುಲನೆಮಾಡಿದಾಗ, ಭಾರತದಲ್ಲಿಯೇ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಸಿಗುತ್ತದೆ. ಥೋರಿಯಂ ಒಂದು ನ್ಯೂಟ್ರಾನ್‌ನ್ನು ಹೀರಿ ಯುರೇನಿಯಂ ೨೩೩ ಐಸೋಟೋಪನ್ನು

ಕೊಡುತ್ತದೆ. ಯುರೇನಿಯಂ ೨೩೩ ರ ಉಪಯೋಗದ ವಿಷಯವಾಗಿ ವೈಜ್ಞಾನಿಕ ವಿವರಗಳು ಇನ್ನೂ ಬರುತ್ತಲಿವೆ. ಮುಂಬರುವ ಪರಮಾಣುಶಕ್ತಿ ಕೇಂದ್ರಗಳಲ್ಲಿ ಬಹುಶಃ ಈ ಹೊಸ ಸಮಸ್ಥಾನೀಯ ಉಪಯೋಗವಾಗುತ್ತದೆ ಏನೋ ಕಾದು ನೋಡಬೇಕು.

ಪರಮಾಣು ಶಕ್ತಿಯ ರೂಪ ಅಸಾಧಾರಣವಾಗಿದ್ದು ಅದನ್ನು ಯಾವ ರೀತಿಯಲ್ಲಾದರೂ ಉಪಯೋಗಿಸಿಕೊಳ್ಳಬಹುದು— ವಿಧ್ವಂಸಕ್ಕಾಗಿ ಉಪಯೋಗಿಸಬಹುದು ಅಥವಾ ಜನರ ಆಯುರಾರೋಗ್ಯಗಳ ಮಟ್ಟವನ್ನು ಹೆಚ್ಚಿಸಲೂಬಹುದು. ೧೯೪೫ ರಲ್ಲಿ ಪರೀಕ್ಷೆಗಾಗಿ ಮಾಡಿದ ಪರಮಾಣು ಬಾಂಬಿನ ಆಸ್ಫೋಟನೆಯ ವಿವರವನ್ನು ತಿಳಿದರೆ, ಅದು ಮನುಷ್ಯ ಜೀವನವನ್ನು ಎಷ್ಟೊಂದು ಅಪಾಯಕ್ಕೆ ಗುರಿಮಾಡಿತೆಂಬುದರ ಅರಿವಾಗುತ್ತದೆ. ಅಮೇರಿಕದ ಆಲ್ಬುಕರ್ಕದ ದಕ್ಷಿಣಕ್ಕೆ ಒಂದುನೂರು ಇಪ್ಪತ್ತು ಮೈಲು ದೂರದಲ್ಲಾದ ಆಸ್ಫೋಟನೆಯಿಂದ ಹತ್ತು ಮೈಲು ದೂರದಲ್ಲಿದ್ದ ದೊಡ್ಡ ಪರ್ವತಗಳು ಪ್ರಕಾಶಮಾನವಾಗಿ ಕಂಡವು; ಹವೆಯಲ್ಲಿ ವೇಗದಿಂದ ಬರುತ್ತಿದ್ದ ಉಷ್ಣ ಅಲೆಗಳು ದೇಹದ ತ್ವಚೆಯ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಮಾಡಿದವು. ಭಯಾನಕ ಶಬ್ದದೊಂದಿಗೆ ಬೆಂಕಿಯ ಉಂಡೆಯೊಂದು ಹವೆಯಲ್ಲಿ ಹಾರಿದಾಗ, ಜೊತೆಗೇ ನಾಲ್ವತ್ತು ಸಾವಿರ ಫೂಟು ಎತ್ತರದ ವರೆಗೂ ನಾಯಕೊಡೆಯಾಕಾರದ ಹೊಗೆ ಹೊರಟಿತು. ಈ ಕ್ಷೇತ್ರದಲ್ಲಿಯೇ ಇದ್ದ ಕಟ್ಟಡಗಳು ನಿರಾಕಾರವಾಗಿ, ಹೊಗೆಯಾಗಿ ಹವೆಯಲ್ಲಿ ಲೀನವಾದವು. ಎಂಟುನೂರು ಯಾರ್ಡು ತ್ರಿಜ್ಯವುಳ್ಳ ಸುತ್ತಲಿನ ಮರಳುಗಾಡಿನಲ್ಲಿಯ ಮರಳೆಲ್ಲವೂ ಕರಗಿ ಗಾಜಿನ ರೂಪ ತಾಳಿತು! ಈ ವಿವರಗಳೆಲ್ಲ ಬಾಂಬಿನ ಪರೀಕ್ಷಣೆಗೆ ಸಂಬಂಧಿಸಿದವು. ಇಂಥ ಬಾಂಬನ್ನು ಯುದ್ಧ ನಡೆದಾಗೇನಾದರೂ ಉಪಯೋಗಿಸಿದರೆ, ಅದರಿಂದಾಗುವ ಪರಿಣಾಮಗಳನ್ನು ಕೇಳಿದರೆ ಕೂಡ ಮನಸ್ಸಿನಲ್ಲಿ ಎಲ್ಲಿಲ್ಲದ ಭಯ ಉಂಟಾಗುತ್ತದೆ, ಮೈಯಲ್ಲಿ ನಡುಕ ಬರುತ್ತದೆ.

ಅಮೇರಿಕ ದೇಶದ ವಿಮಾನವೊಂದು, ಯುದ್ಧವನ್ನು ಮುಕ್ತಾಯ ಮಾಡುವ ಉದ್ದೇಶದಿಂದ, ಜಪಾನಿನ ಹೀರೋಶಿಮಾ ನಗರದ ಮೇಲೆ ಮೊದಲನೆ ಪರಮಾಣು ಬಾಂಬನ್ನು ಎಸೆಯಿತು– ೧೯೪೫ ರ ಆಗಷ್ಟ ತಿಂಗಳ ಆರನೆ ದಿನಾಂಕ ಬೆಳಗಿನ ಜಾವದಲ್ಲಿ! ಆಸ್ಫೋಟನೆಯ ಶಕ್ತಿ ಇಪ್ಪತ್ತು ಸಾವಿರ ಟನ್ ಟಿ.ಎನ್ ಟಿ. ಶಕ್ತಿಯ ಸಮಾನವಾಗಿತ್ತು. ಅದು ಮೂರು ಲಕ್ಷ ನಲ್ವತ್ತ್ಮೂರು ಜನವಸತಿಯುಳ್ಳ ಈ ಪಟ್ಟಣದಲ್ಲಿಯ ನಾಲ್ಕು ಚದುರು ಮೈಲು ಕ್ಷೇತ್ರವನ್ನು ನಿರ್ನಾಮ ಮಾಡಿತೆಂದರೂ ಅತಿಶಯೋಕ್ತಿಯಾಗಲಾರದು. ಪರಿಣಾಮವಾಗಿ, ಅರವತ್ತಾರು ಸಾವಿರ ಜನರು ಪ್ರಾಣ ನೀಗಿದರು, ಅರ್ವತ್ತೊಂಭತ್ತು ಸಾವಿರ ಜನರು ಅಪಾಯಕ್ಕೆ ಗುರಿಯಾದರು, ಸುಮಾರು ಮುಕ್ಕಾಲು ಭಾಗ ಕಟ್ಟಡಗಳು ಗುರುತು

ಸಿಗಲಾರದಂತೆ ನಾಶಹೊಂದಿದವು.

೧೯೪೫ ರ ಆಗಸ್ಟ್ ಒಂಭತ್ತನೆಯ ದಿನಾಂಕದಂದು ಎರಡನೆಯ ಪರಮಾಣು ಬಾಂಬನ್ನು ನಾಗಾಸಾಕಿಯ ಮೇಲೆ ಎಸೆಯಲಾಯಿತು. ಮೂವತ್ತೊಂಭತ್ತು ಸಾವಿರ ಜನರು ಸತ್ತರಲ್ಲದೆ ಇಪತ್ತೈದು ಸಾವಿರ ಜನರು ಅಪಾಯಕ್ಕೆ ಗುರಿಯಾದರು, ಸುಮಾರು ಅರ್ಧದಷ್ಟು ಕಟ್ಟಡಗಳು ನಾಶ ಹೊಂದಿದವು.

ಜಲಜನಕ ಬಾಂಬುಗಳ ಆಸ್ಫೋಟನೆಯಂತೂ ಮನುಷ್ಯನನ್ನು ಮೂಕನನ್ನಾಗಿ ಮಾಡುತ್ತದೆ. ೧೯೫೦ ಹಾಗು ೧೯೫೪ ರಲ್ಲಿ ಆಸ್ಫೋಟನೆಗಳಾದವಷ್ಟೇ. ಅದರಶಕ್ತಿ ೫-೭ಮೆಗಾಟನ್ ಟಿ.ಎನ್.ಟಿ.ಶಕ್ತಿಯ ಸರಿಸಮಾನವಾಗಿತ್ತು. (ಒಂದು ಮೆಗಾಟನ್ ಎಂದರೆ ಒಂದು ದಶಲಕ್ಷ ಟನ್ನುಗಳು). ಆ ಸ್ಫೋಟನೆಯಿಂದಾಗಿ ಒಂದು ದ್ವೀಪವೇ ಮಾಯವಾಗಿ ಅದರ ಸ್ಥಳದಲ್ಲಿ ೧೭೫ ಫೂಟು ಆಳವಾದ ಒಂದು ಮೈಲು ವ್ಯಾಸವುಳ್ಳ ಹಳ್ಳವೊಂದು ನಿರ್ಮಾಣವಾಯಿತು. ೧೯೫೪ ಮಾರ್ಚ ತಿಂಗಳಲ್ಲಾದ ಪರೀಕ್ಷೆಯಿಂದ ಆಸ್ಫೋಟನೆಯ ಸ್ಥಳದಿಂದ ಸುಮಾರು ಎಂಭತ್ತು ಮೈಲು ದೂರದಲ್ಲಿದ್ದ ಜಪಾನಿನ ಬೆಸ್ತರು ಬೀಜಿಯ ವಿಕಿರಣತೆಗೆ ಗುರಿಯಾದರು.

ಇಂಥ ಬಾಂಬುಗಳನ್ನಿಟ್ಟುಕೊಂಡ ಮಹಾರಾಷ್ಟ್ರಗಳು ಅಂಥ ಅಸ್ತ್ರಗಳನ್ನು ಆದಷ್ಟು ಶೀಘ್ರ ನಿಷೇಧಿಸಬೇಕು. ಅದಕ್ಕನುಗುಣವಾಗಿ ಒಂದು ಒಪ್ಪಂದಕ್ಕೆ ಬರಬೇಕೆಂದು ಹೇಳುತ್ತಲೇ ಇವೆ. ಯಾವದೋ ಅವ್ಯಕ್ತ ಭಯವೊಂದು ಇಂಥ ರಾಷ್ಟ್ರಗಳನ್ನು ಆವರಿಸಿಬಿಟ್ಟಿದೆ ಇದೇ ಕಾರಣದಿಂದಾಗಿ ಈ ದಿಕ್ಕಿನಲ್ಲಿ ಇನ್ನೂ ಹೇಳಿಕೊಳ್ಳುವಂಥ ಯಾವ ಪ್ರಗತಿಯೂ ಆಗಿಲ್ಲ. ಆಗುವ ಕಾಲ ಬಹುಶಃ ಸನ್ನಿಹಿತವಾಗಿದೆಯೇನೋ ಕಾದು ನೋಡಬೇಕು.

ಪರಮಾಣುಶಕ್ತಿಯ ಇನ್ನೊಂದು ಮುಖವೆಂದರೆ ಅದನ್ನು ಶಾಂತಿಗಾಗಿ ಬಳಸುವದು. ಇಂಥ ಶಕ್ತಿಯನ್ನು ಸುಮಾರು ಕಳೆದಹತ್ತು ವರುಷಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ ಉಪಯೋಗಿಸಲಾಗುತ್ತಿದೆ ಬೇಸಾಯದಿಂದ ಹಿಡಿದು ಬಂದರು ಸುಧಾರಣೆಯ ವರೆಗೆ! ಬೇಸಾಯದಲ್ಲಂತೂ ಹೊಸ ತಳಿಯ, ಆನುವಂಶಿಕ ವಿಭಿನ್ನತೆಯುಳ್ಳ ಭತ್ತವನ್ನು ಸಂಶೋಧಿಸಲಾಗಿದೆ. T.R.I. ಮತ್ತು ಇನ್ನಿತರ ಭತ್ತದ ತಳಿಗಳನ್ನು ಟಕಾಂಬೆಯಲ್ಲಿಯೇ ಸಂಶೋಧಿಸಲಾಗಿದೆ ಕ್ಷ-ಕಿರಣಗಳಿಗೆ ಗುರಿಯಾದ ನೆಲಗಡಲೆ ಸುಧಾರಣೆಯ ಮಾರ್ಗದಲ್ಲಿದೆ. ಬೀಜದ ಗಾತ್ರವು ದೊಡ್ಡದಾಗಿದೆಯಲ್ಲದೆ ಅದರಲ್ಲಿಯ ಎಣ್ಣೆಯ ಪ್ರಮಾಣವೂ ಹೆಚ್ಚಿದೆ. ಜೋಳ, ಮೆಕ್ಕೆಜೋಳ, ಅರಳೆ, ಟೊಮ್ಯಾಟೊ ಮತ್ತು ಬದನೆಕಾಯಿ ಇತ್ಯಾದಿಗಳ ಹೊಸ ತಳಿಗಳು ಬಹುಶಃ ಜಾಗ್ರತೆಯಾಗಿಯೇ ಅಸ್ತಿತ್ವದಲ್ಲಿ ಬರಬಹುದೆಂದು ಊಹಿಸಲಾಗಿದೆ. ವಿಕಿರಣತೆಯಿಂದಾಗಿ ಆಹಾರ ಸಂಗ್ರಹಣೆಯನ್ನು ಹೆಚ್ಚು ಕಾಲ

ಮಾಡಲು ಸಾಧ್ಯವಾಗಿದೆ. ಕೊಠಡಿಯ ಉಷ್ಣತೆಯಲ್ಲಿ ಕೆಲವು ಗಂಟೆಗಳ ಕಾಲವೂ ತಡೆಯಲಾರದ 'ಬಾಂಬೆ ಡಕ್' ಎಂಬ ಮೀನು ವಿಕಿರಣತೆಯ ಪರಿಣಾಮವಾಗಿ ಮೂರು ವಾರಗಳ ವರೆಗೆ 'ಆಹಾರ ಮೌಲ್ಯಕ್ಕೆ' ಯಾವ ಚ್ಯುತಿ ಬರದಂತೆ ಇರುವದು. ಏಡಿಗಳನ್ನಂತೂ ಇನ್ನೂ ಹೆಚ್ಚು ಕಾಲ ಶೇಖರಿಸಿಡಬಹುದು. ವೈದ್ಯಕೀಯ ಕ್ಷೇತ್ರದಲ್ಲೂ ಪರಮಾಣು ಶಕ್ತಿಯ ಉಪಯೋಗ ಅನೇಕ ರೀತಿಯಿಂದ ಆಗುತ್ತಲಿದೆ. ಎಲ್ಲರಿಗೂ ತಿಳಿದ ಒಂದು ವಿಷಯವೆಂದರೆ ಕೋಬಾಲ್ಟ್-೬೦ ರದು. ಇದರಿಂದ ಕ್ಯಾನ್ಸರ್ ಪೀಡಿತ ಕೋಶಗಳನ್ನು ನಾಶಗೊಳಿಸಿ ರೋಗಿಯನ್ನು ಬೇನೆಯಿಂದ ಮುಕ್ತಗೊಳಿಸಲು ಸಾಧ್ಯವಾಗಿದೆ ಪರಮಾಣುಶಕ್ತಿಯಿಂದ ಬಂದರಗಳನ್ನು ಆಳಗೊಳಿಸಿ ದೊಡ್ಡ ಹಡಗಗಳೂ ಬರುವಂತೆ, ತಂಗುವಂತೆ ಮಾಡಲು ಬೇಕಾದಷ್ಟು ಅವಕಾಶವಿದೆ. ಇನ್ನೂ ಅನೇಕ ದಿಶೆಗಳಲ್ಲಿ, ಅನೇಕ ಕ್ಷೇತ್ರಗಳಲ್ಲಿ ವಿವಿಧ ರೀತಿಗಳಲ್ಲಿ ಈ ಅನುಪಮ ಶಕ್ತಿಯ ಉಪಯೋಗವಾಗುತ್ತಲಿದೆ.

ಪ್ರತಿ ದಿನವೂ ನಮಗೆ ಜೀವನದಲ್ಲಿ ಬೇಕಾಗುವ ಶಕ್ತಿಯಲ್ಲಿ ಸುಮಾರು ನೂರಕ್ಕೆ ತೊಂಭತ್ತಾರು ಭಾಗದಷ್ಟು, ಇದ್ದಿಲು, ಅನಿಲ ಹಾಗು ಪೆಟ್ರೋಲಿಯಂಗಳಿಂದ, ಹಾಗು ಉಳಿದ ನಾಲ್ಕು ಭಾಗ ಜಲಶಕ್ತಿಯಿಂದ ಬರುತ್ತದೆ. ಜನಸಂಖ್ಯೆ ಬೆಳೆದಂತೆ, ಆಧುನಿಕ ಅನುಕೂಲತೆಗಳು ಹೆಚ್ಚಿದಂತೆ ಈ ಉರುವಲು ಅಲ್ಪ ಕಾಲಾವಧಿಯಲ್ಲಿಯೇ ಮುಗಿಯುವದರಿಂದ, ಮತ್ತಿತರ ಶಕ್ತಿಯ ಉಗಮದತ್ತ ನೋಡಲೇಬೇಕಾಗುತ್ತದೆ. ಅದು ನಿರಂತರವಾಗಿ ಲಭ್ಯವಾಗುವಂತಿರಬೇಕು ಆರ್ಥಿಕ ದೃಷ್ಟಿಯಿಂದ ಅಗ್ಗವಾಗಿರಬೇಕು. ಇತ್ತೀಚಿನ ಕಾಲದಲ್ಲಿ ವೈಜ್ಞಾನಿಕ ವಿಕಾಸದ ಪರಿಣಾಮವಾಗಿ ಅಣುಶಕ್ತಿಯು ಒಂದು ವರವಾಗಿ ಬಂದಿದ್ದು ಜನಸಾಮಾನ್ಯರ ಜೀವನ ಮಟ್ಟವನ್ನು ಎತ್ತರಿಸಿ, ರಾಷ್ಟ್ರದ ಸರ್ವಾಂಗೀಣ ಉನ್ನತಿಗೂ ತುಂಬ ಸಹಾಯವಾಗಲಿದೆ.

★ ಡಾ॥ ನಾರಾಯಣ ಮಹಿಷಿ

ಕಣಂಬಡೆ ನಾಡು

ಕಣಂಬಡೆ ನಾಡಿಗೆ 'ಕಣಂಬಡೆ ಮೂನೂಱು'[೧] 'ಕಳಂಬಡೆ ಮೂನೂಱು'[೨] ಮತ್ತು ಸಂಸ್ಕೃತದಲ್ಲಿ 'ಕಣಂಬಡೆ ದೇಶ'[೩] 'ಕಣಂಬಡೆ ತ್ರಿಶತ'[೪] ಎಂದು ಹೆಸರುಗಳಿದ್ದವು. ಈ ನಾಡು ಕರಹಡನಾಡು ಅಥವಾ ಕರಹಡ ನಾಲ್ಸಾಸಿರದ ಒಂದು ವಿಭಾಗ. ಈ ಭಾಗದಲ್ಲಿ ಸಾಂಪ್ರದಾಯಿಕವಾಗಿ ಮೂರು ನೂರು ಗ್ರಾಮಗಳಿದ್ದವು. ಈ ವಿಭಾಗದ ಪ್ರಮುಖ ಗ್ರಾಮ ಕಳಂಬಡೆ. ಕಳಂಬಡೆ ಗ್ರಾಮವು ವಿಜಾಪುರ ತಾಲೂಕಿನಲ್ಲಿಯ ಈಗಿನ ಕನಮಡಿ ಗ್ರಾಮ. ಈ ಗ್ರಾಮ ವಿಜಾಪುರದ ವಾಯುವ್ಯಕ್ಕೆ ತಿಕೋಟಿ–ಜತ್ತಿ ರಸ್ತೆಯ ಮೇಲೆ ಸುಮಾರು ಇಪ್ಪತ್ತು ಮೈಲು ಅಂತರದಲ್ಲಿ ಇದೆ.

ಕಣಂಬಡೆ ನಾಡಿನ ಉಲ್ಲೇಖ ವಿಶೇಷವಾಗಿ ಕಲಚುರಿ ಮತ್ತು ಸೇವುಣರ ಶಾಸನಗಳಲ್ಲಿ ಬರುತ್ತವೆ.

ಈಗ ಉಪಲಬ್ಧವಿದ್ದ ಶಾಸನಗಳಿಂದ ಕಣಂಬಡೆ ನಾಡಿನಲ್ಲಿ ಸಮಾವಿಷ್ಟವಾಗಿದ್ದ ಉಪಭಾಗಗಳು ಹೀಗಿವೆ:

(೧) ಉಂಬರವಾಣಿ ಮೂವತ್ತಾಱು
(೨) ತುಂಗುಳು ಪನ್ನೆರಡು
(೩) ಬಾಗೆ ನಾಲ್ವತ್ತು
(೪) ಕೊಟ್ಟಿಬಾಗೆ ಮೂವತ್ತು

(೧) ಉಂಬರವಾಣಿ ಮೂವತ್ತಾಱು ಉಂಬರವಾಣಿ ಗ್ರಾಮ ಪ್ರಮುಖವಾಗಿದ್ದ ಮೂವತ್ತು ಹಳ್ಳಿಗಳ ಒಂದು ಕಂಪಣ. ಉಂಬರವಾಣಿ ಗ್ರಾಮ ಸಾಂಗ್ಲಿ ಜಿಲ್ಲೆಯ ಜತ್ತಿ ತಾಲೂಕಿನ ಈಗಿನ ಉಮ್ರಾಣಿ ಗ್ರಾಮ. ಇದು ಜತ್ತಿಯಿಂದ ದಕ್ಷಿಣಕ್ಕೆ ಸುಮಾರು ಹನ್ನೆರಡು ಮೈಲು ಅಂತರದಲ್ಲಿ ಅಥಣಿ ತಾಲೂಕಿನ ಸೀಮೆಗೆ ಹೊಂದಿ, ಅಥಣಿಯಿಂದ ಬಡಗ–ಮೂಡಣ ದಿಕ್ಕಿನಲ್ಲಿ ಸುಮಾರು

---

೧. Inscriptions in Northern Karnataka and the Kolhapur State; K. G. Kundangar; Kokatnur Chandresvara temple inscription; Kannada texts, p. 89, L–52.

೨. Karnatak inscriptions, Vol. II, No. 18, Telsang inscription; p. 74, L. 10, Ibid. No. 25 Kokatnur inscription, p. 95, U. 32–34.

೩. Collected Works of Sir R. G. Bhandarkar, Vol. III, p. 346, Badachi copper-plates.

೪. Murgundi plates of Somesvara IV; R. N. Gurav; The Journal of the Karnatak University, Social Sciences, Vol. I, 1965; p. 37, U. 51–52.

ಇಪ್ಪತ್ತು ಮೈಲು ಅಂತರದ ಮೇಲೆ ಇದೆ. ಇದೇ ಗ್ರಾಮದ ಶಾಸನಗಳಲ್ಲಿ[೫] ಈ ಕಂಪಣವು ವಿದಿತವಾಗಿದೆ. ಈ ಕಂಪಣದಲ್ಲಿ ಜತ್ತಿ ತಾಲೂಕಿನ ದಕ್ಷಿಣಭಾಗ ಮತ್ತು ಅಥಣಿ ತಾಲೂಕಿನ ಉತ್ತರಭಾಗ ಸಮಾವೇಶವಾಗುತ್ತಿದ್ದವು. ಶಾಸನಗಳ ಮೇರೆಗೆ ಈ ಕಂಪಣದಲ್ಲಿ ಸಮಾವಿಷ್ಟವಾಗಿದ್ದ ಗ್ರಾಮಗಳು ಹೀಗಿವೆ:

(೧) ಜತ್ತಿಯಿಂದ ದಕ್ಷಿಣಕ್ಕೆ ಎಂಟು ಮೈಲು ಮತ್ತು ಉಮ್ರಾಣಿಯಿಂದ ಬಡಗ-ಪಡುವಣಕ್ಕೆ ಆರು ಮೈಲು ಅಂತರದಲ್ಲಿದ್ದ ಬಳ್ಳೂರಗ್ರಾಮ.[೬]

(೨) ಅಥಣಿಯಿಂದ ಬಡಗ-ಮೂಡಣ ದಿಕ್ಕಿನಲ್ಲಿದ್ದ ಬಳ್ಳಿಗೇರಿ ಗ್ರಾಮ,[೭] ಇದು ಉಮ್ರಾಣಿಯಿಂದ ಪಡುವ-ತೆಂಕಣ ದಿಕ್ಕಿಗೆ ಸುಮಾರು ಎಂಟು ಮೈಲು ಅಂತರದಲ್ಲಿದೆ.

(೩) ಅಥಣಿಯಿಂದ ಹತ್ತು ಮೈಲು ಮೂಡ-ಮೂಡ-ಬಡಗ ದಿಕ್ಕಿಗೆ ಸುಮಾರು ಹತ್ತು ಮೈಲು ಮತ್ತು ಉಮ್ರಾಣಿಯಿಂದ ತೆಂಕ-ಪಡುವಣ ದಿಕ್ಕಿಗೆ ಸುಮಾರು ಹನ್ನೆರಡು ಮೈಲು ಅಂತರದಲ್ಲಿದ್ದ ಯಲಿಹಡಲಗಿ ಗ್ರಾಮ.[೮]

(೪) ಉಮ್ರಾಣಿಯಿಂದ ದಕ್ಷಿಣಕ್ಕೆ ನಾಲ್ಕು ಮೈಲು ಅಂತರದಲ್ಲಿದ್ದ ಅಥಣಿ ತಾಲೂಕಿನ ರಾಮತೀರ್ಥ ಗ್ರಾಮದ ಶಾಸನದಲ್ಲಿ ನಿರ್ದಿಷ್ಟವಾದ ನಾಗರಹಾಳಗ್ರಾಮ. ಇದು ಈಗ ಅಳಿದುಹೋಗಿದೆ.

ಮೇಲೆ ಹೇಳಿದ ಗ್ರಾಮಗಳ ಶಾಸನಗಳಲ್ಲಿ ನಿರ್ದಿಷ್ಟವಾದ ಬಸರಗಿ, ಸಿಂದೂರ (ಜತ್ತಿ ತಾಲೂಕ), ಬೇವನೂರ, ಕೊಹಳ್ಳಿ, ಐಯ್ಗಳಿ, ಕಕಮರಿ (ಅಥಣಿ ತಾಲೂಕ) ಗ್ರಾಮಗಳು,

(೨) ತುಂಗುಳು ಪನ್ನೆರಡು[೧೦] ತುಂಗುಳ ಪ್ರಮುಖವಾದ ಹನ್ನೆರಡು ಹಳ್ಳಿಯ ಚಿಕ್ಕವಿಭಾಗ. ತುಂಗುಳವು ಜಮಖಂಡಿ ತಾಲೂಕಿನಲ್ಲಿ ಕೃಷ್ಣಾನದಿಯ ಉತ್ತರಕ್ಕೆ ಸುಮಾರು ಎಂಟು ಮೈಲು ಮತ್ತು ಕೊಕಟನೂರಿನಿಂದ ಪೂರ್ವಕ್ಕೆ ಸುಮಾರು ಆರು ಮೈಲು ಅಂತರದಲ್ಲಿದ್ದ ಈಗಿನ ತುಂಗಳವಾಗಿದೆ.

---

೫. Karnatak inscriptions, Vol. II; No. 26; p. 100; U. 52–53.

೬. ನನ್ನ ಸಂಗ್ರಹದಲ್ಲಿದ್ದ ಶಾಸನಗಳ ಅಚ್ಚುಗಳಿಂದ.

೭. ಅದೇ.

೮. ಅದೇ.

೯. ಅದೇ; Karnatak inscriptions, Vol. II; No. 13: p. 50, L–35: ಇವರಲ್ಲಿ ಗ್ರಾಮದ ಹೆಸರು ನಾದತ್ತಹಳ್ಳಿ ಎಂದು ಓದಲಾಗಿದೆ.

೧೦. ಕೊಕಟನೂರ ಶಾಸನ; ಕರ್ನಾಟಕ ಭಾರತಿ, ಸಂ. ೩, ಸಂ. ೨, ಪುಟ ೫೨; ಸಾಲು ೨೨ ೨೩. ಕೊಕಟನೂರ ಇನ್ನೊಂದು ಶಾಸನದಲ್ಲಿ (K. I-II, No. 25, p. 95) ಈ ಭಾಗದ ಹೆಸರು ತುಂಗುಳು ಮೂವತ್ತು ಎಂದು ಓದಲಾಗಿದೆ.

ಈಗ ಅಳಿದು ಹೋಗಿದ್ದ ಜನ್ನವಾಡಗ್ರಾಮವು ತುಂಗುಳುಪನ್ನೆರಡರಲ್ಲಿತ್ತೆಂದು ಕೊಕಟನೂರ[೧೧] ಶಾಸನದಲ್ಲಿ ಹೇಳಿದೆ. ಅದೇ ಶಾಸನದಲ್ಲಿ ಹೇಳಿದ ನಾಗರಹಾಳ ಮತ್ತು ಎಡೆಯೂರ ಗ್ರಾಮಗಳೂ ಈ ವಿಭಾಗದಲ್ಲಿ ಇದ್ದಂತೆ ತೋರುತ್ತದೆ. ಈ ತುಂಗುಳು ಪನ್ನೆರಡು ವಿಭಾಗದಲ್ಲಿ ಜಮಖಂಡಿ ತಾಲೂಕಿನಲ್ಲಿಯ ಕೃಷ್ಣಾ ನದಿ ಉತ್ತರಕ್ಕೆ ಇದ್ದ ಹಳ್ಳಿಗಳು ಸಮಾವೇಶವಾದಂತೆ ಕಾಣುತ್ತದೆ.

(೩) ಬಾಗೆ ನಾಲ್ವತ್ತು: ಹೊನ್ನವಾಡದ ಒಂದು ಶಾಸನದಲ್ಲಿ[೧೨] ಈ ಕಂಪಣವು ಕಣಂಬಡೆ ಮೂನೂರದಲ್ಲಿತ್ತೆಂದು ಮತ್ತು ಅದರಲ್ಲಿ ಹೊನ್ನವಾಡ ಗ್ರಾಮವು ಇತ್ತೆಂದು ಹೇಳಿದೆ. ಈ ಬಾಗೆಯು ಜಮಖಂಡಿ ತಾಲೂಕಿನಲ್ಲಿಯ ತದಲಬಾಗಿಯಾಗಿದ್ದು ಹೊನ್ನವಾಡದಿಂದ ದಕ್ಷಿಣಕ್ಕೆ ಸುಮಾರು ಹದಿನೈದು ಮೈಲು ಅಂತರದಲ್ಲಿದೆ ಹೊನ್ನವಾಡವು ವಿಜಾಪೂರ ತಾಲೂಕಿನಲ್ಲಿಯ ಈಗಿನ ಹೊನವಾಡವಾಗಿರುತ್ತದೆ. ಅದು ವಿಜಾಪೂರದಿಂದ ಪಶ್ಚಿಮಕ್ಕೆ ಇಪ್ಪತ್ತು ಮೈಲು ಅಂತರದಲ್ಲಿದೆ. ಹೊನವಾಡದಿಂದ ಆರು ಮೈಲು ದಕ್ಷಿಣಕ್ಕೆ ಇದ್ದ ಬೆಳ್ಳಲಿಗೆ[೧೩] ಗ್ರಾಮವು (ಜಮಖಂಡಿ ತಾಲೂಕಿನ ಈಗಿನ ಕಾಜಿಬೀಳಗಿ ಗ್ರಾಮ) ಬಾಗೆ ಕಂಪಣದಲ್ಲಿ ಇದ್ದಂತೆ ತೋರುತ್ತದೆ. ಈ ಬಾಗೆ ಕಂಪಣದಲ್ಲಿ ಜಮಖಂಡಿ ತಾಲೂಕಿನ ಕೃಷ್ಣಾನದಿಯ ಪೂರ್ವಭಾಗದ ಹಳ್ಳಿಗಳು ಮತ್ತು ವಿಜಾಪೂರ ತಾಲೂಕಿನ ಪಶ್ಚಿಮ-ದಕ್ಷಿಣ ಭಾಗದ ಹಳ್ಳಿಗಳು ಸಮಾವೇಶವಾಗಿದ್ದು ಕಂಡು ಬರುತ್ತದೆ.

(೪) ಕೊಟ್ಟಬಾಗೆ ಮೂವತ್ತು : ನಾಲ್ವಡಿ ಸೋಮೇಶ್ವರನ ಮುರ-ಗುಂಡಿ[೧೪] ತಾಮ್ರಪಟದಲ್ಲಿ ಉಲ್ಲೇಖವಾಗಿದೆ. ಈ ಕಂಪಣವು ಕಣಂಬಡೆ ಮೂನೂರದಲ್ಲಿತ್ತೆಂದು ಅದೇ ತಾಮ್ರಪಟದಲ್ಲಿ ಹೇಳಿದೆ. ಈ ಗ್ರಾಮವು ಈಗ ಅಳಿದು ಹೋಗಿದೆ. ಈ ಕಂಪಣದಲ್ಲಿ ನಿರ್ದಿಷ್ಟವಾದ ಗ್ರಾಮ ಅವರೆಕೋಡು. ಅದು ಅಥಣಿ ತಾಲೂಕಿನಲ್ಲಿ ಅಥಣಿಯಿಂದ ದಕ್ಷಿಣಕ್ಕೆ ಎಂಟು ಮೈಲು ಅಂತರದಲ್ಲಿ ಕೃಷ್ಣಾನದಿಯ ತಡಿಯಲ್ಲಿದೆ ಆದುದರಿಂದ ಕೊಟ್ಟಬಾಗೆ ಕಂಪಣವು ದಕ್ಷಿಣ ಭಾಗ ವ್ಯಾಪಿಸಿತ್ತೆಂದು ತೋರುತ್ತದೆ.

ಯಾವದೆ ಕಂಪಣದಲ್ಲಿ ನಿರ್ದಿಷ್ಟವಾಗದಿದ್ದರು ಕಣಂಬಡೆ ಮೂನೂರದಲ್ಲಿ ಇದ್ದಂತೆ ಹೇಳಿದ ಗ್ರಾಮಗಳು ಹೀಗಿವೆ :

---

೧೧. ಅದೇ.

೧೨. I. A. XIX; pp. 208 ff.

೧೩. A. R. S. I. E. 1939, App. E. p. 216. No. 52, ಕಾಜಿಬಳಗಿಯ ಶಾಸನ.

೧೪. The Journal of the Karnatak University; Social Sciences; Vol. I, 1965 p. 37, 1–52.

(೧) ಅಥಣಿಯಿಂದ ವಾಯುವ್ಯಕ್ಕೆ ಎಂಟು ಮೈಲು ಅಂತರದಲ್ಲಿದ್ದ ಮದುಬಾವಿ ಗ್ರಾಮ.[೧೫]

(೨) ಅಥಣಿಯಿಂದ ದಕ್ಷಿಣಕ್ಕೆ ಹನ್ನೊಂದು ಮೈಲು ಅಂತರದಲ್ಲಿದ್ದ ಸತ್ತಿಗ್ರಾಮ.[೧೬] ಶಾಸನಕಾಲದಲ್ಲಿ ಇದು ಮಹಾಗ್ರಹಾರವಾಗಿ ಸತ್ತತಿ ಗ್ರಾಮವೆಂದು ಪ್ರಸಿದ್ಧವಿತ್ತು.

(೩) ಅಥಣಿಯಿಂದ ನೈಋತ್ಯಕ್ಕೆ ಎಂಟು ಮೈಲು ಅಂತರದಲ್ಲಿದ್ದ ಕೊಡಗನೂರು[೧೭] (ಈಗಿನ ಕೊಡಗಾನೂರ) ಗ್ರಾಮ.

(೪) ಅಥಣಿಯಿಂದ ಪೂರ್ವಕ್ಕೆ ಆರು ಮೈಲು ಅಂತರದಲ್ಲಿದ್ದ ಬಟ್ಟಚಿ (ಈಗಿನ ಬಡಚಿ) ಗ್ರಾಮ.[೧೮]

(೫) ಅಥಣಿಯಿಂದ ಪೂರ್ವಕ್ಕೆ ಇಪ್ಪತ್ತು ಮೈಲು ಅಂತರದಲ್ಲಿದ್ದ ತೆಲಸಂಗಗ್ರಾಮ. ಶಾಸನಕಾಲದಲ್ಲಿ ಇದೊಂದು ಅಗ್ರಹಾರ[೧೯]ವಾಗಿತ್ತು.

ಈ ಐದೂ ಗ್ರಾಮಗಳು ಅಥಣಿ ತಾಲೂಕಿನಲ್ಲಿವೆ.

ಇನ್ನು, ಕಣಂಬಡೆ ನಾಡಿಗೆ ನೆರೆಹೊರೆಯಿದ್ದ ಗ್ರಾಮಗಳ ಉಲ್ಲೇಖಗಳು ಹೀಗಿವೆ :

(೧) ಜತ್ತಿಯಿಂದ ಹತ್ತು ಮೈಲು ಪೂರ್ವದಲ್ಲಿದ್ದ ಮಾಡಗಿಹಾಳ ಗ್ರಾಮವು ತಱಿಕಾಡುನಾಡಿನಲ್ಲಿತ್ತು.[೨೦]

(೨) ಮದುಬಾವಿಯಿಂದ ವಾಯುವ್ಯಕ್ಕೆ ಏಳು ಮೈಲು ಅಂತರದಲ್ಲಿದ್ದ ಸೆಲಗರ (ಈಗಿನ ಸಲಗರ) ಗ್ರಾಮವು ಮಿರಿಂಜೆಗಂಪಣದಲ್ಲಿತ್ತು.[೨೧]

(೩) ಅಥಣಿಯಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಮೈಲು ಅಂತರದಲ್ಲಿದ್ದ ಬೇಡಗ ಗ್ರಾಮವು ಮಿರಂಜೆಗಂಪಣದಲ್ಲಿತ್ತು.[೨೨]

(೪) ಸತ್ತಿಯಿಂದ ನೈಋತ್ಯಕ್ಕೆ ಆರು ಮೈಲು ಅಂತರದಲ್ಲಿದ್ದ ತೇರದಾಳ ಗ್ರಾಮವು ಕೂಂಡಿನಾಡಿನಲ್ಲಿತ್ತು.[೨೩] ತೇರದಾಳವು ಕೃಷ್ಣಾನದಿಯ ದಕ್ಷಿಣಕ್ಕಿದೆ.

---

೧೫. ನನ್ನ ಸಂಗ್ರಹದಲ್ಲಿದ್ದ ಶಾಸನಗಳ ಅಚ್ಚುಗಳಿಂದ.

೧೬. ಅದೇ. ಮತ್ತು ಮೇಲಿನ (೧೪) ಅಡಿ ಟಿಪ್ಪಣಿ, ಪುಟ ೩೭, ಸಾಲು ೫೮-೫೯.

೧೭. ಅದೇ. ಪುಟ ೩೮, ಸಾಲು ೬೬.

೧೮. Collected works of Sir R. G. Bhandarkar, Vol. III. p. 346.

೧೯. Karnatak inscriptions, Vol. II, No. 1·, p. 74, U. 10-11.

೨೦. E. I., Vol. XV, pp. 315 ff.

೨೧. I. A., Vol. XIV, pp. 140 ff.

೨೨. ನನ್ನ ಸಂಗ್ರಹದಲ್ಲಿದ್ದ ಶಾಸನಗಳ ಅಚ್ಚುಗಳಿಂದ

೨೩. I. A. Vol. XIV, pp. 15 ff.

(೫) ಕೃಷ್ಣಾನದಿಯ ದಕ್ಷಿಣಕ್ಕೆ ಇದ್ದು ಜಮಖಂಡಿ ಗ್ರಾಮವು ಬೆಳಗಲೆ ಐನೂರನಲ್ಲಿ ಸಮಾವೇಶವಾಗಿತ್ತು.

(೬) ವಿಜಾಪೂರನಿಂದ ನೈಋತ್ಯಕ್ಕೆ ಹನ್ನೊಂದು ಮೈಲು ಅಂತರದಲ್ಲಿದ್ದ ಅದೇ ತಾಲೂಕಿನ ಗ್ರಾಮ ನಿಡೋಣಿಯು ತರ್ದವಾಡಿ ನಾಡಿನಲ್ಲಿತ್ತು.[೨೪]

(೭) ಇಂಡಿ ತಾಲೂಕಿನಲ್ಲಿ ನಿಂಬರಿಗಿಯಿಂದ ಹದಿನಾಲ್ಕು ಮೈಲು ಉತ್ತರದಲ್ಲಿದ್ದ ಉಮ್ರಜ ಗ್ರಾಮವು ತರ್ದವಾಡಿನಲ್ಲಿತ್ತು.[೨೫]

(೮) ಅದೇ ತಾಲೂಕಿನ ಪಶ್ಚಿಮ ಭಾಗದಲ್ಲಿಯ ತದ್ದೇವಾಡಿ ನಿಂಬಾಳ ಮತ್ತು ಚುಗ್ಗಿರ್ ಗ್ರಾಮಗಳು ತರ್ದವಾಡಿನಾಡಿನಲ್ಲಿದ್ದುವು.[೨೬]

ಮೇಲ್ಕಂಡ ಸಂದರ್ಭಗಳಿಂದ ಕಣಂಬಡೆ ಮೂನೂರಕ್ಕೆ ಒಳಪಟ್ಟ ಭಾಗಗಳು ಈ ಪ್ರಕಾರವಾಗಿ ಕಂಡುಬರುತ್ತವೆ: (೧) ಜತ್ತಿ ತಾಲೂಕಿನ ದಕ್ಷಿಣ ಭಾಗ (೨) ಮಿರಜಿ ತಾಲೂಕಿನ ಅತಿ ಪೂರ್ವ ಭಾಗ (೩) ಅಥಣಿ ತಾಲೂಕಿನ ಪಶ್ಚಿಮ ಭಾಗ ಬಿಟ್ಟು ಉಳಿದ ಭಾಗ (೪) ಜಮಖಂಡಿ ತಾಲೂಕಿನ ಕೃಷ್ಣಾನದಿಯ ಉತ್ತರ ಮತ್ತು ಪೂರ್ವ ಭಾಗ (೫) ವಿಜಾಪುರ ತಾಲೂಕಿನ ಪಶ್ಚಿಮ ಭಾಗ, ಮತ್ತು (೬) ಇಂಡಿ ತಾಲೂಕಿನ ಅತಿ ಪಶ್ಚಿಮ ಭಾಗ. ಕಣಂಬಡೆ ನಾಡಿನ ಮೇರೆಗಳು ಹೀಗಿದ್ದವು: ಉತ್ತರಕ್ಕೆ ತಱಿಕಾಡು ನಾಡು. ಪಶ್ಚಿಮಕ್ಕೆ ಮಿರಿಂಜಿನಾಡು. ದಕ್ಷಿಣಕ್ಕೆ ಕೂಂಡಿನಾಡು ಮತ್ತು ಕೃಷ್ಣಾ ನದಿ. ಪೂರ್ವಕ್ಕೆ ತರ್ದವಾಡಿ ನಾಡು.

★ ಆರ್. ಎನ್. ಗುರವ

೨೪. A. R. S. I. E., 1933–34, App. E. p. 136. No. 183.

೨೫. ಅದೆ; 1938; App. E. p. 206, No. 84.

೨೬. ಅದೆ; pp. 200–206. No 78, 53 and 23 (ಅನುಕ್ರಮವಾಗಿ).

ಕೆಲ್ಸನ್ನನ ದೃಷ್ಟಿಯಲ್ಲಿ
'ಕಾಯಿದೆ' ಮತ್ತು 'ನೀತಿಗಳು'

ನ್ಯಾಯಶಾಸ್ತ್ರ ವಿಜ್ಞಾನದ ಪ್ರಕಾರದಲ್ಲಿ 'ಕಾಯಿದೆ'ಗೆ ನಿಶ್ಚಿತ ಸ್ಥಾನವೊಂದಿದೆ. ಕಾಯಿದೆಯನ್ನು ಒಂದು ಕ್ಲುಪ್ತಪ್ರಮಾಣವಾಗಿ ನಿಶ್ಚಯಿಸುವಾಗ ಪ್ರಕೃತಿಗೆ ಸಂಬಂಧಿಸಿದಂತೆ ಅದರ ಮಿತಿಯನ್ನು ಕಲ್ಪಿಸಲಾಗಿದೆ. ಅಂತೆಯೇ ಕಾಯಿದೆ ವಿಜ್ಞಾನವನ್ನು ಪ್ರಕೃತಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ನಿರ್ಣಯಿಸಲಾಗಿದೆ. ಮಾನವನ ನಡವಳಿಕೆಯನ್ನು ಕೇವಲ ನ್ಯಾಯಶಾಸ್ತ್ರೀಯ ಕ್ಲುಪ್ತಪ್ರಮಾಣಗಳು ಮಾತ್ರ ನಿಯಂತ್ರಿಸುವುದಿಲ್ಲ ಸಾಮಾಜಿಕ ಕ್ಲುಪ್ತಪ್ರಮಾಣಗಳ ಪಾತ್ರವೂ ಗಮನಾರ್ಹವಾದದ್ದು. ಆದ್ದರಿಂದ ಸಾಮಾಜಿಕ ಕ್ಲುಪ್ತಪ್ರಮಾಣಗಳ ಜ್ಞಾನ ಹಾಗೂ ನಿರೂಪಣೆಗಳ ಕಡೆ ಗಮನನೀಡತಕ್ಕದ್ದು ಕೇವಲ ಕಾಯಿದೆ ವಿಜ್ಞಾನ ಮಾತ್ರವಲ್ಲ. ಸಾಮಾಜಿಕ ಕ್ಲುಪ್ತಪ್ರಮಾಣಗಳನ್ನೇ ನಾವು "ನೀತಿ"ಗಳೆಂದು ಕರೆಯುತ್ತೇವೆ. ಇವುಗಳ ಅಧ್ಯಯನದೆಡೆಗೆ ನಿರ್ದೇಶಿತವಾದ ಶಾಸ್ತ್ರವೇ 'ನೀತಿಶಾಸ್ತ್ರ' ನೀತಿಗಳಿಗೆ ನ್ಯಾಯ ಅಥವಾ ಧರ್ಮವೇ ಆಧಾರಕಲ್ಪನೆಯೆಂದು ನಾವು ಒಪ್ಪಿದಲ್ಲಿ, ನೀತಿಗಳಿಗೂ ಕಾಯಿದೆಗೂ ಇರುವ ಸಂಬಂಧದಲ್ಲೇ ಕಾಯಿದೆ ಹಾಗೂ ನ್ಯಾಯಕ್ಕೆ ಸಂಬಂಧಿಸಿದ ವಿಷಯಗಳು ಅಡಕವಾಗಿರಬೇಕು. ವ್ಯಾವಹಾರಿಕ ಭಾಷಾ ಪ್ರಯೋಗದಲ್ಲಿ, ಕಾಯಿದೆಯನ್ನು ನ್ಯಾಯಶಾಸ್ತ್ರ ವಿಜ್ಞಾನದೊಡನೆ ಬೆರಸಿದಂತೆಯೇ, ನೀತಿಗಳನ್ನು ನೀತಿಶಾಸ್ತ್ರದೊಡನೆ ಬೆರಸಲಾಗಿದೆ, ನೀತಿಗಳ ಕೆಲಸವನ್ನು ನೀತಿಶಾಸ್ತ್ರದ್ದಾಗಿ ಬಣ್ಣಿಸಲಾಗಿದೆ. ತತ್ಪರಿಣಾಮವಾಗಿ, ನೀತಿಶಾಸ್ತ್ರ ಮಾನವನ ನಡವಳಿಕೆಯನ್ನು ನಿಯಂತ್ರಿಸುತ್ತದೆಯೆಂದೂ, ಅವನ ಕರ್ತವ್ಯಗಳು ಹಾಗೂ ಹಕ್ಕುಗಳನ್ನು ನಿರೂಪಿಸುವುದೆಂದೂ ತಿಳಿಸಿ, ಅದು ಅಧಿಕೃತವಾಗಿ ಕ್ಲುಪ್ತಪ್ರಮಾಣಗಳನ್ನು ಸ್ಥಾಪಿಸುತ್ತದೆಯೆಂಬ ಭಾವನೆ ಅನೇಕರಿಗಿದೆ. ಆ ಭಾವನೆ ತಪ್ಪು, ನೈತಿಕ ಪ್ರಮಾಣವೊಂದರಿಂದ ಇಲ್ಲವೇ ಸಂಪ್ರದಾಯದಿಂದ ಸೃಷ್ಟಿಸಲ್ಪಟ್ಟ ಕ್ಲುಪ್ತಪ್ರಮಾಣಗಳ ಬಗ್ಗೆ ಅರಿವುಂಟು ಮಾಡಿ. ಸರಿಯಾಗಿ ನಿರೂಪಿಸುವುದು ನೀತಿಶಾಸ್ತ್ರದ ಕೆಲಸ. ಕಾಯಿದೆ ವಿಜ್ಞಾನಕ್ಕೂ, ಪ್ರಕೃತಿವಿಜ್ಞಾನಕ್ಕೂ ಮಧ್ಯೆಯಿರುವ ನಿರ್ದಿಷ್ಟವಾದ ಗಡಿರೇಖೆಯನ್ನು ಅಲಕ್ಷಿಸಿರುವುದು, ಕಾಯಿದೆ ವಿಜ್ಞಾನವನ್ನು ಸಾಕಷ್ಟು ಸ್ಪಷ್ಟವಾಗಿ ನೀತಿಶಾಸ್ತ್ರದಿಂದ ಬೇರ್ಪಡಿಸದಿರುವುದು ಮತ್ತು ಕಾಯಿದೆ ಹಾಗೂ ನೀತಿಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸದಿರುವುದು ಕಾಯಿದೆ ವಿಜ್ಞಾನದ ವಿಧಾನಾತ್ಮಕ ಪರಿಶುದ್ಧತೆಗೆ ತೀವ್ರ ಧಕ್ಕೆಯುಂಟು ಮಾಡಿದೆ. ಒಬ್ಬ ವ್ಯಕ್ತಿ, ಮಿಕ್ಕ ವ್ಯಕ್ತಿಗಳೆಡೆಗಲ್ಲದೇ, ತನ್ನೆಡೆಗೇ ಅನುಸರಿಸಬೇಕಾದ ನಡವಳಿಕೆಯನ್ನು ನಿರೂಪಿಸುವ

ನೈತಿಕ ಕ್ಲೃಪ್ತಪ್ರಮಾಣಗಳನ್ನು ನಿದರ್ಶನವಾಗಿ ಉದಾಹರಿಸಿ ನೀತಿಗಳ ಸಾಮಾಜಿಕ ಸ್ವರೂಪವನ್ನೇ ಅನೇಕರು ಪ್ರಶ್ನಿಸಿದ್ದಾರೆ. 'ಆತ್ಮಹತ್ಯೆ' 'ಪಾತಿವ್ರತ್ಯ' ಇವುಗಳನ್ನು ವ್ಯಕ್ತಿ ತನ್ನೆಡೆಗೇ ಅನುಸರಿಸಬೇಕಾದ ನಡವಳಿಕೆಯನ್ನು ನಿರೂಪಿಸುವ ನೈತಿಕ ಕ್ಲೃಪ್ತಪ್ರಮಾಣಗಳಾಗಿ ಪರಿಗಣಿಸಬಹುದು. ಸಾಮಾಜಿಕ ಪ್ರಜ್ಞೆಯುಳ್ಳ ಸಮಾಜದಲ್ಲಿ ಮಾತ್ರ ಈ ಕ್ಲೃಪ್ತಪ್ರಮಾಣಗಳನ್ನು ನಾವು ಕಾಣುತ್ತೇವೆ. ಈ ಕ್ಲೃಪ್ತಪ್ರಮಾಣಗಳು ವ್ಯಕ್ತಿಗತವಾದ್ದೇ ಆದರೂ ಅವು ಕೇವಲ ಆ ವ್ಯಕ್ತಿಗೆ ಮಾತ್ರ ಅನ್ವಯಿಸದೇ, ಪರೋಕ್ಷವಾಗಿ ಜನಾಂಗದ ಇತರ ಸದಸ್ಯರ ನಡವಳಿಕೆಗಳ ಮೇಲೂ ಪ್ರಭಾವ ಬೀರುತ್ತವೆ. ಜನಾಂಗದ ಪ್ರಜ್ಞೆಯಲ್ಲಿ ಈ ನಡವಳಿಕೆ, ನೈತಿಕ ಕ್ಲೃಪ್ತ ಪ್ರಮಾಣದ ಮುಖ್ಯ ಉದ್ದೇಶವಾಗುತ್ತದೆ. ಜನಾಂಗದ ಮೇಲೆ ಅದು ಬೀರುವ ಪ್ರಭಾವವೇ ಅದಕ್ಕೆ ಕಾರಣ. ವ್ಯಕ್ತಿ ತನ್ನನ್ನು ಕುರಿತು ಹೊಂದಿರುವ ಹೊಣೆಗಾರಿಕೆಗಳಾದರೂ ಸಾಮಾಜಿಕ ಹೊಣೆಗಾರಿಕೆಗಳೇ ಆಗಿವೆ. ಸಮಾಜದಿಂದ ದೂರನಾಗಿ ಒಂಟಿಯಾದ ಬಾಳ್ವೆಯನ್ನು ನೆಡೆಸತಕ್ಕ ಮನುಷ್ಯನಿಗೆ ಇವು ಅನ್ವಯಿಸುತ್ತವೆಯೆಂದು ಹೇಳುವುದು ಅರ್ಥಹೀನವಾದ ಮಾತು.

'ಕಾಯಿದೆ' ಮತ್ತು 'ನೀತಿಗಳು' ಮಾನವನ ಮೇಲೆ ಹೊಣೆಗಾರಿಕೆಯನ್ನು ವಿಧಿಸುವ ಸಾಮಾಜಿಕ ಅನುಕ್ರಮಗಳು. 'ಕಾಯಿದೆ' ಮತ್ತು 'ನೀತಿ' ಗಳಲ್ಲಿನ ಕ್ಲೃಪ್ತ ಪ್ರಮಾಣಗಳು ಹೊಣೆಗಾರಿಕೆಯನ್ನು ವಿಧಿಸುತ್ತವೆ. ಈ ಕ್ಲೃಪ್ತ ಪ್ರಮಾಣಗಳು ನಿರೂಪಿಸುವ ನಡವಳಿಕೆಯ ಆಧಾರದ ಮೇಲೆ ನಾವು 'ಕಾಯಿದೆ' ಹಾಗೂ 'ನೀತಿಗಳ' ನಡುವಣ ವ್ಯತ್ಯಾಸವನ್ನು ಸ್ಪಷ್ಟಪಡಿಸುವುದು ಅಸಾಧ್ಯ. ಆತ್ಮಹತ್ಯೆಯನ್ನು ಕೇವಲ ನೀತಿಗಳು ಮಾತ್ರವೇನು, ಕಾಯಿದೆಯೂ ನಿಷೇಧಿಸಬಹುದು. ಪಾವಿತ್ರ್ಯತೆ ನೈತಿಕ ಹಾಗೂ ಕಾಯಿದೆಬದ್ಧ ಹೊಣೆಗಾರಿಕೆಯಾಗಬಹುದು. ಕಾಯಿದೆ ವ್ಯಕ್ತಿಯ ಬಾಹ್ಯ ನಡವಳಿಕೆಯನ್ನು ನಿರೂಪಿಸಿದರೆ, ನೀತಿಗಳು ವ್ಯಕ್ತಿಯ ಆಂತರಿಕ ನಡುವಳಿಕೆಯನ್ನು ನಿರೂಪಿಸುತ್ತವೆಯೆಂಬ ಅಭಿಪ್ರಾಯ ಸಂಪೂರ್ಣ ತಪ್ಪು. ಎರಡೂ ವರ್ಗಗಳ ಕ್ಲೃಪ್ತ ಪ್ರಮಾಣಗಳು ಮೇಲೆ ತಿಳಿಸಿದ ಎರಡು ವಿಧದ ನಡುವಳಿಕೆಗಳನ್ನು ನಿಶ್ಚಯಿಸುತ್ತವೆ. ನೈತಿಕ ಗುಣವೆನಿಸಿದ 'ಪಾವಿತ್ರ್ಯತೆ' ಯಲ್ಲಿ ಆಂತರಿಕ ಪರಿಶುದ್ಧತೆ ಮಾತ್ರವಲ್ಲದೇ, ಬಾಹ್ಯ ನಡವಳಿಕೆಯಲ್ಲೂ ಅದೇ ಗುಣ ಪ್ರದರ್ಶಿತವಾಗಬೇಕಾದ ಅಗತ್ಯವಿದೆ ಒಂದು ನ್ಯಾಯಬದ್ಧ ಅನುಕ್ರಮವು ಮಾನವ ಹತ್ಯೆಯನ್ನು ನಿಷೇಧಿಸಿದ್ದೇ ಆದರೆ, ಅದು ಒಬ್ಬನು ತನ್ನ ಬಾಹ್ಯ ನಡವಳಿಕೆಯಿಂದ ಮತ್ತೊಬ್ಬನ ಸಾವನ್ನುಂಟು ಮಾಡುವುದನ್ನು ನಿಷೇಧಿಸುವುದು ಮಾತ್ರವಲ್ಲದೇ, ಅಂತಹ ಭೀಕರ ಪರಿಣಾಮವನ್ನುಂಟು ಮಾಡುವ ಉದ್ದೇಶ ಅಥವಾ ಆಂತರಿಕ ನಡವಳಿಕೆಯನ್ನು ನಿಷೇಧಿಸುತ್ತದೆ. ಈ

ಆಂತರಿಕ ನಡುವಳಿಕೆಯನ್ನು ನೈತಿಕವಾದ ಆಧಾರ ಕಲ್ಪನೆಯಾಗಿ ಕೆಲವು ನೀತಿ ತತ್ವಜ್ಞಾನಿಗಳು ನಿರೂಪಿಸುತ್ತಾರೆ. ಒಬ್ಬ ವ್ಯಕ್ತಿಯ ಪ್ರವೃತ್ತಿಗಳ ಅಥವಾ ಸ್ವಾಭಿಮಾನ ಹಿತಾಸಕ್ತಿಗಳ ವಿರುದ್ಧ ನಡವಳಿಕೆ ನಿರ್ದೇಶಿತವಾದ್ದೇ ಆದಲ್ಲಿ, ಅಂತಹ ಆಂತರಿಕ ನಡವಳಿಕೆ 'ನೀತಿ' ಯೆನಿಸಿಕೊಳ್ಳುತ್ತದೆಯೆಂದು ಅವರು ಅಭಿಪ್ರಾಯಪಡುತ್ತಾರೆ. ನೈತಿಕ ಕ್ಲುಪ್ತ ಪ್ರಮಾಣ ಜನ್ಯವಾದ ಹೊಣೆಗಾರಿಕೆ ಮಾತ್ರ ಇದು ಎಂದು ನಾವು ಹೇಳುವುದಾದಲ್ಲಿ, ಅಜ್ಞಾಪಿತ ನಡವಳಿಕೆಗೆ ಪ್ರವೃತ್ತಿ ಅಥವಾ ಸ್ವಾರ್ಥ ಹಿತಾಸಕ್ತಿಗಳು ವಿರುದ್ಧವಾಗಿದ್ದಾಗ್ಯೂ, ಆ ಕ್ಲುಪ್ತ ಪ್ರಮಾಣ ಊರ್ಜಿತವಾಗುತ್ತದೆ ಎಂದು ಹೇಳಿದಂತಾಯಿತು. ಹಾಗಾದಲ್ಲಿ ಇದೇ ವಾದ ನ್ಯಾಯಬದ್ಧ ಕ್ಲುಪ್ತ ಪ್ರಮಾಣಜನ್ಯವಾದ ಹೊಣೆಗಾರಿಕೆಗಳಿಗೂ ಅನ್ವಯಿಸಲೇಬೇಕು. ಕೆಲವೇ ವ್ಯಕ್ತಿಗಳ ಪ್ರವೃತ್ತಿ ಅಥವಾ ಸ್ವಾರ್ಥಹಿತಾಸಕ್ತಿಗಳ ವಿರುದ್ಧ ಆ ವ್ಯಕ್ತಿಗಳ ನಡವಳಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ, ನಡವಳಿಕೆಯೊಂದನ್ನು ನಿರೂಪಿಸುವುದು ಒಂದು ಸಾಮಾಜಿಕ ವರ್ಗಕ್ಕೆ ಅನಿವಾರ್ಯವಾಗಬಹುದು. ಒಂದು ಗೊತ್ತಾದ ಕ್ಲುಪ್ತಪ್ರಮಾಣಕ್ಕೊಳಪಟ್ಟ ಎಲ್ಲರ ಪ್ರವೃತ್ತಿ ಮತ್ತು ಆಸಕ್ತಿಗಳಿಗೆ ಅನ್ವಯಿಸುವಂತಹ ನಡವಳಿಕೆಯನ್ನು ನಿರೂಪಿಸುವುದು ಸಾಧ್ಯವಾಗದ ಮಾತು. ಜನಗಳು, ತಾವು ಹಾಗೆ ಮಾಡಲೇಬೇಕೆಂಬ ಹೊಣೆಗಾರಿಕೆಯಿಲ್ಲದಿದ್ದರೂ ಸಹ, ತಮ್ಮ ಪ್ರವೃತ್ತಿಗಳನ್ನೇ ಅನುಸರಿಸುತ್ತಾರೆ ಮತ್ತು ತಮ್ಮ ಹಿತಾಸಕ್ತಿಗಳನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಅಂತಹ ಪ್ರಸಂಗ ಪ್ರಭಾವಶಾಲಿ ಸಾಮಾಜಿಕ ವರ್ಗವಿಲ್ಲದಿದ್ದರೂ ಸಾಧ್ಯವೇ. ಈ ರೀತಿಯಾದ ಪ್ರಸಂಗಕ್ಕಿಂತ ಭಿನ್ನವಾದ ಇನ್ನೊಂದು ಸಾಧಿಸುವುದರಲ್ಲಿ ಸಾಮಾಜಿಕ ವರ್ಗ ತನ್ನ ಸಫಲತೆಯನ್ನು ಕಂಡೀತು.

ಒಂದು ಸಾಮಾಜಿಕವರ್ಗಕ್ಕೊಳಪಟ್ಟ ವ್ಯಕ್ತಿಗಳು, ವಸ್ತುಶಃ ಆ ವರ್ಗದ ಕ್ಲುಪ್ತಪ್ರಮಾಣಗಳಿಗನುಗುಣವಾಗಿ ವರ್ತಿಸಿದಲ್ಲಿ, ಅದಕ್ಕೆ ಪ್ರಮುಖ ಕಾರಣ, ಅವರ ಈ ನಡವಳಿಕೆ, ಅವರ ಪ್ರವೃತ್ತಿ ಅಥವಾ ಸ್ವಾರ್ಥಹಿತಾಸಕ್ತಿಗಳಿಗೆ ಅನುಗುಣವಾಗಿರುವುದು ಈ ರೀತಿಯಾದ ನಡವಳಿಕೆಯನ್ನು ಹೊರಡಿಸುವುದು ಆ ಸಾಮಾಜಿಕ ವರ್ಗವೇ. ಪ್ರಾಯಶಃ ಆ ವರ್ಗದ ಪ್ರವೃತ್ತಿ ಅಥವಾ ಸ್ವಾರ್ಥ-ಹಿತಾಸಕ್ತಿಗಳು ಆ ಸಾಮಾಜಿಕ ವರ್ಗ ವಿರುದ್ಧವಾಗಿ ಬರದಿದ್ದಲ್ಲಿ ಭಿನ್ನವಾಗಿರಬಹುದಾಗಿದ್ದ ಸಾಧ್ಯತೆಯನ್ನೇನು ನಾವು ತಳ್ಳಿಹಾಕುವಂತಿಲ್ಲ, ಯಾವುದೇ ಒಬ್ಬ ವ್ಯಕ್ತಿ ವಿರೋಧಾತ್ಮಕ ಪ್ರವೃತ್ತಿ ಅಥವಾ ಆಸಕ್ತಿಗಳನ್ನು ಹೊಂದಿರಬಹುದು. ಅವನ ವಾಸ್ತವಿಕ ನಡವಳಿಕೆ, ಅಂತಹ ಸಂದರ್ಭದಲ್ಲಿ, ಯಾವ ಪ್ರವೃತ್ತಿ ತೀಕ್ಷ್ಣವಾಗಿರುವುದೋ, ಯಾವ ಆಸಕ್ತಿ ಪ್ರಭಲವಾಗಿರುವುದೋ ಅದನ್ನೇ ಅವಲಂಬಿಸಿರುತ್ತದೆ. ಮಾನವನ ಕೃತ್ಯಗಳು ಅಥವಾ ಕರ್ತವ್ಯಲೋಪಗಳಿಗೆ ಪ್ರೇರಕವಾಗಿರುವ ಅವನ ಪ್ರವೃತ್ತಿಗಳು ಮತ್ತು ಸ್ವಾರ್ಥಹಿತಾಶಕ್ತಿಗಳನ್ನು

ಯಾವ ಸಾಮಾಜಿಕ ವರ್ಗವು ವಿಸರ್ಜಿಸುವುದು ಸಾಧ್ಯವಿಲ್ಲ. ಒಂದು ಪಕ್ಷ ಆ ಸಾಮಾಜಿಕ ವರ್ಗವಿಲ್ಲದಿದ್ದರೆ, ಇರುತ್ತಿದ್ದ ಪ್ರವೃತ್ತಿ ಅಥವಾ ಸ್ವಾರ್ಥ ಹಿತಾಸಕ್ತಿಗಳನ್ನು ವಿರೋಧಿಸುವಂತಹ ನಡವಳಿಕೆಯನ್ನು ರೂಪಿಸುವುದು ಒಂದು ಸಾಮಾಜಿಕ ವರ್ಗದ ಆದ್ಯ ಕರ್ತವ್ಯ. ಅಂತಹ ಪ್ರವೃತ್ತಿ ಅಥವಾ ಆಸಕ್ತಿಗಳನ್ನು ಸೃಷ್ಟಿಸಿ, ನಡವಳಿಕೆಯನ್ನು ರೂಪಿಸಿದಲ್ಲಿ ಮಾತ್ರ ಅದು ಪರಿಣಾಮಕಾರಿಯಾದೀತು.

ಪ್ರವೃತ್ತಿ ಅಥವಾ ಸ್ವಾರ್ಥ ಹಿತಾಸಕ್ತಿಗೆ ವಿರುದ್ಧವಾಗಿ ನಿರ್ದೇಶಿಸಲ್ಪಟ್ಟ ನಡವಳಿಕೆಗೆ ಮಾತ್ರ ನೈತಿಕ ಮೌಲ್ಯವುಂಟೆಂಬ ಭಾವನೆ ಮೇಲ್ಕಂಡ ನೀತಿ ತತ್ತ್ವ ನಿರೂಪಣೆಯಿಂದುಂಟಾಗಬಹುದು. " ನೈತಿಕ ಮೌಲ್ಯ ''ವನ್ನು ಹೊಂದುವುದೆಂದರೆ ನೈತಿಕ ಕ್ಲ್ಲಪ್ತ ಪ್ರಮಾಣಕ್ಕನುಗುಣವಾಗಿ ನಡೆಯುವುದು ಎಂದೇ ಅರ್ಥ. ತತ್ಪರಿಣಾಮವಾಗಿ, ಈ ನೀತಿತತ್ತ್ವದ ಪ್ರಮುಖ ಪರಿಣಾಮವೆಂದರೆ ನೀತಿಗಳು ಒಬ್ಬ ವ್ಯಕ್ತಿಯ ಪ್ರವೃತ್ತಿಗಳನ್ನು ಅದುಮಿಟ್ಟು, ಅವನ ಸ್ವಾರ್ಥಹಿತಾಸಕ್ತಿಗಳ ಸಾಧನೆಯಾಗದಂತೆ ನಡವಳಿಕೆಯನ್ನು ನಿರೂಪಿಸಿ, ಇತರ ಪ್ರೇರಣೆಗಳಿಂದ ಅವನು ಕಾರ್ಯಶೀಲನಾಗುವಂತೆ ಮಾಡುವುದೇ ಆಗಿವೆ. ನೈತಿಕ ಕ್ಲ್ಲಪ್ತಪ್ರಮಾಣ ಒಬ್ಬನ ನಡವಳಿಕೆಯ ಪ್ರೇರಕಶಕ್ತಿಗಳಿಗೆ ಅನ್ವಯಿಸುವುದು ಮಾತ್ರವೆನ್ನುವುದೇ ಈ ಮಾತಿನ ಅರ್ಥ. ಪ್ರವೃತ್ತಿಗಳು ಮತ್ತು ಸ್ವಾರ್ಥಹಿತಾಸಕ್ತಿಗಳಿಂದ ಹೊರತಾದ ಪ್ರೇರಕಶಕ್ತಿಗಳಿಂದ ಕಾರ್ಯಶೀಲವಾಗುವಂತೆ ಮಾಡುವ ಆಧಾರ ಕಲ್ಪನೆ ಮಾನಸಿಕವಾಗಿ ದುಃಸಾಧ್ಯವಾದುದು. ಯಾವ ನೈತಿಕ ವರ್ಗದ ಕ್ಲ್ಲಪ್ತ-ಪ್ರಮಾಣವು ನಡವಳಿಕೆಯ ಪ್ರೇರಕ ಶಕ್ತಿಗಳಿಗೆ ಮಾತ್ರ ಸಂಬಂಧಿಸಿರುವುದೋ, ಅದು ಭಿನ್ನವಾದ, ಬಾಹ್ಯನಡವಳಿಕೆಯನ್ನು ನಿರೂಪಿಸುವ ಸಾಮಾಜಿಕ ವರ್ಗವೊಂದನ್ನು ಪೂರ್ವಭಾವಿಯಾಗಿ ಸೂಚಿಸುತ್ತದೆ. ಕೇವಲ ಬಾಹ್ಯನಡವಳಿಕೆಯ ಪ್ರೇರಣೆಗೆ ಮಾತ್ರ ಸಂಬಂಧಿಸಿದ ನೀತಿಗಳ ಕ್ಲ್ಲಪ್ತಪ್ರಮಾಣವು ಅಪೂರ್ಣವಾದದ್ದು. ಬಾಹ್ಯನಡವಳಿಕೆಯನ್ನು ನಿರೂಪಿಸುವ ಕ್ಲ್ಲಪ್ತಪ್ರಮಾಣಗಳೊಡನೆ ಸೇರಿದಾಗ ಮಾತ್ರ ಅದು ಊರ್ಜಿತವಾಗುತ್ತದೆ. ಈ ಕ್ಲ್ಲಪ್ತಪ್ರಮಾಣಗಳೂ ಕೂಡ ನೈತಿಕ ಕ್ಲ್ಲಪ್ತಪ್ರಮಾಣಗಳಾಗಿರಲೇಬೇಕು. ಪ್ರವೃತ್ತಿ ಅಥವಾ ಸ್ವಾರ್ಥ ಹಿತಾಸಕ್ತಿಗಳಿಗೆ ವಿರುದ್ಧವಾದ ನಡವಳಿಕೆಗಳೆಲ್ಲಾ ' ನೀತಿ ' ಯೆಂದೆನಿಸಿಕೊಳ್ಳಲಾರವು. ಒಬ್ಬ ಇನ್ನೊಬ್ಬನನ್ನು ಯಾರದೋ ಆಜ್ಞೆಯ ಪ್ರಕಾರ ಕೊಲೆ ಮಾಡಿದರೆ, ಆ ಕಾರ್ಯವನ್ನವನು ತನ್ನ ಪ್ರವೃತ್ತಿ ಅಥವಾ ಸ್ವಾರ್ಥಹಿತಾಸಕ್ತಿಗಳಿಗೆ ವಿರುದ್ಧವಾಗಿ ಎಸಗಿದ್ದರೂ ಸಹ, ಆ ಕಾರ್ಯವೆಂದಿಗೂ ನೈತಿಕ ಮೌಲ್ಯವನ್ನು ಹೊಂದಲಾರದು. ಏಕೆಂದರೆ, ಎಲ್ಲಿನವರೆಗೆ ಕೊಲೆ ಮಾಡುವುದು ನೈತಿಕವಾಗಿ ನಿಷಿದ್ಧವೋ ಅಲ್ಲಿನ ವರೆಗೆ ಆ ಕಾರ್ಯವೆಂದಿಗೂ ನೈತಿಕ ಮೌಲ್ಯವನ್ನು ಪಡೆಯಲಾರದು. ನಡವಳಿಕೆಗೆ ನೈತಿಕ ಮೌಲ್ಯ ಬರಬೇಕಾದರೆ, ಆ

ನಡವಳಿಕೆ ನೈತಿಕ ಕ್ಲುಪ್ತಪ್ರಮಾಣಕ್ಕನುಗುಣವಾಗಿರಬೇಕು. ಕೇವಲ ಪ್ರೇರಕ ಶಕ್ತಿಗಳು ಮಾತ್ರ ನೈತಿಕ ಕ್ಲುಪ್ತ ಪ್ರಮಾಣಕ್ಕನುಗುಣವಾಗಿರುವುದು ಮಾತ್ರ ಸಾಲದು ನೈತಿಕ ತೀರ್ಪೊಂದನ್ನು ಉಚ್ಚರಿಸುವಾಗ 'ಪ್ರೇರಣೆ' ಮತ್ತು 'ಪ್ರೇರಿತ ನಡವಳಿಕೆ' ಯನ್ನು ಬೇರ್ಪಡಿಸಲಾಗುವುದಿಲ್ಲ. ಇದೇ ಕಾರಣಕ್ಕಾಗಿಯೇ ನೀತಿಗಳ ಮೂಲ ಭಾವವನ್ನು "ನಿಮ್ಮ ಪ್ರವೃತ್ತಿಗಳನ್ನು ಅದುಮಿಡಿ; ನಿಮ್ಮ ಸ್ವಾರ್ಥಹಿತಾಸಕ್ತಿಗಳ ಸಾಧನೆಯನ್ನು ತ್ಯಜಿಸಿರಿ"— ಎಂಬ ಕ್ಲುಪ್ತಪ್ರಮಾಣವೊಂದಕ್ಕೆ ಮಿತಿಗೊಳಿಸುವುದು ಸಾಧ್ಯವಿಲ್ಲ. ಕಾಯಿದೆ ಬಾಹ್ಯ ನಡವಳಿಕೆಯನ್ನು ನಿರೂಪಿಸಿದರೆ, ನೀತಿಗಳು ಆಂತರಿಕ ನಡವಳಿಕೆಯನ್ನು ನಿರೂಪಿಸುತ್ತವೆ ಎಂಬುದಾಗಿ ನಾವು 'ಕಾಯಿದೆ' ಮತ್ತು "ನೀತಿ"ಗಳ ಮಧ್ಯ-ವ್ಯತ್ಯಾಸವನ್ನು ಸ್ಥಾಪಿಸಬೇಕಾದರೆ ನೈತಿಕ ಮೂಲಭಾವಕ್ಕೇ ಮಿತಿ ಹೇರಬೇಕು.

ಅವುಗಳು ಸೃಷ್ಟಿಸುವ ಅಥವಾ ಅನ್ವಯಿಸುವ ಕ್ಲುಪ್ತಪ್ರಮಾಣಗಳ ಆಧಾರದ ಮೇಲೆ 'ಕಾಯಿದೆ' ಮತ್ತು "ನೀತಿ"ಗಳ ಮಧ್ಯೆವ್ಯತ್ಯಾಸವನ್ನು ಸ್ಥಾಪಿಸುವುದೂ ಸಾಧ್ಯವಿಲ್ಲದ ಮಾತು. ನ್ಯಾಯಶಾಸ್ತ್ರೀಯ ಕ್ಲುಪ್ತಪ್ರಮಾಣಗಳಂತೆಯೇ, ನೈತಿಕ ಕ್ಲುಪ್ತ ಪ್ರಮಾಣಗಳೂ ಸಹ ಸಂಪ್ರದಾಯಗಳು ಮತ್ತು ಸಂಕಲ್ಪಿತ ಕ್ರಿಯೆಗಳಿಂದ ಸೃಷ್ಟಿಸಲ್ಪಟ್ಟವೆ. ಈ ಅರ್ಥದಲ್ಲಿ ಕಾಯಿದೆಗಳಂತೆಯೇ ನೀತಿಗಳೂ, ವಾಸ್ತವಿಕವಾಗಿ ಸ್ಥಾಪಿಸಲ್ಪಟ್ಟ ಕಾರಣ, ವಾಸ್ತವಿಕವಾಗುತ್ತವೆ ಮತ್ತು ವಾಸ್ತವಿಕ ನೀತಿಗಳು ಮಾತ್ರವೇ ವೈಜ್ಞಾನಿಕ ನೀತಿಶಾಸ್ತ್ರದ ವಸ್ತು-ಗಳಾಗಿವೆ. ಅಂತೆಯೇ ವಾಸ್ತವಿಕ ನ್ಯಾಯವೂ ನ್ಯಾಯಶಾಸ್ತ್ರ ವಿಜ್ಞಾನದ ವಸ್ತುವಾಗಿದೆ ದುಡಿಮೆಯ ಹಂಚಿಕೆಯ ತತ್ವಗಳ ಆಧಾರದ ಮೇಲೆ ಕೆಲಸ ಮಾಡುವಂತಹ, ಅಂದರೆ, ಕ್ಲುಪ್ತಪ್ರಮಾಣಗಳನ್ನು ಅನ್ವಯಿಸುವಂತಹ ಸಾಧನಗಳನ್ನು ನೈತಿಕವರ್ಗ ಒದಗಿಸಿಲ್ಲವೆಂಬುದೇನೋ ಸತ್ಯ. ಈ ವರ್ಗದಿಂದ ನಿಯಂತ್ರಿತವಾದಂತೆ ಇನ್ನೊಬ್ಬ ವ್ಯಕ್ತಿಯ ನಡವಳಿಕೆಯ ನೈತಿಕ ಮೌಲ್ಯ ನಿರ್ಧಾರದಲ್ಲಿ ಅನ್ವಯಿಸುವುದು ಸಾಧ್ಯವಾಗಿದೆ, ಆದರೆ ಪುರಾತನ ನ್ಯಾಯ ವರ್ಗವೂ ವಿಕೇಂದ್ರೀಕೃತವಾಗಿದೆ ಮತ್ತು ಈ ದೃಷ್ಟಿಯಲ್ಲಿ ಒಂದು ನೈತಿಕವರ್ಗದಿಂದ ಬೇರ್ಪಡಿಸಲಸಾಧ್ಯವಾಗಿದೆ. ಸಂಪೂರ್ಣವಾಗಿ ವಿಕೇಂದ್ರಿತವಾದ ಸಾಮಾನ್ಯ ಅಂತರರಾಷ್ಟ್ರೀಯ ಕಾಯಿದೆಯನ್ನು ಅಂತರರಾಷ್ಟ್ರೀಯ ನೀತಿಗಳಾಗಿ ಕೆಲವು ಸಲ ಪರಿಗಣಿಸುವುದು ತುಂಬಾ ಅರ್ಥವತ್ತಾಗಿದೆ. ಎರಡೂ ಸಾಮಾಜಿಕ ವರ್ಗಗಳೂ 'ಏನನ್ನು' ಆಜ್ಞಾಪಿಸುತ್ತವೆ ಅಥವಾ ನಿಷೇಧಿಸುತ್ತವೆಯೆಂಬುದರಿಂದ ನಾವು ಕಾಯಿದೆಗಳಿಗೂ ಮತ್ತು ನೀತಿಗಳಿಗೂ ವ್ಯತ್ಯಾಸವನ್ನು ಮಾಡಲು ಸಾಧ್ಯವಿಲ್ಲ, ಆದರೆ ಅವು 'ಹೇಗೆ' ಒಂದು ಗೊತ್ತಾದ ನಡವಳಿಕೆಯನ್ನು ಆಜ್ಞಾಪಿಸುತ್ತವೆ ಅಥವಾ ನಿಷೇಧಿಸುತ್ತವೆಯೆನ್ನುವುದರಲ್ಲಿ ವ್ಯತ್ಯಾಸವನ್ನು ಮಾಡಲು ಸಾಧ್ಯ. ಕಾಯಿದೆ ಬಲಪ್ರಯೋಗದಿಂದ ಕೂಡಿದ ಸಾಮಾಜಿಕ

ವರ್ಗ. ನೈತಿಕ ವರ್ಗಕ್ಕೆ ಅಂತಹ ಬಲಪ್ರಯೋಗದಿಂದ ಬಲಾತ್ಕಾರಿಸುವಂತಹ ಸಾಧನಗಳಿಲ್ಲ ಇದೇ ಕಾಯಿದೆಗೂ ನೀತಿಗಳಿಗೂ ಇರುವ ಮೂಲಭೇದ. ಕಾಯಿದೆ ಬಲಾತ್ಕಾರದಿಂದ ಒಂದು ಗೊತ್ತಾದ ನಡವಳಿಕೆಯನ್ನು, ರೂಪಿಸುವುದು ಮಾತ್ರವಲ್ಲದೇ, ಅದಕ್ಕೆ ತದ್ವಿರುದ್ಧವಾದ ನಡವಳಿಕೆಯನ್ನು, ಸಾಮಾಜಿಕವಾಗಿ ಸಂಘಟಿತವಾದ ಬಲಾತ್ಕರಿಸುವ ಕ್ರಿಯೆಯಿಂದ ತಡೆಗಟ್ಟುತ್ತದೆ ಅಥವಾ ಶಿಕ್ಷಿಸುತ್ತದೆ. ನೈತಿಕ ವರ್ಗಕ್ಕಿರುವ ಬಲವೆಂದರೆ ನಡವಳಿಕೆಯಲ್ಲಿ ಕ್ಲುಪ್ತ-ಪ್ರಮಾಣಕ್ಕನುಗುಣವಾದುದಕ್ಕೆ ಅಂಗೀಕಾರ ನೀಡುವುದು ಮತ್ತು ಕ್ಲುಪ್ತ-ಪ್ರಮಾಣಕ್ಕೆ ವಿರೋಧವಾದುದಕ್ಕೆ ಒಪ್ಪಿಗೆಯನ್ನು ನಿರಾಕರಿಸುವುದು, ಮತ್ತು ಯಾವ ವಿಧಾನವಾದ ಬಲಾತ್ಕಾರವನ್ನೂ ಅದು ಶಿಕ್ಷೆಯಾಗಿ ವಿಧಿಸುವುದಿಲ್ಲ.

ಕಾಯಿದೆ ಮತ್ತು ನೀತಿಗಳು ಬೇರೆಬೇರೆಯಾದ ಕ್ಲುಪ್ತಪ್ರಮಾಣದ ಶ್ರೇಣಿಗಳಿಗೆ ಸೇರಿದವುಗಳೆಂದು ನಿಶ್ಚಿತವಾದ ಮೇಲೆ, ಅವೆರಡಕ್ಕೂ ಇರುವ ಸಂಬಂಧವೇನೆಂಬ ಪ್ರಶ್ನೆ ಉದ್ಭವಿಸುವುದು ಸ್ವಾಭಾವಿಕವೇ. ಈ ಪ್ರಶ್ನೆಗೆ ಎರಡು ಮುಖಗಳಿವೆ—

೧) ಕಾಯಿದೆಗೂ, ನೀತಿಗಳಿಗೂ “ ಇರುವ ” ಸಂಬಂಧವೇನು?

೨) ಕಾಯಿದೆಗೂ ನೀತಿಗಳಿಗೂ “ ಇರಬೇಕಾದ ” ಸಂಬಂಧವೇನು?

ಇವೆರಡು ಪ್ರಶ್ನೆಗಳನ್ನೂ ನಾವು ಪರಸ್ಪರ ಬೆರೆಸಿದಲ್ಲಿ ಅದರ ಪರಿಣಾಮ ಅನರ್ಥಕ್ಕೆಡೆಕೊಡುತ್ತದೆ. ಮೊದಲನೆಯ ಪ್ರಶ್ನೆಯನ್ನು ಉತ್ತರಿಸುವಾಗ ಕಾಯಿದೆ ಸ್ವಭಾವತಃ ನೀತಿಯಾಗಿದೆಯೆಂದು ಹೇಳುವುದುಂಟು. ನ್ಯಾಯಶಾಸ್ತ್ರೀಯ ಕ್ಲುಪ್ತಪ್ರಮಾಣಗಳಿಂದ ಆಜ್ಞಾಪಿತವಾದ ಅಥವಾ ನಿಷಿದ್ಧವಾದ ನಡವಳಿಕೆ, ನೈತಿಕ ಕ್ಲುಪ್ತಪ್ರಮಾಣಗಳಿಂದಲೂ ಆಜ್ಞಾಪಿತವಾಗಿದೆ ಮತ್ತು ನಿಷಿದ್ಧವಾಗಿದೆ ಎಂಬುದೇ ಈ ಮಾತಿನ ಅರ್ಥ. ಒಂದು ಸಾಮಾಜಿಕ ವರ್ಗ ನೀತಿಗಳಿಂದ ನಿಷೇಧಿಸಲ್ಪಟ್ಟಿರುವ ನಡವಳಿಕೆಯನ್ನು ಆಜ್ಞಾಪಿಸುವುದಾದರೆ ಅಥವಾ ನೀತಿಗಳಿಂದ ಆಜ್ಞಾಪಿತವಾದ ನಡವಳಿಕೆಯನ್ನು ನಿಷೇಧಿಸುವುದಾದರೆ, ಇಂತಹ ವರ್ಗವನ್ನು ನಾವು, ನ್ಯಾಯವಲ್ಲದ್ದರಿಂದ, ‘ ಕಾಯಿದೆ ’ಯೆಂದು ಕರೆಯುವುದಿಲ್ಲ. ಕಾಯಿದೆ ನೀತಿಯುತವಾಗಿರಬಹುದು. ನೀತಿಯುತವಾಗಿರಲೇಬೇಕೆಂಬ ನಿಯಮವೇನಿಲ್ಲ. ನೀತಿರಹಿತವಾದ ಸಾಮಾಜಿಕ ವರ್ಗ, ಆದಾಗ್ಯೂ, ಕಾಯಿದೆಯಾಗಿರಬಹುದು. ನಾವು ‘ ಕಾಯಿದೆ ’ ನ್ಯಾಯವಾಗಿರಬೇಕೆಂಬ ಆಧಾರ ಕಲ್ಪನೆಯನ್ನು ಹೊಂದಿದ್ದಾಗ್ಯೂ, ಈ ಮಾತು ನಿಜ.

ಕಾಯಿದೆಗೂ, ನೀತಿಗಳಿಗೂ ಇರುವ ಸಂಬಂಧವನ್ನು ಕುರಿತ ಪ್ರಶ್ನೆಯನ್ನು ಕಾಯಿದೆ ಏನನ್ನೊಳಗೊಂಡಿದೆ ಎಂಬ ಪ್ರಶ್ನೆಯಾಗಿ ಅರ್ಥ ಮಾಡಿಕೊಳ್ಳುವುದಾದರೆ ಮತ್ತು ಕಾಯಿದೆ ಸ್ವಾಭಾವಿಕವಾಗಿ ನೀತಿಯನ್ನೊಳಗೊಂಡು

ಒಂದು ನೈತಿಕ ಮೌಲ್ಯವನ್ನು ರಚಿಸುತ್ತದೆಯೆಂದು ಹೇಳುವುದಾದರೆ—ಹಾಗೆ ಹೇಳುವವರು ತಮ್ಮ ಹೇಳಿಕೆಗಳಿಂದ "ನೀತಿಯು ವ್ಯವಹಾರ ಕ್ಷೇತ್ರದಲ್ಲಿ ಕಾಯಿದೆ ಊರ್ಜಿತವಾಗುತ್ತದೆ, ಕಾಯಿದೆಯೇ ನೀತಿ ಮತ್ತು ಆ ಕಾರಣಕ್ಕಾಗಿ ಸ್ವಭಾವತಃ ಕಾಯಿದೆ 'ನ್ಯಾಯ' ವಾಗಿದೆ" ಎಂದು ಖಚಿತಪಡಿಸಿದಂತಾಯಿತು. ಕಾಯದೆಯನ್ನು ಸಮರ್ಥಿಸುವ ಉದ್ದೇಶದಿಂದ ಮಾಡಿದ ಈ ಪ್ರತಿಪಾದನೆಯ ಅರ್ಥವಾದರೋ ಶ್ರೇಷ್ಠವಾದ ನೈತಿಕ ಮೌಲ್ಯವನ್ನೊಳಗೊಂಡ ಒಂದೇ ಒಂದು ನೈತಿಕ ವರ್ಗವನ್ನು ಪೂರ್ವಭಾವಿಯಾಗಿ ನಿರ್ಧರಿಸುವುದೇ ಆಗಿದೆ. ಇಂತಹ ನೈತಿಕ ವರ್ಗಕ್ಕನುಗುಣವಾದ ಕ್ಲೃಪ್ತ ಪ್ರಮಾಣಗಳು, ಶ್ರೇಷ್ಠವಾದ ನೈತಿಕ ಮೌಲ್ಯವನ್ನು ರೂಪಿಸುವ ಕಾರಣ, ಅವುಗಳನ್ನು 'ಕಾಯಿದೆ' ಯೆಂದು ಪರಿಗಣಿಸಬಹುದು. ಇದರ ಅರ್ಥವಾದರೂ ಕಾಯಿದೆಯ ಲಕ್ಷಣವನ್ನು ನಿರೂಪಿಸುವುದೇ ಆಗಿದೆ. ಕಾಯಿದೆಗಳನ್ನು ನೀತಿಗಳ ಅಂಗವಾಗಿ ನಿರ್ಧರಿಸಿ, ಕಾಯಿದೆ ಮತ್ತು ನ್ಯಾಯವನ್ನು ಸಮೀಕರಿಸುತ್ತದೆ.

ನೈತಿಕ ಮೌಲ್ಯದ ಸಾಪೇಕ್ಷತ್ವವನ್ನು ಕುರಿತು ವಿಚಾರ ಮಾಡೋಣ, ಒಂದು ಶ್ರೇಷ್ಠವಾದ ಮೌಲ್ಯವನ್ನು ಪರಮವೂ, ಮಾನವಾತೀತವೂ ಆದ ದೈವಿಕ ಶಕ್ತಿಯಲ್ಲಿರುವ ಮತೀಯ ನಂಬಿಕೆಯೊಂದರ ಆಧಾರದ ಮೇಲೆ ನಾವು ಅಂಗೀಕರಿಸಬಹುದು. ಹಾಗೆಂದ ಮಾತ್ರಕ್ಕೆ ನಾವು ಒಂದು ಸಾಮಾನ್ಯವಾಗಿ ಅನ್ವಯಿಸತಕ್ಕ ಶ್ರೇಷ್ಠ ಮೌಲ್ಯವನ್ನಾಗಲೀ ಅಥವಾ ಶ್ರೇಷ್ಠವಾದ ನೈತಿಕ ಮೌಲ್ಯವನ್ನಾಗಲೀ ವೈಜ್ಞಾನಿಕ ಜ್ಞಾನದ ದೃಷ್ಟಿಕೋನದಿಂದ ತಿರಸ್ಕರಿಸುವುದಾದರೆ; ಇದೇ ದೃಷ್ಟಿಕೋನದಿಂದ, ಇನ್ನೊಂದು ನೈತಿಕ ವರ್ಗದ ಅಸ್ತಿತ್ವವನ್ನು ಧಿಕ್ಕರಿಸದಿರುವ ಶ್ರೇಷ್ಠವಾದ ನೈತಿಕ ವರ್ಗವೊಂದನ್ನು ಒಪ್ಪಲೇಬೇಕಾದರೆ; ಆ ನೈತಿಕ ವರ್ಗದ ಪ್ರಕಾರ ಯಾವುದು ಒಳ್ಳೆಯದು ಅಥವಾ ನ್ಯಾಯವಾದದ್ದೆನ್ನುವುದು ಎಲ್ಲಾ ಸಂದರ್ಭಗಳಲ್ಲೂ ಒಳ್ಳೆಯದೇ ಆಗಿರುತ್ತದೆಂದು ಒಪ್ಪಲು ನಾವು ಸಿದ್ಧರಿಲ್ಲದಿದ್ದರೆ; ಅಥವಾ ಆ ನೈತಿಕ ವರ್ಗದ ಪ್ರಕಾರ ಯಾವುದು ಕೆಟ್ಟದೋ ಅದು ಎಲ್ಲಾ ಸಂದರ್ಭಗಳಲ್ಲೂ ಕೆಟ್ಟದೇ ಆಗಿರುತ್ತದೆಯೆನ್ನುವುದನ್ನು ನಾವು ಒಪ್ಪದಿದ್ದರೆ; ವಿವಿಧ ಕಾಲಗಳಲ್ಲಿ ವಿವಿಧ ದೇಶಗಳಲ್ಲಿ, ಅಥವಾ ಒಂದೇ ದೇಶದೊಳಗೆ ವಿವಿಧವಾದ ವರ್ಗಗಳು ಮತ್ತು ವೃತ್ತಿಗಳನ್ನವಲಂಬಿಸಿ, ಬೇರೆ ಬೇರೆ ವಿಧವಾದ ಮತ್ತು ಪರಸ್ಪರ ವಿರುದ್ಧವಾದ ನೈತಿಕ ಪ್ರಕಾರಗಳು ಊರ್ಜಿತವಾಗಿವೆಯೆನ್ನುವುದನ್ನು ಒಪ್ಪುವುದಾದರೆ; ವಿವಿಧವಾದ ಸಂದರ್ಭಗಳಲ್ಲಿ ವಿವಿಧವಾದ ನಡವಳಿಕೆಗಳು ಒಳ್ಳೆಯದಾಗಿ ಅಥವಾ ಕೆಟ್ಟದಾಗಿ, ನ್ಯಾಯವಾಗಿ ಅಥವಾ ನ್ಯಾಯಬಾಹಿರವಾಗಿ ಪರಿಗಣಿಸಲ್ಪಡಬಹುದೆಂಬುದನ್ನು ಒಪ್ಪುವುದಾದರೆ; ಯಾವುದನ್ನೇ ಆಗಲಿ, ಎಲ್ಲಾ ಸಾಧ್ಯವಾದ ಸಂದರ್ಭಗಳಲ್ಲೂ ಒಳ್ಳೆಯದು ಅಥವಾ ಕೆಟ್ಟದಾಗಿ, ನ್ಯಾಯವಾಗಿ ಅಥವಾ ನ್ಯಾಯಬಾಹಿರವಾಗಿರುವುದೆಂದು

ಪರಿಗಣಿಸುವುದಿಲ್ಲವಾದರೆ; ನೈತಿಕ ಮೌಲ್ಯಗಳು ಕೇವಲ ಸಂಬಂಧಾವಲಂಬಿಗಳೆನ್ನುವುದನ್ನು ಅಂಗೀಕರಿಸುವುದಾದರೆ;—ಸಾಮಾಜಿಕ ಕ್ಲುಪ್ತಪ್ರಮಾಣಗಳು ನೈತಿಕ ಅಂಶಗಳನ್ನೊಳಗೊಂಡಿರಲೇಬೇಕೆಂಬ ಪ್ರತಿಪಾದನೆ, ಆ ಕ್ಲುಪ್ತ ಪ್ರಮಾಣಗಳು ಕಾಯಿದೆಯೆನಿಸಿಕೊಳ್ಳಬೇಕಾದರೆ, ನ್ಯಾಯವಾಗಿರಲೇಬೇಕು. ಈ ಕ್ಲುಪ್ತ ಪ್ರಮಾಣಗಳು ತಮ್ಮಲ್ಲಿ, ಎಲ್ಲಾ ವಿಧವಾದ ನೈತಿಕ ಪ್ರಕಾರಗಳಿಗೆ ಸಾಮಾನ್ಯವಾದ ಅಂಶಗಳನ್ನೊಳಗೊಂಡಿರಬೇಕೆಂಬುದೇ ಈ ಮಾತಿನ ಅರ್ಥವಾಗಿದೆ. ಜನರು ವಿವಿಧ ಕಾಲಗಳಲ್ಲಿ, ವಿವಿಧ ಪ್ರದೇಶಗಳಲ್ಲಿ ಒಳ್ಳೆಯದು–ಕೆಟ್ಟದು, ನ್ಯಾಯ–ಅನ್ಯಾಯ—ಇವುಗಳ ಬಗ್ಗೆ ಅಸಾಧಾರಣವಾದ ವೈವಿಧ್ಯತೆಯನ್ನು ಹೊಂದಿರುವುದರಿಂದ, ವಿವಿಧ ನೈತಿಕ ವರ್ಗಗಳಲ್ಲಿ ಸಾಮಾನ್ಯವಾದ ಒಂದು ಅಂಶವನ್ನು ಪತ್ತೆಮಾಡಲು ಅಸಾಧ್ಯ. ಶಾಂತಿಪಾಲನೆ ಮತ್ತು ಯಾರ ಮೇಲೂ ಬಲಪ್ರಯೋಗ ಮಾಡದಿರುವುದು—ಇವು ಸಾಮಾನ್ಯವಾಗಿ ಎಲ್ಲಾ ನೈತಿಕ ವ್ಯವಸ್ಥೆಗಳ ಆಧಾರ ಕಲ್ಪನೆಯೆಂದು ಅಭಿಪ್ರಾಯಪಡಲಾಗಿದೆ. ' ಯುದ್ಧ ' ನೈತಿಕ ಮೌಲ್ಯಗಳನ್ನೊಳಗೊಂಡಿದೆಯೆಂದು ಹೇಳುವವರು ಈಗಲೂ ಇದ್ದಾರೆಂಬುದನ್ನು ನಾವು ಮರೆಯಬಾರದು ಏಕೆಂದರೆ, ಯುದ್ಧ, ಗುಣಗಳ ಆಚರಣೆ ಹಾಗೂ ಮೌಲ್ಯದಲ್ಲಿ ಶಾಂತಿಗಿಂತಲೂ ಉನ್ನತವಾದ ಆದರ್ಶಗಳ ಸಾಧನೆಗೆ ಸಹಕಾರಿ ಎಂದು ಅವರು ಹೇಳುತ್ತಾರೆ. ಶಾಂತಿಯು ನೈತಿಕತೆ ವಿವಾದಕ್ಕೆಡೆಕೊಟ್ಟಿಲ್ಲವೆಂದು ಭಾವಿಸುವುದೂ ತಪ್ಪಾದೀತು. ಸ್ಪರ್ಧೆ, ವಿವಾದ ಮುಂತಾದವುಗಳು ಸಮಾಜದ ಅತ್ಯುತ್ತಮ ಸ್ಥಿತಿಯನ್ನು ಉಚಿತಪಡಿಸುತ್ತವೆಯೆಂಬ ಉದಾರವಾದೀ ಸಿದ್ಧಾಂತ ಶಾಂತಿಯ ಆದರ್ಶಕ್ಕೆ ಅನುಗುಣವಾಗಿದೆಯೆಂದು ಹೇಳಲು ಸಾಧ್ಯವೇ ? ಎಲ್ಲಾ ನೈತಿಕ ವರ್ಗಗಳಿಗೂ ಈ ಆದರ್ಶವೇ ಉನ್ನತ ಮೌಲ್ಯವಾಗಿಲ್ಲ. ಕೆಲವು ನೈತಿಕ ವರ್ಗಗಳಲ್ಲಂತೂ ಅದಕ್ಕೆ ಬೆಲೆಯೇ ಇಲ್ಲ. ಎಲ್ಲಾ ನೈತಿಕ ವ್ಯವಸ್ಥೆಗಳಿಗೂ ಸಾಮಾನ್ಯವಾದ ಅಂಶವೊಂದನ್ನು ಯಾವನಾದರೂ ರೂಪಿಸಿದ್ದೇ ಆದಲ್ಲಿ ಅಂತಹ ಸಂದರ್ಭದಲ್ಲೂ, ಒಳ್ಳೆಯದು ಅಥವಾ ನ್ಯಾಯವಾದ್ದೆಂದು ಪರಿಗಣಿಸಲ್ಪಡದಿರುವ ನಡವಳಿಕೆಯನ್ನು ಆಜ್ಞಾಪಿಸುವ ಅಥವಾ ಸರ್ವಸಮ್ಮತವಾಗಿ ಒಳ್ಳೆಯದು, ನ್ಯಾಯವಾದ್ದೆಂಬ ನಡವಳಿಕೆಯನ್ನು ನಿಷೇಧಿಸುವ ಬಲಿಷ್ಠವಾದ ವ್ಯವಸ್ಥೆಯನ್ನು ಅನೈತಿಕವಾದ್ದು, ಅನ್ಯಾಯವಾದ್ದು ಮತ್ತು ' ಕಾಯಿದೆ ' ಯಲ್ಲವೆಂದು ಹೇಳಲು ಸಾಕಷ್ಟು ಕಾರಣಗಳೇ ಇಲ್ಲ. ಪೂರ್ವಭಾವಿಯಾಗಿ ಸರ್ವೋಚ್ಚವಾದ ನೈತಿಕ ಮೌಲ್ಯವೊಂದನ್ನು ನಾವು ಅಂಗೀಕರಿಸದೇ ಹೋದಲ್ಲಿ, ನಾವು ಎಲ್ಲಾ ಸಂದರ್ಭಗಳಲ್ಲೂ ಯಾವುದನ್ನು ಒಳ್ಳೆಯದಾಗಿ ಯಾವುದನ್ನು ಕೆಟ್ಟದಾಗಿ, ಯಾವುದನ್ನು 'ನ್ಯಾಯ'ವಾಗಿ, ಯಾವುದನ್ನು 'ಅನ್ಯಾಯ'ವಾಗಿ ಪರಿಗಣಿಸಬೇಕೆಂದು ನಿಶ್ಚಯಿಸುವುದೇ ಅಸಾಧ್ಯವಾಗುತ್ತದೆ. ಅಷ್ಟಲ್ಲದೇ ಮೇಲೆ ನಿರೂಪಿಸಿದ ಬಲಿಷ್ಠ

ವ್ಯವಸ್ಥೆಯು ಯಾವುದನ್ನು ಆಜ್ಞಾಪಿಸುತ್ತದೆಯೋ ಅದೇ ಒಳ್ಳೆಯದು ಮತ್ತು ನ್ಯಾಯವಾದ್ದಾಗುತ್ತದೆ, ಯಾವುದನ್ನು ನಿಷೇಧಿಸುತ್ತದೆಯೋ ಅದೇ ಕೆಟ್ಟದು ಅಥವಾ ಅಧರ್ಮವಾಗುತ್ತದೆ. ಆದ್ದರಿಂದ ಈ ವ್ಯವಸ್ಥೆಯೂ ಸಂಬಂಧಿಕವಾಗಿ ನೀತಿಯುತವಾದ್ದು ಅಥವಾ ನ್ಯಾಯವಾದ್ದೇ ಆಗಿರಬೇಕು. ಎಲ್ಲಾ ನೈತಿಕ ವರ್ಗಗಳಿಗೂ ಸಾಮಾನ್ಯವಾದ ಒಂದು ಅಂಶವೆಂದರೆ ಅವೆಲ್ಲವೂ ಸಾಮಾಜಿಕ ಕ್ಲುಪ್ತಪ್ರಮಾಣಗಳಾಗಿರುವುದು. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಜನಗಳು ಇತರರ ಬಗ್ಗೆ ಅನುಸರಿಸಬೇಕಾದ ಗೊತ್ತಾದ ನಡವಳಿಕೆಯನ್ನು ವ್ಯವಸ್ಥೆಗೊಳಿಸುವುದೇ ಈ ಕ್ಲುಪ್ತಪ್ರಮಾಣಗಳ ಕರ್ತವ್ಯ. ಎಲ್ಲಾ ವಿಧವಾದ ನೈತಿಕ ವ್ಯವಸ್ಥೆಗಳೂ ತಮ್ಮ ಸ್ವರೂಪದಲ್ಲಿ ಸಾಮಾನ್ಯವಾದ ಅಂಶವನ್ನು ಹೊಂದಿವೆ. ಅದು ಅವುಗಳು "ಹೀಗಿರಬೇಕು" ಎಂದು ಹೇಳುವ ಅಂಶ. ಏನನ್ನಾದರೂ ಖಚಿತವಾಗಿ ನಿರೂಪಿಸುವ ಮೂಲಕ ತಮ್ಮ ಕ್ಲುಪ್ತಪ್ರಮಾಣಿಕ ಲಕ್ಷಣವನ್ನು ಪ್ರದರ್ಶಿಸುತ್ತವೆ. ಸಾಮಾಜಿಕ ಕ್ಲುಪ್ತ ಪ್ರಮಾಣಕ್ಕನುಗುಣವಾಗಿ ಒಂದು ಗೊತ್ತಾದ ಮಾನವೀಯ ನಡವಳಿಕೆಯನ್ನು ನಿರೂಪಿಸುವುದು ನೈತಿಕವಾಗಿ ಒಳ್ಳೆಯದೆನಿಸಿಕೊಳ್ಳುತ್ತದೆ. ಆ ಕ್ಲುಪ್ತಪ್ರಮಾಣಕ್ಕೆ ವಿರುದ್ಧವಾದುದು ನೈತಿಕವಾಗಿ ಕೆಟ್ಟದೆನಿಸಿಕೊಳ್ಳುತ್ತದೆ. ಜನರು ಒಂದು ಗೊತ್ತಾದ ರೀತಿಯಲ್ಲೇ ವರ್ತಿಸಬೇಕೆನ್ನುವ ಕ್ಲುಪ್ತ ಪ್ರಮಾಣವು ಸಂಬಂಧಿಕವಾದ ನೈತಿಕ ಮೌಲ್ಯವನ್ನು ಸ್ಥಾಪಿಸುತ್ತದೆ. 'ಕ್ಲುಪ್ತಪ್ರಮಾಣ' ಮತ್ತು 'ಮೌಲ್ಯ'— ಇವೆರಡೂ ಪರಸ್ಪರ ಸಂಬಂಧಿಕವಾದ ಭಾವಗಳು. ಈ ಪೂರ್ವನಿಶ್ಚಿತ ಅಂಶಗಳ ದೃಷ್ಟಿಯಲ್ಲಿ ನಾವು "ಸ್ವಭಾವತಃ ಕಾಯಿದೆ ನೀತಿಯಾಗಿದೆ" ಎಂಬ ಮಾತನ್ನು ಅರ್ಥಮಾಡಿಕೊಳ್ಳಬೇಕು. "ಕಾಯಿದೆ ಒಂದು ಸಾಮಾಜಿಕ ಕ್ಲುಪ್ತ ಪ್ರಮಾಣ ಅದು ಜನಗಳು ಒಂದು ಗೊತ್ತಾದ ರೀತಿಯಲ್ಲೇ ವರ್ತಿಸಬೇಕೆಂದು ನಿರ್ದೇಶಿಸುತ್ತದೆ" ಎಂಬ ಅರ್ಥವನ್ನು ಮೇಲ್ಕಂಡ ಮಾತಿಗೆ ಕಲ್ಪಿಸಬೇಕೇ ವಿನಾ ಕಾಯಿದೆ ಒಂದು ಗೊತ್ತಾದ ವಸ್ತುವನ್ನೊಳಗೊಂಡಿದೆಯೆಂಬ ಅರ್ಥವನ್ನಲ್ಲ. ಈ ದೃಷ್ಟಿಯಲ್ಲಿ ಪ್ರತಿಯೊಂದು ಕಾಯಿದೆಯೂ ನೀತಿಯಾಗಿದೆ. ಪ್ರತಿಯೊಂದು ಕಾಯಿದೆಯೂ ಸಂಬಂಧಿಕವಾದ ಒಂದು ನೈತಿಕ ಮೌಲ್ಯವನ್ನು ನಿಯೋಜಿಸುತ್ತದೆ. ಕಾಯಿದೆಗೂ ನೀತಿಗಳಿಗೂ ಇರುವ ವ್ಯತ್ಯಾಸ ಕಾಯಿದೆಯ ವಸ್ತುವಿನಲ್ಲಲ್ಲ, ಸ್ವರೂಪದಲ್ಲಿ ಎಂಬುದನ್ನು ನಾವು ತಿಳಿಯಬೇಕು. "ಕಾಯಿದೆ ಕ್ಲುಪ್ತಪ್ರಮಾಣ ಮಾತ್ರವಲ್ಲ, ಅದು ಮೌಲ್ಯವನ್ನು ನಿಯೋಜಿಸುವುದು" ಹೌದೆಂದು ಹೇಳುವುದು ಸಾಧ್ಯವಿಲ್ಲದ ಮಾತು. ಪೂರ್ವಭಾವಿಯಾಗಿ ಶ್ರೇಷ್ಠವಾದ ದೈವಿಕ ಮೌಲ್ಯವೊಂದನ್ನು ಅಂಗೀಕರಿಸಿದ ಹೊರತು ಆ ಪ್ರತಿಪಾದನೆ ಸಾಧ್ಯವಿಲ್ಲ. 'ಕಾಯಿದೆ' ಕ್ಲುಪ್ತಪ್ರಮಾಣವಾದ್ದರಿಂದಲೇ, ಒಂದು ಮೌಲ್ಯವನ್ನು ನಿಯೋಜಿಸುವ ಸಾಮರ್ಥ್ಯವನ್ನು ಪಡೆಯಿತು. ಅದು ನ್ಯಾಯ

ಬದ್ಧ ಮೌಲ್ಯವನ್ನು ನಿಯೋಜಿಸುವಾಗ, ಅದೇ ಕಾಲದಲ್ಲಿ ಸಂಬಂಧಿಕವಾಗಿ ಅದು ನೈತಿಕ ಮೌಲ್ಯವೂ ಆಯಿತು. ಒಟ್ಟಿನಲ್ಲಿ, ಕಾಯಿದೆ ಒಂದು ಕ್ಲುಪ್ತ ಪ್ರಮಾಣವೆನ್ನುವುದೇ ಇದರ ಅರ್ಥ.

"ಕಾಯಿದೆ ತನ್ನ ಸಾರದಲ್ಲಿ ನೈತಿಕ ಕನಿಷ್ಟಮಿತಿಯೊಂದನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಬಲಪ್ರಯೋಗಯುತವಾದ ವರ್ಗ ಈ ಕನಿಷ್ಟ ನೈತಿಕ ಮಿತಿಯನ್ನು ಹೊಂದಿದ್ದಲ್ಲಿ ಮಾತ್ರ ಅದನ್ನು ಕಾಯಿದೆಯಾಗಿ ಪರಿಗಣಿಸಬಹುದು" ಎಂಬ ಮೀಮಾಂಸೆಯನ್ನು ಒಪ್ಪಲು ಸಾಧ್ಯವಿಲ್ಲ ಈ ಆಧಾರ ಕಲ್ಪನೆಯ ಇರುವಿಕೆಯನ್ನೇನಾದರೂ ಅಂಗೀಕರಿಸಿದಲ್ಲಿ, ಅದಕ್ಕೂ ಪೂರ್ವಭಾವಿಯಾಗಿ ಪರಮವಾದ ನೈತಿಕತೆಯೊಂದನ್ನು ಅಂಗೀಕರಿಸಲೇಬೇಕು. ಆ ಪರಮ ನೈತಿಕತೆಯನ್ನು ನಿರ್ಧರಿಸುವುದು ಅದರ ವಸ್ತುವಿನಿಂದ ಅಥವಾ ಎಲ್ಲಾ ವಾಸ್ತವಿಕ ನೈತಿಕ ವರ್ಗಗಳಿಗೂ ಸಾಮಾನ್ಯವಾದ ವಸ್ತುವಾದ ಶಾಂತಿಯ ಆದರ್ಶದಿಂದ. ಹಿಂದಿನ ಪುಟಗಳಲ್ಲಿ 'ಶಾಂತಿಯ ಆದರ್ಶ' ಕಾಯಿದೆಯ ಕಲ್ಪನೆಗೆ ಅಗತ್ಯವಾದ ವಸ್ತುವಲ್ಲವೆಂದು ತಿಳಿಸಲಾಗಿದೆ.

ಸ್ವಭಾತಃ ಕಾಯಿದೆ ನೀತಿಯಾಗಿದೆಯೆಂದು ಪ್ರತಿಪಾದಿಸಿದ ಮೇಲೆ. ಕಾಯಿದೆ ನೈತಿಕವಾಗಿರಬೇಕು ಎಂಬ ಮಾತು ಅರ್ಥಹೀನವಾಗುತ್ತದೆ. ನಾವು ನೈತಿಕವಾದ ಕಾಯಿದೆಯೊಂದನ್ನು ಒಪ್ಪಿದಾಗ ಮಾತ್ರ ಆ ಆಧಾರ ಕಲ್ಪನೆ ಸಾಧ್ಯ ಆಗ ಕಾಯಿದೆಯ ಲಕ್ಷಣ ನಿರೂಪಣೆಯಲ್ಲಿ ನೈತಿಕ ವಸ್ತುವನ್ನು ಸೇರಿಸಲಾಗದು. ವಾಸ್ತವಿಕ ನ್ಯಾಯ ಮೀಮಾಂಸೆ "ಕಾಯಿದೆ ಮತ್ತು ನೀತಿಗಳು," "ಕಾಯಿದೆ ಮತ್ತು ಧರ್ಮ (ನ್ಯಾಯ)"ಗಳ ಮಧ್ಯೆ ವ್ಯತ್ಯಾಸವನ್ನು ಅಪೇಕ್ಷಿಸುವುದೇ ಅದಲ್ಲ, ಅಂತಹ ಸಂದರ್ಭದಲ್ಲಿ ಒಂದೇ ಒಂದು ಶ್ರೇಷ್ಠವಾದ ನೈತಿಕ ವರ್ಗವಿದೆ, ಆದ್ದರಿಂದ ಒಂದೇ ಒಂದು ಶ್ರೇಷ್ಠವಾದ ನ್ಯಾಯವಿದೆಯೆಂದು ವಾದಿಸುವ ಸಂಪ್ರದಾಯವಾದಿಗಳ ಅಭಿಪ್ರಾಯದ ವಿರುದ್ಧ ಈ ಮೀಮಾಂಸೆಯನ್ನು ನಿರ್ದೇಶಿಸಬೇಕು. ಈ ರೀತಿಯಾದ ವ್ಯತ್ಯಾಸವನ್ನು ಅಪೇಕ್ಷಿಸುವುದರ ಅರ್ಥವಾದರೋ 'ಒಂದು ವಾಸ್ತವಿಕ ನ್ಯಾಯಬದ್ಧ ವರ್ಗದ ಕ್ರಮಬದ್ಧತೆ ಶ್ರೇಷ್ಠವಾದ ನೈತಿಕ ವರ್ಗದ ಕ್ರಮಬದ್ಧತೆಯಿಂದ ಭಿನ್ನವಾಗಿ ಸ್ವತಂತ್ರವಾಗಿದೆ" ಎಂದೇ ಆಗುತ್ತದೆ. ಸಂಬಂಧಿಕವಾದ ನೈತಿಕ ಮೌಲ್ಯಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಿದರೆ, ಆಗ "ಕಾಯಿದೆ ನೈತಿಕವಾಗಿರಲೇಬೇಕು 'ಅಥವಾ' ನ್ಯಾಯವಾಗಿರಬೇಕು"—ಎಂಬ ಆಧಾರಕಲ್ಪನೆಯ ಅರ್ಥ– "ಇರುವ ಅನೇಕ ವ್ಯವಸ್ಥೆಗಳಲ್ಲಿ ಯಾವುದಾದರೊಂದು ನಿರ್ದಿಷ್ಟವಾದ ನೈತಿಕ ವ್ಯವಸ್ಥೆಯನ್ನು ವಾಸ್ತವಿಕ ನ್ಯಾಯ ಅವಲಂಬಿಸಿ ರೂಪಗೊಳ್ಳಬೇಕು" ಎಂದೇ ಆಗುತ್ತದೆ. ಅಂತಹ ಸಂದರ್ಭದಲ್ಲಿ ವಾಸ್ತವಿಕ ನ್ಯಾಯ ತನಗೆ ಹೊಂದುವ ನೈತಿಕ ವರ್ಗವನ್ನೇ ಅವಲಂಬಿಸುತ್ತದೆಯೆನ್ನುವುದು ಸರ್ವವಿಧಿತವಾದ ಆಧಾರ

ಕಲ್ಪನೆ, ವಾಸ್ತವಿಕ ನ್ಯಾಯ "ಕಾಯಿದೆ ಮತ್ತು ನೀತಿಗಳು" ಮತ್ತು ಕಾಯಿದೆ ಮತ್ತು ನ್ಯಾಯದ ನಡುವೆ ವ್ಯತ್ಯಾಸವನ್ನು ಅಪೇಕ್ಷಿಸಿದ ಮಾತ್ರಕ್ಕೆ, ಈ ರೀತಿಯ ಕೋರಿಕೆಯ ಅರ್ಥ ಕಾಯಿದೆಗೂ ನೀತಿಗೂ ಕಾಯಿದೆಗೂ ನ್ಯಾಯಕ್ಕೂ ಯಾವ ಸಂಬಂಧವೂ ಇಲ್ಲವೆಂದಲ್ಲ. ಕಾಯಿದೆಯ ಭಾವನೆ, ಒಳ್ಳೆಯದೆಂಬುದರ ಭಾವನೆಯಿಂದ ಹೊರತಾದದ್ದೆಂದೂ ಅಲ್ಲ. 'ಒಳ್ಳೆಯದು' ಎಂಬ ಭಾವನೆಯ ಲಕ್ಷಣವನ್ನು ನಿರೂಪಿಸುವಾಗ ಅದು 'ಹೀಗಿರಬೇಕು' ಎಂದು ತಿಳಿಸುತ್ತದೆಯೆಂದೇ ಹೇಳಬೇಕು. ಅದು ಒಂದು ಸಾಮಾಜಿಕ ಕ್ಲುಪ್ತ ಪ್ರಮಾಣಕ್ಕನುಗುಣವಾಗಿಯೂ ಇರಬೇಕು. ಕಾಯಿದೆಯನ್ನು ಒಂದು ಕ್ಲುಪ್ತ ಪ್ರಮಾಣವಾಗಿ ನಿರೂಪಿಸಿದಲ್ಲಿ. ಆಗ ಯಾವುದು ಕಾಯಿದೆಗನುಗುಣವಾಗಿರುತ್ತದೆಯೋ ಅದು ಒಳ್ಳೆಯದೇ ಆಗಿರಬೇಕೆಂಬ ಅರ್ಥವನ್ನು ಕೊಡುತ್ತದೆ. ಕಾಯಿದೆ ಮತ್ತು ನೀತಿಗಳು, ಕಾಯಿದೆ ಮತ್ತು ನ್ಯಾಯವನ್ನು ಬೇರ್ಪಡಿಸಲು ಸಂಬಂಧಾವಲಂಬಿ ಮೌಲ್ಯದ ತತ್ವದ ಆಧಾರದ ಮೇಲೆ ಕಲ್ಪಿಸುವ ಆಧಾರ ಕಲ್ಪನೆಯ ಅರ್ಥ ಪ್ರಾಯಶಃ ಇದೇ ಆಗಿದೆ:— a) ಯಾವುದಾದರೂ ಕಾಯಿದೆಬದ್ಧ ವರ್ಗವನ್ನು ನೈತಿಕ ಅಥವಾ ಅನೈತಿಕವೆಂದಾಗಲೀ, ನ್ಯಾಯವಾದ್ದು ಅಥವಾ ಅನ್ಯಾಯವಾದ್ದೆಂದಾಗಲೀ ನಾವು ತೀರ್ಮಾನಿಸಿದರೆ, ಈ ರೀತಿಯಾಗಿ ಮೌಲ್ಯವನ್ನು ನಿರ್ಧರಿಸುವುದು, ಆ ಕಾಯಿದೆಬದ್ಧ ವರ್ಗವು, ಕಂಡು ಬರುವ ಅನೇಕ ನೈತಿಕ ವ್ಯವಸ್ಥೆಗಳಲ್ಲಿ ಯಾವುದಾದರೂ ಒಂದರೊಡನೆ ಹೊಂದಿರುವ ಸಂಬಂಧದ ಆಧಾರದ ಮೇಲೆ ವಿನಾ ಒಂದು ನಿಶ್ಚಿತ ನೈತಿಕವ್ಯವಸ್ಥೆಯೊಡನೆ ತುಲನೆ ಮಾಡಿ ಹೇಳುವಂತಹುದಲ್ಲ. ಆದ್ದರಿಂದ ಅದು ಸಂಬಂಧಿಕವಾದ ಮೌಲ್ಯ ನಿರ್ಣಯವಾಗುತ್ತದೆಯೇ ಹೊರತು ಶ್ರೇಷ್ಠ ಮೌಲ್ಯ ನಿರ್ಣಯವೆನಿಸಿಕೊಳ್ಳುವುದಿಲ್ಲ. b) ವಾಸ್ತವಿಕ ಕಾಯಿದೆಬದ್ಧ ವರ್ಗದ ಕಾರ್ಯಶೀಲತೆ, ಅದು ಯಾವುದಾದರೊಂದು ನೈತಿಕ ವ್ಯವಸ್ಥೆಗನುಗುಣವಾಗಿರಬೇಕೆಂಬುದನ್ನು ಅವಲಂಬಿಸುವುದಿಲ್ಲ.

ಸಂಬಂಧಾವಲಂಬಿ ಮೌಲ್ಯ ಸಿದ್ಧಾಂತವನ್ನು, ಮೌಲ್ಯಗಳೇ ಇಲ್ಲವೆನ್ನುವ ಅದರಲ್ಲೂ ನ್ಯಾಯವೆನ್ನುವದೇ ಇಲ್ಲವೆನ್ನುವ ಅರ್ಥ ನೀಡುತ್ತಿದೆಯೆಂದು ಅನೇಕ ವೇಳೆ ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ. ಮೌಲ್ಯಗಳು 'ಪರಮ'ವಲ್ಲ ಸಂಬಂಧಿಕ ನ್ಯಾಯವೆನ್ನುವುದು ಸಂಬಂಧಿಕ. 'ಪರಮ'ವೆಂದಿಗೂ ಅಲ್ಲ. ನಮ್ಮ ಕ್ಲುಪ್ತಪ್ರಮಾಣ ಸೃಜನಾತ್ಮಕ ಕ್ರಿಯೆಗಳಿಂದ ಸ್ಥಾಪಿಸಲ್ಪಟ್ಟ ಮೌಲ್ಯಗಳು, ಅವುಗಳಿಗೆ ವಿರುದ್ಧವಾದ ಮೌಲ್ಯಗಳಿರಬಹುದಾದ ಸಾಧ್ಯತೆಯನ್ನೆಂದಿಗೂ ಬಹಿಷ್ಕರಿಸಲಾಗುವುದಿಲ್ಲ. ಒಂದು ವಾಸ್ತವಿಕ ಕಾಯಿದೆ ವರ್ಗದ ಮೌಲ್ಯವನ್ನು ನಿರ್ಧರಿಸಲು ಒಂದು ಶ್ರೇಷ್ಠ ಪ್ರಮಾಣವನ್ನು ಒದಗಿಸಬೇಕಾದ ಕರ್ತವ್ಯವನ್ನು ನಾವು (ಜಾಗೃತವಾಗಿ ಅಥವಾ ಅಜಾ

ಗ್ರ್ಯತವಾಗಿ) ಸಂಬಂಧಿಕ ಮೌಲ್ಯಗಳಿಂದ ನಿರೀಕ್ಷಿಸುತ್ತೇವೆ. ಅದು ಸಂಬಂಧಿಕ ಮೌಲ್ಯಗಳಿಂದ ಎಂದಿಗೂ ಸಾಧ್ಯವಿಲ್ಲದ ಮಾತೆಂಬುದನ್ನು ಅರಿಯಬೇಕು. ಅಂತಹ ಮೌಲ್ಯ ನಿರ್ಧಾರಕ ಪ್ರಮಾಣವನ್ನು ವೈಜ್ಞಾನಿಕ ಜ್ಞಾನದಿಂದ ನಿರ್ಧರಿಸುವುದು ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಅಂತಹ ಪ್ರಮಾಣವೇ ಇಲ್ಲವೆಂದಲ್ಲ ಆದರೆ ಪ್ರತಿಯೊಂದು ನೈತಿಕ ವ್ಯವಸ್ಥೆಯೂ ಅಂತಹ ಪ್ರಮಾಣವಾಗಬಲ್ಲದು. ನೈತಿಕ ದೃಷ್ಟಿಕೋನದಿಂದ ವಾಸ್ತವಿಕ ಕಾಯಿದೆ ವರ್ಗವನ್ನು (ಒಳ್ಳೆಯದು ಕೆಟ್ಟದು; ನ್ಯಾಯವಾದ್ದು ಅನ್ಯಾಯವಾದ್ದು ಎಂಬುದಾಗಿ) ಟೀಕಿಸುವಾಗ ಮೌಲ್ಯವನ್ನು ನಿರ್ಧರಿಸುವ ಪ್ರಮಾಣ ಸಂಬಂಧಾವಲಂಬಿಯಾಗಿದೆಯೆಂದು ಮರೆಯಬಾರದು. ಅದಲ್ಲದೇ, ಅದಕ್ಕಿಂತ ಭಿನ್ನವಾದ ನೈತಿಕ ವ್ಯವಸ್ಥೆಯ ಮೇಲೆ ಆಧಾರಿತವಾದ ಮೌಲ್ಯ ನಿರ್ಧಾರವನ್ನೂ ನಾವು ಅಲ್ಲಗಳೆಯುವಂತಿಲ್ಲ. ಒಂದು ನೈತಿಕ ವ್ಯವಸ್ಥೆಯ ಆಧಾರದ ಮೇಲೆ, ಅನ್ಯಾಯವಾದ್ದೆಂಬುದಾಗಿ ನಿಶ್ಚಿತವಾದ ನ್ಯಾಯವರ್ಗ, ಇನ್ನೊಂದು ನೈತಿಕ ವ್ಯವಸ್ಥೆಯ ಪ್ರಕಾರ ನ್ಯಾಯವಾದ್ದೇ ಆಗಿರಬಹುದೆಂಬುದನ್ನೂ ಮರೆಯುವಂತಿಲ್ಲ.

★ ಸಿ. ಕೆ. ಎನ್. ರಾಜ

ಸಮಾನಾರ್ಥ ಸೂಚಿ

೧) ಹೊಣೆಗಾರಿಕೆ—OBLIGATION

೨) ನ್ಯಾಯವರ್ಗ, ಕಾಯಿದೆವರ್ಗ, ಕಾಯಿದೆಬದ್ಧವರ್ಗ—
—LEGAL ORDER

೩) ಸಾಮಾಜಿಕವರ್ಗ—SOCIAL ORDER

೪) ಕ್ಲೃಪ್ತಪ್ರಮಾಣ—NORM

೫) ಆಧಾರ ಕಲ್ಪನೆ—POSTULATE

೬) ನಡವಳಿಕೆ—BEHAVIOUR

೭) ಪ್ರವೃತ್ತಿಗಳು ಮತ್ತು ಸ್ವಾರ್ಥಹಿತಾಸಕ್ತಿಗಳು—
INCLINATIONS AND EGOISTICAL INTERESTS

೮) ಕೃತ್ಯ, ಕಾರ್ಯ—ACT

೯) ಕರ್ತವ್ಯಲೋಪ—OMISSION

೧೦) ಪ್ರೇರಣೆ—MOTIVE

೧೧) ಸಾಪೇಕ್ಷತೆ, ಸಂಬಂಧಾವಲಂಬಿ—RELATIVITY, RELATIVE

೧೨) ಶ್ರೇಷ್ಠಪ್ರಮಾಣ—ABSOLUTE STANDARD

ಪ್ರಮಾಣ ಲೇಖನಾವಳಿ

1) The Pure Theory of Law (1967) *by Hans Kelsen*

2) Principles of International Law (1966)—*Hans Kelsen*

3) Law, State and International Legel order (1964)
University of Tennessee

ಮಧುರಚೆನ್ನ ಮತ್ತು ಬೇಂದ್ರೆಯವರ ಸಖ್ಯಯೋಗ

ಮಧುರಚೆನ್ನರು ಹೊಸಗನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಮಹತ್ವದ ಕವಿಗಳಲ್ಲೊಬ್ಬರು. ಅಧ್ಯಾತ್ಮವು ಅವರ ಎಲ್ಲ ಕೃತಿಗಳಲ್ಲಿ ಹಾಸು-ಹೊಕ್ಕಾಗಿದ್ದು, ಅದುವೇ ಅವರ ಕಾವ್ಯದ ವೈಶಿಷ್ಟ್ಯವಾಗಿದೆ. ಆತ್ಮಸಂಶೋಧನೆಗಾಗಿ ಇಡೀ ಜೀವನವನ್ನು ತೆಯ್ದು ಅವರು, 'ಪೂರ್ವರಂಗ' 'ಕಾಳರಾತ್ರಿ' 'ಬೆಳಗು' ಮತ್ತು 'ಆತ್ಮಸಂಶೋಧನೆ' ಗಳಲ್ಲಿ ತಮ್ಮ ಸಾಧನೆಯ ಕಥೆಯನ್ನೇ ನಿರೂಪಿಸಿದ್ದಾರೆ. ಅವರ ಏಕಮೇವ ಕವನ ಸಂಕಲನ 'ನನ್ನನಲ್ಲ'ವು ಕನ್ನಡದ ನವೋದಯ ಕಾಲದಲ್ಲಿ ಅನುಭಾವ ಕಾವ್ಯಪರಂಪರೆಗೆ ನೀಡಿದ ಮಹತ್ವದ ಕೊಡುಗೆಯಾಗಿದೆ.

ಅಧ್ಯಾತ್ಮವೇ ಮಧುರಚೆನ್ನರಿಗೆ ನಿಚಿತ ಪ್ರಯೋಜನವಾಗಿದ್ದು, ಉಳಿದ ಸಂಬಂಧಗಳನ್ನು ಅದಕ್ಕನುಕೂಲವಾಗುವಂತೆ ಅವರು ಬೆಳೆಸಿಕೊಂಡರು; ಬಳಸಿಕೊಂಡರು. ಜಾನಪದ ಸಾಹಿತ್ಯ ಸಾರೋದ್ಧಾರ ಕಾರ್ಯದಲ್ಲಿ ಮೊದಲಿಗರಾಗಿ, ಮಹತ್ವದ ಶಾಸನಗಳ ಸಂಶೋಧಕರಾಗಿ, ಅರವಿಂದ ಗ್ರಂಥಮಾಲೆಯ ಸಂಪಾದಕರಾಗಿ ಅವರು ನಿರ್ವಹಿಸಿದ ಭಗವದರ್ಪಿತ ಕಾಯಕವನ್ನು ಕನ್ನಡಿಗರೆಂದೂ ಮರೆಯುವಂತಿಲ್ಲ.

ಪ್ರತಿಭೆ, ಪಾಂಡಿತ್ಯ, ಸಾಧನೆಗಳಿಂದ ಮುಪ್ಪುರಿಗೊಂಡ ಅವರ ಜೀವನದಲ್ಲಿ ಎದ್ದುಕಾಣುವ ಇನ್ನೊಂದು ಮಹತ್ವದ ಅಂಶವೆಂದರೆ ಸ್ನೇಹಪರತೆ. ಅವರು ಹಲಸಂಗಿಯ ಗೆಳೆಯರ ಬಳಗವನ್ನು ಕಟ್ಟಿ, ಬೆಳೆಸಿ ತನ್ಮೂಲಕ ಸಾಹಿತ್ಯ-ಸಂಸ್ಕೃತಿಗಳ ಸೇವೆಮಾಡಿ, ಅದರ ಕೀರ್ತಿಯನ್ನು ನಾಡಿನ ತುಂಬ ಬೆಳಗಿಸಿದರು. ಧಾರವಾಡದ ಗೆಳೆಯರಗುಂಪಿನೊಂದಿಗೆ ಅನ್ಯೋನ್ಯವಾಗಿ ಹೊಂದಿಕೊಂಡು ಅದರ ಶ್ರೇಯೋಭಿವೃದ್ಧಿಯಲ್ಲಿಯೂ ಪಾಲುಗೊಂಡರು.

ಆತ್ಮಸಂಶೋಧನೆಯ ಸಾಹಸವು ಮಧುರಚೆನ್ನರ ಆಗಮಿಕ ಜೀವನದ ಒಂದು ಮುಖವಾದರೆ, ಆತ್ಮೀಯಗೆಳೆಯರೊಂದಿಗಿನ ಸಹವಾಸವು ಅವರ ಲೌಕಿಕ ಜೀವನದ ಇನ್ನೊಂದು ಮುಖವಾಗಿದೆ. ಅವೆರಡು ದ್ವಿಮುಖವಾಗಿರದೆ ಒಮ್ಮುಖಿ, ಸಮ್ಮುಖಿವಾಗಿದ್ದು ಅವರ ಊರ್ಧ್ವಮುಖಿ ಸಾಧನೆಗೆ ಸಹಕಾರಿಯಾಗಿವೆ. ಅವರಿಗೆ ಅಧ್ಯಾತ್ಮ ಸಾಧನೆಯು ಯೋಗವಾಗಿದ್ದಂತೆ ಗೆಳೆತನವೂ ಒಂದು ಯೋಗವಾಗಿತ್ತು. "ಅವರದು ಮಿತ್ರಜೀವ, ಸಹವಾಸವು ಅವರಿಗೊಂದು ಯೋಗ"[೧] ಎಂದಿದ್ದಾರೆ ಬೇಂದ್ರೆಯವರು. ಇನ್ನೊಂದು ಸಂದರ್ಭದಲ್ಲಿ ಮಧುರಚೆನ್ನರ ಬಗ್ಗೆ ಬರೆಯುತ್ತ ಬೇಂದ್ರೆಯವರು "ತನ್ನ ಆತ್ಮೀಯರೆಲ್ಲರನ್ನು ಬಾಗಿಲ ತೆರೆದಿಟ್ಟು ತನ್ನ ಅಂತಃಕರಣದಲ್ಲಿ

೧. 'ಆತ್ಮಸಂಶೋಧನೆ' (ಮುನ್ನುಡಿ), ಮಧುರಚೆನ್ನ, ಪುಟ : ೩.

ಬರಮಾಡಿಕೊಳ್ಳುವಂತೆ, ತಾನೂ ಅವರ ಅಂತರಂಗದ ಆಪ್ತನಂತೆ ಒಳಸೇರುತ್ತಿದ್ದನು."[೧] ಎಂದು ಅವರ ಸ್ನೇಹ ಜೀವನದ ಪರಿಚಯ ಮಾಡಿಕೊಟ್ಟಿದ್ದಾರೆ. ಸ್ವಭಾವಸಿದ್ಧವಾದ ಅವರ ಸಖಿತ್ವಕ್ಕೆ ಅವರು "ಮಧುರಚೆನ್ನ" ಎಂದು ಹೆಸರಿಸಿಕೊಂಡಿದ್ದುದನ್ನು ಇಲ್ಲಿ ಎತ್ತಿ ಹೇಳಬಹುದು. ಅದು ಅವರ ಮೈತ್ರಿಯೋಗದ ಸಿದ್ಧಿಯ ಸಂಕೇತ.

ನನಗೆ ನೀನತಿ ಮಧುರ, ನಿನಗೆ ನಾ ಬಲು ಚೆನ್ನ
ಹೀಗಂತಲೇ ನಾವು 'ಮಧುರಚೆನ್ನ'[೨]

ಇಲ್ಲಿಯ ಮಧುರ ಮತ್ತು ಚೆನ್ನ ಪದಗಳು ಶ್ಲೇಷಾರ್ಥವುಳ್ಳವುಗಳು. ಕಾವ್ಯಾರ್ಥದ ಜೊತೆಗೆ ಅವು ವಾಸ್ತವಾಂಶವನ್ನು ತಿಳಿಸಿಕೊಡುತ್ತವೆ. ಮಧುರ (ಮಾದಣ್ಣ : ಚೆನ್ನ-ಮಲ್ಲಪ್ಪನವರ ಪ್ರಿಯ ಸ್ನೇಹಿತನ ಹೆಸರು) + ಚೆನ್ನ (ಕವಿಯ ಸ್ವಂತ ಹೆಸರಿನ ಪೂರ್ವಾರ್ಧ) = ಮಧುರಚೆನ್ನ. ಹೀಗೆ ಸಮರಸಕೊಂಡ ಅವರ ಮೈತ್ರಿಯ ಸಾಧನೆಯನ್ನು 'ಮಧುರಗೀತ'ವು[೩] ಮನೋಜ್ಞವಾಗಿ ಚಿತ್ರಿಸುತ್ತದೆ.

ಹೀಗಿರುವ ಮಧುರಚೆನ್ನರು ಬೇಂದ್ರೆಯವರೊಡನೆ ಬೆರೆತು ಬಾಳಿದುದು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಉಲ್ಲೇಖನೀಯ ಅಂಶವಾಗಿದೆ. ಅವರಿಬ್ಬರ ಕೃತಿಗಳಲ್ಲಿ ಅವರ ಒಡನಾಟದ ವಿಷಯ ಅಲ್ಲಲ್ಲಿ ಪ್ರಕಟವಾಗಿದೆ. ಕೆಲವು ಕವಿತೆಗಳಿಗೆ ಅದುವೇ ವಸ್ತುವಾಗಿದೆ. ಅವುಗಳನ್ನು ಓದಿದಾಗ ಅವರೀರ್ವರ ಗಾಢವಾದ ಸ್ನೇಹ ಸಂಬಂಧ, ಆಧ್ಯಾತ್ಮಿಕ ಸಾಧನೆಗಳ ಪರಿಚಯ ನಮಗಾಗುವದು. "'ಮಧುರಚೆನ್ನ' ಎಂಬ ನಾಮದಿಂದ ಕೀರ್ತಿಶೇಷರಾದ ಕವಿ ಹಲಸಂಗಿಯ ಚೆನ್ನಮಲ್ಲಪ್ಪ ಗಲಗಲಿ ಅವರ ಕೃತಿಗಳೊಡನೆ ಬಂದಷ್ಟು ಸಂಬಂಧ ಮತ್ತಾರ ಕೃತಿಗಳೊಡನೆಯೂ ಬರಲಿಲ್ಲ. ಅವರ ಕಾವ್ಯ, ಆತ್ಮಚರಿತ್ರೆ, ಸಂಶೋಧನ, ತತ್ತ್ವಜಿಜ್ಞಾಸೆ ಈ ಎಲ್ಲದರೊಡನೆಯೂ ನನ್ನ ಮಾತು ಹೆಣೆದುಕೊಂಡವು. ಚೆನ್ನಮಲ್ಲಪ್ಪನವರು ನನ್ನನ್ನು ತಮ್ಮ ಅಂತರಂಗದ "ಅಣ್ಣಯ್ಯ"ನನ್ನಾಗಿ ಮಾಡಿಕೊಂಡರು. ಅವರನ್ನು ಕುರಿತು ನಾನೂ ನನ್ನನ್ನು ಕುರಿತು ಅವರೂ ಬರೆದ ಕವನಗಳ ಸಾಹಿತಿಗಳ ಜೀವನದ ಹಿನ್ನೆಲೆ ಕಟ್ಟುವ ಇತಿಹಾಸದಲ್ಲಿ ರಹಸ್ಯಮಯವಾದ ರಂಜಕ ಸಾಮುಗ್ರಿ ಆಗುವದೆಂದು ನಾನು ತಿಳಿದಿದ್ದೇನೆ"[೪] ಎಂದು ಬೇಂದ್ರೆಯವರು ತಮ್ಮ ಆತ್ಮ

---

೧. 'ಬೆಳಕಿನ ಹೆಜ್ಜೆ' (ಹಲಸಂಗಿ ಅರವಿಂದ ಮಂಡಲದ ಬೆಳ್ಳಿಹಬ್ಬದ ನೆನಹಿನ ಹೊತ್ತಿಗೆ) ಪುಟ ೧೪೯.

೨. 'ನನ್ನನಲ್ಲ' (ದ್ವಿತೀಯ ಮುದ್ರಣ-೧೯೫೫) ಮಧುರಚೆನ್ನ, ಪುಟ ೭೦.

೩. ಈ ಕವಿತೆಯ ವಿಮರ್ಶಾತ್ಮಕ ವಿವರಣೆಗೆ ಚೆನ್ನವೀರ ಕಣವಿಯವರ 'ಸಾಹಿತ್ಯಚಿಂತನ' (ಪ್ರಥಮ ಮುದ್ರಣ) ಪುಟ ೧೧೪ ನೋಡಬಹುದು.

೪. 'ನಡೆದುಬಂದ ದಾರಿ' ಸಂಪುಟ ೨-೧೯೬೧: ಚತುರ್ಮುಖ (ಆತ್ಮಕಥನ): ದ. ರಾ. ಬೇಂದ್ರೆ, ಪುಟ ೨೫೨.

ಕಥನವನ್ನು ನಿರೂಪಿಸುತ್ತ ನುಡಿದಿದ್ದಾರೆ. ಮಧುರಚೆನ್ನ ಮತ್ತು ಬೇಂದ್ರೆಯವರು ಪರಸ್ಪರರನ್ನು ಕುರಿತು ಬರೆದುದನ್ನು ಗಮನಿಸಿ ತನ್ಮೂಲಕ ಅವರ ಸಖ್ಯಯೋಗದ ಪರಿಚಯ ಮಾಡಿಕೊಡಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ವರಕವಿ ಬೇಂದ್ರೆಯವರು ಕನ್ನಡ ನವೋದಯ ಕಾವ್ಯಗಿರಿಯ ಉತ್ತುಂಗ ಶಿಖರವಾಗಿದ್ದರೂ ನಿತ್ಯದ ಬಾಳಿನಲ್ಲಿ ಸ್ನೇಹಜೀವಿಗಳು. "ಅವರು ಸ್ನೇಹಕ್ಕೆ ಕೊಡುವ ಬೆಲೆ ಉಳಿದ ಯಾವುದಕ್ಕೂ ಕೊಡುವುದಿಲ್ಲ"[೬] ಎಂಬ ಅಭಿಪ್ರಾಯವನ್ನಿಲ್ಲಿ ಗಮನಿಸಬೇಕು. "ಅವರಿಗೆ ಸ್ನೇಹವೇ ಗಾಳಿ, ಬೆಳಕು, ನೀರು, ಸಕಲ ಸಂವರ್ಧನೆಯ ಸಾಧನ ಶಕ್ತಿಯಾಗಿದೆ—ವಾತ್ಸಲ್ಯದಂತೆ"[೭] ಎಂಬ ಅವರ ಸ್ನೇಹಮಯ ಜೀವನವನ್ನು ಪರಿಚಯಿಸುವ ಇನ್ನೊಂದು ಉಕ್ತಿಯನ್ನು ಇಲ್ಲಿ ಲಕ್ಷಿಸಬೇಕು. ಧಾರವಾಡದ ಗೆಳೆಯರೊಲಗ ಕಟ್ಟಿದ ಬೇಂದ್ರೆಯವರು ನಾಡಿನ ಉದ್ದಗಲಕ್ಕೂ ತಮ್ಮ ಗೆಳೆತನದ ಬಳ್ಳಿಯನ್ನು ಹಬ್ಬಿಸಿದ್ದಾರೆ. ಅವರ ಆತ್ಮಕಥನವಾದ ಕಾವ್ಯೋದ್ಯೋಗದಲ್ಲಿ ಹಲವಾರು ಊರು–ನಗರಗಳ ಸ್ನೇಹಿತರ ಹೆಸರನ್ನು ಅವರು ನೆನೆದಿದ್ದಾರೆ. "ಎಳೆಯರ ಗುಂಪನ್ನು ಗೆಳೆಯರ ಗುಂಪನ್ನು (ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ) ದೈವ ಪೌರುಷದ ಹೆಣಿಗೆಯಾಗಿ ಹೆಣೆದುಕೊಂಡೆ..."[೮] ಎಂದು ನುಡಿದು, ಮುಂದುವರಿದು ಕಾಲನ ದವಡೆಯಲ್ಲಿ ಕಳೆದುಕೊಂಡ, ಕಳೆದುಕೊಳ್ಳದ ಮಿತ್ರಸಮುದಾಯದ ಹೆಸರನ್ನು ಸೂಚಿಸಿ "'ನೆಯ್ಗೆಯಲ್ಲಿ ನೂಲು' ಇನ್ನೂ ಹೆಚ್ಚಾಗುತ್ತಿದೆ—ದೊಡ್ಡದಾಗುತ್ತಿದೆ"[೯] ಎಂದಿದ್ದಾರೆ. ಬೇಂದ್ರೆಯವರ ಗೆಳೆತನದ ಬಾಳಬಟ್ಟೆ ಒಂದು ಅಕ್ಷಯಾಂಬರ. ಅದು ಅವರ ಜೀವನವುದ್ದಕ್ಕೂ ಬೆಳೆಯುತ್ತ ಹೋಗುವಂತಹದು. ಗೋಕಾಕರಾದಿಯಾಗಿ ಹಿಂಗಮಿರೆಯವರ ವರೆಗೆ ಬೆಳೆದ ಕನ್ನಡದ ಕವಿ ಸಮುದಾಯಕ್ಕೆ ಅವರು ಗುರುಸ್ಥಾನದಲ್ಲಿದ್ದರೂ ಅವರೆಲ್ಲರನ್ನು ಗೆಳೆತನದ ಒಲುಮೆಯಿಂದ ಕಾಣುವ ಮನೋಭಾವ ಅವರದು. ಅಂತೆಯೇ ಅವರ ಸ್ನೇಹದ ಅಖಂಡ ಸ್ಮರಣೆಯಲ್ಲಿ ಕರುಳಿನ ಕರೆ ಕೇಳಿಬರುತ್ತಲೇ ಇದೆ:

ಯಾವ ದೈವದ ಕರೆಗೊ ಓಗೊಟ್ಟು ಬರುತಲಿದೆ
(ಕರುವು ತುರುವಿಗೆ ಮರಳಿ ಅಂಬೆಗರೆದು
ಕರೆವಂತೆ ತೊರೆವಂತೆ ತಾಯಿ ಕೆಚ್ಚಲು ಹಾಲು)—
ಕರಳು–ತಳಕಿನ ಹಾಡು ಜೆಲ್ಲವರಿದು[೧೦]

---

೬. 'ಬಾ ಹತ್ತರ' ೧೯೬೯ (ಹಿನ್ನುಡಿ: ಸಂ.ವಾ.ದ.) ದ. ರಾ. ಬೇಂದ್ರೆ, ಪುಟ ೧೯೧.
೭. 'ಬಾ ಹತ್ತರ' ೧೯೬೯ (ಹಿನ್ನುಡಿ: ಸಂ.ವಾ.ದ.): ದ. ರಾ. ಬೇಂದ್ರೆ, ಪುಟ ೧೯೩.
೮. 'ಕಾವ್ಯೋದ್ಯೋಗ' (ಮನ್ವಂತರ ಸಂಪುಟ ೧–೧೯೬೨) ದ. ರಾ. ಬೇಂದ್ರೆ, ಪುಟ ೬೫.
೯. 'ಕಾವ್ಯೋದ್ಯೋಗ' (ಮನ್ವಂತರ ಸಂಪುಟ ೧–೧೯೬೨) ದ. ರಾ. ಬೇಂದ್ರೆ, ಪುಟ ೯೫.
೧೦. 'ಜೀವಲಹರಿ' (ಪ್ರಥಮ ಮುದ್ರಣ–೧೯೩೭) ಅಂಬಿಕಾತನಯದತ್ತ, ಪುಟ ೭೮.

ವಿಸ್ತಾರವಾಗಿ ಬೆಳೆದ ಅವರ ಕರುಳ ಬಳ್ಳಿಯಲ್ಲಿಯ ಹಲವಾರು ಗೆಳೆಯರನ್ನು ಕುರಿತು ಬರೆದ ಕವಿತೆಗಳು ಅವರ ಕವನ ಸಂಕಲನಗಳಲ್ಲಿ ಅಲ್ಲಿಗಲ್ಲಿಗೆ ಚೆಲ್ಲುವರಿದಿರುವದನ್ನು ನಾವು ಕಾಣುತ್ತೇವೆ. ಅವರ ಗೆಳೆತನದ ಶುಚಿ–ರುಚಿ, ಅಂತಃಕರಣದ ಮಿಡಿತ, ಹೃದಯದ ಸಂವೇದನೆ ಹಾಗೂ ಅವರ ಮಹತ್ಸಾಧನೆ ಇವು ಅಂಥ ಕವಿತೆಗಳಲ್ಲಿ ಅಭಿವ್ಯಕ್ತಗೊಂಡಿವೆ.

ಬೇಂದ್ರೆಯವರ ಗೆಳೆತನದ ನೆಯ್ಗೆಯಲ್ಲಿ ಕಂಡುಬರುವ ಹಲವಾರು ಎಳೆಗಳಲ್ಲಿ ಮಧುರಚೆನ್ನರದು ಬಹು ಬೆಲೆಯುಳ್ಳ ರೇಸಿಮೆಯ ಎಳೆಯೆನ್ನಬಹುದು.

‘ಮಧುರ ಗೀತ’ವ ಹಾಡಿ, ‘ನನ್ನನಲ್ಲ’ ನ ಒಲಿಸಿ
ಹಲಸಂಗಿ ನಾಡಿನಲಿ ನೆಲಿಸಿ ನಿಂತ
ನನ್ನ ‘ಚೆನ್ನ’ನಿಗೆಣೆಯ ಗೆಣೆಯರಾರಾರಿಹರು
ಅವನೆ ಅವನಿಗು ಹೆಚ್ಚು ಅವನಿಗಿಂತ[೧೧]

ಎಂಬ ಬೇಂದ್ರೆಯವರ ಈ ಅನನ್ವಯ ವರ್ಣನೆ ಮಧುರಚೆನ್ನರ ಗೆಳೆತನದ ಮೇಲ್ಮೆಯನ್ನು ಎತ್ತಿ ತೋರಿಸುತ್ತದೆ.

ಮಧುರಚೆನ್ನ ಮತ್ತು ಬೇಂದ್ರೆಯವರ ಈ ಅಪರೂಪ ಸ್ನೇಹ ಸಂಬಂಧ ಕೂಡಿಬಂದಿದ್ದುದು ಒಂದು ಯೋಗಾಯೋಗವೆಂದೇ ಹೇಳಬೇಕು. ಸುಮಾರು ಹದಿನೆಂಟು ವರ್ಷದ ಪ್ರಾಯದವರಿದ್ದಾಗ ಮಧುರಚೆನ್ನರು ಬೇಂದ್ರೆಯವರ ಗುರುತ್ವಾಕರ್ಷಣ ಕಕ್ಷೆಯೊಳಗೆ ಬಂದರು. ಆಗ ಬೇಂದ್ರೆಯವರಿಗೆ ಇಪ್ಪತ್ತೈದರ ಪ್ರಾಯ. ಆಗಲೆ ಅವರು ಕಾವ್ಯಲೋಕದಲ್ಲಿ ನವ ಚೈತನ್ಯವನ್ನುಂಟು ಮಾಡಿ ಗೆಳೆಯರಿಂದ ‘ನವ ಕರ್ನಾಟಕದ ನವ ಕವಿ’ ಎನ್ನಿಸಿಕೊಂಡು ಮಾನಸ ಕಾಯಕ ನಿರತರಾಗಿ ವಾಗ್ಯಜ್ಞದಲ್ಲಿ ತೊಡಗಿದ್ದರು. ಮಧುರಚೆನ್ನರು ಜ್ಞಾನ ಜಿಜ್ಞಾಸುಗಳಾಗಿ ಆತ್ಮಸಂಶೋಧನೆಯನ್ನು ಪ್ರಾರಂಭಿಸಿದ್ದರು : ದೇವನ ಅಸ್ತಿತ್ವವನ್ನು ಕಂಡರಿಸಲು ಕನವರಿಸುತ್ತಿದ್ದರು. ಅವರಿಬ್ಬರ ಪರಿಚಯವಾಗುವ ಕಾಲದಲ್ಲಿ ಅವರ ಒಲವು-ನಿಲುವುಗಳು ಹೀಗಿದ್ದವು. “ಅವರಿಬ್ಬರು ಪರಸ್ಪರರನ್ನು ಮೊದಲಿಗೆ ಕಂಡಾಗ ವ್ಯಕ್ತಿಯನ್ನಷ್ಟೇ ಕಾಣಲಿಲ್ಲ. ಪರಸ್ಪರ ಕಣ್ಣು ಮುಂದೆ ಮೊಳಕೆಮಾತ್ರ ನಿಂತಿದ್ದರೂ ಆದರಲ್ಲಿ ಅವರಿಗೆ ಬೆಳೆಯ ಸಿರಿಯೇ ಕಂಗೊಳಿಸಿತು.”[೧೨] ಎಂದು ಉಭಯ ಸ್ನೇಹಿತರ ನಿಕಟವರ್ತಿಗಳಾದ ಸಿಂಪಿ ಲಿಂಗಣ್ಣನವರು ಹೇಳಿದ್ದಾರೆ. ಅವರ ಅಂತರ್ದೃಷ್ಟಿ ಪರಸ್ಪರರ ಆತ್ಮಸಂಬಂಧವನ್ನೂ ಗುರುತಿಸಿರಬೇಕು. ಅಂತೆಯೇ ಅವರ ಒಲವು-ನಿಲುವುಗಳು ಪರಸ್ಪರ ಪೂರಕ, ಪೋಷಕವಾಗಿ ಒಮ್ಮೆಲೆ ಗೆಳೆತನದ ಸಂಬಂಧವನ್ನು ಗಾಢವಾಗಿಸಿವೆ. ಬೇಂದ್ರೆಯವರ ನೇತಿ ನೇತಿಯ ಹೊಳ್ವ ಅರುವಿನ ಆಳ, ಹರಿಗಡಿದ

೧೧. ‘ಜೀವಲಹರಿ’ (ಪ್ರಥಮ ಮುದ್ರಣ –೧೯೫೭) ಅಂಬಿಕಾತನಯದತ್ತ, ಪುಟ ೭೨.
೧೨. ‘ನನ್ನನಲ್ಲ’ (ದ್ವಿತೀಯ ಮುದ್ರಣ–೧೯೫೫– ಕವಿ ಪರಿಚಯ) ಮಧುರಚೆನ್ನ, ಪುಟ ೪.

ಹೊನಲನ್ನು ಹರಿಯ ಹಚ್ಚುವ ಹವಪುಳ್ಳ ತರ್ಕ ಇವು ಮಧುರಚೆನ್ನರ ಭಾವುಕ ಹೃದಯಕ್ಕೆ ಬೆಳಕನ್ನೀಯುತ್ತ, ಮಧುರಚೆನ್ನರ ಭಕ್ತಿ, ನಿಷ್ಠೆಗಳು ಬುದ್ಧಿ ಜೀವಿಗಳಾದ ಬೇಂದ್ರೆಯವರಿಗೆ ಆಧ್ಯಾತ್ಮಿಕ ತಾತ್ತ್ವಿಕದಲ್ಲಿ ಬಲವನ್ನು ಕೊಡುತ್ತ, ಅವರಿಬ್ಬರ ಸ್ನೇಹವು ಸಂವರ್ಧಿಸಿ ಸಖ್ಯಯೋಗವಾಗಿ ಪರಿಣಮಿಸಿದೆ. ಈ ಯೋಗದಿಂದ ಅವರು ಜನ್ಮಜನ್ಮಾಂತರದ ಬಾಂಧವ್ಯದ ಸಿದ್ಧಿಯನ್ನು ಪಡೆದುಕೊಂಡಿದ್ದಾರೆ.

ಗೆಳೆತನದ ಪ್ರಥಮ ಪ್ರಾಯದಲ್ಲಿಯೇ ತಮ್ಮ 'ಎಂದೂ ಅಗಲದ ಗೆಳೆತನ'ವನ್ನು ಗುರುತಿಸಿದ ಬೇಂದ್ರೆಯವರು :

ಇಂದಿನೀ ಗೆಳೆತನವು ಹಿಂದಿನಿಂದಲೆ ಬಂತು
ಮುಂದೆ ಜನ್ಮಾಂತರದಿ ಸಾಗಿ ಸಾಗಿ
ಪೊಂದಿರುವ ಪಕಳೆಗಳ ಹಿಂದೆ ಕೇಸರದಿಂದ–
–ನೇಕ ಬೀಜದ ಏಕಫಲವು ಆಗಿ[೧೩]

ಹೀಗೆ ಭೂತ–ವರ್ತಮಾನ– ಭವಿಷತ್ತುಗಳಲ್ಲಿ ಅನುಸ್ಯೂತವಾಗಿ ಬೆಳೆದು ಬಂದ ಅವರ ಗೆಳೆತನವು ಏಕಫಲವಾಗಿರುವದನ್ನು ಬಣ್ಣಿಸಿದ್ದಾರೆ. ಮಧುರಚೆನ್ನರು ಅಗಲಿ ಬಹುದೂರ (ಮುಗಿಲ ತುದಿಗೆ) ಇದ್ದರೂ ಸದಾ ಬೇಂದ್ರೆಯವರ ಬದಿಗಿರುವಂಥ ಗೆಳೆಯರು. ಅಗಲಿಕೆಂಬುದು ಅವರಿಗೆ ಕಣ್ಣುಮುಚ್ಚಣಿಕೆಯಾಟ.

ಮಧುರಚೆನ್ನರು ಸುಮಾರು ಅದೇ ಹೊತ್ತಿಗೆ ಬರೆದ ಒಂದು ಕವಿತೆಯಲ್ಲಿ.

. . . . . ಬೆನ್ನು ಬೆನ್ನಲಿ ಬೆಸೆದ
ಏಕ ತೇಜದ ಎರಡು ಹಿರಿ ಕಿರಿಯ ಪಿಂಡಗಳ
ಬೆಳಗಿಸುವ ಜಗಜ್ಯೋತಿ ಅರವಿಂದ ಯೋಗಿಗಳ
ಹೃದಯಸ್ಥ ಭಾನು[೧೪]

ಎಂದು ಬೆನ್ನು ಬೆನ್ನಲಿ ಬೆಸೆದ ಹಿರಿಕಿರಿಯ[೧೫] ಪೃತ್ಪಿಂಡಗಳ ಉದ್ಭವವನ್ನು ತಿಳಿಸಿ ಕೊಟ್ಟಿದ್ದಾರೆ. ಅವರಿಬ್ಬರದು ಏಕಫಲ, ಏಕತೇಜ. ಅವರಿಬ್ಬರ ಹೃದಯಸ್ಥ ಭಾನು ಶ್ರೀ ಅರವಿಂದ ಯೋಗಿಗಳು. ಮಾತೃಶಕ್ತಿ ಶ್ರೀಮಾತೆಯವರು. ಆಶ್ಚರ್ಯದ ಸಂಗತಿಯೆಂದರೆ ಅವರಿಬ್ಬರಿಗೆ ಜನ್ಮವಿತ್ತ ತಾಯಂದಿರ ಹೆಸರೂ ಒಂದೇ ಆಗಿದೆ. (ಬೇಂದ್ರೆಯವರ ತಾಯಿ : ಅಂಬೂತಾಯಿ, ಮಧುರಚೆನ್ನರ ತಾಯಿ : ಅಂಬವ್ವ) ಈ

---

೧೩. 'ಸಂಚಯ' (ಪ್ರಥಮ ಮುದ್ರಣ – ೧೯೫೯) ಅಂಬಿಕಾತನಯದತ್ತ, ಪುಟ. ೪೬.
೧೪. 'ನನ್ನನಲ್ಲ' (ದ್ವಿತೀಯ ಮುದ್ರಣ – ೧೯೫೫) ಮಧುರಚೆನ್ನ, ಪುಟ. ೭೫.
೧೫. ಬೇಂದ್ರೆಯವರ ಜನನ- ೩೧-೧-೧೮೯೬, ಮಧುರಚೆನ್ನರ ಜನನ - ೩೧-೭-೧೯೦೩, ಬೇಂದ್ರೆಯವರು ಹಿರಿಯರು, ಚೆನ್ನಮಲ್ಲಪ್ಪನವರು ಕಿರಿಯರು.

ರೀತಿ ಹೆಸರಿನ ಸಾದೃಶವಿರುವದು ಆಕಸ್ಮಿಕವೆಂದು ಹೇಳಲಿಕ್ಕಾಗದು. ಅದು ಅವರ ಆಂತರಿಕ ಭ್ರಾತೃಸಂಬಂಧದ ದೈವೀ ಸಂಕೇತವಿದ್ದರೂ ಇರಬಹುದು.

ಒಬ್ಬ ತಾಯಿಯ ಮಕ್ಕಳಂತಿದ್ದ ಈ ಸಹೋದರರ ಬೆನ್ನಿನಾಸರಗಿದ್ದ ವಿಶಾಲ ಆಧ್ಯಾತ್ಮವೃಕ್ಷ ಒಂದೇ. ಆದರೆ ದೃಷ್ಟಿಗಳು ಬೇರೆ ಬೇರೆ.

ನನ್ನ ನಿನ್ನ ಬೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ
ಮುಗಿಲತುಂಬ ಉಳಿದಿದೆ
ಗಾಳಿಯಂತೆ ಸುಳಿದಿದೆ
ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿವೆ
ಬೇರೆ ಹಾದಿ ತುಳಿದಿವೆ[೧೬]

ಎಂದು ಬೇಂದ್ರೆಯವರು ತಮಗೂ ಮಧುರಚೆನ್ನರಿಗೂ ಇರುವ ಒಳಜೀವನದ ಸಂಬಂಧವನ್ನು ತಿಳಿಸುತ್ತ ತಮ್ಮ ನೋಟ ಎರಡು ದಿಕ್ಕಿಗೆಳೆದಿರುವದನ್ನು ಹೇಳಿದ್ದಾರೆ. ಈ ಕವಿತೆಯ ಸಂದರ್ಭ ಸೂಚನೆಯಲ್ಲಿ "ನಮ್ಮಿಬ್ಬರ ಜೀವನಕ್ಕೂ ಮಹಾಪ್ರೇರಣೆಯಾಗಿ ನಿಂತ ಶಕ್ತಿ ಒಂದೇ, ಆದರೂ ನಮ್ಮ ದೃಷ್ಟಿ ಎರಡು ದಿಕ್ಕಿನಲ್ಲಿ ಹರಿಯುತ್ತವೆ"[೧೭] ಎಂದು ಸ್ಪಷ್ಟಗೊಳಿಸಿದ್ದಾರೆ. ಆ ದಿಕ್ಕುಗಳು ಯಾವವೆಂಬುದನ್ನು ಗುರುತಿಸುತ್ತ ಸಿಂಪಿ ಲಿಂಗಣ್ಣನವರು "ಒಂದು ಮುಖ ಪೂರ್ವಕ್ಕೆ, ಇನ್ನೊಂದು ಮುಖ ಪಶ್ಚಿಮಕ್ಕೆ: ಹಳ್ಳಿಯ ಶಾಲೆಯಲ್ಲಿ ಶಿಕ್ಷಣ ಮುಗಿಸಿದ ಮಧುರಚೆನ್ನರ ಮುಖ ಪಶ್ಚಿಮಕ್ಕೆ. ವಿಚಾರಸರಣಿ ಪಾಶ್ಚಾತ್ಯರದು. ಪದವೀಧರರಾದ ಬೇಂದ್ರೆಯವರ ಮುಖ ಪೂರ್ವಕ್ಕೆ, ವಿಚಾರಸರಣಿ ಪೌರ್ವಾತ್ಯರದು"[೧೮] ಎಂದು ಹೇಳಿ, ಅದೇ ಪರಿಚಯ ಲೇಖನದಲ್ಲಿ ಮುಂದೆ ಬಂದು. "ಒಬ್ಬರು ಜ್ಞಾನ ಮಾರ್ಗದಲ್ಲಿ ನಡೆದರೆ, ಇನ್ನೊಬ್ಬರು ಭಕ್ತಿಮಾರ್ಗದಲ್ಲಿ ಸಾಗಿದ್ದಾರೆ. ಜ್ಞಾನಜ್ಯೋತಿಯಿಂದ ಭಕ್ತಿ ಒಬ್ಬರಲ್ಲಿ ಬೆಳಗಿದರೆ, ಭಕ್ತಿಯ ಹಣತೆಯಿಂದ ಜ್ಞಾನದೀಪವು ಇನ್ನೊಬ್ಬರಲ್ಲಿ ಮಿನುಗಿದೆ."[೧೯] ಎಂದೂ ನುಡಿದಿದ್ದಾರೆ. ಸಿಂಪಿಯವರ ಮೇಲಿನ ಹೇಳಿಕೆಯಿಂದ ಮಧುರಚೆನ್ನರು ಪಾಶ್ಚಾತ್ಯ ವಿಚಾರಸರಣಿಗೆ ಮಾರುಹೋದವರೆಂದೂ ಬೇಂದ್ರೆಯವರು ಪೌರ್ವಾತ್ಯ ಧೋರಣೆಗೇನೇ ಅಂಟಿಕೊಂಡವರೆಂದೂ ಅರ್ಥ ಹೊರಡುತ್ತದೆ. ಆದರೆ ಅವರಿಬ್ಬರ ಎಲ್ಲ ಕೃತಿಗಳನ್ನು ಅಭ್ಯಸಿಸಿದಾಗ ಅವರು ಪೌರ್ವಾತ್ಯ ತತ್ತ್ವಜ್ಞಾನದ ಜೊತೆಗೆ ಪಾಶ್ಚಾತ್ಯ ತತ್ತ್ವಜ್ಞಾನವನ್ನು ತೆರೆದ ಮನಸ್ಸಿನಿಂದ ಅಭ್ಯಸಿಸಿದ್ದುದು ತಿಳಿದು ಬರುತ್ತದೆ. ಮಧುರಚೆನ್ನರು ಜ್ಞಾನಜಿಜ್ಞಾಸುಗಳಾಗಿ ಭಾರತೀಯ ವೇದೋಪನಿಷತ್ತು, ಮೊದಲುಗೊಂಡು ಅರವಿಂದರ ಯೋಗದರ್ಶನದವರೆಗೆ ನಮ್ಮ ಆಧ್ಯಾತ್ಮ ಸಾಹಿತ್ಯದ

೧೬. 'ನಾದಲೀಲೆ' (ನಾಲ್ಕನೆಯ ಮುದ್ರಣ-೧೯೫೫) ಅಂಬಿಕಾತನಯದತ್ತ, ಪುಟ ೧೮.
೧೭. 'ನಾದಲೀಲೆ' (ನಾಲ್ಕನೆಯ ಮುದ್ರಣ-೧೯೫೫) ಅಂಬಿಕಾತನಯದತ್ತ, ಪುಟ ೮೯.
೧೮. 'ನನ್ನನಲ್ಲ' (ದ್ವಿತೀಯ ಮುದ್ರಣ-೧೯೫೫ ಕವಿ ಪರಿಚಯ) ಮಧುರಚೆನ್ನ, ಪುಟ ೪.
೧೯. 'ನನ್ನನಲ್ಲ' (ದ್ವಿತೀಯ ಮುದ್ರಣ-೧೯೫೫ ಕವಿ ಪರಿಚಯ) ಮಧುರಚೆನ್ನ. ಪುಟ ೬.

ವ್ಯಾಸಂಗ ಮಾಡಿದ್ದಾರೆ. ಹಾಗೆಯೇ ಚಿಕಿತ್ಸಕ ಹಾಗೂ ಶೋಧಕ ಬುದ್ಧಿಯವರಾದ ಅವರು ಪಾಶ್ಚಾತ್ಯ ಮಹಾತ್ಮಾ ಏಸು ಮೊದಲಾಗಿ ದಾರ್ಶನಿಕ ಕವಿ ಎ. ಈ. ವರೆಗೆ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನವನ್ನೇ ಗಮನಿಸಿ ಮಧುರಚೆನ್ನರ ವಿಚಾರ ಸರಣಿ ಪಾಶ್ಚಾತ್ಯರದೆಂದು ಸಿಂಪಿಯವರು ಭಾವಿಸಿದಂತಿದೆ. ನಿಜವಾಗಿ ನೋಡಿದರೆ ಮಧುರಚೆನ್ನರ 'ಆತ್ಮಸಂಶೋಧನೆ' ನಡೆದಿದ್ದುದು ಪೌರ್ವಾತ್ಯ ದಾರಿಯಲ್ಲಿಯೇ ಹೊರತು ಪಾಶ್ಚಾತ್ಯ ಸರಣಿಯಲ್ಲಲ್ಲ. ಮಧುರಚೆನ್ನರು ತಮ್ಮ ಸಾಧನೆಯ ಬೆಳವಣಿಗೆಯನ್ನು ವಿವರಿಸುತ್ತ "'ಪೂರ್ವರಂಗ', 'ಕಾಳರಾತ್ರಿ' 'ಬೆಳಗು' ಎಂಬ ಪುಸ್ತಕಗಳಲ್ಲಿ ನಾನು ಶಿವಶರಣರ ಷಟ್‌ಸ್ಥಲಗಳಲ್ಲಿ ಆರಂಭವಾದವುಗಳಾದ ಭಕ್ತ, ಮಹೇಶ, ಪ್ರಸಾದಿ ಎಂಬ ಮೂರು ಸ್ಥಲಗಳವರೆಗೆ ಬಂದು ಮುಟ್ಟಿರುವೆನೆಂದು ಹೇಳಿದ್ದು. ಅವುಗಳ ಮುಂದಿನ ಪ್ರಾಣಲಿಂಗಿ (ಆತ್ಮಜ್ಯೋತಿ)ಸ್ಥಲಕ್ಕೆ ಹೇಗೆ ಬಂದು ಮುಟ್ಟೇನು? ಎಂದು ಜೀವವು ಆತ್ಮನ ಪೂರ್ಣಾನುಭವಕ್ಕಾಗಿ ಕಾತರಿಸತೊಡಗಿತು."[೨೦] ಎಂದಿದ್ದಾರೆ. ಅಷ್ಟಲ್ಲದೆ ಸರ್ವಸಮರ್ಪಣದಿಂದ ಶ್ರೀ ಅರವಿಂದ ಯೋಗಿಗಳ ಮಹಾಸಾಗರದಂತಿರುವ ಪೂರ್ಣ ಯೋಗದಲ್ಲಿ ಸಮರಸಹೊಂದಲು ತಾವು ಹವಣಿಸುತ್ತಿದ್ದುದನ್ನು ಅವರು ಹೆಜ್ಜೆ ಹೆಜ್ಜೆಗೂ ಹೇಳಿದ್ದಾರೆ. ಇದರಿಂದ ಮಧುರಚೆನ್ನರ ಧೋರಣೆ ಯಾವುದೆಂಬುದನ್ನು ಕಂಡುಕೊಳ್ಳಬಹುದು.

ಬೇಂದ್ರೆಯವರ ಸಾಧನೆಯ ವಿಷಯವಾಗಿಯೂ ಈ ಸಂದರ್ಭದಲ್ಲಿ ಒಂದಿಷ್ಟು ತಿಳಿದುಕೊಳ್ಳುವುದು ಉಚಿತವೆನಿಸುತ್ತದೆ. ಅವರ ಆತ್ಮಕಥನವಾದ 'ಕಾವ್ಯೋದ್ಯೋಗ'ದಲ್ಲಿ ಅವರ ಚತುರ್ಮುಖತೆಯ ದರ್ಶನವಿದೆ. ಅಲ್ಲಿಯೇ ಸಾಧನೆಯ ಸುಳುವು-ಹೊಳವುಗಳಿವೆ. "ವಿಷಯಗಳಾಚೆ ಇಂದ್ರಿಯಗಳಿವೆ. ಇಂದ್ರಿಯಗಳಾಚೆ ಮನಃ ಮನದಾಚೆ ಬುದ್ಧಿ, ಬುದ್ಧಿಯಾಚೆಗೆ ಸಃ ರಸಃ, ರಸೋ ವೈ ಸಃ! ರಸೋಕ್ತಿತೆಯ ಸಾಧನೆ "ಅಂಬಿಕಾತನಯದತ್ತನ ಕಾವ್ಯ, ಸೋಽಹಂ ದಾಸೋಽಹಂಗಳ ಮಧ್ಯೆ ರಸೋಽಹಂ ಮಾರ್ಗ ಇದು"[೨೧] ಇನ್ನೂ ಮುಂದುವರಿದು "ಅಪೋ ಜ್ಯೋತಿಯ ರಸಾಮೃತಕ್ಕಾಗಿ ಸಾಹಿತ್ಯ ಸಾಧನೆ ಮಾಡುವುದು ಮಾನವ ಪ್ರಗತಿಯಲ್ಲಿ ಕ್ರಮಪ್ರಾಪ್ತವಾದುದು. ಕವಿಯ ಉದ್ಭವವಾದ ಬೇಂದ್ರೇನಿಗೂ ಈ ಸಾಧನ ತಪ್ಪಿದ್ದಲ್ಲ"[೨೨] ಎಂದು ತಮ್ಮ ಸಾಧನೆಯ ಮಾರ್ಗವನ್ನು ಅದರ ಅನಿವಾರ್ಯತೆಯನ್ನು ಬೇಂದ್ರೆಯವರು ತಿಳಿಸಿದ್ದಾರೆ.

ಮಧುರಚೆನ್ನ ಮತ್ತು ಬೇಂದ್ರೆಯವರ ಉಕ್ತಿಗಳನ್ನೇ ಗಮನಿಸಿದಾಗ ಅವರಿಬ್ಬರ ಸಾಧನೆ ನಡೆದಿದ್ದುದು ಪೌರ್ವಾತ್ಯ ಸರಣಿಯಲ್ಲಿಯೇ ಎಂಬುದು ಖಚಿತವಾಗುತ್ತದೆ. ಹಾಗಾದರೆ ಬೇಂದ್ರೆಯವರು ಹೇಳಿದಂತೆ ಅವರು ತುಳಿದ ಬೇರೆ ಹಾದಿಗಳಾವವು?

೨೦- 'ಆತ್ಮಸಂಶೋಧನೆ' ಮಧುರಚೆನ್ನ, ಪುಟ ೪೪.
೨೧. 'ಕಾವ್ಯೋದ್ಯೋಗ' (ಮನ್ವಂತರ ಸಂಪುಟ ೧-೧೯೬೨) ದ. ರಾ. ಬೇಂದ್ರೆ, ಪುಟ ೨೬.
೨೨. ಅದೇ (ಮನ್ವಂತರ ಸಂಪುಟ ೧-೧೯೬೨) ದ. ರಾ. ಬೇಂದ್ರೆ ಪುಟ ೨೮.

ಎಂಬ ಪ್ರಶ್ನೆ ಹಾಗೆಯೇ ಉಳಿದು ಬಿಡುತ್ತದೆ. ಸಿಂಪಿಯವರ ಇನ್ನೊಂದು ಹೇಳಿಕೆಯಲ್ಲಿ ಸೂಚಿತವಾದಂತೆ ಮಧುರಚೆನ್ನರು ಭಕ್ತಿಮಾರ್ಗದಲ್ಲಿಯೂ ಬೇಂದ್ರೆಯವರು ಜ್ಞಾನ ಮಾರ್ಗದಲ್ಲಿಯೂ ನಡೆದುಬಂದಂತೆ ತೋರುತ್ತದೆ. ಅವರಿಬ್ಬರ ಜೀವನ ಚರಿತ್ರಾತ್ಮಕ ಕೃತಿಗಳಿಂದಲೂ ಒಬ್ಬರಲ್ಲಿ ಭಕ್ತಿ, ಇನ್ನೊಬ್ಬರಲ್ಲಿ ಜ್ಞಾನ ವಿಶೇಷವಾಗಿರುವದನ್ನೂ ಕಾಣಬಹುದು.

ಈ ಇಬ್ಬರು ಕವಿ–ಸಾಧಕರು ಅವರವರ ಮಾರ್ಗ ಸುಲಭವಾಗಲು, ಸಾಧನೆಯು ನಿರ್ವಿಘ್ನವಾಗಿ ಸಾಗಲು, ಎಲ್ಲಕ್ಕೂ ಮಿಗಿಲಾಗಿ ಮನವು ಉನ್ಮನವಾಗಲು ಪರಸ್ಪರರನ್ನು ಹಾಡಿ ಹರಿಸಿದ್ದಾರೆ. ಮಧುರಚೆನ್ನರ ' ಮಂಗಲಸಪ್ತಕ ' ಬೇಂದ್ರೆಯವರ ' ಹರಕೆ ' ಇವು ಅಂಥ ಗೀತ ಮೌಕ್ತಿಕಗಳು. ಇಲ್ಲಿ ಅವರ ಹೃದಯದ ಪ್ರದೀಪ್ತ ಹಂಬಲವಿರುವದರ ಜೊತೆಗೆ ನಮ್ಮ ಅನುಭಾವ ಪರಂಪರೆಯ ಸಾರಭೂತ ಸಿದ್ಧಾಂತವಿರುವದನ್ನು ನಾವು ಕಾಣುವೆವು. ಕನ್ನಡ ಭಾವಗೀತ ಪ್ರಪಂಚದಲ್ಲಿಯೇ ಅಪರೂಪ ಕವಿತೆಗಳಿವು.

ಕಣ್ಣಲ್ಲಿ ಕಿಸುಕಿಚ್ಚು ಕಟ್ಟಿಹಾಕಿದ ನಮ್ಮ
ಕಾಲರುದ್ರನೆ ಇತ್ತ ಕಣ್ಣನಿಟ್ಟು,
ಅಣ್ಣ ದತ್ತನ ಬಗೆಯ ಬೇಗೆಯನು ತಣ್ಣಿಸೈ
ಬಾಲ ಭಕ್ತನ ಮೊರೆಗೆ ಕಿವಿಯಗೊಟ್ಟು.[೨೩]

ಹೀಗೆ ಪ್ರಾರಂಭವಾಗುವ ಮಧುರಚೆನ್ನರ ಮಂಗಲ ' ಸಪ್ತಕಂ ' ಭಕ್ತನ ಆರ್ತ ಹೃದಯದ ಪ್ರಾರ್ಥನಾಗೀತವಾಗಿದೆ. ಈ ಕಾಲರುದ್ರನ ನಂತರ ನಿತ್ಯ ನಿರ್ಮಲರೂಪ ಮಾರಹರನಲ್ಲಿ ಮಿತ್ರದತ್ತನ ಮನದ ಮೈಲಿಗೆ ಮಾಣಿಸಲು, ಶುದ್ಧಿಯನು ವರ್ಧಿಸಿದ ವರ್ಧಮಾನ ಪ್ರಭುವಿನಲ್ಲಿ ಮುದ್ದುದತ್ತನ ಬಗೆಯ ಬನದಲ್ಲಿ ಬೇಟೆಯಾಡಲು ಪ್ರಾರ್ಥಿಸಿದ್ದಾರೆ. ಹಾದಿಯಿಲ್ಲದೆ ಹರಿವ ಮರುಳು ಮನವನ್ನು ಬುದ್ಧಿಬಲದಿಂದ ಬದ್ಧಗೊಳಿಸಿದ ಬುದ್ಧದೇವನಲ್ಲಿಯೂ ಮೊರೆಯಿಟ್ಟಿದ್ದಾರೆ. ಅಣ್ಣದತ್ತನ ಮನದ ಮುಸುಕು ಸರಿಸಲು ಭೂತನಾಥನಲ್ಲಿ ಓತು ಬೇಡಿಕೊಂಡಿದ್ದಾರೆ. ದುರಿತ ಹಾರಿಣಿಯಾದ ನಿರ್ಜರ ತರಂಗಿಣಿಗೆ ಅಣ್ಣದತ್ತಾತ್ರಯನ ಮನವನ್ನು ಮಡಿಗೊಳಿಸಲು ಅಲ್ವರಿ ದಿದ್ದಾರೆ. ಕೊನೆಗೆ ಗುಹೇಶ್ವರನ ಗುಹೆಯ ಗುಹ್ಯವಚನ ನುಡಿವ ಅಲ್ಲಮಪ್ರಭು ದೇವನಲ್ಲಿ ಅಣ್ಣದತ್ತನ ಬಗೆಯ ಬಿಲದ ಬರ್ದಿಲವಲ್ಲಿ ಗುಹ್ಯಜ್ಯೋತಿ ಬೆಳಗಿಸಲು ಹೃತ್ಪೂರ್ವಕವಾಗಿ ಹಾರೈಸಿದ್ದಾರೆ.

ಬೇಂದ್ರೆಯವರ ' ಹರಕೆ ' ಇಪ್ಪತ್ತು ಸಂವತ್ಸರಗಳನ್ನು ಮುಗಿಸಿದ ಮಧುರಚೆನ್ನರ ಹುಟ್ಟುಹಬ್ಬಕ್ಕೆಂದು (೧೯೨೩) ಬರೆದ ಇಪ್ಪತ್ತು ನುಡಿಗಳುಳ್ಳ ಶುಭಮಂಗಲ ಗೀತ.

---

೨೩. 'ನನ್ನನಲ್ಲ' (ದ್ವಿತೀಯ ಮುದ್ರಣ-೧೯೫೫) ಮಧುರಚೆನ್ನ, ಪುಟ ೮೭.

ಎರೆಯುವೆನು ಬಾ ನಿನ್ನ, ನನ್ನ ಪಟ್ಟದ ಮರಿಯೆ
ಸಕಲ ತೀರ್ಥದ ಕ್ಷೀರ ನೀರ ತಂದು
ಬೆರಗಾಗಿ ಬೆರೆತು ಆ ಶಿವನಲ್ಲಿ, ದೇವನಲಿ
" ಪಡದಪ್ಪನಾಗು " ಎಂದು.[೨೪]

ಸಕಲ ತೀರ್ಥದ ಕ್ಷೀರ ನೀರಿಗಿರುವ ತಾತ್ತ್ವಿಕ ಹಿನ್ನೆಲೆ ಮತ್ತು ದಿವ್ಯಪರಿಣಾಮಗಳನ್ನು ಅನುಲಕ್ಷಿಸಿ 'ಪಡೆದಪ್ಪ'[೨೫] ನಾಗಲು ಬೇಂದ್ರೆಯವರು ಹರಸಿದ್ದಾರೆ. ಈ ಕ್ಷೀರ ನೀರಿನಲ್ಲಿ ನಿಃಸಂಗಳಾದ ಗುಪ್ತಗಂಗೆ ಶಾಲ್ಮಲೆಯ ನೀರು, ಹರಿಹರರ ಕಾಲ್ತೊಳೆವ ದಕ್ಷಿಣದ ಗಂಗೆ ತುಂಗಭದ್ರೆಯ ಪುಣ್ಯ ಜಲ, ನಮ್ಮ ತಾಯಿಯ ಸೆರಗಿನಂಚಾಗಿದ್ದ ಭವ್ಯಗೋದೆಯ ದಿವ್ಯ ಜಲ, ನಮ್ಮ ತಾಯಿಯ ದಿವ್ಯ ಶ್ರೀರಂಗಪಾದವ ತೊಳೆವ ಕಾವೇರಿಯ. ನೀರು, ವಿಠಲನ ಅಡಿಯನ್ನು ಬಿಟ್ಟು ಮುಟ್ಟುವ ನದಿಯ ನೀರು, ಘಟ್ಟ ಮಲೆಗಳ ಬಿಟ್ಟು ತಾರಕರ ಬಿರುದಿಟ್ಟು ಹರಿವ ನದಿಗಳ ಮಡಿಯ ನೀರು ಹಾಗೂ ಕರಿನಾಡ ಕನ್ಯೆ ಕೃಷ್ಣೆಯ ಕೂಡಲದ ನೀರು ಇದ್ದು, ಆ ಎಲ್ಲ ಪುಣ್ಯ ಜಲದಿಂದ ನಿಃಶಂಕ ನಾಗಲು, ಸಮರಸಿಯಾಗಲು, ಸೆರಗು ಬೆರಗಿಲ್ಲದ ಕಲಿಯಾಗಲು. ಶ್ರೀಪಾದರೇಣು ವಾಗಲು, ಭಕ್ತಿಯ ಮೆಟ್ಟಲು, ಕೊನೆಗೆ ಅರಿವಾಗಿ– ತಾನೆ ತಾನಾಗಿ– ಪಡೆದಪ್ಪನಾಗಲು ಹರಸಿದ್ದಾರೆ. ಅಷ್ಟಲ್ಲದೆ ಧನ್ಯ ತೀರ್ಥಂಕರರ ಪೂಜ್ಯಪಾದಗಳ ತೀರ್ಥತಂದು. ಕಲ್ಯಾಣದವೃಕ್ಷ ಪ್ರಭು ಅಲ್ಲಮನ ಗುರುಪಾದ ತೀರ್ಥತಂದು, ಉಡುಪಿಯೊಡೆಯನ ಅಡಿಯನುಡುಪು ಮಾಡುವ ಆನಂದತೀರ್ಥತಂದು, ದೇವಿಯೊಲಿದ ಮಾಧವನ ವಿದ್ಯಾ- ತೀರ್ಥ ತಂದು; ಕನ್ನಡದ ಕವಿತಿಲಕರ ಕಾವ್ಯಗಂಗಾಪ್ರವಾಹದಲ್ಲಿ ಮಿಂದೇಳಲು, ಶಿವಶರಣ ನಾಗಲು, ಪುರುಷೋತ್ತಮನ ದಾಸನಾಗಲು, ಸರ್ವಸನ್ಯಾಸಿಯಾಗಲು ಎರೆದಿದ್ದಾರೆ.

ಈ ನಾಡು ಅವನ ಹೊಲ! ಇದರಪೊಕ್ಕಲಿಗನವ
ನಾ ನೀನು ರಂಟೆ ಕುಂಟಿ.[೨೬]

ಎಂದು ಭಗವಂತನ ಉಪಕರಣ ಮಾತ್ರವಾದ ತಮ್ಮ ಇರುವಿಕೆಯನ್ನು ಮನದಟ್ಟು ಮಾಡಿಕೊಂಡು, ಜಗದ ಪಟ್ಟವನೇರಿ ಕುಳಿತು ಕರುನಾಡಿನಲ್ಲಿ ಕಾಲಿಟ್ಟ ಜಗದ್ಗುರುವಿನ (ಶ್ರೀ ಅರವಿಂದರ) ಅಡಿಯ ಹುಡಿಯಾಗಲು ಆತ್ಮನಿವೇದನೆ ಮಾಡಿಕೊಂಡಿದ್ದಾರೆ.

---

೨೪. 'ಸೂರ್ಯಪಾನ' (ಪ್ರಥಮ ಮುದ್ರಣ–೧೯೫೬) ಅಂಬಿಕಾತನಯದತ್ತ, ಪುಟ ೮೭.

೨೫. ಮಠಾಧಿಪತಿಗಳು ತಮ್ಮ ನಂತರ ಪಟ್ಟದ ಅಧಿಕಾರಿಯಾಗಲು ಶಿಷ್ಯರನ್ನು (ಮರಿಗಳನ್ನು) ಗೊತ್ತು ಮಾಡಿರುತ್ತಾರೆ. ಮುಂದೆ ಪಟ್ಟದಅಪ್ಪ ಆಗುವ ಇವರನ್ನು 'ಪಡದಪ್ಪ' ಎಂದು ಕರೆಯುವ ವಾಡಿಕೆಯಿದೆ. ಆತ್ಮ ಸಾಕ್ಷಾತ್ಕಾರ ಪಡೆದವರನ್ನು "ಪಡದಪ್ಪ" ಎನ್ನು ವುದೂ ಉಂಟು.

೨೬. 'ಸೂರ್ಯಪಾನ' (ಪ್ರಥಮ ಮುದ್ರಣ–೧೯೫೫) ಅಂಬಿಕಾತನಯದತ್ತ, ಪುಟ ೯೦.

‘ ಸೋಲು ’ ಹುಂಬರ ಗುಲ್ಲು, ‘ ಗೆಲುವು ’ ಕಾಙ್ಬರ ಸೊಲ್ಲು
ಸೋಲುವವ ತಾನೆಂದು ಶರಣನಲ್ಲ.[೨೭]

ಎಂದು ಶರಣತನದ ಸೋಲರಿಯದ ಎದೆಗಾರಿಕೆಯನ್ನೂ ತಿಳಿಸಿಕೊಟ್ಟಿದ್ದಾರೆ, ಅದ–ರೊಂದಿಗೆ ತಮ್ಮ ಕರ್ತವ್ಯವೇನೆಂಬುದನ್ನು ಹೇಳಿಬಿಟ್ಟಿದ್ದಾರೆ.

ಉಸುರು ಉಸುರಿಗೆ ಅವನ ಹೆಸರು ಸಾರುತ್ತಿರುವ
ಗಾಳಿಯುಂದದಿ ನಾವು ಚರಿಸಬೇಕು.
ಹೆಸರು ಹೆಸರಿಗೆ ಅವನ ಕುಸುರು ತೋರುವ ಹಾಗೆ
ಬೆಳಕನ್ನು ಸುರಿಸಬೇಕು.[೨೮]

ಬೇಂದ್ರೆಯವರ ಈ ‘ ಹರಕೆ ’ ಮಧುರಚೆನ್ನರ ಜೀವನದಲ್ಲಿ ಫಲಿಸಿತು. ಅವರು ಉಸುರು ಉಸುರಿಗೆ ಅವನ ಹೆಸರು ಸಾರಿ, ಬೆಳಕನ್ನು ಸುರಿಸಿ ಬೆಳಗಿನೊಳಗಣ ಬೆಳಗಾದರು.[೨೯]

ಸರಿಯಾಗಿ ಅರ್ಧ ಶತಮಾನ ಬಾಳಿದ ಮಧುರಚೆನ್ನರಿಗೆ ಸುಮಾರು ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಬೇಂದ್ರೆಯವರ ಒಡನಾಟ ಬಂದಿದೆ. ಗೆಳೆಯರಾಗಿ ಕೂಡಿದ ಅವರು ಅಣ್ಣ–ತಮ್ಮಂದಿರಾಗಿ ನಡೆದುಕೊಂಡಿದ್ದಾರೆ. ಪರಸ್ಪರರು ಬೇರೆ ಬೇರೆ ಊರುಗಳಲ್ಲಿರುತ್ತಿದ್ದರೂ ಮೇಲಿಂದ ಮೇಲೆ ಬೆರೆಯುತ್ತ ಬಂದಿದ್ದಾರೆ, ಅದು ಅವರ ಬಾಂಧವ್ಯದ ಸಹಜ ಜೀವನಕ್ರಮವೂ ಆಗಿದೆ. “ ಅಣ್ಣ ಬೇಂದ್ರೆಯವರ ಭೆಟ್ಟಿಗೆ ನನ್ನ ಪ್ರತಿ ವರ್ಷದ ಪದ್ಧತಿಯಂತೆ ಹೋಗಿದ್ದೆ. ಸುಮಾರು ಪ್ರತಿ ವರುಷವೂ ಅವರ ಸಹವಾಸದಲ್ಲಿರುವುದು ಆಗಿನ ನನ್ನ ಕ್ರಮ.”[೩೦] ಎಂದು ಮಧುರಚೆನ್ನರು ಹೇಳಿಕೊಂಡಿದ್ದರೆ “ ನಾನು ಪೂನಾದಲ್ಲಿದ್ದರೆ ಅಲ್ಲಿ ಬಂದ. ಸೊಲ್ಲಾಪುರಕ್ಕೆ ಬಂದ, ಧಾರವಾಡಕ್ಕೆ ಬಂದೇ ಬಂದ ”[೩೧] ಎಂದು ಬೇಂದ್ರೆಯವರು ಸ್ಮರಿಸಿಕೊಂಡಿದ್ದಾರೆ. ಅದರ ಜೊತೆಗೆ ಕೌಟುಂಬಿಕ ಬಾಂಧವ್ಯದ ಹೊಕ್ಕುಬಳಕೆಯನ್ನೂ ಬೇಂದ್ರೆಯವರು ಉಲ್ಲೇಖಿಸಿದ್ದಾರೆ. “ ನಾನು ಸೊಲ್ಲಾಪುರದಲ್ಲಿ ೧೯೪೪–೧೯೫೬ ವರೆಗೆ ಇದ್ದೆ. ಹನ್ನೆರಡು ಸಲವಾದರೂ ನಾನು ಹಲಸಂಗಿಗೆ ಹೋದೆ. ಚೆನ್ನಮಲ್ಲಪ್ಪ ಅವನ ಬಳಗದವರು, ಮಕ್ಕಳು. ಸೊಸೆಯುಂದಿರು, ಅವರ ಮನೆಯ ಜನ, ಮೊಮ್ಮಕ್ಕಳು–ಸೊಲ್ಲಾಪುರಕ್ಕೆ ಇಪ್ಪತ್ತು ಸಲ ತಂಗಿ

---

೨೭. ‘ ಸೂರ್ಯಪಾನ ’ (ಪ್ರಥಮ ಮುದ್ರಣ–೧೯೫೫) ಅಂಜಿಕಾತನಯುದತ್ತ, ಪುಟ ೯೦.
೨೮. ‘ ಸೂರ್ಯಪಾನ ’ (ಪ್ರಥಮ ಮುದ್ರಣ–೧೯೫೫) ಅಂಬಿಕಾತನಯುದತ್ತ, ಪುಟ ೯೦.
೨೯. ಮಧುರಚೆನ್ನರು ದೇಹವಿಟ್ಟುದು–೧೫ ನೆಯ ಅಗಷ್ಟ ೧೯೫೩.
೩೦. ‘ ಆತ್ಮಸಂಶೋಧನೆ ’ : ಮಧುರಚೆನ್ನ.........ಪುಟ ೩.
೩೧. ‘ ಬೆಳಕಿನ ಹೆಜ್ಜೆ ’ (ಹಲಸಂಗಿ ಅರವಿಂದ ಮಂಡಲದ ಬೆಳ್ಳಿ ಹಬ್ಬದ ನೆನಹಿನ ಹೊತ್ತಿಗೆ...—: ಪುಟ) ೧೯೦.

ನಿಂತು, ಬಂದರು ಹೋದರು. ಈ ನೆಯ್ಗೆ ನೆಯ್ದದ್ದು ದೈವಯೋಗ" ೩೨ ಎಂದು ಹೇಳಿ, ಈಗಲೂ ಆ ಸಂಬಂಧ ಹಾಗೆಯೇ ಮುಂದುವರೆದಿದ್ದುದನ್ನು ತಿಳಿಸಿದ್ದಾರೆ.

ಅವರ ಆ ದೈವಯೋಗ ನೆಯ್ದ ನೆಯ್ಗೆ ಬಾಳಬಟ್ಟೆಯು ಪರಮಾಗಮವಾಗಿದೆ. ಮಧುರಚೆನ್ನ ಮತ್ತು ಬೇಂದ್ರೆಯವರ ಸಹವಾಸದಲ್ಲಿ ಭಗವದುಪಾಸನೆಯು ನೆಲೆಯಿದ್ದು ಅವರ ಓದು ಪಾರಾಯಣವಾಗಿದೆ. ಅವರ ಸಂಗದ ವ್ಯಾಸಂಗ ಅನುಭಾವದ ಆಕಲನಕ್ಕೆ ದಾರಿ ಮಾಡಿಕೊಟ್ಟಿದೆ. ಇದಕ್ಕೊಂದು ನಿದರ್ಶನವನ್ನು ಕೊಡಬಹುದು.

ಆಯ್‌ರಿಶ್ ಕವಿ ಎ. ಈ. (ಜಾರ್ಜ ರಸೆಲ್) ಗೆಳೆಯರ ಗುಂಪಿನ ಒಬ್ಬ ಗುರು. ಆತನ ಕೃತಿಗಳ ವ್ಯಾಸಂಗವನ್ನು ಗೆಳೆಯರೆಲ್ಲ ಮಾಡಿದ್ದಾರೆ. ಎ. ಈ. ಅವರ 'ದರ್ಶನ ದೀಪಿಕೆ' (Candle of Vision) ಮೊದಲು ಪಡೆದವರು ಬೇಂದ್ರೆಯವರು. ಅನಂತರ ಗುಂಪಿನ ಗೆಳೆಯರಲ್ಲನೇಕರು ಅದನ್ನು ಓದಿ, ಅದರ ತಿರುಳನ್ನು ತಿಳಿಯಲು ಯತ್ನಿಸಿದರು. ಮಧುರಚೆನ್ನರು ಅದನ್ನು ಹೇಗೆ ಅಭ್ಯಸಿಸಿದರೆಂಬುದನ್ನು ಬೇಂದ್ರೆಯವರ ಮಾತಿನಲ್ಲಿಯೇ ನೋಡಬೇಕು. "ಅದನ್ನು ಅರಿದು ಕುಡಿದವ ಮಧುರಚೆನ್ನ. ೨೦-೨-೩೦; ೩೦-೭-೩೦ಕ್ಕೆ ಎರಡು ಪಾರಾಯಣ ಮುಗಿಸಿ; ಮತ್ತೆ ೧೬-೪-೩೫. ೧೩-೧೧-೩೫ಕ್ಕೆ ಎರಡು ಪಾರಾಯಣ ಮುಗಿಸಿದ ಉಲ್ಲೇಖ ಅವನ ಹಸ್ತಾಕ್ಷರದಲ್ಲಿಯೇ ಈ ನನ್ನ ಪ್ರತಿಯಲ್ಲಿದೆ. 'ಕಾಣದ ಕಂಪಿನ ಗೌರಿಯನು। ಕಾಣುವ ಕಣ್ ನಮಗಿಲ್ಲೇನು ? !'—ಮಧುರಚೆನ್ನ (ಚೆನ್ನಮಲ್ಲಪ್ಪ ಗಲಗಲಿ, ಹಲಸಂಗಿ). ಎ. ಈ. ಅವರ ಜನ್ಮ ತಾರೀಖನ್ನೂ ಆ ಕಾಲದ ಗ್ರಹಗಳನ್ನೂ ಸಂಗ್ರಹಿಸಿ Candle of Visionದ ಹಿಂಬದಿಗೆ ಬರೆದಿದ್ದಾರೆ" ೩೩ ಹೀಗೆ ಅವರ ಕೂಲಂಕಷ ವ್ಯಾಸಂಗದ ರೀತಿಯಾಗಿತ್ತು. Candle of Visionದ ಪಾರಾಯಣದ ಫಲಶ್ರುತಿಯನ್ನು ಹೇಳುತ್ತ ಮಧುರಚೆನ್ನರು "ಎ. ಈ ಅವರ ದರ್ಶನ ದೀಪಿಕೆ ಅಥವಾ ಕ್ಯಾಂಡಲ್ ಆಫ್ ವಿಜನ್ ಎಂಬ ಪುಸ್ತಕ ಓದುವದರಿಂದ ಅಂತರ್ಮಾನಸ ಸಾಮ್ರಾಜ್ಯದ ಅಸ್ತಿತ್ವವು ಬುದ್ಧಿಗ್ರಾಹ್ಯವಾಯಿತು" ೩೪ ಎಂದಿದ್ದಾರೆ.

ಹೀಗೆ ಅವರು ವ್ಯಾಸಂಗದಿಂದ ತಮ್ಮ ಅಂತರಂಗದ ವಿಕಾಸವನ್ನು ಕಂಡುಕೊಂಡರು. ಅದರ ಜೊತೆಗೆ ತಮ್ಮ ಆತ್ಮೀಯತೆಯು ಶ್ರದ್ಧೆಯನ್ನು ಅವರು ಸೂರೆಗೊಳಿಸಿದ್ದುಂಟು. ಶ್ರೀ ಗೋಕಾಕರು ಎ. ಈ. ಅವರ "ಕಲೆಕ್ಟೆಡ್ ಪೊಯಮ್ಸ್" ಪ್ರತಿಯಲ್ಲಿ ತಮ್ಮ ಅಭ್ಯಾಸದಿಂದ ಕಂಡುಕೊಂಡ :

---

೩೨. 'ಬೆಳಕಿನ ಹೆಜ್ಜೆ' (ಹಲಸಂಗಿ ಅರವಿಂದಮಂಡಲದ ಬೆಳ್ಳಿಹಬ್ಬದ ನೆನಹಿನ ಹೊತ್ತಿಗೆ ೧೯೬೮) ಪುಟ ೧೮೯.

೩೩. 'ಕಾವ್ಯೋದ್ಯೋಗ' (ಮನ್ವಂತರ ಸಂಪುಟ ೧-೧೯೬೨) ದ. ರಾ. ಬೇಂದ್ರೆ, ಪುಟ ೬೬.

೩೪. 'ಪೂರ್ವರಂಗ'—ಮಧುರಚೆನ್ನ, ಪುಟ-೭೫.

A. E. the Seer

D. R. ,,

ಎಂಬ ಶ್ರದ್ಧೆಯ ಸಮೀಕರಣ ಸೂತ್ರವನ್ನು ಬರೆದಿಟ್ಟಿದ್ದಾರೆ. ಈ ಸಂದರ್ಭದಲ್ಲಿ ನಡೆದ ಇನ್ನೊಂದು ಸ್ನೇಹದ ಸೊಗಸಾದ ವಿಷಯವನ್ನು ಬೇಂದ್ರೆಯವರು ಪ್ರಕಟಗೊಳಿಸಿದ್ದಾರೆ. ಗೋಕಾಕರಿಗೆ ಆ ಕೃತಿಯನ್ನು ಕಾಣಿಕೆ ಕೊಡುತ್ತ Ma Said to Da (Ma = ಮಾಸ್ತರ = ಬೇಂದ್ರೆಯವರು Da = ದಾದಾ = ಗೋಕಾಕರು) ಎಂದು ಹೇಳುತ್ತಿರುವದನ್ನು ಬರೆದಿಟ್ಟುಕೊಂಡ ಮಧುರಚೆನ್ನರು Che is a branch by himself (Che = ಚೆನ್ನಮಲ್ಲಪ್ಪ = ಮಧುರಚೆನ್ನ) ಎಂದು ಮುಂದಿನ ಕೊಂಡಿ ಜೋಡಿಸಿದ್ದಾರೆ. ಹೀಗೆ ಅವರ ಸಖ್ಯದ ಆಖ್ಯಾನವಿದೆ.

ಮಧುರ ಚೆನ್ನರ ಆಧ್ಯಾತ್ಮಿಕ ಆತ್ಮಚರಿತ್ರೆಯ ಕೊನೆಯ ಭಾಗ 'ಆತ್ಮಸಂಶೋಧನೆ' ಅವರ ಪ್ರಥಮ ಪುಣ್ಯತಿಥಿಯಂದು (೧೫–೮–೧೯೫೪) ಪ್ರಕಟವಾಯಿತು. ಅದರ ಮುನ್ನುಡಿಯ ಮುಕ್ತಾಯದಲ್ಲಿ ಬಹಳ ದಿನಗಳ ಹಿಂದೆಯೇ (ಫಾ. ಶು. ೮, ರಕ್ತಾಕ್ಷಿ–೧೮೪೬ ಪುಣೆ) ಬರೆದ ಬೇಂದ್ರೆಯವರ ಗೀತವೊಂದಿದೆ :

ಮಾತಾಡೋ ಮಾತಾಡೊ ಲಿಂಗವೇ ನೀ |
ಮಾತಾಡಲೊಲ್ಲೇಕೊ ಲಿಂಗವೆ
ಮಾತಿನ ತಾಯಾದ ಮೌನದ ಬಸುರಲಿ
ಹೂತೆಯಾ ಹೇ ಚೆನ್ನಲಿಂಗವೇ ||[೩೫]

ಹೀಗೆ ಪ್ರಾರಂಭವಾಗುವ ಈ ಗೀತದಲ್ಲಿ ಪರೆಯ ಮರೆಯಲ್ಲಿರುವ ಲಿಂಗವು ಪರೆಯುಚ್ಚಿ ಬರುವ ದಿನಕ್ಕಾಗಿ ನಿರೀಕ್ಷಿಸುವ, ಆಳ ತಿಳಿಯದ ಬಾಳಿನಲ್ಲಿ ಆಳುವ ಆ ದೇವಿಯ ಕುರುಹವನ್ನು ಕಂಡರಿಸುವ ಅನುಭಾವದ ಒಪ್ಪವಿದೆ. ಬೆಡಗಿನ ವಚನದಂತಿರುವ ಈ ಕವಿತೆ ರಚನೆಯಾದದ್ದು ಮೌನಲೀನ ಮಧುರಚೆನ್ನರನ್ನು ಮಾತಾಡಿಸಲೆಂದು.[೩೬] ಈ

---

೩೫. 'ಆತ್ಮಸಂಶೋಧನೆ' (ಮುನ್ನುಡಿ) ಮಧುರಚೆನ್ನ, ಪುಟ ೫ ಮತ್ತು

,, 'ಸೂರ್ಯಪಾನ' (ಪ್ರಥಮ ಮುದ್ರಣ-೧೯೫೬) ಅಂಬಿಕಾತನಯದತ್ತ, ಪುಟ ೮೧.

೩೬. ಹಲಸಂಗಿಯ ಅರವಿಂದ ಮಂಡಳದ ೧೯೬೪ರಲ್ಲಿ ನಡೆದ ವಾರ್ಷಿಕೋತ್ಸವಕ್ಕೆ ಆಗಮಿಸಿದ ಪೂಜ್ಯ ಬೇಂದ್ರೆಯವರು—ಮಧುರಚೆನ್ನರ ಚಿರಂಜೀವ ಯೋಗೀಶನು ಈ ಗೀತವನ್ನು ಹಾಡಿದಾಗ—ಅದರ ಸಂದರ್ಭ ನೆನೆದುಕೊಂಡು "ನಾನು ಪುಣೆಯಲ್ಲಿದ್ದೆ. ಚೆನ್ನಮಲ್ಲಪ್ಪನಿಂದ ಬಹಳ ದಿನಗಳಿಂದ ಕಾಗದ ಬರಲಿಲ್ಲ. ಏಕೆ ಈ ಮೌನ ? ಎಂದು ಚಿಂತಿಸಿ ಈ ಕವಿತೆ ಬರೆದೆ" ಎಂದು ಹೇಳಿದ್ದುದು ನನಗೆ ನೆನಪಿದೆ.

ಸಂದರ್ಭವನ್ನು ನೆನೆದರೆ ಅವರದು ಎಂಥ ಸ್ನೇಹ ! ಎಂಥ ಸ್ನೇಹ ವಿರಹ !! ಎಂದು ನಾವು ಬೆರಗು ಪಡುವೆವು.

ಮಧುರಚೆನ್ನರು ದೈಹಿಕವಾಗಿ ಇಂದಿಲ್ಲವಾದರೂ ಅವರ ಆತ್ಮ ತೇಜಸ್ಸು ಅವರ ಸಾಹಿತ್ಯ ಕೃತಿಗಳ ಮೂಲಕ ಅಮರವಾಗಿ ಇದೆ. ಬೇಂದ್ರೆಯವರ ಮಟ್ಟಿಗಂತೂ ಅವರು ಮೊದಲಿದ್ದಂತೆಯೇ ಇದ್ದಾರೆ. "ನನ್ನ ಮಟ್ಟಿಗೆ ಆ ಜೀವ ಇದೆ. ನನ್ನ ಜೀವನದಲ್ಲಿ ಎಡಬಲಕ್ಕೂ, ಹಿಂದೆ ಮುಂದೆಯೂ, ಮೇಲು ಕೆಳಗೂ ನಿಂತುಕೊಂಡು 'ಅಣ್ಣಾ' ಎಂದು ಸಂಬೋಧಿಸಿ, ಅಂದು ಎಚ್ಚರಿಸಿದಂತೆ ಇಂದೂ ಎಚ್ಚರಿಸುತ್ತಲಿದೆ"[೩೭] ಎಂಬ ಬೇಂದ್ರೆಯವರ ಕರುಳಿನ ನುಡಿಯಲ್ಲಿ ಅವರ ಬಾಂಧವ್ಯದ ಅಮರ ಬೆಸುಗೆಯನ್ನು ಕಾಣಬಹುದು.

ಹೀಗಿರುವ ಮಧುರಚೆನ್ನ, ಬೇಂದ್ರೆಯವರು ತಮ್ಮ ಗೆಳೆತನದ ಅನುಭವವನ್ನು ಆಯಾ ಸಂದರ್ಭದಲ್ಲಿ ರಸಪಾಕಗೊಳಿಸಿ ಕವಿತೆಗಳಲ್ಲಿ ಎರಕಹೊಯ್ದಿಟ್ಟುದು ನಮ್ಮ ಭಾಗ್ಯವೆಂದೇ ಹೇಳಬೇಕು. ಈ ಕವಿತೆಗಳ ರಸಾನುಸಂಧಾನದಿಂದ ಸಾಮಾನ್ಯ ಸ್ನೇಹ ಜೀವಿಗಳಿಗೆ ಗೆಳೆತನದ ಶುಚಿ-ರುಚಿಯ ಪರಿಜ್ಞಾನವಾಗುವುದು. ಸಾಧಕ ಸ್ನೇಹಿತರಿಗೆ ಅವರ ಸಾಧನ ಪಥದಲ್ಲಿ ಹೊಸ ಬೆಳಕು ತೋರುವುದು.

★ ಗುರುಲಿಂಗ ಕಾಪಸೆ

---

೩೭. 'ಆತ್ಮಸಂಶೋಧನೆ' (ಮುನ್ನುಡಿ) ಮಧುರಚೆನ್ನ, ಪುಟ ೪.

ಮಕ್ಕಳ ವ್ಯಕ್ತಿತ್ವರಚನೆಯಲ್ಲಿ ಈ ಗಂಡಾಂತರಗಳು !

ಪೀಠಿಕೆ

ತೋಟದಲ್ಲಿ ಹೂಗಿಡಗಳನ್ನು, ಬಳ್ಳಿಗಳನ್ನು ನೆಟ್ಟ ನಾವು ಕಕ್ಕುಲತೆಯಿಂದ ಅವುಗಳನ್ನು ಪೋಷಿಸಿ ಬೆಳೆಸುತ್ತೇವೆ; ಮನೆಯ ಅಂದಚಂದಗಳನ್ನು ಹೆಚ್ಚಿಸಿಕೊಳ್ಳುತ್ತೇವೆ. ಅದರಂತೆ ಮನೆಯ ಸೌಂದರ್ಯವನ್ನು ಹೆಚ್ಚಿಸುವ, ಮನೆತನಕ್ಕೆ ಕೀರ್ತಿ-ಗೌರವಗಳನ್ನು ತರುವ ಮಕ್ಕಳನ್ನು ಉತ್ತಮ ನಾಗರಿಕರಾಗುವಂತೆ ಬೆಳೆಸುವುದೂ ಮಹತ್ವದ್ದಾಗಿದೆ. ಮಕ್ಕಳು ಚಿಕ್ಕವರಿರುವಾಗ ತಂದೆ-ತಾಯಿಯರಿಂದ ಬಯಸುವುದು— ಅಪಾರ ಪ್ರೀತಿಯನ್ನು, ಅನನ್ಯ ವಾತ್ಸಲ್ಯವನ್ನು, ಅಭಯಯುಕ್ತ ಸಂರಕ್ಷಣೆಯನ್ನು. ಅವರು ತೃಪ್ತಿ ಪಡುವುದು ಈ ಪ್ರೀತಿ ವಾತ್ಸಲ್ಯಗಳ ಸ್ವೀಕರಣೆಯಿಂದ. ಇದು ಅವರ ಉಚ್ಚ ಬಯಕೆಯೂ ಹೌದು, ಅವಶ್ಯಕತೆಯೂ ಹೌದು. ಮನುಷ್ಯಸ್ವಭಾವಕ್ಕೇನೇ ಇದು ಗಾಢವಾದ ಸಂಬಂಧವನ್ನು ಹೊಂದಿದೆ. ಮಾನವನು ಇನ್ನೊಬ್ಬ ಮಾನವನೊಂದಿಗೆ ಅತ್ಯಂತ ಕಳಕಳಿಯ ಸಂಪರ್ಕ, ಸ್ನೇಹ, ಒಡನಾಟಗಳನ್ನು ಬಯಸುವುದು ಅವನ ನಿರ್ಮಾಣದಲ್ಲಿಯೇ ಅಡಕವಾದ ಒಂದು ಮಹತ್ವದ ದೈವೀ ಕೊಡುಗೆ. ಒಬ್ಬರು ಇನ್ನೊಬ್ಬರೊಡನೆ ಹಿತಸಂಬಂಧಗಳನ್ನಿರಿಸಿಕೊಂಡಿರಬೇಕೆನ್ನುವ ಈ ಅಭೀಪ್ಸೆ ನಮ್ಮ ಜೀವನದಾದ್ಯಂತವೂ ಓತಪ್ರೋತವಾಗಿ ಹರಿಯಬೇಕಾದ ಪ್ರೀತಿ-ವಾತ್ಸಲ್ಯಗಳ ಮಹಾನದಿ. ಈ ಆಸರೆಗಳಿಲ್ಲದ ಬರಡು ಮನೆಗಳಲ್ಲಿ ಬೆಳೆದ ಮಕ್ಕಳು ನಂತರದ ತಮ್ಮ ಜೀವನದಲ್ಲಿ ಪ್ರೀತಿಯನ್ನು ವ್ಯಕ್ತಪಡಿಸಲು, ಸ್ವೀಕರಿಸಲು ಅಸಮರ್ಥರಾಗಬಹುದಾದ ಗಂಡಾಂತರಗಳನ್ನು ನಾವು ಬಹುಶಃ ಕಾಣುತ್ತೇವೆ. ಇಂತಹ ಮಕ್ಕಳು ತಮ್ಮ ಪ್ರೌಢಾವಸ್ಥೆಯಲ್ಲಿ ' ನಾಯಕ ' ರಾಗಲಾರರು. ಅವರು ಸಮಾಜದಲ್ಲಿ ' ಖಳನಾಯಕ 'ರಾಗಿ ಬೆಳೆದು ತಮಗೂ ಗಂಡಾಂತರ ತಂದುಕೊಳ್ಳುವುದಲ್ಲದೆ, ಬೇರೆಯವರನ್ನೂ ಅದರಲ್ಲಿ ನೂಕಬಹುದು. ಇಂತಹ ಮಕ್ಕಳು ಬೆಳೆದು ದೊಡ್ಡವರಾದಾಗ ಸ್ವಾರ್ಥಿಗಳಾಗಬಹುದು; ಬೇರೆಯವರಿಂದ ದೂರವಿರಲು ಪ್ರಯತ್ನಿಸಬಹುದು; ಏಕಾಂಗಿಗಳಾಗಬಹುದು;'ಇಂಥವರ ಜೀವನ ನಿರಾಶೆಯನ್ನೇ ಕೇಂದ್ರವ್ಯವಸ್ಥೆಯನ್ನಾಗಿರಿಸಿಕೊಂಡಿರುತ್ತದೆ.

ಈ ಸಂದರ್ಭದಲ್ಲಿ ಅಮೇರಿಕೆಯಲ್ಲಿ* ನಡೆದ ಒಂದು ಘಟನೆಯನ್ನು ಗಮನಿಸುವುದು ಸೂಕ್ತವಾಗಿದೆ :

---

* James, C. Coleman—Abnormal Psychology and Modern Life; D. B. Taraporwala Sons & Co. 1969, B'bay, Pages 103.

ಸುಮಾರು ೧೭ ವರ್ಷಗಳ ಒಬ್ಬ ಹುಡುಗಿಯನ್ನು ಆಕೆಯ ತಾಯಿ ಓರ್ವ ಮಾನಸಿಕ ರೋಗತಜ್ಞರ ಹತ್ತಿರ ಕರೆದೊಯ್ದು ಆಕೆಯ ನಡೆವಳಿಕೆಯಲ್ಲಿಯ ಅಸಂಬದ್ಧತೆಯನ್ನೂ ಅರಚನಾತ್ಮಕ ಸ್ವಭಾವವನ್ನೂ ದೂರಿಕೊಂಡಳು. ತಜ್ಞರು ಆ ಹುಡುಗಿಯ ಹಿಂದಿನ ಕರಾಳ ಐತಿಹ್ಯವನ್ನು ಅಭ್ಯಾಸಮಾಡಿ ಬಹು ವಿಚಿತ್ರ ಸಂಗತಿಗಳನ್ನು ಹೊರಗೆಡಹಿದರು. ಅವಳು ನಾಲ್ಕು ವರ್ಷದವಳಿರುವಾಗ ಮನೆಯಲ್ಲಿ ಆಕೆಯ ತಂದೆ-ತಾಯಿಯರು ಒಂದೇ ಸವನೆ ಜಗಳ ಕಾಯುತಿದ್ದರಂತೆ! ಪ್ರತಿಕ್ಷಣವೂ ಆ ಸಣ್ಣ ಕೂಸಿಗೆ ಈ ಜೀವನ ಅಸ್ಥಿರವೆನಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಅವಳು ಕೆಲವು ವಿಕೃತ ನಡೆವಳಿಕೆಗಳನ್ನೂ ತನ್ನಲ್ಲಿ ಬೆಳೆಸಿಕೊಂಡಳು: ಉಗುರು ಕಡಿಯುವುದು; ಶೀಘ್ರಕೋಪ ಸ್ವಭಾವ; ಹಾಸಿಗೆಯಲ್ಲಿ ಮೂತ್ರ ಮಾಡುವುದು; ಇತ್ಯಾದಿ. ಇನ್ನೂ ಅನೇಕ ಮಾನಸಿಕ ಭ್ರಾಂತಿ ಒತ್ತಡಗಳಿಗೆ ಸಿಲುಕಿದಳು. ಆಕೆ ಏಳು ವರ್ಷದವಳಾದಾಗ ಅವಳ ತಂದೆ-ತಾಯಿಯರು ತಮ್ಮ ದಾಂಪತ್ಯ ಜೀವನವನ್ನು ಪೂರ್ಣವಾಗಿ ಸಿಥಿಸಿದರು; ಮನೆಯಲ್ಲಿ ಒಡಕಾಯಿತು. ಮಗು ತಂದೆಯನ್ನು ಹೊಂದಿಕೊಂಡಿತ್ತು. ತಾಯಿಗೆ ಇದು ಬೇಡವಾಗಿತ್ತು. ಮಗಳ ಇಚ್ಛೆಗೆ ವಿರುದ್ಧವಾಗಿ ಬಲಾತ್ಕಾರದಿಂದ ತಾಯಿ ಮಗಳನ್ನು ತನ್ನ ಹತ್ತಿರ ಇರಿಸಿಕೊಂಡಳು. ನಂತರದಲ್ಲಿ ಈ ಹುಡುಗಿ ಶಾಲೆಯಲ್ಲಿಯೂ ಮನೆಯಲ್ಲಿಯೂ ಒಂದು ಸಮಸ್ಯೆಯಾದಳು........

ಈ ಹಿನ್ನೆಲೆಯಲ್ಲಿ ಮಕ್ಕಳು ತಮ್ಮ ವ್ಯಥೆಯನ್ನು, ವ್ಯಾಕುಲತೆಯನ್ನು ಪ್ರಕಟಿಸುವ ಕೆಲವು ನಡೆವಳಿಕೆಗಳನ್ನು ಇಲ್ಲಿ ವಿಶ್ಲೇಷಿಸಬಹುದಾಗಿದೆ.

ಗುಕ್ಕುವುದು

ಕೆಲವು ಮಕ್ಕಳು ಮಾತನಾಡುವಾಗ ಗುಕ್ಕುತ್ತಾರೆ. ಈ ರೀತಿಯ ಗುಕ್ಕುವಿಕೆ ಮಾತನಾಡುವಾಗ ಕೆಲವು ಅಕ್ಷರಗಳನ್ನು ನಿಂತು ನಿಂತು ಉಚ್ಚರಿಸುವುದರಿಂದ ಪ್ರಕಟವಾಗುತ್ತದೆ. ನ್ನ-ನ್ನ-ನ್ನ ನಾನು ಮ-ಮ-ಮ- ಮನೆಗೆ ಹೊ-ಹೊ-ಹೊ ಹೋಗುತ್ತೇನೆ............... ಇಂತಹ ಸಂದರ್ಭಗಳಲ್ಲಿ ಶಬ್ದಗಳ ಪ್ರಥಮ ಅಕ್ಷರಗಳನ್ನು ಉಚ್ಚರಿಸಲು ಮಕ್ಕಳು ಕಷ್ಟಪಡುವುದುಂಟು. ಇದುವೇ ರೂಢಿಯಾಗಿ ಅವರು ಮಾತನಾಡುವ ಪದ್ಧತಿಯೇ ಗುಕ್ಕುವುದರಲ್ಲಿ ಪರ್ಯವಸಾನ ಹೊಂದುತ್ತದೆ. ಈ ನಡೆವಳಿಕೆಯು ಒಂದು ಸಂದರ್ಭದಿಂದ ಮತ್ತೊಂದು ಸಂದರ್ಭಕ್ಕೆ ಬದಲಾಗುತ್ತ ಹೋಗುವುದುಂಟು. ಆಶ್ಚರ್ಯದ ಸಂಗತಿಯೆಂದರೆ, ಮಕ್ಕಳು ತಾವು ಏಕಾಂಗಿಗಳಾಗಿರುವಾಗ ಸ್ವಲ್ಪೇ ಗುಕ್ಕಬಹುದು; ಇಲ್ಲವೆ ಗುಕ್ಕುವುದನ್ನೇ ಮಾಡಲಿಕ್ಕಿಲ್ಲ. ತಮಗಿಂತ ಚಿಕ್ಕವರೆದುರು ಅವರು ಗುಕ್ಕುವದಿಲ್ಲ. ಆದರೆ, ತಾವು ಇನ್ನೊಬ್ಬರಿಗಿಂತ ಕೀಳರೆಂದು

ತಿಳಿದ ಸಂದರ್ಭದಲ್ಲಿ ಅವರ ಗುಕ್ಕು ವಿಕೆ ಹೆಚ್ಚುವುದು ಕಂಡುಬರುತ್ತದೆ. ಇದಕ್ಕೆ ಅನೇಕ ಕಾರಣಗಳನ್ನು ಕೊಡುವುದುಂಟು. ಅದು ಆನುವಂಶಿಕತೆ ಇರಬಹುದು; ಅದು ಮಾನಸಿಕವೂ ಆಗಿರಬಹುದು. ಇಂತಹ ನಡವಳಿಕೆಗೆ ಪರಿಹಾರವೆಂದರೆ, ತ್ರಸ್ತಮಗುವಿಗೆ ಸಮಾಧಾನತರುವಂತಹ ವಾತಾವರಣವನ್ನು ನಿರ್ಮಿಸುವುದು. ಮಗು ತನ್ನ ಮನೆಯಲ್ಲಿ, ತನ್ನವರ ಸನ್ನಿಧಿಯಲ್ಲಿ ಹೆಚ್ಚು ಸಂರಕ್ಷಿತವೆನ್ನಿಸಿಕೊಳ್ಳಬೇಕು. ಅದು ತನ್ನಲ್ಲಿ ಆತ್ಮ ವಿಶ್ವಾಸವನ್ನು ಕುದುರಿಸಿಕೊಳ್ಳಬೇಕು. ಇಂತಹ ಮಗುವು ಪ್ರೀತಿಗಾಗಿ ಪರಿತಪಿಸುತ್ತಿರುವಾಗ, ಅಂತಃಕರಣಪೂರ್ವಕವಾಗಿ ಅದನ್ನು ಪ್ರೀತಿಸುವುದು ಮಹತ್ವದ ಪರಿಹಾರೋಪಾಯವಾಗಿದೆ. ಅದರಂತೆ, ಅದು ಮಾಡುವ ಪ್ರಯತ್ನಗಳಿಗೆ ತಂದೆ-ತಾಯಿಗಳು ಹೃತ್ಪೂರ್ವಕ ಸಹಾಯ-ಸಹಕಾರ ತೋರಿಸುವುದು ಅವಶ್ಯವಾದದ್ದು.

ಉಗುರು ಕಡಿಯುವುದು

ಪಂಡಿತರ ಅಭಿಪ್ರಾಯದಂತೆ, ಸುಮಾರು ಐದರಲ್ಲಿ ಒಂದು ಪಾಲು ಚಿಕ್ಕ ಮಕ್ಕಳು ಉಗುರು ಕಡಿಯುವ ಚಟವನ್ನು ಬೆಳಿಸಿಕೊಂಡಿರುತ್ತಾರೆ. ಈ ನಡೆವಳಿಕೆ ಬಾಲ್ಯದಲ್ಲಿ ಪ್ರಾರಂಭವಾಗಿ, ಕೊಡಗೂಸಿನ ವಯಸ್ಸಿನಲ್ಲಿ ಹೆಚ್ಚಿ ನಂತರದಲ್ಲಿ ಕಡಿಮೆಯಾದ ಉದಾಹರಣೆಗಳಿವೆ. ಇಂತಹ ಚಟಕ್ಕೆ ಎಷ್ಟೋ ಕಾರಣಗಳನ್ನು ಕೊಡಬಹುದು. ಅವುಗಳಲ್ಲಿ ಕೆಲವು ಪ್ರಮುಖವಾದವುಗಳು :

೧) ಯಾವುದೋ ಸೇಡನ್ನು ಉದಾತ್ತೀಕರಿಸುವಿಕೆ ೨) ಮನಸ್ಸಿನಲ್ಲಿ ನಡೆಯುತ್ತಿರುವ ಯಾವುದೋ ವಿಚಾರಕ್ಕೆ ಚಾಲನೆಕೊಡುವಿಕೆ ೩) ತನ್ನ ಮನಸ್ಸಿಗೆ ಬಾರದ ವಿಚಾರಗಳನ್ನು ವಿರೋಧಿಸುವಿಕೆ ೪) ಹೆಚ್ಚಾದ ಶಕ್ತಿಯನ್ನು ಹೊರಗೆಡಹುವಿಕೆ.

ಇಂತಹ ನಡೆವಳಿಕೆಯನ್ನು ಸುಧಾರಿಸಲು ಮಕ್ಕಳನ್ನು ಹೀಯಾಳಿಸುವುದರಿಂದಾಗಲಿ, ಗದರಿಸುವದರಿಂದಾಗಲಿ, ಶಿಕ್ಷಿಸುವುದರಿಂದಾಗಲಿ, ಸಾಧ್ಯವಾಗಲಾರದು. ಅದನ್ನು ಸಹನೆ, ಕರುಣೆ, ಅನುಕಂಪಗಳಿಂದ ನಿಧಾನವಾಗಿ ಪರಿಹರಿಸಬೇಕು. ಅಲ್ಲಿಯೂ ಕೂಡ ತಂದೆ-ತಾಯಿಯರ ಪ್ರೀತಿ, ವಾತ್ಸಲ್ಯಗಳು ಮಹತ್ವದ ಪಾತ್ರವನ್ನಾಡುತ್ತವೆ. ಈ ಸೂಚನೆಯನ್ನು ಅವರು ತೀವ್ರ ಗುರುತಿಸಿದಷ್ಟು ಪರಿಹಾರ ತೀವ್ರ ಒದಗಿಬರುತ್ತದೆ.

ಶಾರೀರಿಕ ಸಂಜ್ಞೆಗಳು

ಇನ್ನೊಂದು ನಡೆವಳಿಕೆ,—ಅಷ್ಟೊಂದು ಗಮನಕ್ಕೆ ಬಾರದ ವಿಷಯ—ಮಕ್ಕಳು ಮಾಡುವ ಶಾರೀರಿಕ ಸಂಜ್ಞೆಗಳು. ಕಣ್ಣು ಹಾರಿಸುವುದು, ಹುಬ್ಬು

ಹಾರಿಸುವುದು, ಭುಜ ಹಾರಿಸುವುದು, ಗೋಣು ಕೊಂಕಿಸುವುದು, ಕೆಮ್ಮಿ ಗಂಟಲು ಸರಿಮಾಡಿಕೊಳ್ಳುವ ನಟನೆ ಮಾಡುವುದು, ತುಟಿಗಳನ್ನು ಆಗಾಗ ನೆಕ್ಕಿಕೊಳ್ಳುವುದು, ಮುಂತಾದುವು ಮಕ್ಕಳಿಗೆ ರೂಢಿಯಾಗುವ ಸಂಭವವುಂಟು. ಚಿಕ್ಕವರಿರುವಾಗ ಬರುವ ಈ ದುಶ್ಚಟಗಳು ಅವರ ಶರೀರಕ್ಕೆ ಭದ್ರವಾಗಿ ಅಂಟಿಕೊಂಡು ಕೊನೆಯುವರೆಗೂ ಉಳಿಯುವ ಗಂಡಾಂತರವಿದೆ ಇಂತಹ ನಡೆವಳಿಕೆ ಬರುವುದಕ್ಕೆ ಅನೇಕ ಕಾರಣಗಳಿರಬಹುದು. ಮತ್ತೊಬ್ಬರನ್ನು ಅಣಗಿಸಲು ಪ್ರಯತ್ನಿಸಿ ತಾವೇ ಆ ಚಟಕ್ಕೆ ತುತ್ತಾಗಿರಬಹುದು. ಇನ್ನೊಬ್ಬರೆದುರಿಗೆ—ನಾಚಿಕೊಂಡಾಗ ಆತ್ಮವಿಶ್ವಾಸದ ಅಭಾವದಿಂದಲೂ ಅದು ಬರಬಹುದು. ಇದಕ್ಕೆ ಪರಿಹಾರವೆಂದರೆ, ಮಕ್ಕಳು ಆತ್ಮವಿಶ್ವಾಸ ಹೊಂದುವಂತೆ ಹಿರಿಯರು ಅವರಿಗೆ ಯೋಗ್ಯ ವಾತಾವರಣವನ್ನು ಕಲ್ಪಿಸಬೇಕು. ಆತ್ಮವಿಶ್ವಾಸದ ಅಭಾವವೇ ಈ ಚಟಕ್ಕೆ ಕಾರಣ.

ಹಾಸಿಗೆ ತೋಯಿಸುವುದು

ಮಕ್ಕಳು ಸುಮಾರು ಮೂರು ವರ್ಷಗಳವರೆಗೆ ಹಾಸಿಗೆಯಲ್ಲಿಯೇ ಮೂತ್ರ ಮಾಡುವುದು ಸ್ವಾಭಾವಿಕ. ಆದರೆ ನಂತರದಲ್ಲಿಯೂ ಈ ಮೂತ್ರ ವಿಸರ್ಜನೆ ಮುಂದುವರಿದಿದ್ದಾದರೆ ಅಲ್ಲಿ ಏನೋ ತಪ್ಪಿದೆಯೆಂದೇ ತಿಳಿದುಕೊಳ್ಳಬೇಕು. ನಿದ್ರಾವಸ್ಥೆಯಲ್ಲಿ ಮಕ್ಕಳಿಗೆ ತಿಳಿಯದೇ ಮೂತ್ರ ಹೋಗುತ್ತದೆ. ಈ ಸ್ಥಿತಿಗೆ ಕಾರಣಗಳು ಅನೇಕವಿರಬಹುದು. ಮಗುವು ತನ್ನ ಅಸಹಾಯಸ್ಥಿತಿಯನ್ನು ವ್ಯಕ್ತಪಡಿಸಲು ಈ ರೀತಿ ಮಾಡಬಹುದು. ತಂದೆ-ತಾಯಿಯರ ಪ್ರೀತಿಯನ್ನು ಬಯಸಿ ಆ ರೀತಿ ಮಾಡಬಹುದು ಅವರ ಬಗ್ಗೆ, ಇಲ್ಲವೇ ತನ್ನ ಒಡಹುಟ್ಟಿದವರ ಬಗ್ಗೆ ಅಸೂಯೆಯನ್ನು ಪ್ರಕಟಿಸಲು ಈ ರೀತಿ ಮಾಡಬಹುದು. ಈ ದಿಸೆಯಲ್ಲಿ ನಮ್ಮ ನೆರೆಮನೆಯ ಹುಡುಗನ ಉದಾಹರಣೆಯನ್ನು ನಾವು ಇಲ್ಲಿ ಉದಾಹರಿಸಬಹುದು. ಅವನನ್ನು ರಾಜು ಎಂದು ಕರೆಯೋಣ. ರಾಜು ನಮ್ಮ ನೆರೆಹೊರೆಯ ಹುಡುಗ. ಅವನು ನಾಲ್ಕು ವರುಷಗಳ ವರೆಗೆ ಚನ್ನಾಗಿಯೇ ಇದ್ದ. ನಂತರ ಮನೆಯಲ್ಲಿ ಮತ್ತೊಂದು ಕೂಸು ಬಂತು; ಅವನ ತಂಗಿ. ಈ ಕೂಸಿನ ಜನನದ ನಂತರ ಅವನಲ್ಲಿ ಬಹಳ ಬದಲಾವಣೆ ಕಂಡುಬಂದವು. ಅವನು ಹಾಸಿಗೆಯನ್ನು ಪ್ರತಿದಿನವೂ ತೋಯಿಸಲಾರಂಭಿಸಿದ

ಹಿಂದೆ ಅಚ್ಚುಮೆಚ್ಚಿನವನಾಗಿದ್ದ ಈತ ಈಗ ಎಲ್ಲರಿಗೂ ಬೇಜಾರು ತಂದ. ಎಲ್ಲರೂ ಹಳಿಯುವವರೇ! ಅವನು ನಮ್ಮ ಮನೆಯಲ್ಲಿಯ ಒಬ್ಬಿಬ್ಬರನ್ನು ಬಹಳ ಹಚ್ಚಿಕೊಂಡಿದ್ದ. ನಾವು ಅವನನ್ನು ಪ್ರೀತಿಸಿ, ವಾತ್ಸಲ್ಯದಿಂದ ಮಾತನಾಡಿಸಿ, ಅವನೊಡನೆ ಆಟ ಆಡಿ, ನಮ್ಮ ಸಂಗಡ ಊಟಮಾಡಿಸಿ ಮನೆಗೆ ಕಳಿಸಿದ ದಿನ ಅವನು ಮೂತ್ರ ಮಾಡುತ್ತಿರಲಿಲ್ಲ. ಈ ಪ್ರಯೋಗವನ್ನು ನಾವು

ನಾಲ್ಕಾರು ತಿಂಗಳ ಮಾಡಿದ ನಂತರದಲ್ಲಿ ಈ ಸತ್ಯ ಪ್ರಕಟವಾಯಿತು. ಎಂದೋ ಒಂದು ದಿನ ಅವನು ತಪ್ಪುಮಾಡಿದಾಗ, ಬಾಲವಾಡಿಗೆ ಹೋಗಲು ವಿರೋಧಿಸಿದಾಗ, ಮನೆಯುವರು ಗದರಿಸಿದಾಗ, ಬಡಿದಾಗ, ಆ ದಿನ ರಾತ್ರಿ ಅವನು ಮೂತ್ರ ಮಾಡುತ್ತಿದ್ದ. ಮರುದಿನ ನಾವು ಅವನನ್ನು "ಹೀಗೇಕೆ ಮಾಡಿದೆ" ಎಂದು ಕೇಳಿದರೆ ಅವನ ಉತ್ತರ ಬಹಳ ಮನೋವೇದಕವಾಗಿ, "ನಾನು ಹೋಯ್ದಿಲ್ಲ; ನಿನ್ನೆ ಮಳೆ ಬಂದು ನನ್ನ ಚಡ್ಡಿ ತೊಯ್ದಿದೆ." ಇನ್ನೊಂದು ಸಾರೆ "ತಂಗಿ ತೊಯ್ಸಿದ್ದಾಳೆ" ಎಂದು ಗೊಣಗುಟ್ಟಿದ್ದ. ಈ ದಿಸೆಯಲ್ಲಿ ತಂದೆ ತಾಯಿಯುವರ ವಾತ್ಸಲ್ಯದ ಪಾತ್ರ ಎಂತಹದೆಂಬುದು ಅರಿವಾಗುತ್ತದೆ.

ಎಡಗೈತನ :

ಇನ್ನೊಂದು ಅಷ್ಟೇ ಗಮನಿಸಬೇಕಾದ ನಡುವಳಿಕೆಯೆಂದರೆ, ಎಡಗೈತನ, ಮಕ್ಕಳು ಚಿಕ್ಕವರಿರುವಾಗ ಬಲಗೈಯಿಂದ ಮಾಡುವ ಕೆಲಸಗಳನ್ನೆಲ್ಲ ಎಡ ಗೈಯಿಂದ ಮಾಡುವದುಂಟು. ಎರಡೂ ಕೈಗಳೂ ಅಷ್ಟೇ ಶಕ್ತಿವಂತವಾಗಿ ರುವಾಗ ಎಡಗೈಯಿಂದ ಏನೆಲ್ಲ ಕೆಲಸ ಮಾಡುವ ಈ ವಿಚಿತ್ರ ಸ್ವಭಾ ವವನ್ನು ಕಂಡು ಬಹಳ ಜನರಿಗೆ ಅಚ್ಚರಿಯಾಗಿರಬಹುದು. ಆದರೆ ಅದಕ್ಕೆ ಬಹು ಹಿನ್ನೆಲೆಯಿದೆ. ಈ ಬಗೆಯ ನಡೆವಳಿಕೆಯ ಅರ್ಥ ನಮಗೆ ಮೊದ ಮೊದಲು ತಿಳಿಯದಿರಬಹುದು. ಚಿಕ್ಕವರಿರುವಾಗ ಅಳವಡಿಸಿಕೊಂಡ ಈ ಚಟ ಮುಂದೆ ರೂಢಿಯಾಗಿ ಮುಪ್ಪಿನವರೆಗೂ ಮುಂದುವರಿಯಬಹುದು. ಈ ರೂಢಿಯನ್ನು ತಪ್ಪಿಸಿಕೊಳ್ಳದಂತಾಗಬಹುದು. ಇದಕ್ಕೆ ಎಷ್ಟೋ ಕಾರಣ ಗಳಿದ್ದರೂ, ಒಂದು ಕಾರಣ ಮಾತ್ರ ಅತ್ಯಂತ ಮಹತ್ವದ್ದು, ನಮ್ಮ ಮನೆಯ ಸಮೀಪ ಒಂದು ಮಧ್ಯಮವರ್ಗದ ಕುಟುಂಬ ವಾಸಿಸುತ್ತದೆ, ಈ ದಂಪತಿಗಳಿಗೆ ಹೆಣ್ಣುಮಕ್ಕಳೇ ಹೆಚ್ಚು. ನಾಲ್ಕು ಹೆಣ್ಣುಮಕ್ಕಳಾದ ಮೇಲೆ ಒಂದು ಗಂಡಾಯಿತು.

ಎಲ್ಲರಿಗೂ ವೈಭವವೇ ವೈಭವ. ಮಗ ರಾಜಕುಮಾರನಂತೆ ಬೆಳೆದ. ಮುಂದಿನ ವರ್ಷಕ್ಕೆ ಮನೆಗೆ ಮತ್ತೊಂದು ಕೂಸು ಬಂತು. ಈ ಕೂಸು ಬಂದಾಗಿನಿಂದ ಅವನ ವೃತ್ತಿಯೇ ಬೇರೆಯಾಯಿತು. "ಈ ಕೂಸು ಎಲ್ಲಿಂದ ಬಂತು ?" ಎಂದು ಅವನು ಎಲ್ಲರನ್ನೂ ಕೇಳಿಬ "ಅಸ್ಪತ್ರೆಯಿಂದ ತಂದಿದ್ದೇವೆ" ಎಂದು ಎಲ್ಲರೂ ಹೇಳಿದರು. "ನಿಮ್ಮ ಆಸ್ಪತ್ರೆಗೆ ಹೋಗು, ಇಲ್ಲಿ ಇರಬೇಡ" ಎಂದು ಅವನು ಆ ಕೂಸನ್ನು ದಿನಾಲು ಕೇಳುತ್ತಿದ್ದ. ಎಲ್ಲರಿಗೂ ಇದು ನಗೆ ಯಾಯಿತೇ ಹೊರತು ಆ ಮಗುವಿನ ಯಾತನೆಯನ್ನು ಯಾರೂ ವಿಚಾರಿಸಲಿಲ್ಲ. ಕೊನೆಗೆ ಯಾವುದೂ ಬಗೆಹರಿಯಲಿಲ್ಲ. ನಂತರ ಈ ಹುಡುಗ ಎಡಗೈತನ ಪ್ರಾರಂಭಿಸಿದ.

ಮಕ್ಕಳ ಮನಸ್ಸು ಹಾಲಿನಂತೆ ಪರಿಶುದ್ಧವಾದುದು. ಈ ಹಸುಳೆಗಳನ್ನು ಯಾವ ರೀತಿ ಸಂರಕ್ಷಿಸಿ, ಪೋಷಿಸಿ, ಪ್ರೌಢರನ್ನಾಗಿ ಮಾಡಬೇಕೆನ್ನುವುದನ್ನು ತಂದೆ–ತಾಯಿಗಳಾದವರು ತುಸುಮಟ್ಟಿಗೆ ತಿಳಿದಿರಬೇಕು. ಅಸಹನೆಯಿಂದ ಪ್ರಕಟವಾಗುವ ಮಕ್ಕಳ ಪ್ರತಿರೋಧದ ಸಂಜ್ಞೆಗಳನ್ನು ಇವರು ತೀವ್ರ ತಿಳಿದು ಕೊಂಡಷ್ಟು ಉಭಯತರಿಗೂ ಕ್ಷೇಮ. ಮುಂದೆ ಘಟಿಸಬಹುದಾದ ಗಂಡಾಂತರ ಗಳನ್ನು ಈ ಮುಂಧೋರಣೆಗಳಿಂದ ತಪ್ಪಿಸುವದು ಸಾಧ್ಯವಾಗಬಹುದಾಗಿದೆ. ಮಕ್ಕಳು ತಮ್ಮ ಅಸಹಾಯಸ್ಥಿತಿಯನ್ನು, ದುಃಖವನ್ನು, ಪ್ರತಿರೋಧವನ್ನು, ದುಗುಡ–ದುಮ್ಮಾನಗಳನ್ನು ವಿವಿಧ ರೀತಿಯಲ್ಲಿ ಪ್ರಕಟಿಸುತ್ತವೆ. ಇವುಗಳನ್ನು ಶೀಘ್ರರೀತಿಯಲ್ಲಿ ಕಂಡು ಅವುಗಳಿಗೆ ತಕ್ಕ ಪರಿಹಾರಗಳನ್ನು ಒದಗಿಸಬೇಕು. ಇಂತಹ ಮುಂಧೋರಣೆ ಅವರ ಆರೋಗ್ಯಕಾರಕ ಬೆಳವಣಿಗೆಯ ದೃಷ್ಟಿಯಿಂದ ಅತಿ ಮಹತ್ವವಾದದ್ದು !

★ ವ್ಹಿ. ಜಿ. ಮಾರಿಹಾಳ

ಪ್ರಾಚೀನ ಭಾರತದಲ್ಲಿ ಭೂವಿಜ್ಞಾನ

ಉತ್ತಮೋತ್ತಮ ಪ್ರಾಚೀನ ನಾಗರಿಕತೆ ಮತ್ತು ಉಜ್ವಲ ಗತವೈಭವಗಳಿದ್ದೂ ಸಹ ಅವನ್ನು ಎಳ್ಳಷ್ಟೂ ನೆನಸಿಕೊಳ್ಳದೆ ಪಾಡುಪಡುತ್ತಿರುವ ದೇಶಗಳಲ್ಲಿ ಇಂಡಿಯಾ ಅಗ್ರಮಾನ್ಯವೆನ್ನಬಹುದು. ಈಗ ಕೇವಲ ಪಾಶ್ಚಾತ್ಯ ಪ್ರಭೃತಿಗಳಿಗೇ ಮೀಸಲೆನಿಸಿದ ಅನೇಕ ವೈಜ್ಞಾನಿಕ ಸಂಗತಿಗಳು ಭಾರತದಲ್ಲಿ ಎಂದೋ ಆಗಿಹೋದವು. ಇಂದಿನ ಪೀಳಿಗೆಗೆ ಅವುಗಳ ನೆನಪು ಸಹ ಬಾರದಷ್ಟು ದುಃಸ್ಥಿತಿ ನಮ್ಮದಾಗಿದೆ.

ನಮ್ಮ ಪೂರ್ವಜರ ವೈಜ್ಞಾನಿಕ ಹಿರಿಮೆಗೆ ಸ್ಮಾರಕವಾಗಿ ಹಲವಾರು ಮೈಲುಗಲ್ಲುಗಳಿವೆ. ಕ್ರಿ. ಶ. ೩೮೦ರಲ್ಲಿ ನಿರ್ಮಿತವಾದ ದೆಹಲಿಯ ಕುತುಬ್ ಮಿನಾರ್ ಬಳಿ ಇರುವ ಉಕ್ಕಿನಕಂಬ ನೂರಾರು ವರ್ಷಗಳಿಂದ ಸತತವಾಗಿ ಬಿಸಿಲು, ಗಾಳಿ, ಮಳೆ—ಇವುಗಳ ಹಾವಳಿಗೆ ಒಳಗಾದರೂ ಸ್ವಲ್ಪಮಟ್ಟಿಗಾದರೂ ತುಕ್ಕುಹಿಡಿಯದೆ ತನ್ನ ಹೊಳಪನ್ನು ಇಂದಿಗೂ ಸೂಸುತ್ತ ತನ್ನ ನಿರ್ಮಾಪಕನಾದ ಭಾರತೀಯ ಲೋಹವಿಜ್ಞಾನಿಗೆ, ಅವನ ಅತ್ಯುತ್ತಮ ಹಾಗೂ ಸಾಟಿಯಿಲ್ಲದ ವೈಜ್ಞಾನಿಕ ಕುಶಲತೆಗೆ ಚಿರಸ್ಮಾರಕವಾಗಿದೆ. ಇಂಥದೇ ಮತ್ತೊಂದು ಅಪೂರ್ವ ಸಾಧನೆ ಬಿಹಾರಿನ ನಲಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಂಗೊಳಿಸುತ್ತಿದ್ದ ಬುದ್ಧದೇವನ ಎಂಬತ್ತು ಅಡಿ ಎತ್ತರದ ತಾಮ್ರದ ಭವ್ಯ ಪ್ರತಿಮೆ. ಇದನ್ನು ಎರಕಹೊಯ್ದು ನಿರ್ಮಿಸಲಾಗಿತ್ತು. ಲೋಹವಿದ್ಯೆಯಲ್ಲಿ ನಮ್ಮ ಪ್ರಾಚೀನರ ಪರಿಣತಿಗೆ ಇವಕ್ಕಿಂತಲೂ ಬೇರೆ ನಿದರ್ಶನಗಳು ಬೇಕೆ? ಈ ಬಗೆಯ ತಾಂತ್ರಿಕ ಸಾಧನೆಗಳು ಹಲವಾರು ವರ್ಷಗಳ ಹಿಂದೆ ಯೂರೋಪಿನಲ್ಲಿ ಕೇವಲ ಕನಸಿನ ಮಾತಾಗಿತ್ತು ಎಂಬುದನ್ನು ಇಂದಿನ ಪೀಳಿಗೆ ಮರೆಯಬಾರದು. ಹೀಗೆಯೇ ಗಣಿಯ ಕೆಲಸದಲ್ಲಿ ಭಾರತೀಯರಿಗಿದ್ದ ಪ್ರಜ್ಞೆಗೆ ಸಾಕ್ಷಿಯಾಗಿ ರಾಜಸ್ತಾನ ಮೇವಾಡದ ಸತುವು ಮತ್ತು ಸೀಸದ ಗಣಿಗಳನ್ನು ಹೆಸರಿಸಬಹುದು. ಅಲ್ಲಿಯ ಪ್ರಾಚೀನರ ಗಣಿಕೆಲಸದ ಕುಶಲತೆಯನ್ನು ಮೆಚ್ಚದ ಭೂವಿಜ್ಞಾನಿ ಅಪರೂಪ.

ದುರದೃಷ್ಟವಶಾತ್ ನಮ್ಮ ಹಿರಿಯರ ಭೂ, ಖನಿ ಮತ್ತು ಲೋಹ ವಿಜ್ಞಾನದ ಚಟುವಟಿಕೆಗಳನ್ನು, ಸಾಧನೆಗಳನ್ನು ಕುರಿತ ಉಲ್ಲೇಖಗಳೇ ಅಪರೂಪ. ಆದರೆ ಹಲವಾರು ದಶಕಗಳ ಹಿಂದೆ ಪ್ರಾಚ್ಯ ಸಂಶೋಧನಾ ಪರಿಣತರು ನಡೆಸಿದ ಅಧ್ಯಯನಗಳು ಈ ದಿಸೆಯಲ್ಲಿ ಹೆಚ್ಚಿನ ಬೆಳಕನ್ನು ಬೀರಿವೆ. ಶ್ರೀಯುತ ಹೊಫ್ರಾತ್, ಬ್ಯೂಹ್ಲರ್, ವಿಂಟರ್‌ನಿಟ್ಸ್, ಜಾಕೋಬಿ ಮತ್ತು ಎಲಿಫಿನ್‌ಸ್ಟನ್ ಮೊದಲಾದ ಪಾಶ್ಚಿಮಾತ್ಯ ವಿದ್ವಾಂಸರನ್ನೂ, ನಮ್ಮ ದೇಶದ ಶ್ರೀಯುತ ಬ್ಯಾನರ್ಜಿ, ಶ್ಯಾಮಾಶಾಸ್ತ್ರಿ, ನಾಗ್, ಬಾಗ್ಚಿ, ಮುಜುಂದಾರ್, ಭಂಡಾರ್‌ಕರ್

ಮುಂತಾದ ಸಂಶೋಧಕರನ್ನೂ ಇದಕ್ಕಾಗಿ ಕೃತಜ್ಞತೆಯಿಂದ ಸ್ಮರಿಸಬೇಕು. ಕಿಟ್ಟುಕಟ್ಟಿ ಮಂಕಾಗಿದ್ದ ನಮ್ಮ ಸ್ಮರಣ ದೀವಿಗೆಯನ್ನು ತಮ್ಮ ಅಪೂರ್ವ ಸಂಶೋಧನೆಗಳಿಂದ ತಿಕ್ಕಿ ಅದರ ಉಜ್ವಲಿಸುವ ಹೊಳಹನ್ನು ತಕ್ಕ ಮಟ್ಟಿಗೆ ಬೆಳಗಿಸಿದ್ದಾರೆ ಈ ಮಹಾನುಭಾವರು. ಆ ಮೂಲಕ ನಮ್ಮ ಪ್ರಾಚೀನರ ವೈಜ್ಞಾನಿಕ ಪ್ರತಿಭೆಯನ್ನು ಸಾಕಷ್ಟು ಪರಿಚಯಿಸಿ ಮಹದೋಪಕಾರ ಮಾಡಿದ್ದಾರೆ.

ನಿಜವಾದ ದೇಶಭಕ್ತಿ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ತಳೆಯಲು ತನ್ನ ದೇಶದ ಅಥವಾ ರಾಷ್ಟ್ರದ ಗತ ಹಿರಿಮೆಯನ್ನು (ಇತಿಹಾಸದ ಅಂಶಗಳಿಂದ ಪುಷ್ಟೀಕೃತವಾದ) ಪ್ರತಿ ರಾಷ್ಟ್ರೀಯನೂ ಅರಿಯಲೇಬೇಕು, ಅಭ್ಯಾಸ ಮಾಡಲೇಬೇಕು. ಹೀಗಾದಲ್ಲಿ ಮಾತ್ರ ದೇಶಭಕ್ತಿ ಪರಿಪೂರ್ಣವೆನಿಸೀತು.

ಭಾರತೀಯರಲ್ಲಿ ಮತಕ್ಕೆ ಎಂದಿನಿಂದಲೂ ಪ್ರಾಧಾನ್ಯತೆ. ಈ ಕಾರಣ ವಿಜ್ಞಾನ ಮತ ಧರ್ಮದೊಡನೆ ಮಿಳಿತಗೊಂಡು ತನ್ನದೇ ಆದ ಪ್ರತ್ಯೇಕತೆಯಿಂದ ಮೆರೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ನಮ್ಮ ಅನೇಕ ವಿಜ್ಞಾನ ಶಾಸ್ತ್ರ ಗ್ರಂಥಗಳಿಗೂ ಹೆಸರಿನ ಮಟ್ಟಿಗಾದರೂ ಮತದ ನಂಟು ಅಂಟಿ, ನಮ್ಮ ರಾಷ್ಟ್ರದ ಇತಿಹಾಸದಲ್ಲಿ ವಿಜ್ಞಾನಕ್ಕಿಂತ ಮತಕ್ಕೇ ಹೆಚ್ಚಿನ ಪ್ರಾಶಸ್ತ್ಯ ಒದಗಿತೆಂದು ಊಹಿಸಿದಲ್ಲಿ ತಪ್ಪಾಗಲಾರದು. ಸಾಮಾನ್ಯವಾಗಿ ಶಾಸ್ತ್ರ, ವೇದ ಮುಂತಾದ ಪದಗಳು ಮತೀಯ ಗ್ರಂಥಗಳಿಗೇ ಮೀಸಲು. ಆದರೆ ನಮ್ಮ ದೇಶದಲ್ಲಿ ವಿಜ್ಞಾನ ಭಾಗಗಳೂ ಈ ಅಂಕಿತದಿಂದಲೇ ಬೆಳಕು ಕಂಡವು. ಉದಾ :— ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ ಇತ್ಯಾದಿ. ಪ್ರಸಕ್ತ ಪರಿಸ್ಥಿತಿಯಲ್ಲಿ ನಮ್ಮ ಪ್ರಾಚೀನ ಕಾಲದ ವಿಜ್ಞಾನದ ಬೆಳವಣಿಗೆಯನ್ನು ಅರಿಯಲು ಸಂಸ್ಕೃತ ಮೂಲ ಗ್ರಂಥಗಳು ಇಲ್ಲವಾದ ಕಾರಣ ಅವುಗಳ ಟಿಬೆಟ್ ಭಾಷಾಂತರ ಪಾಠಗಳನ್ನೇ ಮರೆಹೊಗಬೇಕು. ಪ್ರಾಚೀನಕಾಲದಲ್ಲಿ ಅಲ್ಲಿಗೆ ವಲಸೆ ಹೋದ ಭಾರತೀಯ ವಿದ್ವಾಂಸರು ಈ ಪಾಠಗಳನ್ನು ರಚಿಸಿದ್ದಾರೆ. ಹೀಗೆ ಟಿಬೆಟ್ಟಿಗೆ ಸಾಹಿತ್ಯ ಮತ್ತು ಧರ್ಮ ನಮ್ಮ ಕೊಡುಗೆಯಾಗಿದೆ.

ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಖನಿಜಶಾಸ್ತ್ರ, ಗಣಿ (ಖನಿ) ವಿಜ್ಞಾನ, ಮತ್ತು ಲೋಹ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಉಲ್ಲೇಖಗಳಿವೆ. ಕೌಟಿಲ್ಯನು ತನ್ನ ಗ್ರಂಥವೊಂದರಲ್ಲಿ ಮೂವತ್ತೈದು ಮುಖ್ಯ ಶಾಖೆಗಳನ್ನೂ ಮತ್ತು ಹಲವಾರು ಉಪಶಾಖೆಗಳನ್ನೂ ನಮೂದಿಸಿದ್ದಾನೆ. ಇವುಗಳಲ್ಲಿ ಏಳು ಶಾಖೆಗಳು ಖನಿಜ, ಗಣಿ ಮತ್ತು ಲೋಹವಿಜ್ಞಾನಕ್ಕೆ ಸಂಬಂಧಪಟ್ಟಿವೆ. ಉದಾ :—

೧. ಆಕರಾಧ್ಯಕ್ಷ— ಗಣಿಯ ಲೋಹಶಾಖೆಯ ಮುಖ್ಯಸ್ಥ. ಇವನ ಮೇಲ್ವಿಚಾರಣೆಯಲ್ಲಿ ಚಿನ್ನ ಮತ್ತು ಬೆಳ್ಳಿ ಇವನ್ನು ಹೊರತು ಇತರ ಲೋಹಗಳ ಸಾಮಾನುಗಳ ತಯಾರಿಕೆ ನಡೆಯುತ್ತಿತ್ತು.

೨. ಖನ್ಯಾಧ್ಯಕ್ಷ— ಗಣಿಯ ಮುಖ್ಯಸ್ಥ.

೩. ಲೋಹಾಧ್ಯಕ್ಷ-ಲೋಹಶಾಖೆಯ ಮೇಲ್ವಿಚಾರಕ.

೪. ಸುವರ್ಣಾಧ್ಯಕ್ಷ—ಚಿನ್ನವೇ ಮೊದಲಾದ ಅಮೂಲ್ಯ ಲೋಹಗಳ ಶಾಖೆಯ ಮುಖ್ಯಸ್ಥ.

೫. ಲವಣಾಧ್ಯಕ್ಷ—ಲವಣ ಖನಿಜಗಳ ಮುಖ್ಯಾಧಿಕಾರಿ.

೬. ರೂಪದರ್ಶಕ-ರತ್ನಪರೀಕ್ಷಕ.

೭. ಸುವರ್ಣಿಕ— ಚಿನ್ನಪರೀಕ್ಷಕ.

ಚಾಣಿಕ್ಯನ ಅರ್ಥಶಾಸ್ತ್ರ (ಡಾ|| ಶಾಮಾಶಾಸ್ತ್ರಿಗಳಿಂದ ಸಂಪಾದಿತವಾದ) ದಲ್ಲಿ ಭೂ ವಿಜ್ಞಾನಕ್ಕೆ ಸಂಬಂಧಿಸಿದ ಕುಶಲ ಕೆಲಸಗಾರರನ್ನು ಕುರಿತ ಈ ಉಲ್ಲೇಖವಿದೆ :

' ಹೊಸ ಗಣಿಗಳನ್ನಾಗಲೀ, ಉತ್ತಮ ರತ್ನ ನಿಕ್ಷೇಪಗಳನ್ನಾಗಲೀ ಅಥವಾ ಗುಪ್ತ ನಿಧಿಯನ್ನಾಗಲೀ ರಾಜನಿಗೆ ತಿಳಿಸಿದವನಿಗೆ ಅದರ ಮೌಲ್ಯದ ಆರನೆ ಒಂದು ಭಾಗ ಸಂದಾಯವಾಗಬೇಕು. ಹೀಗೆ ತಿಳಿಸಿದವನು ರಾಜನ ನೌಕರ ವರ್ಗದವನಾಗಿದ್ದಲ್ಲಿ ಆಗ ಅವನಿಗೆ ನಿಕ್ಷೇಪದ ಮೌಲ್ಯದಲ್ಲಿ ಹನ್ನೆರಡನೆ ಒಂದು ಪಾಲು ಮಾತ್ರ ಸಲ್ಲಬೇಕು. '

ವೇದಪೂರ್ವ ಕಾಲದ ಖನಿಜ ವಿಜ್ಞಾನ :

ಆರ್ಯರು ಭಾರತಕ್ಕೆ ವಲಸೆ ಬರುವ ಮುನ್ನ ಇಡೀ ಉತ್ತರ ಭಾರತದಲ್ಲಿ ದ್ರಾವಿಡರು ನೆಲಸಿದ್ದರು. ಅವರಿಗೂ ಒಂದು ವಿಶಿಷ್ಟವಾದ ಭಾಷೆ ಮತ್ತು ಸಂಸ್ಕೃತಿ ಇದ್ದಿತೆನ್ನುವುದು ನಿರ್ವಿವಾದ ಸಂಗತಿ. ಇವರ ನಾಗರಿಕತೆಯೂ ಉತ್ತಮ ದರ್ಜೆಯದಾಗಿದ್ದು ಅವರಿಗೆ ಲೋಹಗಳ ಬಳಕೆ ಚೆನ್ನಾಗಿ ತಿಳಿದಿದ್ದಿತೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಇಂದಿಗೂ ಉತ್ತರ ಭಾರತದ ಗಣಿಯ ಕೆಲಸಗಾರರು-ಕೋಲರು, ಭಿಲ್ಲರು, ಗೊಂಡಾಗಳು ಮತ್ತು ಹಿಮಾಲಯದ ಗಿರಿಜನರು. ಇವರೆಲ್ಲರೂ ದ್ರಾವಿಡ ಬುಡಕಟ್ಟಿಗೆ ಸೇರಿದವರೇ. ಹೀಗೆಯೇ ಬಿಹಾರಿನ ಕೋಡರ್ಮ ಪ್ರದೇಶದ ಅಭ್ರಕದ ಗಣಿಗಳ ಲವಾಣರು ಮತ್ತು ಕಬ್ಬಿಣದ ಅದಿರನ್ನು ಒಪ್ಪಮಾಡುವ ಲೋಹವಿದ್ಯೆಯಲ್ಲಿ ನಿಷ್ಣಾತರಾದ ಮುಂಡಿ ಪ್ರಾಂತದ ಲೋಹರ್‌ಗಳು ಸಹ ದ್ರಾವಿಡವಂಶಜರು

ಒರಿಸ್ಸಾದ ಕೊನಾರಕ್‌ನ ಭವ್ಯ ದೇವಾಲಯದಲ್ಲಿ ಕಂಡುಬರುವ ಕಬ್ಬಿಣದ ದೊಡ್ಡ ದೊಡ್ಡ ತೊಲೆಗಳನ್ನು ನಿರ್ಮಿಸಿದವರೂ ದ್ರಾವಿಡ ವಂಶದವರೆ. ಈ ಜನರೇ ಬಿಹಾರಿನ ಸಿಂಘ್‌ಭೂಮ ಜಿಲ್ಲೆಯಲ್ಲೂ, ರಾಜಸ್ತಾನದ ಜಾವರ್‌ಗಣಿಗಳಲ್ಲೂ ನೆಲಮಟ್ಟದಿಂದ ೨೫೦ ಅಡಿ ಆಳದವರೆಗೆ ಗಣಿ ಕೆಲಸವನ್ನು ಮಾಡು

ತ್ತಿದ್ದರೆಂಬುದನ್ನು ಇಲ್ಲಿ ನಮೂದಿಸಬಹುದು. ದಕ್ಷಿಣದಲ್ಲಿ ಕರ್ಣಾಟಕದ ಹಟ್ಟಿ ಚಿನ್ನದ ಗಣಿಯಲ್ಲಿ ೬೪೦ ಅಡಿಗಳಿಗೂ ಹೆಚ್ಚಿನ ಆಳದಲ್ಲಿ ಬಹು ಪುರಾತನ ಕಾಲದಲ್ಲಿ ಗಣಿ ಕೆಲಸ ನಡೆದ ಅನೇಕ ದಾಖಲೆಗಳಿವೆ.

ವೇದಪೂರ್ವಕಾಲದ ಸಿಂಧೂ ಕಣಿವೆಗೆ (ಕ್ರಿ.ಪೂ. ೫೦೦೦-೬೦೦೦) ಸಂಬಂಧಿಸಿದ ನಾಗರಿಕತೆಯಲ್ಲಿ ಜನರಿಗೆ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಸತು, ಕಂಚು, ಸೀಸ ಮತ್ತು ರತ್ನಗಳ ಬಳಕೆ ಚೆನ್ನಾಗಿ ತಿಳಿದಿತ್ತೆಂದು ಮೊಹೆಂಜದಾರೊ ಮತ್ತು ಹರಪ್ಪ ಸಂಶೋಧನೆಗಳ ಮೂಲಕ ವ್ಯಕ್ತವಾಗಿದೆ.

ವೇದಯುಗದ ಖನಿಜ ವಿಜ್ಞಾನ :

ಭಾರತದಲ್ಲಿ ಲೋಹಖನಿಜಗಳ ಗಣಿ ಉದ್ಯಮದ ಇತಿಹಾಸ ಬಹು ಪುರಾತನವಾದುದು. ಈ ಯುಗದಲ್ಲಿ ರಚಿತವಾದ ವೇದಗಳಲ್ಲಿ ಖನಿಜಗಳು, ಲೋಹಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭೂವಿಜ್ಞಾನ, ಗಣಿವಿಜ್ಞಾನ ಮತ್ತು ಲೋಹವಿಜ್ಞಾನದ ಅನೇಕ ಅಂಶಗಳ ಉಲ್ಲೇಖವಿದೆ. ಕಂಚು, ಕಬ್ಬಿಣ, ತಾಮ್ರ, ಚಿನ್ನ, ಸೀಸ ಮತ್ತು ಸತು ಇವುಗಳ ಬಳಕೆಯು ಪ್ರಸ್ತಾಪವಿದೆ.

ಇತಿಹಾಸ ಪೂರ್ವಯುಗದ ಖನಿಜ ವಿಜ್ಞಾನ :

ಪುರಾಣಗಳ ಕಾಲ– ಆರ್ಯನಾಗರಿಕತೆಯು ಇತಿಹಾಸದಲ್ಲಿ ರಾಮಾಯಣ–ಮಹಾಭಾರತ ಕಾಲವನ್ನು ಸುವರ್ಣಯುಗವೆಂದೇ ಹೇಳಬಹುದು. ಈ ಕಾಲದಲ್ಲಿ ಲೋಹಗಳ ಬಳಕೆ ಅತಿ ಹೆಚ್ಚಾಗಿದ್ದಿತೆಂಬುದಕ್ಕೆ ಅನೇಕ ಆಧಾರಗಳು ದೊರೆತಿವೆ. ಕುರುಕ್ಷೇತ್ರ ಮಹಾಯುದ್ಧವು ಸುಮಾರು ಕ್ರಿ. ಪೂ. ೧೪೪೯ರಲ್ಲಿ ನಡೆದಿರಬಹುದೆಂದು ಮಜುಂದಾರ್ ಸೂಚಿಸಿದ್ದಾರೆ. ಈ ಕಾಲದ ಸಹಸ್ರಾರು ಸೈನಿಕರು ಉಕ್ಕಿನ ಹೊಳೆಗಳಿಂದ ಮಾಡಿದ ಲೋಹ ಕವಚಗಳು ಮತ್ತು ಶಿರಾಣಗಳನ್ನು ಧರಿಸಿ ಉತ್ತಮ ದರ್ಜೆಯ ಉಕ್ಕಿನಿಂದ ತಯಾರಾದ ಕತ್ತಿ, ಗುರಾಣಿ, ಭರ್ಜಿಗಳಿಂದ ಸಜ್ಜಿತರಾಗಿ ಯುದ್ಧರಂಗದಲ್ಲಿ ಕಾದಾಡುತ್ತಿದ್ದರು. ಅಲ್ಲದೆ ಉಕ್ಕಿನ ಮೊನೆಗಳುಳ್ಳ 'ಕೂರಂಬು' ಗಳನ್ನು ಬಳಸುತ್ತಿದ್ದರು. ಇವರು ಉಪಯೋಗಿಸುತ್ತಿದ್ದ ಹಲವಾರು ಆಯುಧಗಳು: 'ಅಲಿಕಾಸ್ತ್ರ'— ಈಗಿನ ಬಂದೂಕಿನಂತಹುದು; 'ಶತಾಗ್ನಿ ಅಸ್ತ್ರ'– ಸದ್ಯದ ಫಿರಂಗಿಗೆ ಹೋಲಿಸಬಹುದು.

ಈ ಯುಗದ ರಾಜಿವಾಸದವರು ಮತ್ತು ಶ್ರೀಮಂತ ಮಹಿಳೆಯರು ನವರತ್ನಖಚಿತವಾದ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಯಥೇಚ್ಛವಾಗಿ ಧರಿಸುತ್ತಿದ್ದರು. ಆರ್ಯರ ನಾಗರಿಕತೆಯಲ್ಲಿ ಇದನ್ನು ಉತ್ತಮೋತ್ತಮವಾದ ಕಾಲವೆಂದು ಪರಿಗಣಿಸಲಾಗಿದೆ. ಹೀಗೆ ಶಿಲೆಗಳಲ್ಲಿ ಹುದುಗಿರುವ ಲೋಹ ಖನಿಜಗಳು ಜನರ ನಿತ್ಯಜೀವನದಲ್ಲಿ ಹಾಸು ಹೊಕ್ಕಾಗಿದ್ದವು. ಖನಿಜ ವಿಜ್ಞಾನ

ಗಣಿ ವಿಜ್ಞಾನ, ಲೋಹ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಭೌತವಿಜ್ಞಾನ– ಈ ಶಾಸ್ತ್ರ ಭಾಗಗಳ ಅಧ್ಯಯನ ಬಹು ಉನ್ನತ ಮಟ್ಟವನ್ನು ಮುಟ್ಟಿದ್ದಿತು.

ಆದರೆ ಮಹಾಭಾರತ ಯುದ್ಧದಿಂದ ಇಂದ್ರಪ್ರಸ್ಥ ನಗರವೇ ಹಾಳುಬಿದ್ದು ಅಂದಿನಿಂದ ಇಡೀ ಭರತ ವರ್ಷದ ಕಲೆ, ನಾಗರಿಕತೆ ಮತ್ತು ವಿಜ್ಞಾನಗಳ ಅವನತಿಯೂ ಮೊದಲಾಯಿತೆನ್ನಬಹುದು. ಅಲ್ಲದೆ ಲೋಹ ಮತ್ತು ಖನಿಜಗಳ ಬಳಕೆಗೂ ತಕ್ಕ ಮಟ್ಟಿನ ಅಡ್ಡಿಯುಂಟಾಯಿತೆನ್ನಬಹುದು. ಆದರೆ ಕ್ರಮೇಣ ಇವುಗಳ ಬಳಕೆ ಮತ್ತೆ ಪ್ರಾರಂಭವಾಯಿತೆನ್ನಲು ಅನೇಕ ಆಧಾರಗಳು ಪ್ರಾಚ್ಯ-ಸಂಶೋಧನೆಗಳಿಂದ ಹೊರಪಟ್ಟಿವೆ. ಈ ಕಾಲದಲ್ಲಿ ರಚಿತವಾದ ಪುರಾಣಗಳು ಮತ್ತು ಸ್ಮೃತಿಗಳಲ್ಲಿ, ಖನಿಜಗಳ ಮತ್ತು ಲೋಹಗಳ ಪ್ರಸ್ತಾಪವನ್ನು ಮತ್ತೆ ಕಾಣಬಹುದು. ಮನುಸಂಹಿತೆಯ ಏಳನೆಯ ಅಧ್ಯಾಯದಲ್ಲಿ ರಾಜಧರ್ಮವನ್ನು ವಿವೇಚಿಸುತ್ತಾ ಮನು ಹೀಗೆ ಉಲ್ಲೇಖಿಸಿದ್ದಾನೆ: ‘ಚಿನ್ನ, ಬೆಳ್ಳಿ, ನವರತ್ನಗಳು ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ಆದಾಯದಲ್ಲಿ ಐದನೆ ಒಂದು ಭಾಗ, ವ್ಯವಸಾಯಕ್ಕೆ ತಗಲುವ ವೆಚ್ಚ ಮತ್ತು ಬೆಳೆವ ಭೂಮಿಯ ಫಲವತ್ತನ್ನನು-ಸರಿಸಿ ಭತ್ತ ಮತ್ತಿತರ ಧಾನ್ಯಗಳಿಗೆ ಸಂಬಂಧಿಸಿದ ಆದಾಯದಲ್ಲಿ ಆರನೆ ಒಂದು ಭಾಗ ಅಥವಾ ಎಂಟನೆ ಒಂದು ಪಾಲು ಅಥವಾ ಹನ್ನೆರಡನೆ ಒಂದು ಪಾಲನ್ನು ರಾಜಾದಾಯವೆಂದು ಪರಿಗಣಿಸಬೇಕು.’

ಪ್ರಾಚೀನ ಗ್ರೀಕರ ವೀರಯುಗವನ್ನು ಪುರಾಣಗಳ ಯುಗದ ಕೊನೆಯ ವರ್ಷಗಳಿಗೆ ಸಮಕಾಲೀನವೆಂದು ಪರಿಗಣಿಸಿದಲ್ಲಿ ಹೋಮರನ ಕೃತಿಗಳಿಂದ ನಮ್ಮ ಪೂರ್ವಜರ ಭೂ ವೈಜ್ಞಾನಿಕ ಮಟ್ಟವನ್ನು ತಿಳಿಯಬಹುದು. ಅವನು ನಮೂದಿಸಿರುವಂತೆ ಗ್ರೀಕರು ನಮ್ಮ ದೇಶದಿಂದ ಆಮದು ಮಾಡುತ್ತಿದ್ದ ಪದಾರ್ಥಗಳಲ್ಲಿ ಸತುವು (‘Kassiteros’—ಗ್ರೀಕ್ ಭಾಷೆಯಲ್ಲಿ) ಮತ್ತು ಆನೆಯ ದಂತ ಬಹು ಮುಖ್ಯವಾದವು.

ಇದಾದ ಮೇಲೆ ರಚಿತವಾದ ಯಾಜ್ಞವಲ್ಕ್ಯನ ‘ವ್ಯವಹಾರ’ ಎಂಬ ಗ್ರಂಥದ ಅಧ್ಯಯನದಿಂದ ಆಗಿನ ಕಾಲದ ಜನರಿಗೆ ಖನಿಜ ಮತ್ತು ಲೋಹಗಳ ವಿಷಯವಾಗಿ ಇದ್ದ ಆಳವಾದ ಜ್ಞಾನವನ್ನು ತಿಳಿಯಬಹುದು. ಈ ಗ್ರಂಥದ ೧೮೧ನೆಯ ಶ್ಲೋಕದಲ್ಲಿ ವಿವಿಧ ಲೋಹಗಳ ಗುಣ ವಿಮರ್ಶೆಯನ್ನು ಕಾಣಬಹುದು. ಲೋಹಗಳ ಶುದ್ಧೀಕರಣ ವಿಧಾನಗಳನ್ನು ಮತ್ತು ರಾಜಶಾಸನನಿರ್ಮಾಣಕ್ಕೆ ಯೋಗ್ಯವಾದ ಲೋಹಫಲಕಗಳ ವಿಶೇಷ ಗುಣಗಳನ್ನೂ ವಿವರಿಸಿದ್ದಾನೆ.

ಹಿಂದಿನ ಸ್ಮೃತಿಗಳಲ್ಲಿ ಗಣಿಗಳ ಒಡೆತನದ ವಿಷಯವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಆದರೆ ಈ ಕಾಲದಲ್ಲಿ ರಚಿತವಾದ ಸ್ಮೃತಿಗಳಲ್ಲಿ ಗಣಿಗಳ ರಾಷ್ಟ್ರೀಯ ಒಡೆತನವನ್ನು ಹಲವಾರು ಶ್ಲೋಕಗಳಲ್ಲಿ ವಿವರಿಸಲಾಗಿದೆ. ಉದಾಹರಣೆಗೆ, ವಿಷ್ಣು ಸಂಹಿತೆಯ ಮೂರನೆಯ ಅಧ್ಯಾಯದ ೩೫ನೇ ಶ್ಲೋಕದಂತೆ

ಆಕ್ರಮಿತ ದೇಶಗಳ ಎಲ್ಲಾ ಗಣಿಗಳ ಒಡೆತನವೂ ಗೆದ್ದ ರಾಜನದೆಂದು ತೀರ್ಮಾನಿಸಲಾಗಿದೆ.

ನವೀನ ಪುರಾಣಗಳ ಮತ್ತು ಜಾತಕಗಳ ಕಾಲ

ನಮ್ಮ ದೇಶದ ಅತಿ ಪ್ರಾಚೀನ ಜಾನಪದ ಕತೆಗಳೇ ಬುದ್ಧನ ಜಾತಕಗಳು. ಇವುಗಳ ಕಾಲ ಬಹುಶಃ ಕ್ರಿ.ಪೂ. ಮೂರು ಅಥವಾ ನಾಲ್ಕನೆಯ ಶತಮಾನಕ್ಕೂ ಹಿಂದಿನದೆಂದು ಊಹಿಸಲಾಗಿದೆ. ಕೆಲವು ಜಾತಕಗಳಲ್ಲಿ ನಲಂದಾ ವಿಶ್ವವಿದ್ಯಾನಿಲಯ ಸ್ಥಾಪಿತವಾಗುವುದಕ್ಕೆ ಪೂರ್ವದಲ್ಲಿದ್ದ ತಕ್ಷಶಿಲಾ ವಿಶ್ವವಿದ್ಯಾನಿಲಯದ ಬಣ್ಣನೆಯಿದೆ. ಜಾತಕ ಸಾಹಿತ್ಯದಲ್ಲಿ ಅನೇಕಕಡೆ ಆ ಕಾಲದ ಲೋಹ ನಾಣ್ಯಗಳ ಚಲಾವಣೆ, ಲೋಹ ಕೈಗಾರಿಕಾಸಂಸ್ಥೆಗಳ ಮತ್ತು ಲೋಹ ಕುಶಲ ಕರ್ಮಿಗಳ ವಿಷಯನಿರೂಪಣೆಯಿದೆ.

ಇತಿಹಾಸ ಯುಗ

ಈ ಯುಗದ ಖನಿಜವಿಜ್ಞಾನದ ಬೆಳವಣಿಗೆಯನ್ನು ಸ್ಥೂಲವಾಗಿ ವಿವೇಚಿಸೋಣ.

(೧) ಅಶೋಕನ ಹಿಂದಿನ ಕಾಲ—ಕ್ರಿಸ್ತಶಕೆ ಪ್ರಾರಂಭವಾಗುವುದಕ್ಕೆ ಸುಮಾರು ನಾಲ್ಕು ಶತಮಾನಗಳ ಮುನ್ನ ರಚಿತವಾದ ಚಾಣಕ್ಯನ 'ಅರ್ಥಶಾಸ್ತ್ರ'ದಲ್ಲಿ ಭೂವಿಜ್ಞಾನ, ಗಣಿವಿಜ್ಞಾನ ಮತ್ತು ಲೋಹವಿಜ್ಞಾನಗಳಿಗೆ ಸಂಬಂಧಿಸಿದ ಅನೇಕ ಅಂಶಗಳ ವಿವರಣೆಯಿದೆ. ಈ ಗ್ರಂಥದ ೧೧, ೧೨ ಮತ್ತು ೧೩ನೇ ಅಧ್ಯಾಯಗಳು ಈ ವಿಜ್ಞಾನ ಭಾಗಗಳಿಗೆ ಮೀಸಲಾಗಿವೆ ಎನ್ನಬಹುದು. ೧೩ನೇ ಅಧ್ಯಾಯದ ಒಂದು ಶ್ಲೋಕದ ಸಾರ ಹೀಗಿದೆ: ರಾಷ್ಟ್ರದ ಸಂಪತ್ತಿಗೆ ಮೂಲ ಗಣಿಗಳು. ಈ ಸಂಪತ್ತಿನಿಂದ ರಾಷ್ಟ್ರರಕ್ಷಣೆಗೆ ಅತ್ಯವಶ್ಯವಾದ ಸೈನ್ಯ. ಹೀಗಾದಲ್ಲಿ ಮಾತ್ರ ನೆರೆಯ ದೇಶಗಳ ಆಗುಹೋಗುಗಳ ಮೇಲೆ ಈ ರಾಷ್ಟ್ರದ ಪರಿಣಾಮ ವಿಶೇಷವಾದ ರೀತಿಯಲ್ಲಿ ಉಂಟಾದೀತು. ಡಾ|| ಶಾಮಶಾಸ್ತ್ರಿಗಳಿಂದ ಸಂಪಾದಿತವಾದ 'ಕೌಟಿಲ್ಯನ ಅರ್ಥಶಾಸ್ತ್ರ'ದಲ್ಲಿ ನಮೂದಿಸಿರುವ ಭೂವಿಜ್ಞಾನಕ್ಕೆ ಸಂಬಂಧಿಸಿದ ಅಂಶಗಳಲ್ಲಿ ಕೆಲವನ್ನು ಉದಹರಿಸಬಹುದು (ಅರ್ಥಶಾಸ್ತ್ರ. ಭಾಗ ೨, ಅಧ್ಯಾಯ ೧).

ರಾಜನ ಕರ್ತವ್ಯಗಳು : ಖನಿಜನಿಕ್ಷೇಪಗಳಿಗೆ ಸಂಬಂಧಿಸಿದಂತೆ—

(೧) ದೇಶದ ಗಣಿಯ ಉದ್ಯಮವನ್ನು ಆ ದೇಶದ ರಾಜನೇ ನಿರ್ವಹಿಸಬೇಕು.

(೨) ಗಣಿ ಉದ್ಯಮಗಳ ವ್ಯವಸ್ಥೆ ಮತ್ತು ಮೇಲ್ವಿಚಾರಣೆ ರಾಜನ ಸರಕಾರದ್ದು. ರಾಜನಿಂದ ನೇಮಿತನಾದ ಕಂದಾಯ ಮಂತ್ರಿ ಅಥವಾ ಸಂಗ್ರಹಣಾಧ್ಯಕ್ಷ ಗಣಿಗಳಿಂದ ಬರುವ ಆದಾಯವನ್ನುಸಂಗ್ರಹಿಸಬೇಕು; ಅಲ್ಲದೆ ಅದನ್ನು ಲಾಭ

ದಾಯಕವಾದ ರೀತಿಯಲ್ಲಿ ರೂಢಿಸಲೂ ಬೇಕು. ಇವನ ನಿರ್ದೇಶನದಲ್ಲಿ ದೇಶದ ಭೂವಿಜ್ಞಾನ ಶಾಖೆಯ ಮುಖ್ಯಾಧಿಕಾರಿಯಾದ 'ಆಕರಾಧ್ಯಕ್ಷ'ನು ಕೆಲಸ ಕಾರ್ಯಗಳನ್ನು ನಡೆಸಬೇಕು. ಅಲ್ಲದೆ ರಾಷ್ಟ್ರದ ಲೋಹ ವಿದ್ಯಾಧಿಕಾರಿಯೂ ಈತನ ಆಧೀನದಲ್ಲಿಯೇ ಕೆಲಸ ಮಾಡಬೇಕು. ಈತನು ಚಿನ್ನ ಮತ್ತು ಬೆಳ್ಳಿಯನ್ನು ಹೊರತು ಇತರ ಎಲ್ಲಾ ಲೋಹಗಳ ಮತ್ತು ಅವುಗಳ ಮಿಶ್ರಣಗಳ ತಯಾರಿಕೆಯ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಚಕ್ರವರ್ತಿ ಚಂದ್ರಗುಪ್ತ ಮೌರ್ಯನ ಆಕರಾಧ್ಯಕ್ಷನ ಕೆಲಸದ ವ್ಯಾಪ್ತಿ ಹೀಗಿತ್ತು. ಅವನಿಗೆ ಅದಿರುಗಳಿಂದ ಲೋಹವನ್ನು ಒಪ್ಪವಾಡುವ ವಿಧಾನಗಳ ಸಮಷ್ಟಿ ಪರಿಚಯವಿತ್ತು; ರಸಾಯನಶಾಸ್ತ್ರ ಮತ್ತು ರತ್ನಪರೀಕ್ಷಾಶಾಸ್ತ್ರದಲ್ಲೂ ಅಷ್ಟೇ ಹೆಚ್ಚಿನ ಪರಿಣತಿಯೂ ಇತ್ತು. ಇತರ ಅಧಿಕಾರಿಗಳು ಮತ್ತು ಖನಿಜ ಶಾಸ್ತ್ರಜ್ಞರ ನೆರವಿನಿಂದ ಈತನು ದೇಶದ ಹಳೆಯಗಣಿಗಳನ್ನು ಉತ್ತಮ ರೀತಿಯಲ್ಲಿ ರೂಢಿಸಬೇಕಾಗಿತ್ತು. ಅಲ್ಲದೆ ತಾನೇ ಹೊಸ ಖನಿಜ ನಿಕ್ಷೇಪಗಳನ್ನು ಪತ್ತೆಹಚ್ಚಿ ಅಥವಾ ಇತರ ಅಧಿಕಾರಿಗಳು ಕಂಡುಹಿಡಿದಿರುವ ಖನಿಜನಿಕ್ಷೇಪಗಳನ್ನು ಎಲ್ಲಾ ದೃಷ್ಟಿಯಿಂದಲೂ ಪರೀಕ್ಷಿಸಿ ಅವುಗಳಲ್ಲಿ ಲಾಭದಾಯಕವಾಗುವ ರೀತಿಯಲ್ಲಿ ಗಣಿಉದ್ಯಮವನ್ನು ಆರಂಭಿಸಬೇಕಾಗಿತ್ತು. ಬಯಲಿನಲ್ಲಿ, ಪರ್ವತಗಳ ಇಳಿಜಾರಿನಲ್ಲಿ ಗುರುತಿಸಿರುವ ಖನಿಜ ನಿಕ್ಷೇಪಗಳ ಮೌಲ್ಯ, ಉತ್ಪಾದನೆ ಮುಂತಾದ ಎಲ್ಲಾ ಗುಣಗಳನ್ನೂ ನಿಕ್ಷೇಪದಲ್ಲಿನ ವಿವಿಧ ಖನಿಜಗಳ ಬಣ್ಣ, ವಾಸನೆ, ರುಚಿ ಇತ್ಯಾದಿ ನಾನಾ ಭೌತಿಕಗುಣಗಳನ್ನು ವಿವರವಾಗಿ ಪರಿಶೀಲಿಸುವುದೇ ಇವನ ಮುಖ್ಯ ಕರ್ತವ್ಯ. ಇಂದಿಗೂ ಸಹ ಖನಿಜಗಳ ಅಧ್ಯಯನದಲ್ಲಿ ಅವುಗಳ ಬಣ್ಣ, ಒರೆ, ಹೊಳಪು, ಸೀಳು, ಕಾಠಿಣ್ಯ ಮತ್ತು ಸಾಂದ್ರತೆ ಈ ಗುಣಗಳನ್ನು, ವಿವರವಾಗಿ ಪರಿಶೀಲಿಸಲಾಗುವುದೆಂಬುದನ್ನು ಗಮನಿಸಬಹುದು.

ಇದಲ್ಲದೆ 'ಅರ್ಥಶಾಸ್ತ್ರ'ದಲ್ಲಿ ಲೋಹಾಧ್ಯಕ್ಷ (ಲೋಹವಿದ್ಯೆಯಲ್ಲಿ ಪರಿಣತ), ಖನ್ಯಾಧ್ಯಕ್ಷ (ಗಣಿಗಳ ಮೇಲ್ವಿಚಾರಕ), ಲಕ್ಷಣಾಧ್ಯಕ್ಷ (ಟಂಕಸಾಲೆಯ ಮುಖ್ಯಸ್ಥ), ರೂಪದರ್ಶಕ (ರತ್ನಪರೀಕ್ಷಕ), ಲವಣಾಧ್ಯಕ್ಷ (ಲವಣ ತಯಾರಿಕೆ ಮತ್ತು ಲವಣ ನಿಕ್ಷೇಪಗಳ ಮೇಲ್ವಿಚಾರಕ) ಹೀಗೆ ಹಲವಾರು ಅಧಿಕಾರಿಗಳನ್ನೂ ಅವರ ಅಧಿಕಾರ ವ್ಯಾಪ್ತಿಯನ್ನೂ ವಿವೇಚಿಸಲಾಗಿದೆ. ಇದೇ ಗ್ರಂಥದ ೨ನೇ ಭಾಗದ ೧೩ನೇ ಅಧ್ಯಾಯದಲ್ಲಿ ತಾಮ್ರ, ಸೀಸ, ಸತು, ಕಬ್ಬಿಣ, ಬೆಳ್ಳಿ, ಚಿನ್ನ ಮತ್ತು ಪೆಟ್ರೋಲಿಯಂ ಕೂಡ, ಈ ಖನಿಜಗಳ ವಿವಿಧ ಅದಿರುಗಳನ್ನು ಗುರುತಿಸುವ ವಿಧಾನವನ್ನೂ ವಿವರಿಸಲಾಗಿದೆ. ಹೀಗಿದ್ದೂ ಖಾಸಗಿಯವರ ಗಣಿ ಉದ್ಯಮಕ್ಕೂ ಸಾಕಷ್ಟು ಪ್ರೋತ್ಸಾಹವಿತ್ತು. ಇಡೀ ದೇಶದ ಎಲ್ಲಾ ಗಣಿಗಳೂ ರಾಜನಿಗೆ ಸೇರಿದುವೆಂದು ನಮೂದಿಸಿದ್ದರೂ ಅವುಗಳ ರಾಷ್ಟ್ರೀಕರಣಕ್ಕೆ ಪ್ರೋತ್ಸಾಹವಿರಲಿಲ್ಲ. ಆದರೆ ಗಣಿ ಉದ್ಯಮಕ್ಕೆ ಸರ್ಕಾರದಿಂದ ಎಲ್ಲ

ಪ್ರೋತ್ಸಾಹವೂ ದೊರೆಯುತ್ತಿದ್ದುದಲ್ಲದೆ ಅದಕ್ಕೆ ಸಾಕಷ್ಟು ರಕ್ಷಣೆಯನ್ನೂ ನೀಡಲಾಗಿತ್ತು. ಗಣಿಯ ಕೆಲಸಗಾರ ಅಲ್ಲಿಯ ಉತ್ಪನ್ನವನ್ನೇನಾದರೂ ಕದ್ದಲ್ಲಿ ಅದರ ಬೆಲೆಯ ಎಂಟರಷ್ಟನ್ನು ಅವನಿಂದ ಜುಲ್ಮಾನೆಯ ರೂಪದಲ್ಲಿ ವಸೂಲ್ಮಾಡುತ್ತಿದ್ದರು. ನವರತ್ನಗಳನ್ನು ಕದ್ದಲ್ಲಿ ಅವನಿಗೆ ಮರಣದಂಡನೆಯೇ ಗತಿ. ಗಣಿಯಲ್ಲಿ ಕಳ್ಳತನ ಮಾಡಿದಲ್ಲಿ ಅಥವಾ ಸರ್ಕಾರದ ಅನುಮತಿಯಿಲ್ಲದೆ ಗಣಿಯ ಕೆಲಸವನ್ನು ಕೈಕೊಂಡಲ್ಲಿ ಅವರಿಗೆ ಕೋಳಗಳನ್ನು ತೊಡಿಸಿ ಬಂದಿಯಂತೆ ದುಡಿಸುತ್ತಿದ್ದರು. ಗಣಿ ಕೆಲಸಕ್ಕೆ ಬಹು ಅಗತ್ಯವಾದ ಸ್ಫೋಟಕ ವಸ್ತುಗಳ ಪರಿಚಯವೂ ಚಾಣಕ್ಯನಿಗೆ ಚೆನ್ನಾಗಿತ್ತೆಂದು ಊಹಿಸಬಹುದು. ಇದಕ್ಕೆ ಆಧಾರವಾಗಿ 'ಸರ್ಕಾರದ ಅನುಮತಿಯಿಲ್ಲದೆ ಯಾರಾದರೂ ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿದ್ದಲ್ಲಿ ಅವರನ್ನು ದಸ್ತಗಿರಿ ಮಾಡಬೇಕೆಂದು' ಹೇಳಿದ್ದಾನೆ.

ಈ ಕಾಲದಲ್ಲಿ ಕುಶಲ ಕೆಲಸಗಾರರು, ಶಿಲ್ಪಿಗಳು ಮತ್ತು ಗಣಿಯ ಕೆಲಸಗಾರರ ಸಂಘ ಸಂಸ್ಥೆಗಳಿದ್ದವು. ಶ್ರಮಜೀವಿಗಳ ಕಲ್ಯಾಣಕ್ಕಾಗಿ ಅನೇಕ ಕಾಯಿದೆ ಕಟ್ಟಳೆಗಳಿದ್ದವು. ಚಂದ್ರಗುಪ್ತ ಚಕ್ರವರ್ತಿಯ ಆಸ್ಥಾನದಲ್ಲಿದ್ದ ಗ್ರೀಕ್ ರಾಯಭಾರಿ ಮೆಗಾಸ್ತನೀಸನ ಬರಹದಂತೆ ಇಂಡಿಯಾದಲ್ಲಿ ಅನೇಕ ಗಣಿಗಳಿದ್ದವು. ಅಲ್ಲಿಯ ಕೆಲಸಗಾರರು ಮತ್ತು ಅವರ ಕೆಲಸದ ವಿಷಯವಾಗಿ ತನ್ನ ಲೇಖನಗಳಲ್ಲಿ ನಮೂದಿಸಿದ್ದಾನೆ. ಅಲ್ಲದೆ ದೇಶೀಯರು ಚಿನ್ನ, ಬೆಳ್ಳಿ ಮತ್ತು ನವರತ್ನಗಳನ್ನು ಯಥೇಚ್ಛವಾಗಿ ಉಪಯೋಗಿಸುತಿದ್ದ ಅಂಶವನ್ನೂ ನಿರೂಪಿಸಿದ್ದಾನೆ.

ಈ ಅಂಶಗಳು ಅಶೋಕನ ಕಾಲಕ್ಕೂ ಹಿಂದೆ ಭಾರತ ದೇಶದ ಜನ ಯಾವ ರೀತಿಯಲ್ಲಿ ಭೂವಿಜ್ಞಾನ, ಗಣಿವಿಜ್ಞಾನ ಮತ್ತು ಲೋಹವಿಜ್ಞಾನಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆದಿದ್ದರೆಂಬುದನ್ನು ಸೂಚಿಸುತ್ತದೆ. ಅಶೋಕನ ಕಾಲದಲ್ಲಂತೂ ಇದು ಉನ್ನತ ಮಟ್ಟವನ್ನು ಮುಟ್ಟಿದ್ದಿತು. ಇದಕ್ಕೆ ಪೂರಕವಾಗಿ ಬುದ್ಧ ಭಗವಾನನ ಧಾರ್ಮಿಕ ದೃಷ್ಟಿ ಮತ್ತು ಕೌಟಿಲ್ಯನ ರಾಜನೀತಿ ಕುಶಲತೆಗಳಿದ್ದು ಈ ಕಾಲ ನಮ್ಮ ದೇಶದ ಇತಿಹಾಸದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ:

ಅಶೋಕನ ಕಾಲದಲ್ಲಿನ ಭೂ ಮತ್ತು ಗಣಿವಿಜ್ಞಾನ ಚಟುವಟಿಕೆಗಳಿಗೆ ಆಧಾರವಾಗಿ ಈ ಅಂಶಗಳನ್ನು ನಮೂದಿಸಬಹುದು.

೧) ಅಶೋಕನು ನಿರ್ಮಿಸಿದ ೮೪,೦೦೦ ಸ್ತೂಪಗಳಲ್ಲಿ ಬಹಳಷ್ಟು ಕಲ್ಲಿನಿಂದ ನಿರ್ಮಿತವಾದವು.

೨) ಸಿಂಹಳದ ದೊರೆಗೆ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರ ಇವರೊಡನೆ ಕಲ್ನಾರಿನ ನೂಲಿನಿಂದ ಮಾಡಿದ ಉತ್ತರೀಯವನ್ನು ಉಡುಗೊರೆಯಾಗಿ ಕಳುಹಿಸಿದನು.

೩) ಆ ಕಾಲದಲ್ಲಿ ನಿರ್ಮಿತವಾದುವು, ಅಸಂಖ್ಯಾತ ಅಖಂಡ ಶಿಲಾಸ್ತಂಭಗಳು ಮತ್ತು ಗುಹಾಂತರ್ದೇವಾಲಯಗಳು ಇವುಗಳಲ್ಲಿ ಬಹು ಪ್ರಸಿದ್ಧವಾದವು—ಸಾಂಚಿ ಸ್ತೂಪದ ಮಹಾದ್ವಾರ, ಮತ್ತು ಸಾರನಾಥದ ಸಿಂಹಲಾಂಛನ ಅಶೋಕಸ್ತಂಭ (ಇದು ನಮ್ಮ ರಾಷ್ಟ್ರ ಲಾಂಛನವೂ ಹೌದು).

ಶಿಲೆಯ ಬಗ್ಗೆ ಉತ್ತಮ ಪರಿಜ್ಞಾನವಿರದೆ ಈ ಬಗೆಯ ಉತ್ತಮ ಕಲಾಕೃತಿಗಳ ನಿರ್ಮಾಣ ಅಸಾಧ್ಯವೆಂಬುದನ್ನು ನೆನಪಿಡಬೇಕು.

ಕೆಲವು ಗುಹಾ ದೇವಾಲಯಗಳಲ್ಲಿ ಇಡೀ ಬಂಡೆಯನ್ನೇ ಕೊರೆದು ಕೊಠಡಿಗಳನ್ನು ನಿರ್ಮಿಸಲಾಗಿದೆ. ಗೋಡೆಗಳು ನುಣುಪಾಗಿದ್ದು ಕನ್ನಡಿಯಂತೆ ಇಂದಿಗೂ ಮಿರುಗುತ್ತಿವೆ.

ಇವನ ಶಾಸನಗಳಲ್ಲಿ ನಮ್ಮ ಮೈಸೂರು ಸೀಮೆಯಲ್ಲಿರುವ ಸುವರ್ಣಗಿರಿಯ ಪ್ರಸ್ತಾಪವೂ ಇದೆ ಬ್ರಹ್ಮಗಿರಿಯ ಶಾಸನದಲ್ಲಿ ಚಿನ್ನದ ಅದಿರು ದೊರೆಯುವ ಈ ಬೆಟ್ಟದ ಹೆಸರಿದೆ. ಇದು ರಾಯಚೂರು ಬಳಿಯ ಹಟ್ಟಿ ಚಿನ್ನದ ಗಣಿಯ ಪ್ರದೇಶವಾದ ಮಸ್ಕಿ ಬಳಿ ದೊರೆತಿದ್ದು ಶಾಸನದಲ್ಲಿ ನಮೂದಿಸಿರುವ ಕನಕಗಿರಿಯನ್ನು ಮಸ್ಕಿಯ ದಕ್ಷಿಣಕ್ಕೆ ಇಂದಿಗೂ ಕಾಣಬಹುದು. ಹಟ್ಟಿಯ ಚಿನ್ನದ ಗಣಿಯ ವಿಷಯ ಅಶೋಕನ ಅಧಿಕಾರಿಗಳಿಗೂ ತಿಳಿದಿದ್ದು ಅವರು ಅಲ್ಲಿ ಗಣಿಯ ಕೆಲಸವನ್ನು ನಡೆಸುತ್ತಿದ್ದರೆನ್ನಲು ಅನೇಕ ಆಧಾರಗಳು ದೊರೆತಿವೆ. ಇಲ್ಲಿ ಸಂಶೋಧನೆ ನಡೆಸಿದ ಕ್ಯಾಪ್ಟನ್ ಮನ್ ಹಳೆಯ ಗಣಿಯಲ್ಲಿ ಸುಮಾರು ಆರುನೂರು ಅಡಿ ಆಳದ ಕೂಪವನ್ನು ಪತ್ತೆಹಚ್ಚಿದರು. ಇದನ್ನು ಬಹು ಗಡುಸಾದ ಬೆಣಚುಶಿಲೆಯಲ್ಲಿ ಕೊರೆಯಲಾಗಿದೆ ಇದು ನಿಜಕ್ಕೂ ಅಶೋಕನ ಕಾಲದ ಗಣಿ ಕೆಲಸಗಾರರ ಕುಶಲತೆಗೆ ಉತ್ತಮ ಸಾಕ್ಷಿಯಾಗಿದೆ.

ಕುಶಾನರು ಮತ್ತು ಗುಪ್ತರ ಕಾಲದ ಖನಿಜ ವಿಜ್ಞಾನ:

ಮೌರ್ಯರ ನಂತರ ಅಷ್ಟೇ ಶಕ್ತಿಯುತರಾದ ಕುಶಾನರ ಆಳ್ವಿಕೆ ಉತ್ತರ ಭಾರತದ ತಕ್ಷಶಿಲೆಯಲ್ಲಿ ಮೊದಲಾಯಿತು. ಭಾಷಾಶಾಸ್ತ್ರಪ್ರವೀಣ ಪಾಣಿನಿ, ವೈದ್ಯಶಾಸ್ತ್ರ ನಿಪುಣರು ಚರಕ-ಶುಶ್ರುತ ಮುಂತಾದವರು ವಿಶ್ವವಿದ್ಯಾನಿಲಯದ ಅಧ್ಯಾಪಕರು.

ಇವರ ಕಾಲವಾದ ಮೇಲೆ (ಸುಮಾರು ಕ್ರಿ.ಶ. ೨೩೦) ಸುಮಾರು ಒಂದು ಶತಮಾನದ ಕಾಲ ನಮ್ಮ ದೇಶದ ವಿಜ್ಞಾನ—ಇತಿಹಾಸಗಳು ಶೂನ್ಯವೆಂದು ಹೇಳಬಹುದು. ಬಹುಶಃ ದೇಶ ನೂರಾರು ಸಣ್ಣ ಪುಟ್ಟ ರಾಜ್ಯಗಳಾಗಿ ಒಡೆದು ಛಿದ್ರಗೊಂಡಿತ್ತು. ಈ ಸಂದಿಗ್ಧ ಸನ್ನಿವೇಶದಲ್ಲಿ (ಸುಮಾರು ಕ್ರಿ. ಶ. ೩೨೦) ಹಿಂದೂ ರಾಜರಾದ ಗುಪ್ತರ ಇತಿಹಾಸ ಪ್ರಸಿದ್ಧವಾದ ಆಳ್ವಿಕೆ ಉತ್ತರ ಭಾರತದಲ್ಲಿ ಮೊದಲಾಯಿತು. ಈ ವಂಶದ ಸಮುದ್ರಗುಪ್ತನು ಅಶೋಕ ಚಕ್ರವರ್ತಿ

ಯಂತೆ ತನ್ನ ರಾಜ್ಯವನ್ನು ಬಹುಮಟ್ಟಿಗೆ ವಿಸ್ತರಿಸಿದನು. ಈ ಕಾಲದಲ್ಲೇ ಎಂಬತ್ತು ಅಡಿ ಎತ್ತರದ ಬುದ್ಧನ ಪ್ರತಿಮೆಯೊಂದು ತಾಮ್ರದಲ್ಲಿ ನಿರ್ಮಾಣಗೊಂಡು ನಲಂದ ವಿಶ್ವವಿದ್ಯಾನಿಲಯದ ಮಹಾದ್ವಾರದ ಬಳಿ ರಾರಾಜಿಸುತ್ತಿತ್ತು. ಪೂರ್ವತೀರದಲ್ಲಿನ ತಾಮ್ರಲಿಪಿ (ಈಗಿನ ತಾಮ್ಲುಕ್) ರೇವಿನಿಂದ ತಾಮ್ರಲೋಹ ಭಾರತೀಯ ನೌಕೆಗಳಲ್ಲಿ ಹೊರದೇಶಗಳಿಗೆ ಹೇರಳವಾಗಿ ರಫ್ತಾಗುತ್ತಿತ್ತು. ಬಹುಶಃ ಇದು ಬಿಹಾರಿನ ಸಿಂಗ್‌ಭೂಮ್ ತಾಮ್ರಗಣಿಗಳಿಂದ ದೊರೆತ ಉತ್ಪನ್ನವೆಂದು ಊಹಿಸಬಹುದು. ವಿಶ್ವಪ್ರಸಿದ್ಧ ಕೊಹಿನೂರ್ ವಜ್ರ ದೊರೆತದ್ದು ಈ ಕಾಲದಲ್ಲೇ. ದಕ್ಷಿಣ ಭಾರತದ ಚಿನ್ನ ಮತ್ತು ವಜ್ರದ ಗಣಿಗಳಲ್ಲಿ ತೀವ್ರ ಗತಿಯಲ್ಲಿ ಕೆಲಸ ನಡೆದಿತ್ತು. ದೆಹಲಿಯ ಕುತುಬ್‌ಮಿನಾರ್ ಬಳಿಯ ತುಕ್ಕು ಹಿಡಿಯದ ಉಕ್ಕಿನ ಸ್ತಂಭದ ಸ್ಥಾಪಕರು ಗುಪ್ತವಂಶದ ರಾಜರು. ಇದರ ಕಬ್ಬಿಣದ ಅಂಶ ೯೯·೭೨% ರಷ್ಟಿದ್ದು ಇಂದಿಗೂ ತುಕ್ಕು ಹಿಡಿಯದೆ ನಿತ್ಯನೂತನವಾಗಿ ಹೊಳೆಯುತ್ತಿರುವುದು ನಮ್ಮ ಪೂರ್ವಿಕರ ಲೋಹವಿದ್ಯೆಯ ಪರಾಕಾಷ್ಠತೆಯ ಕುರುಹಾಗಿದೆ.

ಅವನತಿ

ಗುಪ್ತ ಸಾಮ್ರಾಜ್ಯದ ಅವನತಿಗೆ ಮೂಲಕಾರಣ ಹೂಣರು, ಸಿಥಿಯನ್ನರು ಮತ್ತು ಸರಸೇನರು ಮೊದಲಾದ ವಿದೇಶೀಯರ ದಂಡಯಾತ್ರೆಗಳು. ಕಲೆ–ವಿಜ್ಞಾನಗಳ ಗಂಧವಿಲ್ಲದ ಈ ದರೋಡೆಕಾರರು ನಮ್ಮ ದೇಶದ ಸಂಪತ್ತಿಗಾಗಿ ಎಲ್ಲೆಲ್ಲೂ ಲೂಟಿ ಮಾಡಿದಾಗ ಕೈಗೆ ಸಿಕ್ಕಿದ, ತಮಗೆ ಅರ್ಥವಾಗದ ಅಮೂಲ್ಯ ಗ್ರಂಥರಾಶಿಗಳನ್ನೆಲ್ಲಾ ಸುಟ್ಟು ಬೂದಿಮಾಡಿದರು. ದೇಶದಲ್ಲಿ ರಾಜಕೀಯ ನೆಮ್ಮದಿ ಇಲ್ಲವಾಯಿತು. ಈ ಪ್ರಕ್ಷುಬ್ಧ ಪರಿಸ್ಥಿತಿಯಿಂದ ಕಲೆ-ವಿಜ್ಞಾನಗಳ ಬೆಳವಣಿಗೆ ಕುಂಠಿತವಾಯಿತು. ಮುಂದೆ ಮಹಮ್ಮದೀಯರ ಕ್ರಮಾನುಗತವಾದ ಅನೇಕ ದಾಳಿಗಳಿಂದಲೂ ಈ ದುರದೃಷ್ಟಕರವಾದ ಪರಿಸ್ಥಿತಿ ಅಷ್ಟಾಗಿ ಸುಧಾರಿಸಲಿಲ್ಲ. ಹೀಗಿದ್ದೂ ಹಲವು ಹಿಂದೂ ರಾಜರು ದೇಶದ ನಾನಾಕಡೆ ಪ್ರವರ್ಧಮಾನರಾಗಿ ಈ ದುಸ್ಥಿತಿಯನ್ನು ಸಾಧ್ಯವಾದಷ್ಟು ತಡೆಗಟ್ಟಿದರು. ಇವರಲ್ಲಿ ಮುಖ್ಯರು—ಯಶೋಧರ್ಮ (ಕ್ರಿ.ಶ. ೫೩೦), ಶಶಾಂಕ (ಕ್ರಿ.ಶ. ೬೦೦), ಹರ್ಷವರ್ಧನ (ಕ್ರಿ.ಶ. ೬೦೬–೬೪೭), ಯಶೋವರ್ಮ (ಕ್ರಿ.ಶ. ೭೦೦) ಮತ್ತು ಲಲಿತಾದಿತ್ಯ (ಕ್ರಿ.ಶ. ೭೩೦). ಕಲೆ ಮತ್ತು ವಿಜ್ಞಾನಗಳಲ್ಲಿ ಹೆಸರಾಂತ ಅನೇಕರಿಗೆ ಇವರು ಆಶ್ರಯದಾತರೆನಿಸಿದರು. ಇವರಲ್ಲಿ ಮುಖ್ಯರು ಗುರು ಶಂಕರಾಚಾರ್ಯ, ಕವಿ ಕಾಳಿದಾಸ, ಖಗೋಲವಿಜ್ಞಾನದ ಮುಖ್ಯಶಾಖೆಯಾದ ಸೂರ್ಯಸಿದ್ಧಾಂತ, ತ್ರಿಕೋನ ಮಿತಿ ಮತ್ತು ಜ್ಯಾಮಿತಿಗಳ ಘನವಿದ್ವಾಂಸ ಬ್ರಹ್ಮಗುಪ್ತ, ಬೀಜಗಣಿತದ ಜನಕ ಆರ್ಯಭಟ್ಟ, ಗಣಿತವಿಜ್ಞಾನಿ ಭಾಸ್ಕರಾಚಾರ್ಯ,

ಮಿತಾಕ್ಷರದ ಕರ್ತೃ ವಿಜ್ಞಾನೇಶ್ವರ, ಭೂವಿಜ್ಞಾನಿ ವರಾಹ ಮಿಹಿರ, ಪ್ರಸಿದ್ಧ ಸ್ತ್ರೀಗಣಿತ ವಿಜ್ಞಾನಿ ಲೀಲಾವತಿ ಮತ್ತು ಪ್ರಸಿದ್ಧ ಸಾಹಿತಿಗಳಾದ 'ಭಟ್ಟಿಕಾವ್ಯ'ದ ಕರ್ತೃ ಭರ್ತೃಹರಿ, 'ಮೃಚ್ಛಕಟಿಕ' ನಾಟಕಕಾರ ಶೂದ್ರಕ, 'ಉತ್ತರರಾಮ ಚರಿತ' ಮತ್ತು 'ಮಾಲತಿಮಾಧವ' ಕರ್ತೃ ಭವಭೂತಿ, 'ದಶಕುಮಾರಚರಿತೆ'ಯ ಕವಿ ದಂಡಿ, 'ಪಂಚತಂತ್ರ'ದ ಲೇಖಕ ವಿಷ್ಣುಶರ್ಮ, 'ಕಾದಂಬರಿ'ಯ ಬಾಣಭಟ್ಟ ಮುಂತಾದವರು.

ಎಂಟು ಮತ್ತು ಒಂಬತ್ತನೆ ಶತಮಾನಗಳಲ್ಲಿ ಭಾರತೀಯ ವಿದ್ವಾಂಸರು ಮತ್ತು ವಿಜ್ಞಾನಿಗಳು ಅರಬ್ ಚಕ್ರವರ್ತಿ ಹರೂನ್-ಅಲ್-ರಷೀದ್‌ನಿಂದ ಆಹ್ವಾನಿತರಾಗಿ ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಗಣಿತ, ಬೀಜಗಣಿತ ಮತ್ತು ವೈದ್ಯಶಾಸ್ತ್ರಗಳನ್ನು ಬೋಧಿಸುತ್ತಿದ್ದರೆಂಬ ಸಂಗತಿ ನಾವೆಲ್ಲ ಹೆಮ್ಮೆ ಪಡುವಂಥದು.

ಇಂಥ ಪ್ರತಿಭಾವಂತರಿದ್ದೂ ಭಾರತದ ವಿಜ್ಞಾನ ಮತ್ತು ಕಲೆಗಳ ಅವನತಿ ಈ ವೇಳೆಗಾಗಲೇ ಆರಂಭವಾಗಿತ್ತೆನ್ನಬಹುದು. ಸಮಾಜದಲ್ಲಿ, ರಾಷ್ಟ್ರದಲ್ಲಿ ವಿಭಿನ್ನಶಕ್ತಿಗಳು ತಲೆಹಾಕಿ ಅದುತನಕ ಸಾಧಿಸಿದ್ದ ಪ್ರಗತಿ ಕುಂಠಿತವಾಗಿತ್ತು. ಇದಕ್ಕೆ ಮುಖ್ಯ ಕಾರಣಗಳು :

(೧) ಬೌದ್ಧಧರ್ಮ ಖಿಲಗೊಳ್ಳುತ್ತ ಬ್ರಾಹ್ಮಣ ಧರ್ಮ ಮತ್ತೆ ತಲೆ ಎತ್ತಿತು. ಈ ಮತೀಯ ಪುನರುಜ್ಜೀವನ ಯುಗದ ಅಂಧಮತೀಯರು ತಮ್ಮ ಕುರುಡು ಉತ್ಸಾಹದಲ್ಲಿ ಬೌದ್ಧ ಧರ್ಮದ ಹೆಸರನ್ನು ಕೇಳಿದ ಮಾತ್ರಕ್ಕೆ ದ್ವೇಷಿಸುತ್ತಿದ್ದರು. ಆ ಹೆಸರಿನ ನಂಟುತನವಿದ್ದ ಯಾವುದೇ ಪ್ರಗತಿಪರ-ವಿಧಾನಗಳನ್ನೂ ವೈಜ್ಞಾನಿಕ ಸಾಧನೆಗಳನ್ನೂ ಅಕಾರಣವಾಗಿ ವಿರೋಧಿಸುವುದೇ ಅಲ್ಲದೆ, ವಿಜ್ಞಾನದ ಮನೋಧರ್ಮವಿದ್ದ ಪ್ರಗತಿ ಪರರನ್ನು ಅಲ್ಲಗಳೆಯುತ್ತಿದ್ದರು. ಹೀಗಾಗಿ ಬಹುಮಟ್ಟಿಗೆ ಬೌದ್ಧಧರ್ಮೀಯರಾದ ವಿಜ್ಞಾನಿಗಳಿಂದಲೇ ಮುಂದುವರಿಯುತ್ತಿದ್ದ ಅಧ್ಯಯನ ಮತ್ತು ಸಂಶೋಧನೆಗಳು ಅವನತಿಯ ಮಾರ್ಗವನ್ನು ಹಿಡಿದವು.

(೨) ಹೀಗಿದ್ದೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ಉಳಿದಿದ್ದ ಕಲೆ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದ ಕೃತಿಗಳನ್ನು ಮಹಮದೀಯ ದಾಳಿಕಾರರು ಸಂಪೂರ್ಣವಾಗಿ ನಾಶಮಾಡಿದರು. ಕ್ರಿ. ಶ. ೧೨೦೦ ರಲ್ಲಿ ನಡೆದ ಮುಸಲ್ಮಾನ ದಾಳಿಗೆ ನಲಂದ, ವಿಕ್ರಮಶಿಲ ಮತ್ತು ಉದಾಂತಪುರದ ಬೌದ್ಧ ವಿಹಾರಗಳೂ, ಪ್ರಸಿದ್ಧ ವಿಶ್ವವಿದ್ಯಾನಿಲಯಗಳೂ ಮತ್ತು ಆಸ್ಪತ್ರೆಗಳೂ ನೆಲಸಮವಾದವು. ಅಲ್ಲಿದ್ದ ಭಿಕ್ಕುಗಳು ಮತ್ತು ವಿಜ್ಞಾನಿಗಳು ದಾಳಿಕಾರರಿಗೆ ಆಹುತಿಯಾದರು;

ಹಲವರು ನೇಪಾಳ, ದಕ್ಷಿಣ ಇಂಡಿಯಾ ಮತ್ತು ಬರ್ಮಾ ರಾಜ್ಯಗಳಿಗೆ ಪಲಾಯನ ಮಾಡಿದರು. ವಿಜ್ಞಾನದ ಪ್ರಗತಿ ಸಂಪೂರ್ಣವಾಗಿ ಕುಂಠಿತವಾಯಿತು. ಎಲ್ಲೆಲ್ಲಿಯೂ ರಾಜಕೀಯ ಮತ್ತು ಸಾಮಾಜಿಕ ಅಶಾಂತಿ. ದೇಶದ ಸ್ವಾತಂತ್ರ್ಯದೊಡನೆ ಅದರ ಬೌದ್ಧಿಕ ಪ್ರಗತಿಯೂ ಕೊನೆಗೊಂಡಿತು.

(೩) ಹಿಂದೂ ಧರ್ಮದ ಬ್ರಾಹ್ಮಣ, ಕ್ಷತ್ರಿಯ ಮತ್ತು ಇತರ ವಿದ್ಯಾವಂತರು ಕಲೆ ಮತ್ತು ವಿಜ್ಞಾನಗಳ ಅಧ್ಯಯನವನ್ನು ಮುಂದುವರಿಸುವ ಗೋಜಿಗೇ ಹೋಗಲಿಲ್ಲ. ಹೀಗಾಗಿ ಅವು ಗ್ರಾಮಾಂತರ ಜನರಲ್ಲೋ ಅಥವಾ ಸಮಾಜದ ಕೆಳವರ್ಗದವರಲ್ಲೋ ಸೀಮಿತಗೊಂಡವು.

(೪) ಸಮಾಜದ ಪ್ರತಿಷ್ಠಿತವರ್ಗದವರು ನಾವಿಕರು, ಶಿಲ್ಪಿಗಳು, ಲೋಹ ವಿದ್ಯಾಪರಿಣತರು, ಚಮ್ಮಾರರು, ಕಲಾಭ್ಯಾಸಿಗಳು, ಸಂಗೀತಗಾರರು ಮತ್ತು ನಾಟ್ಯವಿಶಾರದರ ಬಗ್ಗೆ ಅಸ್ಪೃಶ್ಯತಾ ಭಾವನೆಯನ್ನು ಬೆಳಸಿಕೊಂಡರು.

೫) ಹಿಂದೂ ಸಮಾಜದಲ್ಲಿ ಕ್ರಮೇಣ ವರ್ಣಾಶ್ರಮ ಧರ್ಮ ಮಾಯವಾಗಿ ಅದರ ಸ್ಥಾನದಲ್ಲಿ ಕಟ್ಟುನಿಟ್ಟಾದ ಕುರುಡು ಜಾತಿಪದ್ಧತಿ ತಲೆ ಹಾಕಿ ಇಡೀ ಸಮಾಜವನ್ನು, ರಾಷ್ಟ್ರವನ್ನು, ಕಲೆ–ವಿಜ್ಞಾನಗಳ ಪ್ರಗತಿಯನ್ನು ಹಾಳು ಮಾಡಿತು. ಪ್ರತಿಭಾವಂತರು ಕೇವಲ ರಾಜವಂಶ–ಗುರುವಂಶಗಳಿಗೇ ಮೀಸಲಾದವರೆಂಬ ಮೂಢ ಭಾವನೆ ಜನರಲ್ಲಿ ಪ್ರಚಲಿತವಾಗಿ ಜಾತಿ ಕಟ್ಟಳೆಯ ಕಪಿಮುಷ್ಟಿಯ ಹಿಡಿತಕ್ಕೆ ಸಿಕ್ಕಿ ಬವಣೆ ಪಡುತ್ತಿದ್ದ ಕೆಳವರ್ಗದವರ ಮೇಲೆ ಇದು ಭಯಾನಕವಾದ ಮಾನಸಿಕ ಪರಿಣಾಮವನ್ನುಂಟು ಮಾಡಿ ಅವರಲ್ಲಿದ್ದ ಪ್ರಚೋದನಾ ಶಕ್ತಿಯನ್ನೇ ಭೂಗತ ಮಾಡಿತು. ರಾಷ್ಟ್ರಕ್ಕೆ ಹೇಳಲಾರದ ಹಾನಿಯುಂಟಾಯಿತು. ಇಂದಿಗೂ ಈ ಸಮಾಜವೈರಿಯ ಕಪಿಮುಷ್ಟಿಯ ಹಿಡಿತದಲ್ಲೇ ನಮ್ಮ ರಾಷ್ಟ್ರ ತೊಳಲಾಡುತ್ತಿದೆ.

ಆದರೂ ಕಾರ್ಮೋಡದ ಕಗ್ಗತ್ತಲಿನಲ್ಲೂ ಒಮ್ಮೊಮ್ಮೆ ಕಣ್ಣು ಕೋರೈಸುವ ಮಿಂಚಿನ ಪ್ರತಿಭೆ ತಲೆದೋರಿ ಶುಭದ ಸಂಕೇತವೆನಿಸುವಂತೆ ಆಗೊಮ್ಮೆ-ಈಗೊಮ್ಮೆ ಮಹಾನುಭಾವರು – ಆಚಾರ್ಯ ಪಿ. ಸಿ. ರೇ, ಶ್ರೀನಿವಾಸ ರಾಮಾನುಜನ್, ಬೀರ್‌ಬಲ್ ಸಹನಿ, ಸರ್ ಸಿ. ವಿ. ರಾಮನ್, ಹರ್‌ಗೋವಿಂದ ಖುರಾನ ಮುಂತಾದವರು ನಮ್ಮ ರಾಷ್ಟ್ರದಲ್ಲಿ ಜನಿಸಿ ಗತಕಾಲದ ಉಜ್ವಲ ವಿಜ್ಞಾನ ಪರಂಪರೆಯ ಪ್ರತೀಕಗಳೆನಿಸಿದ್ದಾರೆ. ಈ ವಿಭೂತಿ ಪುರುಷರು ಹೆಚ್ಚು ಹೆಚ್ಚಾಗಿ ಆವಿರ್ಭವಿಸಿ ನಮ್ಮನ್ನೂ, ನಮ್ಮ ರಾಷ್ಟ್ರವನ್ನೂ ವಿಜ್ಞಾನದ ಉಜ್ವಲ ಹಾದಿಯಲ್ಲಿ ಮುನ್ನಡೆಸಲಿ ಎಂದು ಹಾರೈಸೋಣ.

ಗ್ರಂಥಋಣ

1. Bagchi U. N. — '*Law of Minerals in anciant India*'
2. Bandopadhyaya N. C. — '*Kautilya*'
3. Dhar N. R. — '*Cultural Heritage of India*'
4. Mozumdar R. C. — '*Anciant Indian History*'
5. Capt. Munn — '*Gold Mining in South India*'
6. Rhys David — '*Buddist India*'
7. Shamasastri R. — '*Arthasasthra*'
8. Smith V. A. — '*Early History of India*'
9. '*Manu Samhita*'.

★ ಎಂ. ಎಸ್. ಸದಾಶಿವಯ್ಯ
★ ಬಿ. ಪಿ. ಗೋವಿಂದರಾಜುಲು

ಬಾಪುವಿಗೆ

ಎಂಥ ಮೊಂಡನೋ ನೀನು ?
ಸತ್ತು ಸುಡುಗಾಡ ಸೇರಿದೆಯೆಂದು
ನಿಶ್ಚಿಂತೆಯಿಂದಿದ್ದರೆ, ಗಸ್ತಿತಿರುಗುತ
ಮತ್ತೆ ಎಚ್ಚರಿಸುವೆ ?
ನೀ, ಸತ್ತದ್ದು ನಮಗೆ ಗೊತ್ತಿಲ್ಲೆಂದು
ತಿಳಿದೆಯಾ ?
ದಾಖಲೆ ಇಟ್ಟಿದ್ದೇವೆ, ದಾಖಲೆ,
ನಿನಗೇ ಗೊತ್ತಿಲ್ಲವೆ ?
ಎಷ್ಟು ಸಲ ನಿನ್ನ ಹೆಸರಿಲೆ ಡೋಲು ಬಡಿದು,
ಡೊಂಬರಗಣೆ ನೆಟ್ಟು, ಕಸರತ್ತು ತೋರಿಸದಿದ್ದರೂ,
ಮಸಲತ್ತು ಮಾಡಿ, ಮುಂದಿನೂರಲ್ಲಿ ಹಾವು ಮುಂಗಲಿ
ಆಟವೆಂದಿಲ್ಲ?

ಎಷ್ಟು ಸಲ ಕೂಟಕೂಟಿಗೂ ಹೊಗಳ ಹೂವಾಲಿ—
ಹಾಕಿ ಹೊನ್ನ ತಿಲುಬಿಗೇರಿಸಿಲ್ಲ ನಿನ್ನ ?
ಏನೇ ಅನ್ನು, ಸತ್ತು ಬದುಕಿದ ಬೇತಾಳ ನೀನು.
ಬಿಸಿಲು ನಡುನೆತ್ತಿಗೇರಿದಾಗಲೂ, ನೀಬರುವ
ಭಯ ತಪ್ಪದು ನಮಗೆ,
ಯಾಕೆ ಗೊತ್ತಾ ?
ತಿಳಿದೂ ತಿಳಿದೂ ನಮ್ಮ ಕುರುಕ್ಷೇತ್ರದ ಮಧ್ಯೆ
ನ್ಯಾಯ ಹೇಳಲು ನೀನು ಬರುವವನೇ ಅಜ್ಜ
ಬಂದರೆ ?
ಪಿಸ್ತೂಲುಗಳ ಪಂಜರ ನಿನಗೆ ಸಿದ್ಧ.

★ ಪ್ರಭುಸ್ವಾಮಿಮಠ

ಸಂಸ್ಕೃತಿಯ ವ್ಯಾಪ್ತಿ

ಮಿತಿಮೀರಿದ ವೈಜ್ಞಾನಿಕ ಪ್ರಗತಿಯು ಮಾನವನು ಇಲ್ಲಿಯವರೆಗೆ ನಂಬಿದ್ದ ಆದರ್ಶಗಳನ್ನು ಬುಡಮೇಲುಗೊಳಿಸಿದೆ. ಜೀವನದ ಮೌಲ್ಯಗಳು ಇಳಿಮುಖವಾಗಿವೆ. ಸೃಷ್ಟಿಯ ಅಪೂರ್ವ ಸಾಧನೆಯೆನ್ನಿಸಿದ ಮಾನವನು ಹಿಂದೆಂದೂ ಇಲ್ಲದ ವೈಚಾರಿಕ ಗೊಂದಲಕ್ಕೆ ಈಡಾಗಿದ್ದಾನೆ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಜೀವನದಲ್ಲಿ ಮೌಲ್ಯಗಳು ಪುನಃ ಸೃಷ್ಟಿಗೊಳ್ಳಬೇಕೆಂದು ವಿಚಾರವೇತ್ತರು ಪ್ರತಿಪಾದಿಸುತ್ತಿದ್ದಾರೆ. ಆಧುನಿಕ ಜೀವನದ ವಿಕೃತಿಯನ್ನು ಹೋಗಲಾಡಿಸಲು ಮೌಲ್ಯಪ್ರಜ್ಞೆಯನ್ನು ಕುದುರಿಸಿಕೊಳ್ಳುವುದೊಂದೇ ಉಪಾಯವಾಗಿದೆ. ವಾಸ್ತವಿಕ ದೃಷ್ಟಿಯಲ್ಲಿ ಧರ್ಮ ಹಾಗೂ ವಿಜ್ಞಾನಗಳು ಜೀವನಕ್ಕೆ ನೆಮ್ಮದಿಯನ್ನು ತರುವಲ್ಲಿ ನಿಷ್ಫಲಗೊಂಡಿವೆ. ಆದ್ದರಿಂದ ಧರ್ಮ, ವಿಜ್ಞಾನಗಳ ಒಳ್ಳೆಯ ಅಂಶಗಳನ್ನು ಹೀರಿ ಸಮನ್ವಯ ಶಕ್ತಿಯಾಗಿ ಬೆಳೆಯುತ್ತಿರುವ ಸಂಸ್ಕೃತಿಯ ವಿಚಾರವು (Concept of culture) ಚಿಂತನ ಶೀಲರನ್ನು ಆಕರ್ಷಿಸುತ್ತಲಿದೆ.

ಭಾರತದ ವಿವಿಧ ಭಾಷೆಗಳಲ್ಲಿ ಪ್ರಯೋಗದಲ್ಲಿರುವ ‘ ಸಂಸ್ಕೃತಿ ’ ಎಂಬುದು ಇಂಗ್ಲೀಷಿನ ‘ Culture ’ ಎಂಬ ಪದಕ್ಕೆ ಸಂವಾದಿಯಾಗಿದೆ. ಆದರೆ ಇಂಗ್ಲೀಷಿನಲ್ಲಿ ಈ ಪದದ ಅರ್ಥವ್ಯಾಪ್ತಿ ಅನೇಕ ವಾದವಿವಾದಗಳಿಗೆ ಎಡೆಮಾಡಿಕೊಟ್ಟಿದೆಯಷ್ಟೇ ಅಲ್ಲ; ಅದೊಂದು ಆಧುನಿಕ ಯುಗದ ಬಗೆಹರಿಯದ ಸಮಸ್ಯೆಯೆಂದು ಒಪ್ಪಿಕೊಳ್ಳಲಾಗಿದೆ.[೧] ವೃತ್ತಪತ್ರಿಕೆಗಳಲ್ಲಿ, ಭಾಷಣ-ಲೇಖನಗಳಲ್ಲಿ ಸಂಸ್ಕೃತಿಯೆಂಬ ಪದದ ಬಳಕೆ ಅತಿಯಾಗಿ ಅದರ ನಿಶ್ಚಿತ ಅರ್ಥದ ಬಗೆಗೆ ಅನೇಕ ಸಂದೇಹಗಳನ್ನು ತಂದೊಡ್ಡಿದೆ. ಸಾಲದುದಕ್ಕೆ ನಾಗರಿಕತೆ (Civilization) ಎಂಬ ಪದವೂ ಅದೇ ಅರ್ಥದಲ್ಲಿ ಬಳಕೆಗೆ ಬಂದು ಈ ಗೊಂದಲವನ್ನು ತೀವ್ರಗೊಳಿಸಿದೆ.

ಪಾಶ್ಚಾತ್ಯ ಸಾಹಿತ್ಯದಲ್ಲಿ ‘ Culture ’ ಎಂಬ ಪದಕ್ಕೆ ಸುದೀರ್ಘವಾದ ಇತಿಹಾಸವಿದೆ. ಗ್ರೀಕರು ಈ ಪದವನ್ನು ಪ್ರಯೋಗಿಸದೆ ಇದ್ದರೂ ಸಂಸ್ಕೃತಿಯ ಅಂತಃಸತ್ವವನ್ನು ಅಭಿವ್ಯಕ್ತಗೊಳಿಸುವ ಸತ್ಯ, ಸೌಂದರ್ಯ, ಒಳಿತು—ಈ ಮೌಲ್ಯಗಳು ಅವರ ಕಾಣಿಕೆಗಳಾಗಿವೆ. ರೋಮನ್ನರು ‘ Cultura ’ ಎಂಬುದನ್ನು ಭೌತಿಕ ಹಾಗೂ ನೈತಿಕ ಎರಡೂ ಅರ್ಥಗಳಲ್ಲಿ ಪ್ರಯೋಗಿಸಿದ್ದಾರೆ.

---

೧. "What the word culture really means seems to have been accepted as one of the insoluble puzzels of the modern age."
"Culture in Public and Private life." —F. R. Cowell. P. 237

'Cultus' ಮತ್ತು 'in-cultus' ಎಂಬ ಪದಗಳು ವ್ಯಕ್ತಿಯ ಸದಾಚಾರ ಹಾಗೂ ಒರಟುತನಗಳನ್ನು ಎತ್ತಿಹೇಳುತ್ತಿದ್ದವು. ಸಿಸಿರೋ 'Cultura' ಎಂಬುದನ್ನು ಭೂವ್ಯವಸಾಯ (Cultivation of the Soil) ಹಾಗೂ ಮಾನಸಿಕ ವ್ಯವಸಾಯ (Cultivation of the mind or Spirit) ಎಂದು ಭಿನ್ನ ಅರ್ಥಗಳಲ್ಲಿ ಬಳಸಿರುವುದು ಮೇಲಿನ ಹೇಳಿಕೆಗೆ ನಿದರ್ಶನವಾಗಿದೆ. ಇಂಗ್ಲೀಷಿನಲ್ಲಿ ಈ ಪದವು Agriculture, Horticulture, Shericulture, ಮುಂತಾದವುಗಳಲ್ಲಿ ಬಹಿರಂಗದ ವ್ಯವಸಾಯವೆಂಬ ಅರ್ಥವನ್ನು ವ್ಯಕ್ತಗೊಳಿಸುತ್ತದೆ. ಆದರೆ 'Culture' ಎಂಬುದು ಅತ್ಯಾಧುನಿಕ ಅರ್ಥದಲ್ಲಿ ಮನೋಮಯ ಜೀವನ ಇಲ್ಲವೆ ಮಾನಸಿಕ ವ್ಯವಸಾಯಕ್ಕೆ ಸೀಮಿತವಾಗುತ್ತದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ :

"....as the common quality or tendancy of cultural activities is not merely the enhancement of life on the animal or boilogical plane, it must lie elsewhere on a plane of its own. That plane is the realm of the mind."[೨]

'ಸಂಸ್ಕೃತಿ' ಹಾಗೂ ಸೃಜನಶೀಲತೆ :

ಮಾನವನ ವ್ಯಕ್ತಿತ್ವವು ಅನಂತಸೃಷ್ಟ್ಯಾತ್ಮಕ ಶಕ್ತಿಗಳ ಸಮಷ್ಟಿಯಾಗಿದೆ. ಈ ಶಕ್ತಿಗಳ ಅಭಿವ್ಯಕ್ತಿಯಲ್ಲಿ ಸಂಸ್ಕೃತಿಯು ವೇದ್ಯವಾಗುತ್ತದೆ. ಸೃಜನಶೀಲತೆಯು ಮಾನವನ ವ್ಯಕ್ತಿತ್ವದ ಪರಮರಹಸ್ಯವಾಗಿದೆ. ಅದು ಸಾಹಿತ್ಯ, ನೃತ್ಯ, ಸಂಗೀತ, ಶಿಲ್ಪ, ಚಿತ್ರ ಮೊದಲಾದುವುಗಳಲ್ಲಿ ಸೌಂದರ್ಯಾಭಿಮುಖವಾಗಿ, ವಿಜ್ಞಾನ ತತ್ವಜ್ಞಾನಗಳಲ್ಲಿ ಸತ್ಯಾನ್ವೇಷಣೆಯಾಗಿ, ಧರ್ಮ, ನೀತಿಶಾಸ್ತ್ರಗಳಲ್ಲಿ ಒಳಿತಿನ ಅಭೀಪ್ಸೆಯಾಗಿ—ಹೀಗೆ ಅನಂತಮುಖವಾಗಿ ಅಭಿವ್ಯಕ್ತಗೊಳ್ಳಬಹುದು. ಆದ್ದರಿಂದ ಸೃಜನಶೀಲತೆ ಅಭಿವ್ಯಕ್ತಗೊಳ್ಳುವ ಅನಂತ ಮುಖಗಳೆಲ್ಲ ವ್ಯಾಪಕವಾದ ಅರ್ಥದಲ್ಲಿ ಸಂಸ್ಕೃತಿಯ ಕಕ್ಷೆಗೆ ಒಳಪಡುತ್ತವೆ; ಒಳಪಡಬೇಕು. ಮಾನವನನ್ನು ಸಂಸ್ಕೃತಿ ವಿಕಾಸಕ್ಕೆ ಅಣಿಗೊಳಿಸುವ ಅರ್ಹತೆಗಳಲ್ಲಿ ಅವನಲ್ಲಿ ಅಭಿವ್ಯಕ್ತವಾಗುವ ಸಂಕೇತ ನಿರ್ಮಾಣಶಕ್ತಿಯೇ ಪ್ರಮುಖವಾದುದೆಂದು ಮ್ಯಾಕ್‌ಗ್ರಾಹಿಲ್ ಎಂಬ ವಿದ್ವಾಂಸನು ಹೇಳುತ್ತಾನೆ.[೩] ಅನಂತಮುಖವಾಗಿ ಬೆಳೆದು ನಿಂತ ಭಾಷೆ ಹಾಗೂ ಕಲೆಗಳು ಈ ಸಂಕೇತನಿರ್ಮಾಣಶಕ್ತಿಯ ರೂಪಗಳೇ ಆಗಿವೆ. ಸಂಕೇತನಿರ್ಮಾಣಶಕ್ತಿಯು ಸೃಜನಶೀಲತೆಯಲ್ಲದೆ ಬೇರೇನೂ ಅಲ್ಲ.

---

೨. F. R. Cowell- 'Culture in Public and private life.' p. 5

೩. "....But the most important qualification of all is the ability to symbol." —'Mc. Graw Hill. —The Evolution of Culture.' p. 3.

'ಸಂಸ್ಕೃತಿ' ಹಾಗೂ ಮೌಲ್ಯಗಳು :

ನವನವೋನ್ಮೇಷಶಾಲಿನಿಯಾದ ಪ್ರತಿಭೆ ಅಥವಾ ಸೃಜನಶೀಲತೆ ಹೊಸ ಹೊಸ ಮೌಲ್ಯಗಳನ್ನು ನಿರ್ಮಿಸಿ ಜೀವನಕ್ಕೆ ಅರ್ಥಪೂರ್ಣತೆಯನ್ನು ತಂದು ಕೊಡುತ್ತದೆ. ಆದರ್ಶಗಳನ್ನು ಸಮೆದು, ಜೀವನಕ್ಕೆ ಅರ್ಥಪೂರ್ಣತೆಯನ್ನು ನೀಡುವ ಮೌಲ್ಯಗಳ ಸೃಷ್ಟಿ ಸಂಸ್ಕೃತಿಯ ಪರಮ ಉದ್ದೇಶವಾಗಿದೆ. ಸತ್ಯ, ಸೌಂದರ್ಯ, ಒಳಿತು (ಶಿವ) ಇವು ಸಂಸ್ಕೃತಿಯಿಂದ ಬೆಳೆದು ನಿಂತ ಮೂಲಭೂತ ಮೌಲ್ಯಗಳು. ಇವು ನಿತ್ಯ ಜೀವನದ ವ್ಯಾವಹಾರಿಕ ಕ್ಷೇತ್ರವನ್ನು ಬೆಳಗಿ ವಿರಮಿಸದೆ, ತಾತ್ವಿಕ ಕ್ಷೇತ್ರದಲ್ಲಿ ಪರ್ಯವಸಾನಗೊಳ್ಳುತ್ತವೆ. ಮಾನವನ ಅನಂತ ಸಾಧನೆಗಳೆಲ್ಲ ಈ ಮೌಲ್ಯಗಳ ಸಾಕ್ಷಾತ್ಕಾರದತ್ತ ನಡೆದ ಪ್ರಯತ್ನಗಳಾಗಿವೆ. ಸತ್ಯ, ಶಿವ, ಒಳಿತುಗಳ ಅವಿರತ ಅಭಾಧಿತ ಅನ್ವೇಷಣೆ ಅನುಸಂಧಾನಗಳಲ್ಲಿ ಜೀವನದ ಸಫಲತೆ ಇದೆ. ಮಾನವನು ಸೃಷ್ಟಿಸಿದ ಅನೇಕ ಧರ್ಮಗಳಲ್ಲಿ ಇವೇ ಮೌಲ್ಯಗಳು ಆದರ್ಶವಾಗಿದ್ದರೂ ಅಲ್ಲಿ ಅವುಗಳ ಅನುಸಂಧಾನವು ಆಯಾ ಧರ್ಮಗಳ ಪರಿಮಿತ ವಲಯದಲ್ಲಿಯೇ ನಡೆಯಬೇಕೆಂಬ ಕಟ್ಟುನಿಟ್ಟುಗಳಿವೆ. ಐತಿಹಾಸಿಕ ದೃಷ್ಟಿಕೋನದಿಂದ ಅವಲೋಕಿಸಿದಾಗ ಸಂಸ್ಕೃತಿಯು ಸಾದರ ಪಡಿಸುವ ಮೌಲ್ಯಗಳು ಜಗತ್ತಿನ ಹಿರಿಯ ಧರ್ಮಗಳು ಎತ್ತಿಹಿಡಿವ ಮೌಲ್ಯಗಳಿಂದ ಭಿನ್ನವಲ್ಲವೆಂಬುದು ವೇದ್ಯವಾಗಬಹುದು. ಸತ್ಯ, ಸೌಂದರ್ಯ ಶಿವಗಳು ಧಾರ್ಮಿಕ ಮೌಲ್ಯಗಳೂ ಆಹುದು; ಸಂಸ್ಕೃತಿಯ ಮೌಲ್ಯಗಳೂ ಆಹುದು. ಆದರೆ ಅವುಗಳ ಅನ್ವೇಷಣೆಯ ವಿಧಾನದಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಧರ್ಮದ ದೃಷ್ಟಿಯಲ್ಲಿ ಮತೀಯ ನಂಬಿಕೆಗೆ ಪ್ರಥಮಸ್ಥಾನ; ಮೌಲ್ಯಗಳಿಗೆ ದ್ವಿತೀಯಸ್ಥಾನ. ಮತೀಯ ನಂಬಿಕೆಗಳ ಪ್ರಾಬಲ್ಯದಿಂದಾಗಿ ಮೌಲ್ಯಗಳ ಅನುಸಂಧಾನವು ಕುಂಠಿತಗೊಳ್ಳುತ್ತದೆ. ಕ್ರಿಶ್ಚಿಯನ್ ಧರ್ಮದ ನಂಬಿಕೆಗಳನ್ನು ಪ್ರತಿಭಟಿಸಿ ಹೊಸ ವೈಜ್ಞಾನಿಕ ಸತ್ಯದ ಆವಿಷ್ಕಾರದಲ್ಲಿ ನಿರತರಾದ ವಿಜ್ಞಾನಿಗಳನ್ನು ಕ್ರೂರ ರೀತಿಯಲ್ಲಿ ಹಿಂಸಿಸಿದ ಉದಾಹರಣೆಗಳು ಈ ಮಾತಿಗೆ ಸಾಕ್ಷಿಯಾಗಿವೆ. ಇಸ್ಲಾಮ ಧರ್ಮವು ಮೂರ್ತಿಪೂಜೆಯನ್ನು ನಿಷೇಧಿಸಿದ್ದರಿಂದ ಅಲ್ಲಿ ಮೂರ್ತಿಶಿಲ್ಪದ ವಿಕಾಸವಾಗಲೇ ಇಲ್ಲ.

ಸತ್ಯ, ಸೌಂದರ್ಯ, ಒಳಿತುಗಳ ಅನ್ವೇಷಣೆಗೆ ಸಂಸ್ಕೃತಿ ಅನುಸರಿಸುವ ವಿಧಾನವು ಹೆಚ್ಚು ಮಾನವೀಯ ಹಾಗೂ ವ್ಯಾಪಕವಾದುದಾಗಿದೆ. ಧರ್ಮದಲ್ಲಿ ಮತೀಯ ವಿಚಾರ (Dogma) ಮುಖ್ಯವಾದರೆ ಇಲ್ಲಿ ಮೌಲ್ಯಗಳೇ ಮುಖ್ಯ! ಈ ಸಂದರ್ಭದಲ್ಲಿ ಸಂಸ್ಕೃತಿಯು ಧರ್ಮವನ್ನು ಮೀರಿ ಮುಂದುವರಿಯುತ್ತದೆ ಎಂದು ಮ್ಯಾಥೂ ಆರ್ನಾಲ್ಡನು ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು :

"......perfection— as Culture, from a thorough disinterested study of human nature and human experience learns to conceive it— is a harmonious expantion of all the powers which make the beauty and worth of human nature, and is not consistant with the over development of any one power at the expense of the rest. Here culture goes beyond religion, as religion is generally conceived by us."[೪]

'ಸಂಸ್ಕೃತಿ', ಸಂಸ್ಕೃತಿಗಳು :

ವ್ಯಾವಹಾರಿಕವಾದ ಸಂಕುಚಿತ ಅರ್ಥದಲ್ಲಿ ಧರ್ಮ, ಭಾಷೆ, ಜನಾಂಗ, ರಾಷ್ಟ್ರ ಹಾಗೂ ಪ್ರದೇಶಗಳಿಗೆ ಅನುಗುಣವಾಗಿ ನಾವು 'ಸಂಸ್ಕೃತಿ' ಎಂಬ ಪದವನ್ನು ಪ್ರಯೋಗಿಸುತ್ತೇವೆ. ಈ ರೀತಿಯ ವಿಭಜನೆ ಅನೇಕ ಸಲ 'ನಮ್ಮ ಸಂಸ್ಕೃತಿಯೇ ಶ್ರೇಷ್ಠ' ಎನ್ನುವ ಉದ್ವೇಗಕ್ಕೆ ಮೂಲವಾಗಿ ನಾನಾರೀತಿಯ ಘರ್ಷಣೆಗಳಿಗೆ ನಾಂದಿಯಾಗುತ್ತದೆ. ಆದರೆ ಇವೆಲ್ಲವನ್ನು ಮೀರಿದ ಅರ್ಥವ್ಯಾಪ್ತಿಯನ್ನು ಇಂದು ಸಂಸ್ಕೃತಿ ಪಡೆದಿದೆ ಎನ್ನುವುದನ್ನು ಅರಿತುಕೊಳ್ಳಬೇಕು. ಮಾನವೀಯತೆಯು ಮತ, ತತ್ವ, ಧರ್ಮಗಳನ್ನು ಅರಗಿಸಿಕೊಂಡು ಅವುಗಳನ್ನು ಮೀರಿ ಬೆಳೆದ ವಿಚಾರವಾಗಿದೆ. ಸಂಸ್ಕೃತಿಯು ಎಲ್ಲಂದದಲ್ಲಿ ಮಾನವೀಯತೆಯನ್ನು ಪೋಷಿಸುತ್ತದೆ. ಆದ್ದರಿಂದ ವ್ಯಾಪಕವಾದ ಅರ್ಥದಲ್ಲಿ ಸಂಸ್ಕೃತಿಯೆನ್ನುವುದು ಸಮಗ್ರ ಮಾನವಕೋಟಿಯ ಆಶೋತ್ತರಗಳನ್ನು ಪ್ರತಿನಿಧಿಸುವುದನ್ನು ಗಮನಿಸಬೇಕು.

ಸಂಸ್ಕೃತಿ, ನಾಗರಿಕತೆ :

ಮ್ಯಾಥ್ಯೂ ಆರ್ನಾಲ್ಡನು ಸಂಸ್ಕೃತಿಯನ್ನು ಪರಿಪೂರ್ಣತೆಯ ಅಧ್ಯಯನ (A study of perfection) ವೆಂದು ವ್ಯಾಖ್ಯಾನಿಸಿ, ಪರಿಪೂರ್ಣತೆಯನ್ನುವುದು ಆತ್ಮಮನಸ್ಸುಗಳಿಗೆ ಸಂಬಂಧಿಸಿದ ಅಂತರಂಗಿಕ ವಿಕಾಸವೆನ್ನುತ್ತಾನೆ. ಅವನ ಪ್ರಕಾರ ಬಹಿರಂಗದ ಜೀವನದಲ್ಲಿ ಪ್ರಗತಿಯನ್ನು ತರುವ ವಸ್ತುಗಳೆಲ್ಲ ನಾಗರಿಕತೆಯ ವಲಯಕ್ಕೆ ಸೇರುತ್ತವೆ.

"...perfection which consists in becoming something than having something is an inward condition of the mind and spirit not in an outward set of circumstances."[೫]

---

೪. Mathew Arnold : 'Culture and Anarchy.' p. 48.

೫. Mathew Arnold : 'Culture and Anarchy.' p. 48

ಮೌಲ್ಯಗಳೊಂದಿಗೆ ಏಕಾತ್ಮಕತೆಯನ್ನು ಸಾಧಿಸುವುದು ಇಲ್ಲವೆ ಮೌಲ್ಯಗಳೇ ಆಗಿ ಪರಿವರ್ತಿತವಾಗುವದು ಸಂಸ್ಕೃತಿಯಾದರೆ, ಬಾಹ್ಯ ಜೀವನದ ಸೌಕರ್ಯಗಳಲ್ಲಿ ಪ್ರಗತಿಯನ್ನು ಸಾಧಿಸುವುದು ನಾಗರಿಕತೆ. ಅಂಥ್ರಾಪಾಲಾಜಿಯಲ್ಲಿ ಮಾನವನ ಅಂತರಂಗ ಬಹಿರಂಗಗಳ ವ್ಯವಹಾರವನ್ನು ಒಳಗೊಂಡ ಸಮಗ್ರ ಜೀವನ ವಿಧಾನವನ್ನು ಸಂಸ್ಕೃತಿಯೆಂದು ಕರೆಯಲಾಗುತ್ತದೆ. ಬಹಿರಂಗದ ಜೀವನ ವಿಧಾನದಲ್ಲಿ ಸಂಸ್ಕೃತಿಯ ಅಂಶಗಳು ತೋರಬಹುದು. ಆದರೆ ಎಲ್ಲ ಕ್ರಿಯೆಗಳೂ ಸಂಸ್ಕೃತಿಯನ್ನು ಅಭಿವ್ಯಕ್ತಪಡಿಸುತ್ತವೆ ಎನ್ನುವುದು ಹಾಸ್ಯಾಸ್ಪದವಾದ ವಿಚಾರವಾಗುತ್ತದೆ. ಆದುದರಿಂದ ನಾಗರಿಕತೆಯನ್ನುವುದು ಸಂಸ್ಕೃತಿಯ ಒಂದು ಭಾಗ (an aspect of culture) ವೆಂದು ಅರ್ಥೈಸಬಹುದೇ ಹೊರತು, ಅದು 'ಸಂಸ್ಕೃತಿ' ಎಂಬ ಪದದ ವ್ಯಾಪ್ತಿಯನ್ನು ಪಡೆಯಲಾರದು. 'ಸಂಸ್ಕೃತಿ' ಎಂಬ ಪದಕ್ಕೆ ಸಮಾನಾರ್ಥಕವಾಗಿ 'ನಾಗರಿಕತೆ' ಎಂಬ ಪದವನ್ನು ಪ್ರಯೋಗಿಸುವುದು ಆವೆರಡು ಪದಗಳ ಅರ್ಥವ್ಯಾಪ್ತಿಯನ್ನು ಅರಿಯದ ಹೊಣೆಗೇಡಿತನವಾಗುತ್ತದೆ.

"Civilization is defined as 'a culture in which cities are built.'"[೬]

ಎಂದು 'Civilization' ಎಂಬುದಕ್ಕೆ ವ್ಯಾಖ್ಯೆಯನ್ನು ಕೊಟ್ಟುದು ಮೇಲಿನ ಅಭಿಪ್ರಾಯಕ್ಕೆ ಪೋಷಕವಾಗಿದೆ

"Creative abilities build up culture. Civilization is the process by which culture is spread."[೭]

ಸೃಷ್ಟ್ಯಾತ್ಮಕ ಶಕ್ತಿಗಳು ಸಂಸ್ಕೃತಿ ನಿರ್ಮಾಣದ ಸಾಧನಗಳು. ನಾಗರಿಕತೆಯು ಸಂಸ್ಕೃತಿಯನ್ನು ಪ್ರಚಾರ ಮಾಡುವ ಸಾಧನಮಾತ್ರವೆಂದು ಕಾವೆಲ್ ಎಂಬ ವಿದ್ವಾಂಸನು ಅಭಿಪ್ರಾಯಪಡುತ್ತಾನೆ,

'ವ್ಯಷ್ಟಿ' 'ಸಮಷ್ಟಿ' ಅರ್ಥಗಳಲ್ಲಿ ಸಂಸ್ಕೃತಿ:

'ಸಂಸ್ಕೃತಿ' ಎಂಬುದನ್ನು ವೈಯಕ್ತಿಕ (Individual) ಹಾಗೂ ಸಾಮೂಹಿಕ (Collective) ಅರ್ಥಗಳಲ್ಲಿ ಪ್ರಯೋಗಿಸಲಾಗುತ್ತದೆ. ಮ್ಯಾಥೂ ಆರ್ನಾಲ್ಡನು ತನ್ನ ಕಾಲದ ಸಮಾಜವನ್ನು Barbarians, Philistines, Populace ಎಂದು ಮೂರು ವರ್ಗಗಳಲ್ಲಿ ವಿಶ್ಲೇಷಿಸಿ, ಈ ಮೂರೂ ವರ್ಗಗಳಿಗೆ ಸಂಸ್ಕೃತಿಪ್ರಜ್ಞೆ ಇಲ್ಲದುದನ್ನು ಸ್ಪಷ್ಟಪಡಿಸುತ್ತಾನೆ. ಅವನ ಪ್ರಕಾರ ಪರಿಪೂರ್ಣತೆಯ ಅಭೀಪ್ಸೆ ವ್ಯಕ್ತವಾಗುವುದು ಕೇವಲ ಕೆಲವು ವ್ಯಕ್ತಿಗಳಲ್ಲಿ ಮಾತ್ರ.

೬. Philip Bagby— 'Culture and History' p. 163.
೭. F. R. Cowell— "Culture in Public and Private life." p. 35.

ಸತ್ಯ, ಸೌಂದರ್ಯ, ಒಳಿತುಗಳ ವ್ಯಾಪ್ತಿಗೆ ಒಳಪಡುವ ಪ್ರಗತಿಪರಾಯಕ ವಿಚಾರಗಳು ಕೇವಲ ಮಹಾವ್ಯಕ್ತಿಗಳ ಜೀವನದಲ್ಲಿ ಹುಟ್ಟಿಕೊಳ್ಳುತ್ತವೆ. ದರ್ಶನ ಹಾಗೂ ಸೃಜನಶೀಲತೆಗಳು ಎಲ್ಲೆಡೆಗೆ ಎಲ್ಲ ಮಾನವರಲ್ಲಿ ಸ್ಫುರಣಗೊಳ್ಳತಕ್ಕವುಗಳಲ್ಲ. ಸಂಸ್ಕೃತಿಯ ಮೂಲಭೂತ ಮೌಲ್ಯಗಳು ಹುಟ್ಟುವುದು ಕೇವಲ ಕೆಲವು ವ್ಯಕ್ತಿಗಳಲ್ಲಿಯೇ ಆದುದರಿಂದ ಅರ್ನಾಲ್ಡನು ಅದನ್ನು ವ್ಯಕ್ತಿಯ (Individual) ಅರ್ಥದಲ್ಲಿ ಪ್ರಯೋಗಿಸುತ್ತಾನೆ. ಪ್ರತಿಭಾನ್ವಿತ ವ್ಯಕ್ತಿಗಳೇ ನಿಜವಾಗಿ ಸಂಸ್ಕೃತಿಯ ಅಧ್ವರ್ಯುಗಳು. ವ್ಯಷ್ಟಿಗತವಾದ ಆದರ್ಶಗಳು ಸುತ್ತಲಿನ ಸಮಾಜಕ್ಕೆ ವ್ಯಾಪಿಸಿ ಸಮಷ್ಟಿಗತವಾಗುತ್ತವೆ. ಆದರೂ ವ್ಯಕ್ತಿಯೇ ಸಂಸ್ಕೃತಿ ಪ್ರವಾಹಕ್ಕೆ ತಲಕಾವೇರಿ ಎನ್ನುವುದು ಅವನ ಅಭಿಪ್ರಾಯ.

ಸಮಾಜಶಾಸ್ತ್ರದಿಂದ ಪ್ರಭಾವಿತನಾದ ಟಿ. ಎಸ್. ಎಲಿಯಟ್ ಸಂಸ್ಕೃತಿ ವೈಯಕ್ತಿಕವೆಂಬ ಅರ್ನಾಲ್ಡನ ವಾದವನ್ನು ಅಲ್ಲಗಳೆಯುತ್ತಾನೆ:

"The impression of thinness which Arnold's culture conveys to a modern reader is partly due to the absence of social background to his picture." [೮]

ಅರ್ನಾಲ್ಡನ ವೈಯಕ್ತಿಕ ವಾದದ ಶಿಥಿಲತೆಗೆ ಕಾರಣ ಅದಕ್ಕೆ ಸರಿಯಾದ ಸಾಮಾಜಿಕ ಹಿನ್ನೆಲೆ ಇಲ್ಲದಿರುವುದೇ ಆಗಿದೆಯೆನ್ನುತ್ತಾನೆ. ಸಂಸ್ಕೃತಿಯು ಇಡೀ ಜನಾಂಗದ ಜೀವನ ವಿಧಾನದಲ್ಲಿ ವ್ಯಕ್ತವಾಗುವುದರಿಂದ ಜನಾಂಗ ಅಥವಾ ಸಮಾಜದಿಂದ ಅದನ್ನು ಬೇರ್ಪಡಿಸಲಾಗದು. ಸಂಸ್ಕೃತಿಯ ಅರ್ಥವು ವ್ಯಕ್ತಿ (Individual), ಪಂಗಡ (group or class), ಇಡೀ ಸಮಾಜ (The whole Society) ಹೀಗೆ ಮೂರುವಲಯಗಳಿಗೆ ವ್ಯಾಪಿಸಬಹುದಾದರೂ ಮೊದಲಿನವೆರಡು ಇಡೀ ಸಮಾಜ ಸಂಸ್ಕೃತಿಯನ್ನು ಅವಲಂಬಿಸಿವೆ. ಆದುದರಿಂದ ಸಮಾಜದ ಸಂಸ್ಕೃತಿಯೇ ಮೂಲಭೂತವಾದುದು—ಇದು ಎಲಿಯಟ್‌ನ ವಾದದ ಸಾರವಾಗಿದೆ:

"It is a part of my thessis that the culture of the individual is dependant upon the culture of a group or class and that the culture of the group or class is dependant upon the culture of the whole society to which that group or class belongs. Therefore it is the culture of the society that is fundamental". [೯]

ಸಂಸ್ಕೃತಿಗೆ ಮೇಲೆ ವಿವರಿಸಿದ ಮೂರು ಅರ್ಥಗಳಷ್ಟೇ ಅಲ್ಲ. ಆಧುನಿಕ ದೃಷ್ಟಿಯಲ್ಲಿ ಉತ್ತಮ ನಡೆವಳಿಕೆ (refinement of manners) ಇಲ್ಲವೆ

೮. T. S. Eliot— Notes towards the Definition of Culture. p. 22
೯. T. S. Eliot: Notes towards Definition of Culture— p. 21

ನಾಗರಿಕತೆ (urbanity), ಸಭ್ಯತೆ (Civility) ಎಂದೂ ಅದನ್ನು ಅರ್ಥೈಸಬಹುದು. ಈ ಅರ್ಥವನ್ನು ಗ್ರಹಿಸಿದರೆ, ಯಾವೊಬ್ಬ ವ್ಯಕ್ತಿ ಸಂಪೂರ್ಣ ಸಂಸ್ಕೃತಿ ಹೊಂದಿರುವುದನ್ನು ಕಾಣಲಾರೆವು. ಕವಿ, ತತ್ವಜ್ಞಾನಿ, ಕಲಾವಿದ, ಶಿಕ್ಷಣತಜ್ಞ-ಮೊದಲಾದವರು ಸಂಸ್ಕೃತಿ ವಿಕಾಸಕ್ಕೆ ಕಾರಣರಾದರೂ ಎಷ್ಟೋ ಸಲ ಅಸಭ್ಯ ನಡೆವಳಿಕೆಯುಳ್ಳವರಾಗಿರುತ್ತಾರೆ. ಆದ್ದರಿಂದ ಪರಿಪೂರ್ಣ ಸುಸಂಸ್ಕೃತ ವ್ಯಕ್ತಿಯನ್ನು ಹುಡುಕುವುದು ಕೇವಲ ಭ್ರಮೆ ಎನ್ನುತ್ತಾನೆ ಟಿ. ಎಸ್. ಎಲಿಯಟ್.

"The wholly cultured individual is a phantasm."[೧೦]

ನಿಜವಾದ ಅರ್ಥದಲ್ಲಿ ಸಂಸ್ಕೃತಿ ವ್ಯಕ್ತವಾಗುವುದು ಇಡೀ ಸಮಾಜದ ಜೀವನ ವಿಧಾನದಲ್ಲಲ್ಲದೆ, ಕೇವಲ ವ್ಯಕ್ತಿ ಇಲ್ಲವೆ ವ್ಯಕ್ತಿಗಳ ಗುಂಪಿನಲ್ಲಲ್ಲ ಎಂಬ ಎಲಿಯಟ್‌ನ ವಾದವು ವಿವೇಚನಾರ್ಹವಾಗಿದೆ.

ಸಂಸ್ಕೃತಿಯ ವಿಚಾರಕ್ಕೆ ಟಿ. ಎಸ್. ಎಲಿಯಟ್ ಹೊಸ ಅರ್ಥವ್ಯಾಪ್ತಿಯನ್ನು ಕೊಟ್ಟುದು ಸುವೇದ್ಯವಾಗಿದೆ. ಸಂಸ್ಕೃತಿ ಮಾನವನ ಸರ್ವಮುಖ ಪ್ರಗತಿ ಸೂಚಕವಾದುದು ಎನ್ನುವ ಮ್ಯಾಥ್ಯೂ ಆರ್ನಾಲ್ಡನ ವಿಚಾರವನ್ನು ಇಲ್ಲಿ ಪರಿಶೀಲಿಸಬಹುದು. ಮಾನವನ ವ್ಯಕ್ತಿತ್ವವು ಅನಂತ ಶಕ್ತಿಗಳ ಸಮಷ್ಟಿ ಎನ್ನುವ ಮಾತು ಸತ್ಯವಾದರೂ ಒಬ್ಬನೇ ವ್ಯಕ್ತಿಯಲ್ಲಿ ಆ ಎಲ್ಲ ಶಕ್ತಿಗಳು ಅಭಿವ್ಯಕ್ತವಾಗುವುದು ಅಸಾಧ್ಯವೆಂಬ ಮಾತು ಕೂಡ ಅಷ್ಟೇ ಸತ್ಯ. ಒಬ್ಬ ವ್ಯಕ್ತಿಯಲ್ಲಿ ಕಲಾಪರಿಣತಿಯನ್ನು ಕಂಡರೆ, ಇನ್ನೊಬ್ಬನಲ್ಲಿ ತಾತ್ವಿಕ ವಿಚಾರಗಳ ಪರಿಣತಿಯನ್ನು ಕಾಣಬಹುದು; ಮತ್ತೊಬ್ಬನಲ್ಲಿ ಇನ್ನೊಂದು ಶಕ್ತಿಯ ಅಭಿವ್ಯಕ್ತಿ ಸಾಧಿತವಾಗಬಹುದು. ಆದರೆ ಒಬ್ಬನೇ ವ್ಯಕ್ತಿಯಲ್ಲಿ ಇವೆಲ್ಲ ಒಂದೇ ರೀತಿಯ ಪರಿಣತೆ ಪಡೆಯುವುದು ಅಸಾಧ್ಯಕೋಟಿಯ ಮಾತು. ಈ ಸಂದರ್ಭದಲ್ಲಿ ಸಂಸ್ಕೃತಿ ಅಸಂಖ್ಯ ವ್ಯಕ್ತಿಗಳ ಅನಂತ ಮುಖವಾದ ಸಾಧನೆಗಳನ್ನು ಒಳಗೊಳ್ಳುವ ಸಮಷ್ಟಿಯ (Collective idea) ವ್ಯಾಪ್ತಿಯನ್ನು ಪಡೆಯುತ್ತದೆ.

ವ್ಯಕ್ತಿ ಅಥವಾ ವ್ಯಷ್ಟಿ ಸಂಸ್ಕೃತಿಯ ತಲ ಕಾವೇರಿ. ಇಡೀ ಮಾನವ ಕೋಟಿಯ ಸಮಷ್ಟಿ ಸಾಧನೆಯಲ್ಲಿ ಅದು ವಿಕಾಸಗೊಂಡು ಭವ್ಯ ಸ್ವರೂಪವನ್ನು ಪಡೆಯುತ್ತದೆ. ಆದುದರಿಂದ ಸಂಸ್ಕೃತಿಯ ಪ್ರಸ್ತಾಪದ ಸಂದರ್ಭದಲ್ಲಿ ಅದಕ್ಕೆ ಮೌಲ್ಯ ಪ್ರದಾನ ಮಾಡಿದ ವ್ಯಕ್ತಿಗಳನ್ನು ಮರೆಯುವುದು ಸಾಧ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ಸಂಸ್ಕೃತಿ ಹುಟ್ಟುವುದು ವ್ಯಷ್ಟಿಯಲ್ಲಿ; ಅದು ಬದುಕಿ ಬಾಳುವುದು ಸಮಷ್ಟಿಯಲ್ಲಿ.

★ ಎಂ. ಬಿ. ಕೊಟ್ರಶೆಟ್ಟಿ

೧೦. T. S. Eliot : Notes towards Definition of Culture— p. 25.

ಒಂದು ಅಪೂರ್ವ ಸಪ್ತಮಾತೃಕೆಯ ವಿಗ್ರಹ

ಯಾವಗಲ್, ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಒಂದು ಸಣ್ಣ ಹಳ್ಳಿ. ಇದು ದಕ್ಷಿಣ—ಮಧ್ಯ ರೇಲ್ವೆಯ ಹುಬ್ಬಳ್ಳಿ—ಸೋಲಾಪುರ ಮಾರ್ಗದಲ್ಲಿನ ಮಲ್ಲಾಪುರ ನಿಲ್ದಾಣದಿಂದ ಸುಮಾರು ೧೨ ಕಿ.ಮಿ. ಪಶ್ಚಿಮಕ್ಕೆ ಇದೆ. ಇಲ್ಲಿಂದ ಯಾವಗಲ್ಲಿನವರೆಗೂ ಬಸ್ಸುಗಳು ಓಡಾಡುವವು. ಈ ಹಳ್ಳಿಯು ಮಲಪ್ರಭಾ ನದಿಯ ಉಪನದಿ, "ಬೆಣ್ಣೆಹಳ್ಳ"ದ ಬಲದಂಡೆಯ ಮೇಲಿದೆ.

ಈ ಗ್ರಾಮದ ಅನತಿ ದೂರದಲ್ಲಿಯೇ ಈ ಭಾಗದಲ್ಲಿ ಸ್ವಲ್ಪ ಹೆಚ್ಚು ಹೆಸರುವಾಸಿಯಾದ ಬೆಳವಣಿಕೆ, ಕೌಜಗೇರಿ ಎಂಬ ಹಳ್ಳಿಗಳಿವೆ. ಕ್ರಿ.ಶ. ೧೧-೧೪ನೇ ಶತಮಾನಗಳ ಕೆಲವು ಕನ್ನಡ ಶಿಲಾ ಶಾಸನಗಳು[೧] ಮತ್ತು ಕಲ್ಲಿನ ದೇವಾಲಯಗಳು[೨] ಈ ಪ್ರದೇಶದಲ್ಲಿ ಕಂಡು ಬಂದಿವೆ.

ಯಾವಗಲ್ಲಿನಲ್ಲಿ ಒಂದು ವೀರಭದ್ರ ದೇವಾಲಯವಿದೆ. ಇದರ ಶಿಖರ, ಗರ್ಭಗೃಹ, ಅರ್ಧ ಮಂಟಪ ಮತ್ತು ಸಭಾಂಗಣದಲ್ಲಿರುವ ಕಂಬಗಳ ವಾಸ್ತು ಶಿಲ್ಪ ಲಕ್ಷಣಗಳು, ಈ ದೇವಾಲಯದ ಪ್ರಾಚೀನತೆಯನ್ನು ಸೂಚಿಸುತ್ತವೆ: ಬಹುಶಃ ಕ್ರಿ.ಶ. ೧೨-೧೩ನೇ ಶತಮಾನದ್ದಾಗಿರಬೇಕು. ಶಿಖರವು "ಕದಂಬ ನಾಗರ" ಶೈಲಿಯಲ್ಲಿದೆ (ಚಿತ್ರ ೧). ಕಾಲಾನುಕ್ರಮದಲ್ಲಿ ಶಿಥಿಲ ಹೊಂದಿದ ಈ ದೇವಾಲಯವು ಇತ್ತೀಚಿನ ಕಾಲದಲ್ಲಿ ಜೀರ್ಣೋದ್ಧಾರವಾಗಿದೆ. ಇದರ ಮೊದಲಿನ ಸಭಾಮಂಟಪದ ಸ್ಥಳದಲ್ಲಿ ತೀರ ಸರಳವಾದ ಸಭಾಂಗಣವು ಇದೆ. ಈ ಗ್ರಾಮದಲ್ಲಿನ ಮೂರು ಕನ್ನಡ ಶಾಸನಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮಳೆಮಾಡ ಮಠದ ಗೋಡೆಯ ಶಿಲಾ ಶಾಸನದಲ್ಲಿ ಇಲ್ಲಿಯ ಭೋಗೇಶ್ವರಾದಿತ್ಯ ಎಂಬ ದೇವರಿಗೋಸ್ಕರ ರಾಜಗುರು ಚಂದ್ರಭೂಷಣ ಯತಿಯವರಿಗೆ ಭೂಮಿದಾನ ಮಾಡಿದ ವಿಷಯ[೩]ವಿದೆ. ಇದು ಶಕವರ್ಷ ೧೧೯೩ (ಕ್ರಿ. ಶ. ೧೨೭೧) ಶ್ರೀ ವೀರ ಮಹಾದೇವರ ಆಳ್ವಿಕೆಯ ಸಮಯದಲ್ಲಿ ಆದದ್ದು. ಮತ್ತೆರಡು[೪] ೧೬ ನೇ ಶತಮಾನದವು.

ಇಲ್ಲಿ ನಾನು ನೋಡಿದ ಕಲ್ಲಿನ ಮೂರ್ತಿ ಮತ್ತು ಭಗ್ನಾವಶೇಷಗಳಲ್ಲಿ ಎರಡು ಗಮನಾರ್ಹ: ಕಲ್ಲಿನ ಕಂಬದ ಮೇಲೆ ಕುಳಿತಿರುವ ನಂದಿ ಮತ್ತು ಸಪ್ತಮಾತೃ

೧. South Indian Inscriptions, Vol. XV, 1964, pp. 451, 514.

೨. ಯಾವಗಲ್ಲಿನ ಸುಮಾರು ೧೫-೨೦ ಕಿ. ಮಿ. ಪೂರ್ವಕ್ಕೆ ನವಲಿ ಗ್ರಾಮದಲ್ಲಿ ಕ್ರಿ. ಶ. ೯-೧೦ ಶತಮಾನದ ನೋಡಲರ್ಹವಾದ ದೇವಾಲಯಗಳಿವೆ.

೩. South Indian Inscriptions, Vol. XV. 1964. p. 245.

೪. ಅದೇ ಕಡೆ. pp. 318, 434–35

ಕೆಯ ವಿಗ್ರಹ. ಯಾವಗಲ್ಲಿನ ಸಮೀಪದಲ್ಲಿರುವ ಹಡಗಲಿ ಗ್ರಾಮದಲ್ಲಿರುವ ನಂದಿ ವಿಗ್ರಹ ತುಂಬ ಚೆಲುವಾಗಿದೆ (ಚಿತ್ರ ೨, ೨ ಅ). ಕರ್ನಾಟಕದ ಎಲ್ಲೆಡೆ ಯಲ್ಲಿಯೂ ನೆಲದ ಮೇಲೆ ಇಡಬಹುದಾದ ಕುಳಿತಿರುವ ನಂದಿ ವಿಗ್ರಹ ಸರ್ವೇ ಸಾಮಾನ್ಯ. ಆದರೆ ಒಂದು ಪ್ರತ್ಯೇಕ ಕಂಬದ ಮೇಲೆ ಕುಳಿತಿರುವ ನಂದಿ ವಿಗ್ರಹ ಅಖಂಡವಾಗಿ ಬಿಡಿಸಿರುವುದು ಅಪರೂಪ. ಇದರ ಮೂರ್ತಿ ಶಿಲ್ಪ ಪ್ರಾಯಶಃ ೧೧-೧೨ ನೇ ಶತಮಾನದ್ದು. ಇದೇ ಕಾಲಕ್ಕೆ ಸಂಬಂಧಪಟ್ಟ ಯಾವಗಲ್ಲಿನ ಸಪ್ತಮಾತೃಕೆಯ ವಿಗ್ರಹ ವೀರಭದ್ರ ದೇವಾಲಯದ ಪೌಳಿ ಯಲ್ಲಿದೆ. ಇದರಲ್ಲಿ ಎರಡು ವೈಶಿಷ್ಟ್ಯಗಳಿರುವುದರಿಂದ, ಇದನ್ನು ಈ ಲೇಖನ ದಲ್ಲಿ ವಿವೇಚಿಸಲಾಗಿದೆ.

ಈ ಸಪ್ತಮಾತೃಕೆಯ ವಿಗ್ರಹವು (ಚಿತ್ರ ೩) ಕರಿಕಲ್ಲಿ (Deccan trap) ನಲ್ಲಿ ಮಾಡಿದೆ. ಎಲ್ಲ ವಿಗ್ರಹಗಳ ನಡುವಿನ ಮೇಲ್ಭಾಗವು ಉಳಿದಿಲ್ಲ ಆದುದ ರಿಂದ ಆಯಾಯ ಮೂರ್ತಿಗಳ ಎಲ್ಲ ಲಕ್ಷಣಗಳು ತಿಳಿಯುವದಿಲ್ಲ. ವಿಗ್ರಹ ಗಳನ್ನು ೪೨ ಸೆಂ.ಮೀ. ಉದ್ದ ಮತ್ತು ೧೫ ಸೆಂ.ಮಿ. ಅಗಲದ ಚೌಕೋನ ಕಲ್ಲುಪಟ್ಟಿಯ ಮೇಲೆ ಪ್ರತ್ಯೇಕವಾಗಿ ಪೂರ್ಣವಾಗಿ (in round relief) ಕೆತ್ತಲ್ಪಟ್ಟಿವೆ. ಒಟ್ಟು ಹತ್ತು ದೇವತೆಗಳು. ಅವುಗಳಲ್ಲಿ ಮೊದಲನೆಯ ಒಂಬತ್ತು ಸ್ವಲ್ಪ ಹೆಚ್ಚು ಕಡಿಮೆ ಒಂದೆ ತರಹದ ಪೀಠದ ಮೇಲೆ ಒಂದು ಕಾಲನ್ನು ಸ್ವಲ್ಪ ಅಡ್ಡವಾಗಿ ಇಳಿಬಿಟ್ಟು ಕುಳಿತಿರುವ ಹಾಗೆ ಇವೆ. ಈ ಕಲ್ಲು ಪಟ್ಟಿಯ ಮುಂಭಾಗದಲ್ಲಿ ಈ ದೇವತೆಗಳ ಆಯಾಯ ವಾಹನಗಳ ಉಬ್ಬುಚಿತ್ರ (bas-rellels)ಗಳಿವೆ. ಈ ವಾಹನಗಳು ಕ್ರಮವಾಗಿ ವೃಷಭ, ಹಂಸ, ವೃಷಭ, ನವಿಲು, ಗರುಡ, ಹಂದಿ, ಆನೆ, ನರಿ ಮತ್ತು ಇಲಿ. ಮೂರ್ತಿ ವಿಜ್ಞಾನದ ಪ್ರಕಾರ ಈ ದೇವತೆಗಳಿಗೆ ಕ್ರಮವಾಗಿ ಯಾವ ವಾಹನಗಳಿರಬೇಕೆಂದು ತಿಳಿಯಬಹುದು. ಅಲ್ಲದೆ, ಈ ಭಾಗದಲ್ಲಿ ಇದೆ ಕಾಲದ ಸಪ್ತಮಾತೃಕೆಯ ಹೆಚ್ಚು ಒಡೆಯದೆ ಇದ್ದ ವಿಗ್ರಹಗಳು ದೊರೆತಿವೆ. ಇವೆರಡರ ಆಧಾರಗಳ ಮೇಲೆ ಈಗ ವಿವೇಚಿಸುತ್ತಿರುವ ಪಟ್ಟಿಕೆಯ ಮೂರ್ತಿಗಳು ಒಡೆದು ಹೋಗಿದ್ದರೂ ಕೂಡ ಗುರುತಿಸಬಹುದು. ಆದುದರಿಂದ ಈ ಮೂರ್ತಿಗಳು ಕ್ರಮವಾಗಿ ವೀಣಾಧರ ವೀರಭದ್ರ (ಅಥವಾ ಶಿವ), ಬ್ರಾಹ್ಮೀ, ಮಾಹೇಶ್ವರೀ, ಸರಸ್ವತೀ ಲಕ್ಷ್ಮೀ, ವಾರಾಹಿ, ಚಾಮುಂಡೀ, ಗಜಾನನ. ಹತ್ತನೆಯ ವಿಗ್ರಹವೇ ನಾಗ. ಇರುವ ಭಾಗ ಸಹಜ ರೂಪದಲ್ಲಿ, ಇರಿಕೆ (coiled) ಹಾಕಿ ಕುಳಿತಿರುವ ಹಾಗೆ ತೋರಿಸಿದೆ. ಸ್ವಾಭಾವಿಕವಾಗಿ, ಇವಕ್ಕೆ ಆಸನವಾಗಲಿ, ವಾಹನವಾಗಲಿ ತೋರಿಸಿಲ್ಲ. ಇದು ತುಂಬ ವಿಶೇಷವಾದುದು ಹಾಗೂ ಅಪರೂಪ.

ಕರ್ನಾಟಕದ ಸಾಮಾನ್ಯವಾಗಿ ಎಲ್ಲ ಭಾಗಗಳಲ್ಲಿ, ಆದಿಯಲ್ಲಿ ವೀಣಾಧರ ವೀರಭದ್ರ ಮತ್ತು ಕೊನೆಯಲ್ಲಿ ಗಜಾನನಿಂದ ಕೂಡಿದ ಆಸನಸ್ಥರಾದ ಸಪ್ತ-

ಮಾತೃಕೆಯ ಮಾಲಿಕೆಗಳು ದೊರೆಯುತ್ತವೆ. ದೇವತೆಗಳ ಅನುಕ್ರಮದಲ್ಲಿ ಸ್ವಲ್ಪ ಹಿಂದು ಮುಂದಾಗಿರಬಹುದು. ಈ ನಿಯಮಕ್ಕೆ ಸ್ವಲ್ಪ ಹೊರತಾಗಿ ಯೋಗೀಶ್ವರೀ ಎಂಬ ದೇವತೆಯಿಂದ ಕೂಡಿದ ಅಷ್ಟ ಮಾತೃಕೆಯ ಮಾಲಿಕೆಯು ಅಪರೂಪವಾಗಿ ಇವೆ. ಹಾವೇರಿ ಸಿದ್ಧೇಶ್ವರ ದೇವಾಲಯದ ಸಭಾ ಮಂಟಪದ ಮೇಲ್ಛಾವಣಿಯಲ್ಲಿ ಬಿಡಿಸಿದ ಗಜಾಸುರಸಂಹಾರಮೂರ್ತಿ ಶಿವನಿಂದ ಕೂಡಿದ ಅಷ್ಟಮಾತೃಕೆಯನ್ನು,[೬] ತಂಬೂರಿನ (ಕಲಘಟಗಿ ತಾಲೂಕು) ಅಷ್ಟ ಮಾತೃಕೆಯ ಪಟ್ಟಿಕೆಯನ್ನು[೭] ಇಲ್ಲಿ ಉವಹರಿಸಬಹುದು

ಇನ್ನು ಸ್ವಲ್ಪ ವಿಶೇಷ ರೀತಿಯ ಸಪ್ತಮಾತೃಕೆಯರ ಮೂರ್ತಿಗಳು ಗುಜರಾತ ಮತ್ತು ಒರಿಸ್ಸಾ ಭಾಗಗಳಲ್ಲಿ ದೊರೆತಿವೆ. ಉತ್ತರ ಗುಜರಾತಿನ ವಡವಳ[೮] ಗ್ರಾಮದಲ್ಲಿ ನಿಂತ ಭಂಗಿಯಲ್ಲಿರುವ, ಭೈರವ ಮತ್ತು ಪಾರ್ವತೀ ಸಹಿತ ವೀಣಾಧರ ವೃಷಭವಾಹನ ಶಿವನೊಡನೆ ಬಹು ಸುಂದರವಾದ ಸಪ್ತ-ಮಾತೃಕೆಯರ ಬಿಡಿಬಿಡಿಯಾದ ಉಬ್ಬು ಚಿತ್ರಗಳು ಸಿಕ್ಕಿವೆ ಚಾಮುಂಡಿ ಮತ್ತು ಭೈರವ ಪ್ರೇತಾಸನಗಳನ್ನು ಹೊಂದಿದ್ದಾರೆ. ಬ್ರಾಹ್ಮೀ, ಇಂದ್ರಾಣೀ, ವಾರಾಹೀ ವೈಷ್ಣವಿಯರು ಶಿಶುವನ್ನು ಎತ್ತಿಕೊಂಡು ಆಡಿಸುವ ಸ್ಥಿತಿಯಲ್ಲಿದ್ದಾರೆ. ಇಲ್ಲಿ ಅವರ ತಾಯ್ತನದ ಅಂಶವು ಸ್ಪಷ್ಟವಾಗಿದೆ. ಹಾಗೆಯೇ ಪುರಿಯ[೯] ಸಪ್ತ ಮಾತೃಕೆಯರ ವಿಗ್ರಹಗಳು ಪೂರ್ಣವಾಗಿ ಬಿಡಿಸಲ್ಪಟ್ಟಿವೆ. (In round relief) ಮತ್ತು ಬ್ರಾಹ್ಮೀ, ಕೌಮಾರೀ, ವೈಷ್ಣವೀ, ವಾರಹೀ, ಇಂದ್ರಾಣೀ ಮಗು ವನ್ನು ಎತ್ತಿಕೊಂಡಿದ್ದಾರೆ. ಕೌಮಾರೀಯ ತಲೆಯ ಮೇಲೆ ಸರ್ಪವು ತನ್ನ ಮೂರು ಹೆಡೆಗಳನ್ನು ಛತ್ರಿಯ ಹಾಗೆ ಬಿಚ್ಚಿಕೊಂಡು ಇದೆ.

ಬಹಳ ಹಿಂದಿನಿಂದಲೂ ಶಿವ ಕಾರ್ತಿಕೇಯರಿಂದ ಕೂಡಿದ ಸಪ್ತಮಾತೃ-ಕೆಯ ಪೂಜೆ ಭಾರತದಲ್ಲಿದೆ. ಸ್ಕಂದಗುಪ್ತನ (ಕ್ರಿ.ಶ. ೪೫೫-೬೭) ಕಾಲದ ಬಿಹಾರ ಕಲ್ಲುಶಾಸನವು[೧೦] ಸ್ಕಂದಮಾತೃಕೆಯರನ್ನು ಉಲ್ಲೇಖಿಸುವುದು :

---

೫. Gupte, R. S. 1967 *The Art and Architecture of Aihole*, pp. 91–2.

೬. Nagaraja Rao, M. S. 1964: "The Ashtamatrikas of Haveri" Bulletin of the Deccan College Post-Graduate & Research Institute, Poona, Vol. 23, pp. 78–83.

೭. ಇವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿದ್ದಾರೆ.

೮. Soundara Rajan K. V. and Parikh, R. T: 1964: " A magnificant Saptamatrika Group and Parvati from Vadaval, North Gujarath ", Prince of Wales Museum Bulletin. No. 7, pp. 46–55,

೯. Banerjea, J. N.: 1956: *The Development of Hindu Iconography*, plates XLIII, 1, 3, 5 and plate XLIV, 3 and 4.

೧೦. ಅದೇ ಕಡೆ, ಪು. 363.

ಭದ್ರಾಯ್ಯಯಾ ಭಾತಿ ಗೃಹಂ ......ಸ್ಕಂದಪ್ರಥಾನೈರ್ಭ್ಯಬಿ ಮಾತೃಭಿಶ್ಚ

ಎಲಿಫೆಂಟಾದಲ್ಲಿರುವ ಬಂಡೆಗಲ್ಲಿನಲ್ಲಿ ಕೊರೆದ ಒಂದು ದೇವಾಲಯದಲ್ಲಿ ಕಾರ್ತಿಕೇಯನಿಂದ ಕೂಡಿದ ಅಷ್ಟಮಾತೃಕೆಯರ ದೊಡ್ಡ ಉಬ್ಬುಚಿತ್ರವಿದೆ. ಬಾದಾಮಿ ಚಾಲುಕ್ಯರು ತಮ್ಮ ಅನೇಕ ಶಾಸನಗಳಲ್ಲಿ ಅವರು ಕಾರ್ತಿಕೇಯ ಸಹಿತ ಸಪ್ತಮಾತೃಕೆಯರಿಂದ ರಕ್ಷಿಸಲ್ಪಟ್ಟವರೆಂದು ಹೇಳಿಕೊಳ್ಳುತ್ತಾರೆ. ಅದು ಹೀಗೆ:

....ಪುತ್ರರತ್ನಂ ಸಪ್ತಕ ಮಾತೃಭಿಸ್ಸಪ್ತಮಾತೃಭಿರಭಿವರ್ಧಿತಾನಂ
ಅಭಿವರ್ಧಿತಾನಂ ಕಾರ್ತಿಕೇಯ ಪರಿರಕ್ಷಣ ಪ್ರಪತ್ರ[೧೧]... ....

ಐಹೊಳೆಯಲ್ಲಿ ಬಂಡೆಗಲ್ಲಿನಲ್ಲಿ ಕೊರೆದ ರಾವಳಫಡಿ ಎಂಬ ದೇವಾಲಯದಲ್ಲಿ ಶಿವ, ಗಣೇಶ, ಕಾರ್ತಿಕೇಯರಿಂದ ಸೇರಿದ ನಾಟ್ಯ ಸಪ್ತಮಾತೃಕೆಯರ ಮನೋಹರವಾದ ಉಬ್ಬು ಚಿತ್ರಗಳಿವೆ.

ಇದುವರೆಗೂ, ಉದಹರಿಸಿದ ಸಾಮಾನ್ಯ ಹಾಗು ವಿಶೇಷವಾದ ಸಪ್ತ-ಮಾತೃಕೆ ಮೂರ್ತಿಗಳ ಅಭ್ಯಾಸದಿಂದ, ಎರಡು ಮುಖ್ಯ ಅಂಶಗಳು ತೋರುವುವು. ಬಹು ಕಾಲದಿಂದಲೂ ಕರ್ನಾಟಕದಲ್ಲೂ ಶಿವ-ಕಾರ್ತಿಕೇಯ ಸಪ್ತ ಮಾತೃಕೆಯರ ಪೂಜೆ ಇದೆ. ಮತ್ತು ನಾಗನನ್ನು ದೇವತೆ ಸ್ಥಾನದಲ್ಲಿ ಸಪ್ತ ಮಾತೃಕೆಯರ ಮಾಲಿಕೆಯಲ್ಲಿ ಸೇರಿಸಿಲ್ಲ. ಹಳೆಯ ಪ್ರತಿಮಾ ಲಕ್ಷಣಗ್ರಂಥಗಳಲ್ಲಿ[೧೨] ನಾಗನನ್ನು ದೇವತೆಯಾಗಿ ಸಪ್ತಮಾತೃಕೆಯರ ಮಾಲಿಕೆಯಲ್ಲಿ ಸೇರಿಸುವುದಕ್ಕೆ ಆಧಾರಗಳು ಕಾಣಬರುವ ಹಾಗೆ ಇಲ್ಲ. ಈ ದೃಷ್ಟಿಯಿಂದ ಯಾವಗಲ್ಲಿನ ನಾಗನಿಂದ ಕೂಡಿದ ಸಪ್ತಮಾತೃಕೆಯ ವಿಗ್ರಹ ಬಹಳ ವಿಶೇಷವಾದುದು ಮತ್ತು ಅರ್ಥಗರ್ಭಿತವಾಗಿರುವ ಹಾಗೆ ಕಾಣುವದು, ಈ ವಿಷಯವನ್ನು ಇಲ್ಲಿ ವಿಮರ್ಶೆ ಮಾಡೋಣ. ಅಂದರೆ, ನಾಗನನ್ನು ದೇವತೆ ಸ್ಥಾನದಲ್ಲಿ ಯಾವ ಪ್ರದೇಶದಲ್ಲಿ ಹೇಗೆ ಸಪ್ತಮಾತೃಕೆಯರ ಸಾಲಿನಲ್ಲಿ ಸೇರಿಸಬಹುದು.

ಕರ್ನಾಟಕದಲ್ಲಿ, ಭಾರತದ ಇನ್ನುಳಿದ ಭಾಗಗಳಲ್ಲಿ ಇರುವ ಹಾಗೆ, ಸರ್ಪ ಪೂಜೆ[೧೩] ಬಹಳ ಪುರಾತನವಾದುದು. ತುಂಬ ಹಳೆಯ ನಾಗಪ್ರತಿಮೆಯೆಂದರೆ ಬನವಾಸಿಯ ಮಧುಕೇಶ್ವರ ದೇವಾಲಯದ ಪೌಳಿಯಲ್ಲಿರುವ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿ ೧ನೆಯ ಮಗಳು ಶಿವಸ್ಕಂದ ನಾಗಶ್ರೀ

---

೧೧. Gupte, R. S. ಅದೇ ಕಡೆ ಪು. 81.

೧೨. Banerjea J, N.; ಅದೇ ಕಡೆ, ಪು. 503-509 ಮತ್ತು Gopinath Rao, T. A.; 1968 (Reprinted); *Elements of Hindu Iconography*, Vol. 1, pt. II, pp. 379-388.

೧೩. Vogel, Ph. J.; 1926, Indian Serpent Lore, pp. 270-75.



ಯಾವಗಲ್ : ನಾಗಸಹಿತ ಸಪ್ತಮಾತೃಕೆಯರ ವಿಗ್ರಹ. (ನಾಗ ವಿಗ್ರಹ ಕೊನೆಯದು)



ಹಡಗಲಿ : ಕಂಬದ ಮೇಲಿನ ನಂದಿ



ಯಾವಗಲ್ : ವೀರಭದ್ರ ದೇವಾಲಯ; ಹಿಂದಿನಭಾಗ



ಹಡಗಲಿ : ಕಂಬದ ಮೇಲೆ ಬಿಡಿಸಿದ
ನಂದಿ ವಿಗ್ರಹ

ಮಾಡಿಸಿಕೊಟ್ಟ ನಾಗ ಪ್ರತಿಮೆ (ಕ್ರಿ.ಶ. ೩ನೇ ಶತಮಾನ). ಸುಮಾರು ಕ್ರಿ. ಶ. ೧೧–೧೨ ಶತಮಾನದ ಹೊತ್ತಿಗೆ ಮತ್ತು ತದನಂತರ ಪ್ರತಿಯೊಂದು ಗ್ರಾಮದಲ್ಲಿಯೂ ನಾಗರ ಕಲ್ಲುಗಳು ಹೆಚ್ಚಾಗಿ ಕಾಣಬರತೊಡಗಿದವು. ಸಾಮಾನ್ಯವಾಗಿ ಮಕ್ಕಳಿಲ್ಲದವರು ಮಕ್ಕಳನ್ನು ಪಡೆಯುವುದಕ್ಕೋಸ್ಕರ ನಾಗ ಪ್ರತಿಷ್ಠಾಪನೆ ಮಾಡಿಸುವುದು ಈಗಲೂ ವಾಡಿಕೆಯಲ್ಲಿ ಉಳಿದಿದೆ.

ಹಾಗೆಯೇ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕೇರಳದಲ್ಲಿ ಸುಬ್ರಮಣ್ಯನ ಪೂಜೆ[೧೪] ಪ್ರಾಚೀನ ಮತ್ತು ಹೆಚ್ಚು ವ್ಯಾಪಕವಾಗಿದೆ. ಪಳನಿಯ ಸುಬ್ರಮಣ್ಯ ದೇವಸ್ಥಾನ ಬಹಳ ಪ್ರಸಿದ್ಧ. ಹಾಗೆಯೇ ತಿರುಪ್ಪಾಲತ್ತುರೈ ಮತ್ತು ತಿರುವೊರಿಯೂರು ಶಿವದೇವಾಲಯ, ಕುಂಭಕೋಣದ ನಾಗೇಶ್ವರ ದೇವಾಲಯ, ಪಟ್ಟೀಶ್ವರದ ಶಿವದೇವಾಲಯದ ನಾನಾ ವಿಧದ ಸುಬ್ರಮಣ್ಯ ಮೂರ್ತಿಗಳು[೧೫] ತುಂಬ ಹೆಸರುವಾಸಿಯಾಗಿವೆ. ಮತ್ತು ಈ ಸ್ಥಳಗಳು ಸುಪ್ರಸಿದ್ಧ ಕ್ಷೇತ್ರಗಳು. ಈ ಮೂರ್ತಿಗಳು "ಕುಮಾರ ತಂತ್ರ" ಮತ್ತು "ಶ್ರೀ ತತ್ವನಿಧಿ" ಎಂಬ ಆಗಮ ಶಾಸ್ತ್ರಗಳಿಗನುಸಾರವಾಗಿ ಮಾಡಲ್ಪಟ್ಟವೆ. ಈ ಗ್ರಂಥಗಳಲ್ಲಿ ಸುಬ್ರಮಣ್ಯ ಎಂಬುದು ಕಾರ್ತಿಕೇಯನಿಗೆ ಇನ್ನೊಂದು ಹೆಸರು. ಅಷ್ಟೆ ಅಲ್ಲ, ಸ್ಕಂದ, ಕುಮಾರ, ಷಣ್ಮುಖ ಎಂಬವೇ ಮೊದಲಾದ ಹೆಸರುಗಳಿವೆ. ಇವೆಲ್ಲವು ಕಾರ್ತಿಕೇಯನ ಹುಟ್ಟಿನಬಗ್ಗೆ ಇರುವ ಕಥೆಗಳಲ್ಲಿ ಅಥವಾ ಮಹತ್ಸಾಧನೆಗಳಲ್ಲಿ ಒಂದೊಂದು ಸೂಚಿಸುವುವು. ಸಪ್ತಮಾತೃಕೆಯ ಮಾಲಿಕೆಯಲ್ಲಿ ಕಾರ್ತಿಕೇಯನು ಇರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ.

ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಪಶ್ಚಿಮ ಭಾಗದಲ್ಲಿ ಪ್ರಚಲಿತವಿರುವ ಸ್ಕಂದ ಅಥವಾ ಸುಬ್ರಮಣ್ಯ ಅಥವಾ ಕಾರ್ತಿಕೇಯ ಪೂಜೆ ಪದ್ಧತಿಯ ವಿಸ್ತಾರವನ್ನು ಅದೇ ಶ್ರೇಣಿಯ ಉತ್ತರದಲ್ಲಿ, ಅಂದರೆ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕಾಣಬಹುದು. ಈ ಭಾಗದಲ್ಲಿ ಸುಬ್ರಮಣ್ಯ ದೇವಸ್ಥಾನಗಳು ತುಂಬ ಇವೆ. ಸುಬ್ರಮಣ್ಯನನ್ನು ಕುಲದೇವರಾಗಿವುಳ್ಳ ವಂಶಗಳು ಅನೇಕ. ಆದರೆ ಇಲ್ಲಿ ಒಂದು ವೈಶಿಷ್ಟ್ಯವಿದೆ. ಈ ದೇವಾಲಯಗಳಲ್ಲಿ ದಕ್ಷಿಣ ಭಾರತದಲ್ಲಿರುವ ಹಾಗೆ ಸುಬ್ರಮಣ್ಯ,ಸ್ಕಂದ ಕಾರ್ತಿಕೇಯ ಮೂರ್ತಿಯ ನಾಗ ಪ್ರತಿಮೆ ಅಥವಾ ಮಣ್ಣಿನಹುತ್ತು ಇರುವದು ತುಂಬಗಮನಾರ್ಹ. ಸುಳ್ಯ ತಾಲೂಕಿನಲ್ಲಿ ಸುಪ್ರಸಿದ್ಧ ಕ್ಷೇತ್ರವಾದ ಸುಬ್ರಮಣ್ಯದಲ್ಲಿರುವ ಸುಬ್ರಮಣ್ಯ ದೇವಸ್ಥಾನದಲ್ಲಿ ಹುತ್ತ ಮತ್ತು ಸುಬ್ರಮಣ್ಯ ಪ್ರತಿಮೆಯಿದೆ. ಈ ಭಾಗದಲ್ಲಿ "ನಾಗಮಂಡಲ" ಎಂಬ ಒಂದು ವಿಶೇಷ ಪೂಜೆ ಇದೆ. ಹಾಗೆಯೆ ಕುಂದಾಪುರ ತಾಲೂಕಿನ ಕ್ಷೇತ್ರವಾದ

---

೧೪. Gopinath Rao, T. A.; ಅದೇ ಕಡೆ Vol. II, pt. II, pp. 415–44.

೧೫. ಅದೇ ಕಡೆ, pp. 444–51.

ಉಳ್ಳೂರು ಎಂಬ ಗ್ರಾಮದ ಸುಬ್ರಮಣ್ಯ ದೇವಾಲಯದಲ್ಲಿ ಇರುವ ಹುತ್ತಕ್ಕೆ ಪೂಜೆ. ಇದನ್ನು ಕುಲದೇವರಾಗಿಟ್ಟುಕೊಂಡವರು ಸ್ಕಂದ, ಸುಬ್ರಮಣ್ಯ ಎಂದು ಹೆಸರಿಟ್ಟುಕೊಳ್ಳುವರು. ಹರ್ಷನ ನಾಗಾನಂದ ನಾಟಕದಲ್ಲಿ ನಾಗ, ಗರುಡ, ಜೀಮೂತವಾಹನರಿಂದ ಕೂಡಿದ ಒಂದು ಮುಖ್ಯ ಸನ್ನಿವೇಶ ಗೋಕರ್ಣದಲ್ಲಿ ಎಂಬುದು ಸರ್ವವಿದಿತ. ಕರ್ನಾಟಕದಲ್ಲಿ ಗರ್ಭಿಣಿ ಹೆಂಗಸು ಇರುವ ಮನೆಯಲ್ಲಿ ಪದೇ ಪದೇ ನಾಗರ ಹಾವು ಕಾಣಿಸಿಕೊಂಡಲ್ಲಿ ಹುಟ್ಟುವ ಮಗುವಿಗೆ ನಾಗರಾಜ, ನಾಗಪ್ಪ/ನಾಗಮ್ಮ ಅಲ್ಲದೆ ಸುಬ್ರಮಣ್ಯ, ಸುಬ್ಬರಾಯ/ಸುಬ್ಬಮ್ಮ ಸುಬ್ಬಲಕ್ಷ್ಮಿ ಎಂದು ಹೆಸರಿಸುವುದು ವಾಡಿಕೆ. ಇದರಿಂದ ಒಂದು ವಿಷಯ ಒಡೆದು ಕಾಣುವುದೆಂದರೆ, ದಕ್ಷಿಣ ಭಾರತದಲ್ಲಿ ಕಾರ್ತಿಕೇಯ ಮೂರ್ತಿ ಪೂಜೆ ಎಷ್ಟು ಪ್ರಬಲವೋ ಅಷ್ಟೇ ನಾಗನ ಪೂಜೆ ಕರ್ನಾಟಕದ ಪಶ್ಚಿಮ ಭಾಗದಲ್ಲಿತ್ತೆಂಬುದು ಈ ಎರಡು ಬಲಿಷ್ಠ ಪದ್ಧತಿಗಳು ಒಂದಕ್ಕೊಂದು ಈ ಭಾಗದಲ್ಲಿ ಸಂಯೋಗವಾದಾಗ ನಾಗನು, ಈಶ್ವರ ಅಂಶೀಭೂತನಾದ ಕಾರ್ತಿಕೇಯ/ಸುಬ್ರಮಣ್ಯನ ಅವತಾರವೇ ಎನ್ನುವಷ್ಟು ಪ್ರಭಾವ ಹರಡಿರಬೇಕು. ಆದ್ದರಿಂದ ನಾಗನನ್ನು ಸುಬ್ರಮಣ್ಯನೆಂದು ಪೂಜೆ ಮಾಡುವ ಪದ್ಧತಿ ಬಲಗೊಂಡಾಗ ಮೇಲೆ ಹೇಳಿದ ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳು ಆಗಿರಬಹುದು. ಈ ಪ್ರಭಾವವು ಕೇವಲ ಆ ಭಾಗದಲ್ಲೆ ಸೀಮಿತವಾಗಿರದೇ ಕರ್ನಾಟಕದ ಬಹು ಭಾಗದಲ್ಲಿ ಪ್ರಚಲಿತವಾಗಿರಬೇಕು. ಈ ಪ್ರಭಾವದಿಂದಲೆ ಮೂರ್ತಿ ವಿನ್ಯಾಸದಲ್ಲಿ ಸಪ್ತಮಾತೃಕೆ ಮಾಲಿಕೆಯಲ್ಲಿ ಕಾರ್ತಿಕೇಯನ ಬದಲಾಗಿ ನಾಗನನ್ನು ತೋರಿಸುವ ಪದ್ಧತಿ ಪ್ರಾರಂಭವಾಯಿತೆಂದು ತೋರುವುದು. ಯಾವಗಲ್ಲಿನ ನಾಗ ಸಮೇತ ಸಪ್ತ ಮಾತೃಕೆಯ ವಿಗ್ರಹ ಇದಕ್ಕೆ ನಿದರ್ಶನವೆಂದು ತೋರುವುದು.

ಆದರೆ ಸುಮಾರು ೧೧-೧೨ ನೇ ಶತಮಾನದಿಂದ ಸಪ್ತಮಾತೃಕೆಯರೊಡನೆ ಕಾರ್ತಿಕೆಯನನ್ನು ಬಿಡಿಸುವುದು ಅಪರೂಪವಾಗುತ್ತ ಬಂತೆಂದು ಹೇಳಬಹುದು. ಆದರಂತೆಯೇ ನಾಗಸಮೇತ ಸಪ್ತಮಾತೃಕೆಯೂ ಮತ್ತೂ ಅಪರೂಪವಾಗಿರಬಹುದು.

★ ಅ. ಸುಂದರ

ಪೆರಿಯಪುರಾಣದ ಕಥೆಗಳು

೧. ತಿರುನೀಲಕಂಠ ನಾಯನಾರ್

ಶಿವಭಕ್ತಿ ಸುಧೆಯಾಗಿ ಹೊಂಗಿ ಹರಿವ ಚೋಳದೇಶದಲ್ಲಿ ತಿಲ್ಲೈನಗರವೆಂಬ ಚಿದಂಬರ ಕ್ಷೇತ್ರವು ಶೋಭಿಸುತ್ತಿರುವುದು. ಪರಶಿವನು ವಿಶ್ವತಾಂಡವ-ವನ್ನಾಡಿದ ಪೆಂಪನಾಂತು ಪೊಳೆವ ಪೊನ್ನಂಬಲ (ಅಂದರೆ ಕನಕಸಭೆ) ಇಲ್ಲಿ ರಾರಾಜಿಸುತ್ತಿರುವುದು. ತಾಂಡವೇಶ್ವರನನ್ನು ಭಕ್ತಿಪುರಸ್ಸರವಾಗಿ ಪೂಜಿಸಿ ಅರ್ಚಿಸುವ ಕಾಯಕವನ್ನೇ ಬೆಳಸುತ್ತಿರುವ ಮೂರು ಸಾವಿರ ವಿಪ್ರೋತ್ತಮರು ಆ ಕ್ಷೇತ್ರದಲ್ಲಿ ನಲ್ಮೆಯಿಂದಿರುವರು. ಇವರನ್ನು ತಿಲ್ಲೈಮೂವಾಯಿರವರ್ (ಮೂರು ಸಾವಿರದವರು) ಎಂದು ಕರೆಯುತ್ತಿರುವರು.

ಆ ಪುರದಲ್ಲಿ ಕುಶವರ್ (ಕುಂಬಾರ) ಕುಲದಲ್ಲಿ ಜನಿಸಿದ ಶಿವಭಕ್ತರೊಬ್ಬರಿದ್ದರು. ಅವರು ತಿಲ್ಲೈನಟರಾಜನ ಅಡಿಗಳನ್ನೇ ಧ್ಯಾನಿಸುತ್ತಿರುವರು. ಕಪಟ, ಹುಸಿ, ಡಂಬ ಯಾವುದೂ ಇಲ್ಲದೆ ಧರ್ಮಮಾರ್ಗದಲ್ಲಿ ತಮ್ಮ ಜೀವನವನ್ನು ಕಳೆಯುತ್ತಿದ್ದರು. ಸುಗುಣಸಂಪನ್ನೆಯೂ, ಪತಿವ್ರತೆಯೂ ಆದ ಓರ್ವಳನ್ನು ಮದುವೆಯಾಗಿ, ಗೃಹಸ್ಥಧರ್ಮವೇ ಉತ್ತಮವೆಂದು ತಿಳಿದು ವೇದವಿದಿತ ಮಾರ್ಗದಲ್ಲಿ ನೆಲೆನಿಂತರು. ಹರಭಕ್ತರಲ್ಲಿ ಅಗ್ರಗಣ್ಯರಾಗಿದ್ದರು. ತಮ್ಮ ಕುಲವೃತ್ತಿಗನುಸಾರವಾಗಿ ಮಣ್ಣಿನ ಗಡಿಗೆಗಳನ್ನು ಮಾಡಿ ಅವುಗಳನ್ನು ವಿಕ್ರಯಿಸಿ ಜೀವಿಕೆಯನ್ನು ಸಾಗಿಸುತ್ತಿದ್ದರು. ಅಲ್ಲದೆ, ಹರಸೇವೆಯೆಂದು ಬಗೆದು ಶಿವಶರಣರಿಗೆ ಓಡು, ಕಪ್ಪರಗಳನ್ನು ನೀಡುತ್ತಿದ್ದರು. ಪಾಲ್ಗಡಲಲ್ಲಿ ಮೂಡಿದ ಹಾಲಾಹಲವನ್ನು ವಿರೂಪಾಕ್ಷನು ಜೀವಕೋಟಿಗಳನ್ನು ಉಜ್ಜೀವಿಸಲು ತಾನು ಉಂಡು, ಆ ಗರಳವನ್ನು ಉದರದೊಳಗೆ ಹೋಗಗೊಡದೆ ಕಂಠದಲ್ಲೇ ಇರಿಸಿಕೊಂಡದ್ದನ್ನು ನೆನೆನೆನೆದು ಪುಳಕಾಂಕಿತರಾಗುವರು. ನಂಜುಂಡನ ನೀಲಕಂಠವನ್ನು ಕೊಂಡಾಡುವರು. "ತಿರುನೀಲಕಂಠ" "ತಿರುನೀಲಕಂಠ" ಎಂದು ಕೇಕೆ ಹಾಕುತ್ತ ನಲಿನಲಿದು ಕುಣಿದಾಡುವರು. ಇದರಿಂದ ಅವರಿಗೆ ತಿರುನೀಲಕಂಠನಾಯನಾರ್ ಎಂಬ ಹೆಸರಾಯಿತು. (ನಾಯನಾರ್ ಎಂಬುದು ಶಿವಶರಣರಲ್ಲಿ ಪುರಾತನರಿಗೆ ಅನ್ವಯಿಸುವ ಬಿರುದಿನ ಹೆಸರು) ಪ್ರತಿದಿನವೂ ಶಿವನಿಲಯಕ್ಕೆ ತೆರಳಿ ತಿರುನೀಲಕಂಠರು ಅರ್ಚನೆಮಾಡಿ ಬರುವರು.

ಸತಿಯ ಮುನಿಸು

ಇಂಥ ಸದ್ಗುಣಗಳಿಂದ ಕೂಡಿದ ತಿರುನೀಲಕಂಠನಾಯನರರು ಯೌವನ ಭರದಲ್ಲಿದ್ದಾಗ ಕಾಮಕೇಳಿಗಳಲ್ಲಿ ಮಗ್ನರಾಗಿ ವಿಷಯಸುಖಾಭಿಲಾಷಿ-

ಯಾದರು. ಒಂದು ದಿನ ಗಣಿಕೆಯೊಂದಿಗೆ ರಮಿಸಿ ಹಿಂತಿರುಗಿ ಮನೆಗೆ ಬಂದರು. ಇದನ್ನರಿತ ಅವರ ಸತಿ ಕೋಪಗೊಂಡಳು. ಮನದಲ್ಲಿ ಮುನಿಸು ತಾಳಿದರೂ ಅದನ್ನು ಅಡಗಿಸಿಕೊಂಡು ಮೌನದಿಂದ ತನ್ನ ಪತಿಗೆ ಮಾಡಬೇಕಾದ ಸೇವೆಗಳನ್ನೆಲ್ಲ ಸಲ್ಲಿಸಿ, ಅವರ ಸ್ಪರ್ಶಮಾತ್ರವಿಲ್ಲದೆ ಸರಿದು ಇದ್ದಳು. ರತಿಸುಖಕ್ಕೆ ಇಂಬು ಕೊಡದ ತನ್ನ ಪತ್ನಿಯ ಊಡಲನ್ನು (ಮುನಿಸನ್ನು) ಹೋಗಲಾಡಿಸಲು ತಿರುನೀಲಕಂಠರು ಅವಳ ಸನಿಹಕ್ಕೆ ಸಾರ್ದು ಅನುನಯ ವಿನಯದಿಂದ ಮುದ್ದಿನ ಮಾತುಗಳನ್ನಾಡುತ್ತ ಸರಸದಿಂದ ಅವಳನ್ನು ಸ್ಪರ್ಶಿಸಲೆಳಸಿದರು. ಆಕೆಯು, “ನೀವು ನಮ್ಮನ್ನು ಮುಟ್ಟಿದೊಡೆ ತಿರುನೀಲಕಂಠನಾಣೆ” ಎಂದು ಕಾಲಕಂಠನ ಮೇಲೆ ಆಣೆಯಿಟ್ಟಳು. ಇದನ್ನು ಕೇಳಿ ತಿರುನೀಲಕಂಠರಿಗೆ ಸಿಡಿಲು ಬಡಿದಂತಾಯಿತು. ಶಿವನನ್ನು ತಿರುನೀಲಕಂಠನೆಂಬ ಹೆಸರಿನಿಂದಲೇ ತಾನು ಸ್ತುತಿಸುತ್ತಿರುವುದನ್ನು ನೆನೆದು, ಈ ಆಣೆಗೆ ಮಣಿದು ಸತಿಯನ್ನು ಮುಟ್ಟದೆ ಸರಿದರು. ಇದು ಇವರ ಬಾಳ್ವೆಯಲ್ಲಿ ಒಂದು ತಿರುವನ್ನೇ ತಂದೊಡ್ಡಿತು. ಆಣೆಯಿಟ್ಟಾಗ ತನ್ನ ಸತಿ “ನಮ್ಮನ್ನು” ಎಂದು ಬಹುವಚನದಲ್ಲಿ ಹೇಳಿದ್ದರಿಂದ ಆಕೆಯನ್ನು ಮಾತ್ರವಲ್ಲದೆ, ಇತರ ಕಾಮಿನಿಯನ್ನೂ ಸಹ ತಾನು ಮುಟ್ಟಲಾಗದೆಂದು ನಿಶ್ಚಯಿಸಿದರು. ಅವರ ಸತಿ ನಿಧುವನವನ್ನು ಹೊರತಾದ ಇತರ ಸಂತೋಷಪ್ರದ ಕೆಲಸಕಾರ್ಯಗಳನ್ನು ಯಥಾಪ್ರಕಾರ ನಡೆಸುತ್ತಿದ್ದಳು. ಸತಿಪತಿಯರ ಈ ವರ್ತನೆಯನ್ನು ಇತರರು ಯಾರೂ ಅರಿಯರು. ಹೀಗೆ ಒಬ್ಬರನ್ನೊಬ್ಬರು ಮುಟ್ಟದೆ ಹಲವು ವರ್ಷಗಳನ್ನು ಕಳೆದರು. ಅವರಿಗೆ ಯೌವನ ಜಾರಿ ಮುಪ್ಪು ಬಂದು ಬಲಗುಂದಿತು. ಆದರೂ ಹರಭಕ್ತಿಯಲ್ಲಾಗಲಿ, ಶಿವಶರಣರಿಗೆ ಓಡು, ಕಪ್ಪರಗಳನ್ನು ನೀಡುವ ಸೇವಾರ್ಥದಲ್ಲಾಗಲಿ ಯಾವ ವಿಧವಾದ ಕುಂದುಕೊರತೆ ಉಂಟಾಗಲಿಲ್ಲ.

ತಿರುನೀಲಕಂಠರ ಸತ್ಯಪರೀಕ್ಷೆ

ಇಂಥ ಕಡುವ್ರತವನ್ನಾಚರಿಸುತ್ತಿರುವ ಪರಮಭಕ್ತರಾದ ತಿರುನೀಲಕಂಠ ದಂಪತಿಗಳ ಹಿರಿಮೆಯನ್ನೂ ಅವರ ಭಕ್ತಿಯ ಮಹಿಮೆಯನ್ನೂ ಲೋಕಕ್ಕೆಲ್ಲ ಸಾರಬೇಕೆಂದು ಪರಶಿವನು ಮನಂದಂದನು. ನಡುಪಟ್ಟಿಯನ್ನೂ ಕಚ್ಚುಟವನ್ನೂ ಧರಿಸಿದ ಶಿವಯೋಗಿಯ ವೇಷವನ್ನು ತಳೆದನು. ವಿಭೂತಿ ಬೆಳಗುವ ಹಣೆ, ಜನಿವಾರ ರಂಜಿಪ ಎದೆ, ಜಟಾವಳಿ ಶೋಭಿಸುವ ಶಿರಸ್ಸು, ಕಪ್ಪರವಿಡಿದ ಕೈ, ಮಂದಹಾಸದ ಮುಖ—ಈ ಪರಿಯಲ್ಲಿ ತಿರುನೀಲಕಂಠರ ಮನೆಗೆ ಮೃಡನು ಎಳ್ತಂದನು. ತನ್ನ ಮನೆಗೆ ಬಂದ ಶಿವಯೋಗಿಯನ್ನು ಕಂಡು ತಿರುನೀಲಕಂಠರು ಮುದಿತರಾಗಿ ಅವರನ್ನು ಸ್ವಾಗತಿಸಿ ಪೀಠದಲ್ಲಿ ಕುಳ್ಳಿರಿಸಿ, ಯಥಾವಿಧಿ ಸತ್ಕರಿಸಿ,

“ಮನೆಗೆ ನೀವು ಬಿಜಮಾಡಿದ್ದು ನನ್ನ ಭಾಗ್ಯ. ನನ್ನಿಂದ ಆಗತಕ್ಕ ಸೇವೆ ಯಾವುದೆಂದು ಅಪ್ಪಣೆ ಕೊಡಿಸಬೇಕು” ಎಂದು ಬಿನ್ನವಿಸಿದರು. ಶಿವಯೋಗಿಯು ತನ್ನ ಕೈಯಲ್ಲಿದ್ದ ಕಪ್ಪರವನ್ನು ತೋರಿಸಿ, “ಇದನ್ನು ನಿನ್ನಲ್ಲಿ ಜತನವಾಗಿ ಇಟ್ಟುಕೊಂಡು ನಾನು ಕೇಳಿದಾಗ ಕೊಡಬೇಕು. ಈ ಕಪ್ಪರವು ಅಮೂಲ್ಯವಾದುದು: ಈಡು ಜೋಡಿಲ್ಲದ್ದು. ತನ್ನೆಡೆ ಇರಿಸಿದ ವಸ್ತುಗಳನ್ನು ಪಾವನಗೊಳಿಸುವುದು. ಹೊನ್ನುಮಣಿಗಳಿಗಿಂತಲೂ ಪ್ರಶಸ್ತವಾದುದು. ಇದನ್ನು ಜೋಪಾನವಾಗಿ ತೆಗೆದಿರಿಸು” ಎಂದು ಹೇಳಿ ಕಪ್ಪರವನ್ನು ನೀಡಿದರು. ತಿರುನೀಲಕಂಠರು ಹಸಾದವೆಂದು ಅದನ್ನು ತೆಗೆದುಕೊಂಡು ಮನೆಯೊಳಗೆ ಸುರಕ್ಷಿತವಾದ ಒಂದು ತಾಣದಲ್ಲಿ ಜೋಪಾನ ಮಾಡಿದರು. ಬಂದ ಶಿವಯೋಗಿಯನ್ನು ಬೀಳ್ಕೊಟ್ಟು ಕಳುಹಿಸಿದರು. ಹಲವು ದಿನಗಳು ಕಳೆದವು. ಶಿವನ ಲೀಲೆಯಿಂದ ಭಕ್ತನಿಗಿತ್ತ ಕಪ್ಪರವು ಇಟ್ಟ ಸ್ಥಳದಿಂದ ಮಾಯವಾಯಿತು. ಮೃಡನು ಮೊದಲಿನಂತೆ ಶಿವಯೋಗಿಯ ವೇಷ ತಳೆದು ತಿರುನೀಲಕಂಠರ ಬಳಿಬಂದನು. ನಾಯನಾರರು ಆತನನ್ನು ಬರಮಾಡಿಕೊಂಡು ಪೀಠದಲ್ಲಿ ಕುಳ್ಳಿರಿಸಿದರು. “ನೀವು ಇಲ್ಲಿಗೆ ದಯೆಗೈದುದು ನನ್ನ ಭಾಗ್ಯೋದಯವೇ ಸರಿ” ಎಂದನು. ಶಿವಯೋಗಿಯು “ನಾನು ನಿನ್ನಲ್ಲಿರಿಸಿದ ದಿವ್ಯಕಪ್ಪರವನ್ನು ಹಿಂದಕ್ಕೆ ಕೊಟ್ಟು ಬಳಿಕ ಮಾತನಾಡು” ಎಂದು ಬಿರುಸಿನಿಂದ ನುಡಿದರು. ಇದನ್ನು ಕೇಳಿದ ತಿರುನೀಲಕಂಠರು ಚಟ್ಟನೆ ಮನೆಯೊಳಗೆ ಕಪ್ಪರವನ್ನಿಟ್ಟಿದ್ದ ಸ್ಥಳಕ್ಕೆ ಹೋಗಿನೋಡಿದರು. ಕಪ್ಪರವು ಅಲ್ಲಿರಲಿಲ್ಲ! ಅತ್ತಿತ್ತ ಹುಡುಕಿದರು; ಕಾಣಿಸಲಿಲ್ಲ. ತಡಕಾಡಿದರು; ಸಿಗಲಿಲ್ಲ; ಪಶುಪತಿಯೇ ಕಪ್ಪರವನ್ನು ಕವರ್ದ ಮೇಲೆ ಅದು ಅಲ್ಲಿ ಸಿಗುವುದೆಂತು? ನಾಯನಾರರು ಅಳುಕಿದರು. ಸಿಡಿಲುಬಡಿದ ನಾಗನಂತೆ ನಡುಗಿದರು. ಬೆದರಿ ಬೆರಗುವಡೆದರು. ತಲ್ಲಣಿಸಿದರು. ಅವರ ಕಣ್ಣಿಗೆ ಕತ್ತಲೆ ಕವಿಯಿತು. ನಾಲಗೆ ಒಣಗಿಹೋಯಿತು. ಬಾಯಿಂದ ಮಾತೇ ಹೊರಡಲೊಲ್ಲದು ಹೆಪ್ಪ್ತುಸುವಂತಾಯಿತು. “ಬೇಗನೆ ಈಚೆಗೆ ಬಾ. ಏಕೆ ಇಷ್ಟು ತಡ?” ಎಂದು ಉರುಬಿನಿಂದ ಶಿವಯೋಗಿ ಗುಡುಗಿದರು. ಇದನ್ನು ಕೇಳಿ ತಿರುನೀಲಕಂಠರು ಎಚ್ಚತ್ತು ಹೊರಗೆಬಂದರು. “ದ್ವಿಜೋತ್ತಮ! ನೀವು ಕೊಟ್ಟ ಚೆಲುವಿನ ಕಪ್ಪರವನ್ನು ಜೋಪಾನವಾಗಿ ಬೇರೆಯಾಗಿ ಇಟ್ಟಿದ್ದೆನು. ಆದರೆ ಅದು ಈಗ ಕಾಣಿಸುವುದಿಲ್ಲ. ಹೇಗೆ ಮಾಯವಾಯಿತೋ, ನಾನರಿಯೆ. ಏನು ಗತಿ? ಅಡಿಗಳೇ! ಆ ಹಳೆಯ ಕಪ್ಪರಕ್ಕಿಂತ ಒಳ್ಳೆಯ ಚೆಲುವಿನ ಹೊಸ ಕಪ್ಪರವನ್ನು ಈಯುವೆನು. ಅದನ್ನು ಸ್ವೀಕರಿಸಿ ನನ್ನ ಅಪರಾಧವನ್ನು ಕ್ಷಮಿಸಬೇಕು.” ಎಂದು ತಿರುನೀಲಕಂಠರು ಬಿನ್ನವಿಸಿಕೊಂಡರು. ಶಿವಯೋಗಿಯ ಕಾಲಿಗೆರಗಿದರು. ಇದನ್ನು ಕೇಳಿ ಶಿವಯೋಗಿಯು ಕನಲಿದರು. ಅವರ ಮುಖ ಕೆಂಪೇರಿತು. “ಏನು ಹೇಳುವಿ? ನಾನು ಕೊಟ್ಟ ಮಣ್ಣಿನ ಹಳೆಯ ಕಪ್ಪರವೇ

ನನಗೆ ಬೇಕು. ಬೇರೆ ಕಸವರದ ಕಪ್ಪರವನ್ನು ಕೊಟ್ಟರೂ ನಾನೊಲ್ಲೆ. ಮುಂಚೆ ನಾನು ಕೊಟ್ಟ ಕಪ್ಪರವನ್ನೇ ತಂದುಕೊಡು," ಎಂದು ಅಬ್ಬರಿಸಿದರು. "ಸದ್ಗುಣ ಸಂಪನ್ನರಾದ ಮಹಾಮಹಿಮರೇ! ನನಗೆ ನೀಮಿತ್ತ ಕಪ್ಪರವು ಈಗ ಕಾಣೆಯಾಗಿದೆ. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಬೇರೊಂದು ಕಪ್ಪರವನ್ನು, ಬಹುಕಾಲ ಬಾಳಿಕೆ ಬರುವಂಥ ಹೊಸ ಕಪ್ಪರವನ್ನು ಈಯುವೆನು. ನನ್ನ ಈ ಬಿನ್ನಪವನ್ನು ಲಾಲಿಸದೆ ನೀವು ಮುನಿದರೆ ನನ್ನ ಚೇತನ ಕೆಡುವುದು" ಎಂದು ವಿನಯದಿಂದ ತಿರುನೀಲಕಂಠನಾಯನರು ಅರಿಕೆ ಮಾಡಿ ಖಿನ್ನರಾಗಿ ನಿಂತರು. ಶಿವಯೋಗಿಯು ಒಪ್ಪಲಿಲ್ಲ. ನಾನು ನಿನ್ನ ಕೈಯಲ್ಲಿ ಕೊಟ್ಟ ಇಡುಗಂಟನ್ನು ಅಪಹರಿಸಿದ್ದೀ! ಪಳಿ-ಪಾಪಗಳಿಗೆ ನೀನು ಸ್ವಲ್ಪವೂ ಅಂಜುವುದಿಲ್ಲ. ಎಲ್ಲರೆದುರಿಗೆ ನಿನ್ನನ್ನು ಸುತ್ತುಗಟ್ಟಿ ನನ್ನ ಕಪ್ಪರವನ್ನು ಪಡೆದುಕೊಂಡಲ್ಲದೆ ನಾನು ಇಲ್ಲಿಂದ ಹೋಗೆನು" ಎಂದು ಗದರಿಸಿದರು. ತಿರುನೀಲಕಂಠರು "ನಾನು ನಿಮ್ಮ ಕಪ್ಪರವನ್ನು ಅಪಹರಿಸಿಲ್ಲ. ನನ್ನ ಮನದಲ್ಲೂ ಕಪಡಿಲ್ಲವೆಂಬುದನ್ನು ನಾನು ಹೇಗೆ ತೋರ್ಪಡಿಸಲಿ?" ಎಂದರು. "ಹಾಗಾದರೆ, ನೀನು ನಿನ್ನ ಮಗನನ್ನು ಕೈಯಲ್ಲಿ ಹಿಡಿದು ಹರನಿಳಯದೆದುರಿನ ಕೊಂಡದಲ್ಲಿ ಮುಳುಗಿ ಎದ್ದು ಸತ್ಯ ಮಾಡಿ ಹೇಳು" ಎಂದು ಶಿವಯೋಗಿ ಹೇಳಲು, ನಾಯನಾರರು ಅವರನ್ನು ನೋಡಿ "ಹಾಗೆ ಮಾಡಲು ನನಗೆ ಪುತ್ರನಿಲ್ಲ; ಏನು ಮಾಡಲಿ?" ಎಂದರು. ಇದಕ್ಕೆ ಶಿವಯೋಗಿಯು, "ನಿನಗೆ ಪುತ್ರನಿಲ್ಲದಿದ್ದರೆ ನಿನ್ನ ಹೆಂಡತಿಯ ಕೈ ಹಿಡಿದು ಕೊಳದಲ್ಲಿ ಮುಳುಗಿ ಪ್ರಮಾಣ ಮಾಡು" ಎಂದರು. ಇದನ್ನು ಕೇಳಿದ ತಿರುನೀಲಕಂಠರು "ಹಿಂದೆನಮ್ಮಲ್ಲಿ ಆದ ಒಂದು ಸೂರುಳಿನ ಸಲುವಾಗಿ ನಾನು ನನ್ನ ಪತ್ನಿಯ ಕೈ ಹಿಡಿದು ಜತೆಯಲ್ಲಿ ಮುಳುಗಲಾರೆನು. ನಾನು ಒಬ್ಬನೇ ಕೊಳದಲ್ಲಿ ಮುಳುಗಿ ಪ್ರಮಾಣಮಾಡಿಕೊಡುವೆನು" ಎಂದು ನುಡಿದರು. ಶಿವಯೋಗಿ ಆಗ ಸಿಡಿದೆದ್ದು, ಹಿಂದೆ ನಾನು ನಿನ್ನ ಬಳಿ ಇತ್ತ ಕಪ್ಪರವನ್ನೂ ಕೊಡುವುದಿಲ್ಲ. ಹೆಂಡತಿಯ ಕೈ ಹಿಡಿದು ಕೊಳದಲ್ಲಿ ಮಿಂದು "ನಾನು ಕಪ್ಪರವನ್ನು ಅಪಹರಿಸಲಿಲ್ಲ" ವೆಂದು ಪ್ರಮಾಣಮಾಡಲೂ ಒಲ್ಲೆ ಎನ್ನುವಿ. ನೀನು ಎಂಟೆದೆಯವನೇ ಇರಬೇಕು. ತಿಲ್ಲೈಮೂವಾಯಿರವರ ಸಭೆಗೆ ಹೋಗಿ ದೂರುಕೊಡುವೆನು" ಎಂದು ಹೇಳಿ ಚಿದಂಬರದ ಅಂಬಲವತ್ತ ನಡೆದರು. ನಾಯನಾರರೂ ಸಹ ಅವರನ್ನು ಹಿಂಬಾಲಿಸಿದರು.

ತಿಲ್ಲೈಮೂವಾಯಿರವರರ ತೀರ್ಪು

ತಿಲ್ಲೈನಗರದ ಮೂರುಸಾವಿರ ಬ್ರಾಹ್ಮಣರು ಒಟ್ಟು ನೆರೆದ ಸಭೆಯ ಮುಂದೆ ಬಂದು, ಶಿವಯೋಗಿಯು ನಡೆದ ವೃತ್ತಾಂತವನ್ನೆಲ್ಲ ಹೇಳಿದರು. "ಜತನ ಮಾಡಿಟ್ಟಿರಬೇಕೆಂದು ಹೇಳಿ ಈ ಕುಂಬಾರನ ಕೈಯಲ್ಲಿ ಒಂದು ಕಪ್ಪರ

ವನ್ನು ಕೊಟ್ಟೆನು. ಈಗ ಅದನ್ನು ಕೊಡಲೊಲ್ಲ, ಕಳೆದುಹೋಯಿತಂತೆ. ನಿಜವಾಗಿ ಅದನ್ನು ಕಳೆದುಕೊಂಡಿದ್ದರೆ ತನ್ನ ಸತಿಯ ಕೈಹಿಡಿದು ಕೊಳದಲ್ಲಿ ಮಿಂದು ಪ್ರಮಾಣಮಾಡಿ ಹೇಳೆಂದರೆ ಅದಕ್ಕೂ ಒಲ್ಲನಂತೆ. ಆದ್ದರಿಂದ ಈ ವ್ಯಾಜ್ಯವನ್ನು ನಿಮ್ಮ ತೀರ್ಪಿಗೆ ತಂದಿರುವೆನು" ಎಂದು ಶಿವಯೋಗಿ ಹೇಳಿದರು. ಆಗ ಸಭೆಯವರು, "ತಿರುನೀಲಕಂಠರೇ, ಯಥಾರ್ಥವಾಗಿ ನಡೆದ ಸಂಗತಿ ಏನು" ಎಂದು ಬೆಸಗೊಂಡರು. ನಾಯನಾರರು ಹೇಳಿದರು : "ಸನ್ಯಾಸ್ಯರೇ! ಇವರು ನನ್ನ ಹತ್ತಿರ ಕಪ್ಪರವನ್ನು ಕೊಟ್ಟದ್ದು ನಿಜ. ನಾನು ಅದನ್ನು ಜೋಪಾನ ಮಾಡಿ ಇಟ್ಟಿದ್ದ ಸ್ಥಳದಿಂದ ಅದು ಕಾಣೆಯಾಗಿದೆ. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಇದೇ ನಡೆದ ಸಂಗತಿ" ಇಬ್ಬರ ಹೇಳಿಕೆಗಳನ್ನೂ ಕೇಳಿ ಪರ್ಯಾಲೋಚಿಸಿದ ನಂತರ ತಿಲ್ಲೈ ಮೂವಾಯಿರವರು ಇಂತೆಂದರು: "ತಿರುನೀಲಕಂಠರೇ! ಶಿವಯೋಗಿಯ ಕಪ್ಪರವನ್ನು ನೀವು ಕಳೆದುಕೊಂಡದ್ದು ನಿಜವಾದರೆ, ಅವರು ಬಯಸುವಂತೆ ನೀವು ನಿಮ್ಮ ಸತಿಯ ಕೈಯನ್ನು ಹಿಡಿದು ಕೊಳದಲ್ಲಿ ಮಿಂದು ಪ್ರಮಾಣ ಮಾಡುವುದೇ ವಿಹಿತ" ಎಂದರು.

ಇದನ್ನು ಕೇಳಿದ ತಿರುನೀಲಕಂಠರು, ತನ್ನ ಹೆಂಡತಿಯ ಕೈಯನ್ನು ಮುಟ್ಟಲಾಗದ ಕಾರಣವನ್ನು ಅವರಿಗೆ ತಿಳಿಸಲು ನಾಚಿದರು. ಆದುದರಿಂದ "ಸೂಕ್ತ ರೀತಿಯಲ್ಲಿ ಮುಳುಗಿ ಸತ್ಯವನ್ನು ತೋರುವೆನು" ಎಂದು ನುಡಿದು ತಮ್ಮ ಮನೆಗೆ ಹೋಗಿ ಹೆಂಡತಿಯನ್ನು ಕರೆದುಕೊಂಡು ಬಂದರು. ಶಿವಯೋಗಿ ಮತ್ತು ನ್ಯಾಯಸಭೆಯ ಸಭಿಕರ ಸಮ್ಮುಖದಲ್ಲಿ ತಿರುಪ್ಪುಲೀಶ್ವರಂ ಎಂಬ ಶಿವ ನಿಳಯದ ಎದುರಿನಲ್ಲಿದ್ದ ಪುಷ್ಕರಣಿಯ ಬಳಿ ಬಂದು ನಿಂತರು. ಅವರ ಕೈಯಲ್ಲಿ ಒಂದು ವೇಣುದಂಡವಿತ್ತು. ಅದರ ಒಂದು ತುದಿಯನ್ನು ಅವರ ಸತಿ ಹಿಡಿದು ಕೊಳ್ಳಲು ಮತ್ತೊಂದು ತುದಿಯನ್ನು ತಾನು ಹಿಡಿದರು. ಮಿಂದು ಪ್ರಮಾಣ ಮಾಡಲು ಇಬ್ಬರೂ ಪುಷ್ಕರಿಣಿಯೊಳಗೆ ಇಳಿದರು. ಆಗ ಶಿವಯೋಗಿ "ಹೆಂಡತಿಯನ್ನು ಮುಟ್ಟಿ ಕೈಹಿಡಿದು ಮುಳುಗಬೇಕು" ಎಂದರು. ಉಪಾಯಗಾಣದ ತಿರುನೀಲಕಂಠರು ನಾಚಿಕೆಯನ್ನು ಬಿಟ್ಟು ಹಿಂದೆ ನಡೆದ ಘಟನೆಗಳನ್ನೆಲ್ಲ ವಿವರಿಸಿ, ತನ್ನ ಪತ್ನಿಯನ್ನು ತಾನು ಮುಟ್ಟುವುದಿಲ್ಲವೆಂದು ಶಿವನಾಣೆಯಿಟ್ಟ ಸಂಗತಿಯನ್ನು ಹೇಳಿದರು. ಬಳಿಕ ದಂಡವನ್ನು ಹಿಡಿದಂತೆಯೇ ದಂಪತಿಗಳು ನೀರಿನಲ್ಲಿ ಮುಳುಗಿ ಎದ್ದು ಬಂದರು.

ಶಿವನ ಒಲವು

ಹಾಗೆ ಎದ್ದು ಬಂದ ದಂಪತಿಗಳು ಮುಪ್ಪನ್ನು ನೀಗಿ ಯೌವನವನ್ನು ಪಡೆದು ಕಾಂತಿಯಿಂದ ಶೋಭಿಸುತ್ತಿದ್ದರು. ಆಕಾಶದಿಂದ ಆಗ ಅಲರ್ಮಳೆಗರೆಯಲು ಅದರಲ್ಲಿ ಆ ದಂಪತಿಗಳು ಮುಳುಗಿದಂತೆ ಕಂಗೊಳಿಸುತ್ತಿದ್ದರು. ಈ

ಅದ್ಭುತ ಘಟನೆಯನ್ನು ನೋಡುತ್ತಿದ್ದ ಅಲ್ಲಿ ನೆರೆದ ಜನರೆಲ್ಲರೂ ತಮ್ಮೆದುರು ನಿಂತಿದ್ದ ಶಿವಯೋಗಿಯನ್ನು ಕಾಣದೆ "ಇದೇನಾಶ್ಚರ್ಯ" ಎಂದು ಚಕಿತರಾದರು. ಆ ಸಮಯದಲ್ಲಿ ಶಿವನು ವೃಷಭಾರೂಢನಾಗಿ ಎಡಗಡೆ ಉಮೆಯ ಸಹಿತ ತನ್ನ ನಿಜರೂಪವನ್ನು ತೋರಿದನು. ತಿರುನೀಲಕಂಠನಾಯನಾರರೂ ಅವರ ಸತಿಯೂ ಮುಕ್ಕಣ್ಣನ ನಿಜರೂಪವನ್ನು ಕಂಡು ಅವನ ಪಾದಕ್ಕೆರಗಿ ಸ್ತುತಿಗೈಯುತ್ತ ಆನಂದಸಾಗರದಲ್ಲಿ ತೇಂಕಾಡಿದರು. ಪರಶಿವನು ತಿರುನೀಲಂಠರ ನಿಚ್ಚಟ ಭಕ್ತಿಯನ್ನು ಕೊಂಡಾಡಿ ಅವರೀರ್ವರಿಗೂ ಹದಿನಾರರ ಹರಯವನ್ನು ಕರುಣಿಸಿ ತರುವಾಯ ಗಣಪದವನ್ನು ದಯಪಾಲಿಸಿದನು, ಇಂತು ತಿರುನೀಲಕಂಠರೂ ಅವರ ಸತಿಯೂ ಶಿವಾನುಗ್ರಹವನ್ನು ಪಡೆದು ಶಿವಲೋಕವನ್ನೈದಿ ನಿತ್ಯಾನಂದವನ್ನು ಅನುಭವಿಸುತ್ತಿದ್ದರು.

"ಸತ್ಯದಿಂ ಮೆರೆವ ತಿರುನೀಲಕಂಠಗಳ ಚರಣಾಂಬುಜಕ್ಕೆ ಶರಣು"

★ ಎಂ. ವಿ. ಜಂಬುನಾಥನ್

ಮೈಗಳ್ಳ ಅಗಸ

ಬಟ್ಟೆಯೆಲ್ಲ ಕೊಳೆಕೊಳೆ
ಹೊಲ–ಹೊಲಸು.
ಬೀದಿಗೆ ಬಂದೊಡನೆ
ಕಿಡಕಿ ಕಿಡಕಿಯಿಂದ
ಹೊರಬಿದ್ದ ನೊಣಗಳ ದಂಡು
ಹೆಸರಾದ ಹೊಲಸನು ಕಂಡು
ಹಸಿಯುತ್ತಿವೆ ;
ನನ್ನ ಸುತ್ತುತ್ತಿವೆ.

ಮನೆಮಾಡಿದ್ದರೂ
ಅಲ್ಲಲ್ಲಿ ಉಪಹಾರ
ಫಲಹಾರ
ಹೊಟೇಲ ಮೇಜವಾನಿಯು
ಚಟ ನನಗೆ.
ಅಂತಯೇ ಬಟ್ಟೆ ತುಂಬಾ
ಮುಸು–ಮಸುರಿ
ಬಿದ್ದ ಕಲೆ
ಹಸಿ ಹಸಿ.
ಅಲ್ಲೆಲ್ಲಾ ಮುತ್ತುತ್ತಿದೆ
ನೊಣಗಳ ಗುಂಪು.
ಬಟ್ಟೆಯೇ ಹೊಲಸಿರಲು
ಹೇಗೆ ಮಾಡಲಿ ರಂಪು !

ನಾ ಬೆಳೆದು
ಶ್ರವಣ ಬೆಳಗೊಳದ
ಬಾಹುಬಲಿಯಾಗಬೇಕೆಂದು
ತರಾತುರಿ
ದಾರಿ ಹಿಡಿದೆ.
ದಾರಿಯು ಕಂಬದ ಮೇಲೆ
" ಅಪಾಯ "
ಕ್ರಾಸು.

ಕ್ರಾಸಿನ ಮೇಲೆ ಡೋಗಿ.
ತೀಡುತ್ತಿದ್ದ ಅಗಸ
ನನ್ನ ಮುಖ ನೋಡಿ
ಬಟ್ಟೆಯ ಮೇಲೆ
ಇಸ್ತ್ರಿ ಮರೆತು
ಡೈರಿ ತೆರೆದು,
“ ನಿಮ್ಮ ಬಟ್ಟೆಯ ಡೇಟು
ನಾಳೆ ” ಎಂದ.
ಯಾವಳದೋ ಗರ್ಭದಲಿ
ಕೂಸು ಸತ್ತಕಾರಣ
ಅವಳೂ ಸತ್ತಳಂತೆ,
ಓಣಿಯೇ ಕಣ್ಣೀರು ಹಾಕಹತ್ತಿದೆಯಂತೆ.
ಬಟ್ಟೆ ಸುಟ್ಟ ನಾತ
ಹತ್ತಿದಮೇಲೆ
ಇಸ್ತ್ರಿ ತೆಗೆದ
ಮರಗೂಳಿ ಅಗಸ.
ಥೂ ! ಇವನ ಮನೆಹಾಳಾಗ.
ಮೈತುಂಬ ಎಚ್ಚರಕೆ ಇಟ್ಟು
ನಾಳೆಯ ಕೆಲಸ
ಇಂದೇ ಮುಗಿಸಿದರೆ
ಊರಿಗೂರೆ ಮೆಚ್ಚಿ ಹೊಗಳೀತು
ಕಾಣಿಕೆ ಕೊಟ್ಟೀತು.
ಮೈಗಳ್ಳ ಅಗಸ.

ನಾ ಬರುವಾಗ
ಸತ್ತ ಚೊಚ್ಚಲ ಬಾಣಂತಿಯನ್ನು
ಬೀದಿ ಬಚ್ಚಲಮಾಡಿ
ಬಟ್ಟೆಬದಲಿಸುತ್ತಿದ್ದಾಗ
ಪುಟಚೆಂಡಿನಂತಹ
ಸ್ತನ
ಉಬ್ಬಿಹೊರಕಂಡವು.

★ ಕೆ. ಎ. ಬನ್ನೆಟ್ಟಿ

ಹಿಂದೀ ಸಾಹಿತ್ಯಕ್ಕೆ ಇಸ್ಲಾಮು ಕವಿಗಳ ಕಾಣಿಕೆ

ಸಾಹಿತ್ಯ ಜೀವನದ ಪ್ರತಿಬಿಂಬ, ಇದರ ನಿರ್ಮಾಣ ಕಾರ್ಯದಲ್ಲಿ ಜಾತಿ, ವರ್ಣ, ಭೇದಗಳಿಗೆ ಸ್ಥಾನವಿಲ್ಲ. ಸಾಹಿತಿಯು ಮುಸಲ್ಮಾನನಾಗಿರಲಿ, ಹಿಂದೂ ಆಗಿರಲಿ ಅಥವಾ ಕ್ರಿಶ್ಚನ್ ಆಗಿರಲಿ, ಅವನಲ್ಲಿ ದರ್ಶನ ಪ್ರದರ್ಶನ ಶಕ್ತಿಯಿದ್ದರೆ, ಅವನು ಈ ಸಾಹಿತ್ಯದರ್ಪಣದಲ್ಲಿ ತನ್ನನ್ನು ತಾನು ಕಾಣಿಸಬಲ್ಲ, ಕಾಣಬಲ್ಲ, ಈ ದೃಷ್ಟಿಯಿಂದ ಹಿಂದೀ ಸಾಹಿತ್ಯಕ್ಕೆ ಮುಸಲ್ಮಾನ ಕವಿಗಳ ಕಾಣಿಕೆ ಮಹತ್ವ ಪೂರ್ಣವಾಗಿದೆ ಈ ಕವಿಗಳ ಭಾವ ಸಂಪತ್ತಿಯು, ಕವಿಶ್ರೇಷ್ಠ ಸೂರದಾಸ, ತುಲಸಿದಾಸ ಮತ್ತು ಮೀರಾದೇವಿ ಇವರಂತೆಯೆ ಉನ್ನತ ಮಟ್ಟದ್ದಾಗಿದೆ.

ಮುಸಲ್ಮಾನ ಕವಿಗಳ ಕಾಣಿಕೆಯು ಕಾವ್ಯ ಕ್ಷೇತ್ರದಲ್ಲಿ ೧೧ನೆಯ ಶತಮಾನದ ಪ್ರಾರಂಭದಿಂದಲೇ ಕಂಡು ಬರುತ್ತದೆ. ಅಬ್ದುರ್ರಹಮಾನ ಅಥವಾ ಅದ್ದಹ ರಹಮಾನ ಇವನ ಅಮರ ಕೃತಿ. 'ಸಂದೇಶರಾಸಕ'ದ ಸ್ಥಾನ ಹಿಂದೀ ಸಾಹಿತ್ಯಾಕಾಶದಲ್ಲಿ ವಿಶಿಷ್ಟವಾಗಿದೆ ಈ ಕವಿಯು ಮುಲ್ತಾನ ನಿವಾಸಿಯಾಗಿದ್ದು, ನೇಕಾರ ಪುತ್ರ. ಜಾತಿಯಿಂದ ಮುಸಲ್ಮಾನನಾದರೂ ಇವನಿಗೆ ಹಿಂದೂ ಸಂಸ್ಕೃತಿಯ ಸಂಸ್ಕಾರ ಸಾಕಷ್ಟಿತ್ತು. ಆದುದರಿಂದ ಇವನನ್ನು ಭಾರತೀಯ ಸಂಸ್ಕೃತಿ ಹಾಗೂ ಸಾಹಿತ್ಯದ ಅಮರಗಾಯಕನೆಂದು ಕರೆಯಲಾಗುತ್ತದೆ.

'ಸಂದೇಶರಾಸಕ' ಒಂದು ಪ್ರಖ್ಯಾತ ಲೌಕಿಕ ಕಾವ್ಯ, ಈ ಕಾವ್ಯದಲ್ಲಿ ಓರ್ವ ವಿರಹಿಣಿಯ ಕರುಣ ಕಥೆಯ ಮಾರ್ಮಿಕವಾದ ವರ್ಣನೆ ಇದೆ. ವಿರಹ ವರ್ಣನೆ ಈ ಕಾವ್ಯದ ಜೀವಾಳ ಇದರಲ್ಲಿಯ ಉಪಮೆಗಳು ಹೆಚ್ಚಾಗಿ ಪರಂಪರಾಗತವಾಗಿದ್ದರೂ ಕವಿಯ ಆಂತರಿಕ ಅನುಭೂತಿ ಉನ್ನತ ಮಟ್ಟದ್ದಾಗಿದೆ ಎಂದು ವಿಮರ್ಶಕರ ಅಭಿಪ್ರಾಯ, ರಾಸಕ ಪ್ರಕಾರದ ಸಕಲ ಲಕ್ಷಣಗಳನ್ನು ಅಳವಡಿಸಿಕೊಂಡು ರಚಿಸಲ್ಪಟ್ಟ ಕಾವ್ಯಗಳಲ್ಲಿ ಶ್ರೇಷ್ಠ ಮಟ್ಟದ್ದು ಎಂದು ಪರಿಗಣಿಸಲಾಗುತ್ತದೆ.

"ಈ ಕಾವ್ಯದಲ್ಲಿ ಉತ್ಕೃಷ್ಟ ಕಾವ್ಯಕೌಶಲ ಹಾಗೂ ಶಾಶ್ವತ ಲೋಕ ತತ್ವಗಳ ಮಣಿಕಾಂಚನ ಸಂಯೋಗವಿದೆ." ಶೃಂಗಾರಪ್ರಧಾನವಾದ ಈ ಕಾವ್ಯ ದಲ್ಲಿಯ ಋತು ವರ್ಣನೆಗಳು ಕಥಾನಾಯಿಕೆಯ ವಿರಹ ಉದ್ದೀಪನಕ್ಕೆ ಸಹಾಯವಾಗಿವೆ

'ಸಂದೇಶ ರಾಸಕ' ಒಂದು ಸುಂದರವಾದ ಅಪಭ್ರಂಶ ಕಾವ್ಯ. ಈ ಕಾವ್ಯದ ಭಾವ, ಭಾಷೆ, ಅಲಂಕಾರ ಯೋಜನೆ, ಛಂದಸ್ಸು ಇವುಗಳ ಪ್ರಭಾವ ಆನಂತರದ ಹಿಂದೀ ಸಾಹಿತ್ಯದ ಮೇಲೆ ಸಾಕಷ್ಟಾಗಿದೆ. ಈ ಕಾವ್ಯದಲ್ಲಿಯ ವಿಪ್ರಲಂಭ ಶೃಂಗಾರದ ಅಭಿವ್ಯಕ್ತಿ ಕವಿಗೆ ಕೀರ್ತಿಯನ್ನು ತಂದಿದೆ.

'ಸಂದೇಶ ರಾಸಕ'ದಲ್ಲಿ ಅಪಭ್ರಂಶದ ಲಾಡಲೀ, ದೋಹಾ, ಅಡಿಲ್ಲ್, ರಡು, ಹಾಗೂ ಡೋಲ ಛಂದಸ್ಸುಗಳನ್ನು ಪ್ರಯೋಗಿಸಲಾಗಿದೆ. ಈ ಕಾವ್ಯದ ಅಭ್ಯಾಸದಿಂದ ನಮಗೆ 'ರಾಸಕ' ಗೇಯ ರೂಪಕದ ಪರಿಚಯ ಚನ್ನಾಗಿ ಆಗುತ್ತದೆ. ಇದು 'ಮಸೃಣೋದ್ಧತ ಪದ್ಧತಿ'ಯನ್ನು ಅವಲಂಬಿಸಿ ರಚಿಸಿದ ಗೇಯ ರೂಪಕ ಕಾವ್ಯವಾಗಿದೆ. 'ಸಂದೇಶ ರಾಸಕ' ಕಾವ್ಯದಲ್ಲಿಯ ಋತು ವರ್ಣನೆಗಳೆಂದರೆ-'ಪ್ರಬಂಧ ಕಾವ್ಯ'ಗಳಿಗೆ ಕೊಟ್ಟ ಕಾಣಿಕೆ ಎಂದೇ ಹೇಳಬಹುದು. ಈ ರೀತಿಯಾಗಿ ಆದಿ ಕವಿ ಅದ್ಧಹರಹಮಾನ ಋತುವರ್ಣನೆಗಳಿಂದ ಕಾವ್ಯ ಪ್ರಪಂಚದಲ್ಲಿ ಒಂದು ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ.

'ಆದಿಕಾಲ'ವು ಹಿಂದೀ ಸಾಹಿತ್ಯದ ಪ್ರಾರಂಭದ ಕಾಲವಾಗಿದೆ. ಈ ಸಮಯದಲ್ಲಿ ಮುಸಲ್ಮಾನರು ಭಾರತದಲ್ಲಿ ಸ್ಥಿರವಾಗಿ ನೆಲೆಸಿರಲಿಲ್ಲ. ಹೀಗಿದ್ದೂ ಈ ಕಾಲದ ಮುಸಲ್ಮಾನ ಕವಿಗಳ ಕಾಣಿಕೆ ಮೌಲಿಕವಾಗಿದೆ.

ಅಮೀರ ಖುಸರೂ ಈ ಅವಧಿಯ ಶ್ರೇಷ್ಠ ಕವಿ. 'ಸಂದೇಶ ರಾಸಕ'ದ ಸಂಶೋಧನೆ ಆಗುವ ಮೊದಲು ಅಮೀರ ಖುಸರೂಗೇ ಆದಿಕವಿ ಪಟ್ಟ ಕೊಡಲಾಗಿತ್ತು. ಸಂಘರ್ಷಮಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ ವಾತಾವರಣದಲ್ಲಿ ಈ ಕವಿಯು ತನ್ನ ರಚನೆಗಳನ್ನು ಪ್ರಕಟಪಡಿಸಿದನು. ಇವನು ಫಾರಸಿ ಕವಿ, ಹೀಗಿದ್ದೂ ಇವನು ಅರಬ್ಬಿ, ಸಂಸ್ಕೃತ ಭಾಷೆಗಳ ವಿದ್ವಾಂಸನಾಗಿದ್ದನು. ಇವನು ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾನೆಂದು ಊಹೆ. ಅವುಗಳಲ್ಲಿ ಈಗ ಇಪ್ಪತ್ತು ಇಪ್ಪತ್ತೈದು ಗ್ರಂಥಗಳು ಮಾತ್ರ ಉಪಲಬ್ಧವಾಗಿವೆ. 'ಖಾಲಿಕಬರಿ' 'ಅರಬಿ—ಫಾರಸಿ—ಹಿಂದೀ ಕೋಶ' 'ಪಹೇಲಿಯಾ' 'ಮುಕರಿಯಾ' 'ದೋ ಸುಖನೇ' ಮತ್ತು 'ಗಜಲ್‌ಗಳು' ಪ್ರಖ್ಯಾತವಾಗಿವೆ. ಇವುಗಳಲ್ಲದೆ, ಅಮೀರ ಖುಸರೂ ಮನೋರಂಜನೆಗಾಗಿ ಬರೆದ ಕವನಗಳಲ್ಲಿಯೂ ಉನ್ನತ ಮಟ್ಟದ ಕಾವ್ಯಗುಣವನ್ನು ಕಾಣುತ್ತೇವೆ. ಆಧುನಿಕ ಶಬ್ದಗಳಿಂದ ಮಿಶ್ರಿತವಾದ ಇವನ ಭಾಷೆಯು ಜನಸಾಮಾನ್ಯರ ಮನಸ್ಸನ್ನು ಗೆದ್ದು ನಿಂತಿದೆ. ಇವರ ಖಡೀಬೋಲಿಯ ರೀತಿಯನ್ನು ಕಂಡು ಆಚಾರ್ಯ ರಾಮಚಂದ್ರ ಶುಕ್ಲ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ— "ಖುಸರೋ ಆಡುಮಾತಿಗೆ ಮನ್ನಣೆ ಬರುವಂತೆ ಮಾಡಿದ—" ಭಾಷೆಗಳು ಐಕ್ಯವನ್ನು ಸಾಧಿಸುವುದು ಇವನ ಧ್ಯೇಯವಾಗಿತ್ತು. ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯ ಮಟ್ಟಕ್ಕೆ ಏರಿಸುವಲ್ಲಿ ಇವನೂ ದುಡಿದಿದ್ದಾನೆ. ಕವಿತೆಯ ಪ್ರತಿ ಪಂಕ್ತಿ ಅರ್ಧಭಾಗ ಫಾರಸಿ ಶಬ್ದಗಳಿಂದಲೂ ಕೂಡಿರುವುದು ಅಮೀರ ಖುಸರೂ ಅವರ ಶೈಲಿಯ ವೈಶಿಷ್ಟವಾಗಿದೆ. ಒಟ್ಟಿನಲ್ಲಿ ಹಿಂದೀ ಸಾಹಿತ್ಯವು ಈ ಕವಿಗೆ ಚಿರಋಣಿಯಾಗುವಂತಿದೆ. ಇವರ 'ಕಾಹೆಕೊ ಬ್ಯಾಹಿ ವಿದೇಶ' ಎಂಬ ಲೋಕಗೀತವು ಇಂದಿಗೂ ಹಿಂದೂ ಮುಸಲ್ಮಾನರ ಮನೆಮನೆ

ಗಳಲ್ಲಿ ಪ್ರತಿಧ್ವನಿಸುತ್ತಲಿದೆ.

ಸೂಫಿ ಕಾವ್ಯ ಶಿರೋಮಣಿಗಳಲ್ಲಿ ಮುಲ್ಲಾದಾಊದ ಅವರ ಹೆಸರು ಉಲ್ಲೇಖನೀಯವಾಗಿದೆ. ಹಿಂದೀಯಲ್ಲಿ ಮತ್ತು ಸೂಫಿ 'ಪ್ರೇಮಾಖ್ಯಾನಕ'. ಕಾವ್ಯ ಪರಂಪರೆಯಲ್ಲಿ ಮುಲ್ಲಾದಾಊದ ಅವರ ಕಾವ್ಯವು ಸರಸವಾಗಿದೆ ಇವರು ವಿರಚಿಸಿದ 'ಚಂದಾಯನ' ಕಾವ್ಯವು ಹಿಂದೀ ಸಾಹಿತ್ಯಕ್ಕೆ ಒಂದು ಮಹತ್ವಪೂರ್ಣವಾದ ಕೊಡುಗೆಯಾಗಿದೆ. ೧೪ ನೆಯ ಶತಮಾನದ ಉತ್ತರಾರ್ಧದ ಈ ಕಾವ್ಯವು ತದನಂತರದ ಸೂಫಿ ಕವಿಗಳಿಗೆ ಪ್ರೇರಣೆಯ ಬುಗ್ಗೆಯಾಗಿದೆ ಎಂದರೂ ನಡೆದೀತು. ಇದೊಂದು 'ಪ್ರೇಮಾಖ್ಯಾನಕ ಕಾವ್ಯ.' ಚಂದಾ ಮತ್ತು ಲೋರಿಕ ಇವರ ಪ್ರಣಯ ಕಥಾನಕವೇ ಈ ಕಾವ್ಯದ ವಸ್ತು. ಇದೊಂದು ವಿರುದ್ಧ ಲೌಕಿಕ ಪ್ರಣಯ ಗೀತವಾಗಿದೆ. 'ಲೋರಿಕಾಯನ' ಎಂಬ ಜಾನಪದ ಕಥೆಯೆ ಈ ಕಾವ್ಯ ಕಥೆಗೆ ಪ್ರೇರಣೆಯನ್ನಿತ್ತಿರಲೂಬಹುದು. ಕವಿಯು ಕಾವ್ಯ ಪ್ರಾರಂಭವನ್ನು ಅಲ್ಲಾ ಸ್ತವನದಿಂದ ಮಾಡದೆ ಈಶಸ್ತವನ ಮಾಡುವುದು ಒಂದು ವೈಶಿಷ್ಟ್ಯ ಎಂದೇ ಹೇಳಬೇಕು. ಈ ರೀತಿ ಮುಂದಿನ ಕವಿಗಳ ಮೇಲೆ ಪರಿಣಾಮುವನ್ನುಂಟು ಮಾಡಿದೆ. ಮುಲ್ಲಾದಾಊದ ಅವರ ಸಾಹಿತ್ಯವನ್ನು ಕಾವ್ಯ ಪರಂಪರೆ ಮತ್ತು ಭಾಷಾವಿಕಾಸದ ದೃಷ್ಟಿಯಿಂದ ಅವಲೋಕಿಸಿದಾಗ, ಅದೊಂದು ಸತ್ವಯುತವಾದ ಕಾಣಿಕೆಯೆನಿಸುತ್ತದೆ. 'ಚಂದಾಯನ'ದಲ್ಲಿ ಬಳಸಿದ ಅವಧಿ ಭಾಷೆಯ ವಿಕಸಿತ ರೂಪವನ್ನೇ ನಾವು ಅನ್ಯ ಸೂಫಿ ಕವಿಗಳ ಕಾವ್ಯಗಳಲ್ಲಿ ಕಾಣಬಹುದು. ಮುಲ್ಲಾದಾಊದರಲ್ಲಿ ಗಂಗಾನದಿಯ ಬಗ್ಗೆ ಇರುವ ವಿಶ್ವಾಸವು ಅವರ ಭಾರತ ಪ್ರೀತಿಯುದ್ಯೋತಕ ವಾಗಿದೆ.

'ಭಕ್ತಿಕಾಲ'ವು ಹಿಂದಿ ಸಾಹಿತ್ಯ ಇತಿಹಾಸದಲ್ಲಿ ಸುವರ್ಣಯುಗವೆಂದು ಮನ್ನಿಸಲಾಗಿದೆ. ಈ ಕಾಲದಲ್ಲಿ ಈಶ್ವರನ ಸಗುಣೋಪಾಸಕ ಕವಿಗಳು ಮತ್ತು ನಿರ್ಗುಣೋಪಾಸಕ ಕವಿಗಳು ಎಂದು ಸ್ಪಷ್ಟವಾಗಿ ವಿಭಜನೆಯನ್ನು ಮಾಡಲು ಬರುವಂತಿದೆ. ಮುಲ್ಲಾದಾಊದ ಇವರು ನಿರ್ಗುಣೋಪಾಸಕ ಶಾಖೆಯ ಕವಿಗಳಲ್ಲಿ ಪ್ರಮುಖರಾಗಿದ್ದಾರೆ. ಈ ಶಾಖೆಯನ್ನು ಅನುಸರಿಸಿಯೇ ಅನೇಕ ಮುಸಲ್ಮಾನ ಕವಿಗಳು ತಮ್ಮ ಕಾವ್ಯಗಳನ್ನು ಹಿಂದೀ ಭಾಷೆಗೆ ಇತ್ತಿದ್ದಾರೆ

'ಪ್ರೇಮ ಮಾರ್ಗ'ದ ಸೂಫಿ ಕವಿಗಳಲ್ಲಿ—ಕುತುಬನ್, ಮಂಝನ್, ಮಲಿಕ ಮೊಹಮ್ಮದ ಜಾಯಸಿ, ಉಸಮಾನ್, ಶೇಖನಬಿ, ಕಾಶೀಮುಶಾಹ, ನೂರ ಮುಹಮ್ಮದ, ಮುಂತಾದ ಪ್ರಮುಖ ಕವಿಗಳು ಭಾರತ ಸಂಸ್ಕೃತಿಯ ಮತ್ತು ಭಾರತೀಯ ತತ್ವಜ್ಞಾನದ ಯಶೋಗೀತಗಳನ್ನು ಹಾಡಿದ್ದಾರೆ.

'ಭಕ್ತಿಕಾಲ'ದ ಸೂಫಿ ಕವಿಗಳಲ್ಲಿ ಮಹಾಕವಿ ಮಲಿಕ್ ಮೊಹಮ್ಮದ ಜಾಯಸಿಯವರು 'ಪದ್ಮಾವತ' ಎಂಬ ಬೃಹತ್ ಮಹಾಕಾವ್ಯವನ್ನು

ಸೃಷ್ಟಿಸಿದ್ದಾರೆ. ಇದು 'ಮಸನವಿ' ಶೈಲಿಯಲ್ಲಿ ಬರೆದ 'ಪ್ರಬಂಧ ಕಾವ್ಯ' ವಾಗಿದೆ. ಕಾವ್ಯಾರಂಭದಲ್ಲಿ ದೇಶ, ಆಳರಸು, ಗುರುಪರಂಪರೆ ಕುರಿತು ಸ್ತುತಿ ಪದ್ಯಗಳಿವೆ. ಐತಿಹಾಸಿಕ ಹಿನ್ನೆಲೆಯ ಮೇಲೆ ರಚಿಸಿದ ಶೃಂಗಾರರಸ ಪ್ರಧಾನ ಮಹಾಕಾವ್ಯವಿದು. ಈ ಕವಿಯ ದರ್ಶನವು ಅದ್ವೈತ ಸಂಪ್ರದಾಯದ್ದು ಎಂದು ಹೇಳಲಾಗುತ್ತದೆ.

ಶೇಖ ಕುತುಬನ್ ಅವರ 'ಮೃಗಾವತಿ' ಕಾವ್ಯದಲ್ಲಿಯೂ ಭಾರತೀಯ ಸಂಸ್ಕೃತಿಯ ಪ್ರಭಾವವಿದೆ. ಮಲಿಕ್ ಮಂಝುನ್ ಅವರ 'ಮಧುಮಾಲತಿ'ಯೂ ಇದೇ ಪರಂಪರೆಯಲ್ಲಿ ಬಂದ ಇನ್ನೊಂದು ಪ್ರಮುಖ ಕಾವ್ಯವಾಗಿದೆ. ಮಹಮ್ಮದನೇ ಮೂಲವಸ್ತು, ಜಗತ್ತು ಅವನ ಶಾಖೆ ಎಂದು ಪ್ರತಿಪಾದಿಸಿದ್ದಾನೆ ಈ ಕವಿ. "ಏ ಸ್ವಾಮಿ! ನಿನ್ನ ಸರಿಸಮಾನರು ಯಾರೂ ಇಲ್ಲ, ಸೃಷ್ಟಿಯು ನಿನ್ನ ಮುಖ ಹಾಗೂ ರೂಪಕ್ಕೆ ಕನ್ನಡಿ ಹಿಡಿದಂತಿದೆ. ನೀನು ಒಬ್ಬನೇ, ನಿನ್ನ ಮುಖದಲ್ಲಿಯೆ ಸೃಷ್ಟಿಯ ಎಲ್ಲ ರೂಪಗಳಿವೆ. ಸಮಸ್ತ ಸೃಷ್ಟಿ ಮಹಮ್ಮದನ ಭಾವ ತರಂಗ" ಎಂಬ ಅಭಿಪ್ರಾಯವು ಮಲಿಕ್ ಮಂಝುನಾ ಅವರದಾಗಿದೆ. 'ಚಿತ್ರಾವಲಿ' ಎಂಬ ಉಪಮಾನ್ ಕವಿಯ ಕಾವ್ಯವೂ ಕಲ್ಪನಾ ರಮ್ಯವಾಗಿದ್ದೂ ಪಾತ್ರಗಳು ಸಜೀವವಾಗಿವೆ.

ನಿರ್ಗುಣೋಪಾಸಕ ಶಾಖೆಯ ಕವಿಗಳಲ್ಲಿ ಸಂತ ಸಾಮ್ರಾಟ್ ಕಬೀರ ದಾಸರ ಹೆಸರನ್ನು ಕೇಳದವರುಂಟೆ? ಈಶ್ವರನ ನಿರಾಕಾರ ರೂಪವನ್ನು ಆರಾಧಿಸುವ ಏಕೇಶ್ವರ ವಾದಿ ಮಹಾ ಉಪಾಸಕರಾಗಿದ್ದಾರೆ ಕಬೀರದಾಸರು. 'ಮಾಯೆ' ಸತ್ಪುರಷರಿಂದ ಉತ್ಪನ್ನವಾಗಿದೆ. ಸೃಷ್ಟಿಯ ಸೃಜನ ಶಕ್ತಿ-ಮಾಯೆ. ಕಬೀರನು ಮಾಯೆಯ ಮಿಥ್ಯಾವಾದವನ್ನು ಘೋರವಾಗಿ ವಿರೋಧಿಸುವ ಸಂತ ಕವಿಯಾಗಿದ್ದಾನೆ. ಇವನ ರಹಸ್ಯವಾದಲ್ಲಿ ಅದ್ವೈತವಾದ ಮತ್ತು ಸೋಫಿ ಮತದ ಸಮನ್ವಯವಿದೆ. ನಾಥ ಪಂಥದಿಂದ ಪ್ರಭಾವಿತನಾದ ಈ ಸಂತನು ಸಹಜ ಸಾಧನೆಗೆ ಮಹತ್ವವನ್ನು ಕೊಟ್ಟಿದ್ದಾನೆ." ಇದು ಕಬೀರದಾಸರ ತತ್ವ-ಜ್ಞಾನದ ಸಾರವಾಗಿದೆ. ಜಾತಿ ಭೇದಗಳಿಗೆ ಬಹಿಷ್ಕಾರ ಹಾಕಿದ ಸಂತ ಕವಿ ಇವನು.

ಶೇಖ ಫರೀದ ಇವನೂ ಸಂತಕವಿ ಮಾಲಿಕೆಯಲ್ಲಿ ಸೇರಬೇಕಾದ ಶ್ರೇಷ್ಠ ಮುಸಲ್ಮಾನ ಕವಿ. ಇವನು ೧೩೦ ದೋಹಾ ಮತ್ತು ೪ ಪದಗಳನ್ನು ಬರೆದಿದ್ದಾನೆ ಎಂದು ವಿಮರ್ಶಕರ ಅಭಿಪ್ರಾಯ. ಬಹುಶಃ ಈ ಕವಿಯು ಗುರು ನಾನಕರ ಸಮಕಾಲೀನ ಆಗಿರಬಹುದು.

ರಸಖಾನ ಕವಿಗಳ ಕಾವ್ಯಗಳಲ್ಲಿ ಕೃಷ್ಣ ಭಕ್ತಿಯೇ ಸ್ಥಾಯೀಭಾವವಾಗಿದೆ. ಇವರು ಶ್ರೇಷ್ಠ ಕೃಷ್ಣಭಕ್ತರಾಗಿದ್ದು, 'ಕೃಷ್ಣಲೀಲಾ ಪ್ರಸಂಗಾನುಭೂತಿ ಯಲ್ಲಿಯೇ ಕೊನೆಯ ಉಸಿರೆಳೆದಿದ್ದಾರೆ. ಗೋಸ್ವಾಮಿ ವಿಟ್ಠಲನಾಥ

ಆವರ ಸಂಪರ್ಕದಿಂದ ಇವರಲ್ಲಿಯು ಲೌಕಿಕಪ್ರೇಮವು ಅಲೌಕಿಕಪ್ರೇಮಸ್ಪರ್ಶವನ್ನು ಪಡೆಯಿತು. ಜೀವನದ ಬಹುಭಾಗವನ್ನು ವ್ರಜಭೂಮಿಯಲ್ಲಿ ಕಳೆದದ್ದರಿಂದ ಈ ಕವಿಯ ರೋಮ ರೋಮಗಳಲ್ಲಿ ಶ್ರೀಕೃಷ್ಣ ಭಕ್ತಿ ತುಂಬಿ ತುಳುಕುತ್ತಿತ್ತು. 'ಪ್ರೇಮವಾಟಿಕಾ' ಎಂಬವುಗಳು ರಸಖಾನ್ ಕವಿಯ ಪ್ರಸಿದ್ಧ ಕೃತಿಗಳಾಗಿವೆ. ಸೂಫಿ ಪ್ರೇಮಭಾವನೆಯ ಪ್ರಭಾವವೂ ಇವನ ಕೃತಿಗಳಲ್ಲಿ ಕಾಣಬಹುದು. ಇವನ ಕಾವ್ಯಗಳಿಂದ ಪ್ರಭಾವಿತನಾದ ಭಾರತೇಂದು ಹರಿಶ್ಚಂದ್ರನು ಹೀಗೆ ನುಡಿದಿದ್ದಾನೆ— "ಇನ ಮುಸಲಮಾನ ಹರಿಜನನ ಪೈ ಕೋಟಿಕ ಹಿಂದು ನ ವಾರಿಯೆ" [ಮುಸಲ್ಮಾನ ಭಕ್ತರು ಕೋಟಿ ಕೋಟಿ ಹಿಂದೂ ಭಕ್ತರಗಿಂತ ಮಿಗಿಲಾಗಿದ್ದಾರೆ] ರಸಖಾನ ಕವಿಯು 'ರಸದಖಾನರಾಗಿದ್ದಾರೆ ಎಂದರೂ ಅತಿಶಯೋಕ್ತಿಯಿಲ್ಲ. ಈ ಕವಿಯು ವ್ರಜಭಾಷೆಯಲ್ಲಿಯೆ ಭಕ್ತಿಭಾವನೆಯನ್ನು ಚಿತ್ರೋಪಮ ಶೈಲಿಯಲ್ಲಿ ಬಣ್ಣಿಸಿದ್ದಾನೆ. "ಪ್ರೇಮ, ಭಕ್ತಿ ಇವುಗಳ ಸಜೀವಸುಂದರ ಚಿತ್ರಗಳು, ರಸಖಾನ ಕವಿಗಳ ಕಾವ್ಯದಲ್ಲಿ ಮೂಡಿವೆ. ಇಂಥದನ್ನು ಹಿಂದೂ ಕವಿಗಳಲ್ಲಿ ಕಾಣುವುದು ಕಷ್ಟ" ಎಂದು ರಸಖಾನರ ಬಗ್ಗೆ ವಿಮರ್ಶಕರ ಅಭಿಪ್ರಾಯವಿದೆ. ನೀತಿ ಮತ್ತು ಶೃಂಗಾರರಸ ಪ್ರಧಾನಕಾವ್ಯಗಳನ್ನು ರಚಿಸುವಲ್ಲಿ ಕವಿ ಜಮಾಲರ ಹೆಸರನ್ನೂ ಮರೆಯುವಂತಿಲ್ಲ. ನೀತಿ ಪ್ರಧಾನಕಾವ್ಯಗಳನ್ನು ರಚಿಸುವಲ್ಲಿ ಕವಿ ರಹೀಮರು ಸರ್ವಶ್ರೇಷ್ಠರಾಗಿದ್ದಾರೆ.

ಕವಿ ರಹೀಮರು ಅಕಬರನ ದರಬಾರದಲ್ಲಿದ್ದ 'ನವರತ್ನ'ಗಳಲ್ಲಿ ಒಬ್ಬರಾಗಿದ್ದರು. ವಿಶ್ವವನ್ನೇ ಸುಧಾರಿಸುವ ಹೆಬ್ಬಯಕೆ, ಇವರ ನೀತಿ ಪ್ರಧಾನ ಕಾವ್ಯಗಳಲ್ಲಿದೆ. ಪ್ರೇಮ, ಸೌಂದರ್ಯ. ನಾಯಿಕಾ ಭೇದಗಳನ್ನು ಅಭಿವ್ಯಕ್ತಪಡಿಸುವಲ್ಲಿ ಇವರ ಲೆಕ್ಕಣಿಕೆಯ ಮಂತ್ರ ಶಕ್ತಿಯನ್ನು ಕಾಣಬಹುದು.

ಸೈಯದ ಮುಬಾರಕ ಅಲಿ ಬಿಲಗ್ರಾಮಿಯು ಸಂಸ್ಕೃತ, ಫಾರಸಿ ಮತ್ತು ಅರಬ್ಬೀ ಭಾಷೆಯ ಪಂಡಿತನಾಗಿದ್ದನು. ಇವನು ರಸಖಾನನಂತೆ ಶ್ರೇಷ್ಠ ಕವಿ.

ಅಲೀಬಾಹಿಬಖಾನ ಪ್ರೀತಮ ಕವಿಯು ಹಿಂದೀ ಸಾಹಿತ್ಯದ 'ರೀತಿಕಾಲ'ದ ಅಮರಕವಿ. ಇವನ ಕಾವ್ಯಗಳಲ್ಲಿ ಹಾಸ್ಯರಸವೇ ಪ್ರಮುಖ ರಸವಾಗಿದೆ.

ಹಿಂದೀ ಸಾಹಿತ್ಯದ 'ಆಧುನಿಕ ಕಾಲ'ದಲ್ಲಿ ನಜೀರ ಅಕಬರಾಬಾದಿಯು ಕೃಷ್ಣಲೀಲೆಯನ್ನು ಕುರಿತು ಅನೇಕ ಪದ್ಯಗಳನ್ನು ರಚಿಸಿರುವನು ಇವನೂ ಒಬ್ಬ ಸೂಫಿ ಕವಿ. ಮುಬಾರಕ, ಮೀರ, ಹಫೀಜುಲ್ಲಾಖಾನ ಮುಂತಾದ ಅನೇಕ ಮುಸಲ್ಮಾನ ಕವಿಗಳು ಹಿಂದೀ ಸಾಹಿತ್ಯದ ವಿಕಾಸಕ್ಕೆ ಸಹಾಯಕ ಪೋಷಕರಾಗಿದ್ದಾರೆ.

ಹೀಗೆ ಹಿಂದೀ ಸಾಹಿತ್ಯಕ್ಕೆ ಇಸ್ಲಾಮ ಕವಿಗಳು ಕಾಣಿಕೆ ಸಲ್ಲಿಸಿ ಸಾಹಿತ್ಯ ಸಮೃದ್ಧಿ ಕಾರ್ಯದಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸಿದ್ದಾರೆ.

★ ಸೋಮಶೇಖರ್ ಸೋಮ

ರತ್ತೋ ರತ್ತೋ ರಾಯನ ಮಗಳೆ

(ಅಸಂಗತ ನಾಟಕ)

ಮೂರು ಕುರ್ಚಿಗಳು ಒಂದೊಂದರ ಮೇಲೆ, 'ಕ' ಮತ್ತು 'ಕಾ' ಕುಳಿತಿದ್ದಾರೆ. ಇನ್ನೊಂದು ಖಾಲಿ. ಕೆಲವು ನಿಮಿಷಗಳಾದ ನಂತರ 'ಕ' ಎಚ್ಚರಗೊಂಡು 'ಕಾ ನ ಕಡೆಗೆ ನೋಡುತ್ತಾನೆ. ನಂತರ 'ಕಾ'ನ ಹೊಟ್ಟೆಯಲ್ಲಿ ಬೆರಳು ಚುಚ್ಚಿ ಎಬ್ಬಿಸುತ್ತಾನೆ. ಆದರೆ 'ಕಾ' ಒಂದೆರಡು ಸಲ ಕುಳಿತಲ್ಲೇ ಅಲುಗಾಡಿ ಹಾಗೇ ಮಲಗಿರುತ್ತಾನೆ.

ಕ.—ಏಳೋ ಮಾರಾಯಾ. ಎಷ್ಟೊತ್ತ ಮಲಗ್ತಿ. ನಿದ್ದಿಗೇನಾದ್ರು ಅಂತಾ ಪಾರಾ ಆದನs, ಏನಿಲ್ಲ. ಸತ್ತವ್ರಾಂಗ ಮಲಗೀದೆಲ್ಲ (ಮತ್ತೆ ಹೊಟ್ಟೆಯಲ್ಲಿ ಚುಚ್ಚುತ್ತಾನೆ)

ಕಾ.—(ಕಣ್ಣು ತೆರೆದು ಸಿಟ್ಟಿನಿಂದ 'ಕ'ನನ್ನು ನೋಡಿ) ಯಾಕ ಪೀಡಸ್ತ್ಯೋ ಮಾರಾಯಾ. ಸುಮ್ನ ಕೂಡಬಾರದs.

ಕ.—ಬೆಳಗಾಯ್ತು, ಏಳಪ್ಪ, ನೀ ಶಾಣ್ಯಾ ಮನಷಾ ಅಲ್ಲs? ಏಳಪs ನೋಡ ಹಕ್ಕಿ ಚಿಲಿಪಿಲಿ ಎಂದು, ಕಾಗಿ ಕಾಕಾ, ಎಂದು, ಗುಬ್ಬಿ ಚಿಂವ್ ಚಿಂವ್ ಎಂದು ಹಾರ್‍ಯಾಡಿ ಹೋದು. ಏಳು, ಬೆಳಗಾಯ್ತು. ಏಳಪs ರಾಜಾ.

ಕಾ.—ಸುಮ್ನ ಕೂಡೋ. ನಾ ಎಂಥ ಖುಮ್ಮಾ ಕನಸಾ ನೋಡ್ಲಿಕತ್ತಿದ್ದs, ಎಂಥಾ ಛಂದ ಕನಸಾ ನೋಡ್ಲಿಕತ್ತಿದ್ದ ನೀ ಮಗ (ತನ್ನ ಹೊಟ್ಟೆಯಲ್ಲಿ ತಾನೆ ಬೆರಳು ಚುಚ್ಚಿಕೊಂಡು), ಖೀಂಗ ಖೀಂಗ ಮಾಡಿ ಎಬಸ್ದಿ. ನೀ ಹೊಟ್ಟ್ಯಾಗ ಚುಚ್ದ ಕೂಡ್ಲೇನ ನನ್ನ ಕಣ್ಣಾಗಿನ ಕನಸಾ 'ಲಬ್ಬರ್' ಫುಗ್ಗಾ ಠಬ್ಬಂತ ಪಡದ್ಹಾಂಗ ಆಯ್ತು —(ತಡೆದು) ಈಗ ತಂದು ಕೊಡತ್ಯಾ ಮಗನಾ ನನ್ನ ಕನಸಾ ? ಎಟು ಲುಗ್ಸಾನ ಮಾಡ್ದಿ ನಂದು. ನಾ ಆ ಫುಗ್ಗಾದವ್ಯಾಗ ಕುಂತು ಕೈಲಾಸದ ಕಡಿಗಿ ಹೊಂಟಿದ್ದ—ನೀ ಮತ್ತ ಎಳ್ದ ತಂದಿ, ನನಗೀ ಹಾಳೂರಾಗ, ಈ ಹಾಳ ಮಂದ್ಯಾಗ, ಈ ಹಲ್ಕಟ್ ಜಾತ್ಯಾಗ.

ಕ.—(ತಿಳಿಸುತ್ತ) ಕನಸಾ ಕಾಣದ ಬಿಡು. ಖರೆ ಏನದ ಅದ್ನ ನೋಡದ ಕಲೀ ಕಣ್ ತೆರದು ಸುತ್ತಮುತ್ತ ನಡೇ ಆಟ ನೋಡಪ—

ಕಾ.—(ನಗುತ್ತಾ) ನಂಗೊತ್ತು, ನಂಗೊತ್ತು. ನೀ ಯಾಕ ಈ ಆಟಾ ಹೂಡೀದಂತ ನಂಗೊತ್ತು. (ತಡೆದು) ನಿಂಗs ಕನಸಾ ಬರಂಗಿಲ್ಲ. ನಿನ್ಗ ಬರೇ ನಿದ್ದಿ

ಬರತದ. ಖಾಲಿ ನಿದ್ದಿ—ಅದರೊಳಗ ಏನಿರಂಗಿಲ್ಲ. ಕತ್ತಲೀನೇ ಕತ್ತಲಿ ಇರತದ ಘಟ್ಟ ಕತ್ತಲಿ ಕಲ್ಲಭಂಡೀ ಹಾಂಗ ಜಿರಸಾದ ಕತ್ತಲಿ ಇರತದ ನಿನ್ನ ನಿದ್ದಿಯೊಳಗ—ಆದ್ರ ನನ್ನ ನಿದ್ದೀ—ವ್ಹಾಽಽರೇ ಗಡೀ....ಹುನಂತಿ. ಕಣ್ ಮುಚದ್ರಾಯ್ತು. ಬಂದೂನೆ ತರತರದ ತರತರದ ರಂಗ ರಂಗಿನ ಸಾವಿರಾರು ಮಾತು, ಸಾವಿರಾರು ಮಂದಿ, ಎಂಥ ಮಜ್ಯಾ ಅಂತೀ—ಆದ್ರ ನಿಂದೇನು ? ನಿನ್ನ ನಿದ್ದಿ ಬರೇ ಕೆಸರನ್ಹ್ಯಾಂಗಿದ್ರ ನನ್ನ ನಿದ್ದಿ ಕಮಲ್ದ್ಹಾಂಗದ ಕಮ-ಲ್ದ್ಹಾಂಗ....ತಿಳೀತಽ—ನನ್ನ ನಿದ್ದಿ ಅರಳ್ತದ, ಮೊಗ್ಗಿ ಹಾಂಗ ಬಿಚ್ತದ, ಹೂವಿನ್ಹಾಂಗ ಅರಳ್ತದ, ಸವಾಸನ ವಾಸಾ ಬಿಡತದ...ನಿಂದೂ—ಥೂ ನಿನ್ನ ಮನೀ ಹಾಳಾಗಾ—ನಿನ್ನ ನಿದ್ದೀವ್ಯಾಗ ಮಣ್ಣ ಹಾಕಾ—ಕಣ್ಣ ಮುಚದ್ರಾಯ್ತು. ಅಪ್ಪಾ ಹೆಣಾನೇ ಆಗ್ತಾನ.

ಕ.—ಅಂಥಾದೇನ್ ಭಾರಿ ಕನಸಾ ನೋಡತೆಪ್ಪ ನೀನು, ಭಾರಿ ಬಡಿವ್ಯಾರ ಹೇಳ-ಕೋತಿ.

ಕಾ.—ಅಲೀ ! ಅಂಥಾದಂದ್ರ ಅಂಥಾದ್ದು—ಎಂಥಾದೆಂದ್ರ ಎಂಥಾದ್ದು.

ಕ.—ಸಾಕು ಮಾಡು, ಕೆಲ್ಸಕ್ಕ ಪಲಸಕ್ಕ ಹೋಗದದನಽ ಏನಿಲ್ಲ ?

ಕಾ.—ಎಂಥ ಕೆಲಸಾಽ ?

ಕ.—ಹೊಟ್ಟಿ ತುಂಬಸ ಕೆಲಸ

ಕಾ.—ಛೀ– ಇದರ ಮನೀ ಹಾಳಾಗಾ, ಈ ಕೆಲಸ ಯಾರ ಮಾಡ್ತಾರೋಪ ?

ಕ.—ನಿನ್ಗ ಬೇಕಾಗಿಲ್ದ್ರ ಬಿಡು ನಾನಂತೂ ಹೋಗ್ತೀನಿ.

ಕಾ.—ಎಲ್ಲಿಗೆ ಹೋಗ್ತಿ ?

ಕ.—ಎಲ್ಲಿಗೆಂದ್ರಽ. ಹೀಂಗ ಹಾದಿ ಹಿಡಕೊಂಡು ಹೋಗ್ತೀನಿ.

ಕಾ.—ಹಾದಿ ಹಿಡಕೊಂಡ ಹೋಗತ್ಯಾ ?

ಕ.—ಹೂಂ. ಹಾದಿ ಹಿಡಕೊಂಡೇ ಹೋಗ್ತೀನಿ. ಯಾಕ ?

ಕಾ.—ಅಲ್ಲಽ, ಹಾದಿ ಕೈಯಾಗ ಹಿಡಕೊಂಡವ್ಯಾಲ ಕಾಲಾಗೇನಿರತದ ? ನಡೀತೆದರ ವ್ಯಾಲ ?

ಕ.—ಬರೇ ನೆಲ್ದ ವ್ಯಾಲ ನಡೀತೀನಿ.

ಕಾ.—ಬರೇ ನೆಲ್ದ ವ್ಯಾಲ ನಡೀತ್ಯಾ ?

ಕ.—ಹೂಂ ಮತ್ತಽ.

ಕಾ.—(ನಗುತ್ತ) ಬರೇ ನೆಲ್ದ ವ್ಯಾಲ ಹ್ಯಾಂಗ ನಡೀತ್ಯೋ ? ಛಿಕನಾಸಿಗೇಡಿನನ್

ಮಗನೆ. ಬರೆ ನೆಲ್ದ ವ್ಯಾಲ ಯಾರಾದ್ರು ನಡದಾರೇನೋ ಇವೊತ್ತಿನ ತನಕ, ಈ ದುನಿಯಾದಾಗ?

ಕ.—ಯಾಕ ನಡದಿಲ್ಲ? ಯಾಕ ನಡೆಂಗಿಲ್ಲ?

ಕಾ.—ಯಾಕ ನಡೆಂಗಿಲ್ಲss? ಅಂದ್ರ ನಡದ ತೋರಸು. (ನೆಲ ತೋರಿಸಿ, ಇದು ನೆಲ ಅದ ಏನಪ. ಇದು ನೆಲಾನೆ ಹೌದಲ್ಲೋ?

ಕ.—ಹೌದು ನೆಲಾನೆ, ಇಷ್ಟುನು ನನ್ಗ ತಿಳೆಂಗಿಲ್ಲೇನು?

ಕಾ.—ತಿಳೀತಿತ್ತಂದ್ರ ಇದ್ರ ವ್ಯಾಲ ನಡ್ದ ತೋರಿಸು.

ಕ.—(ಎದ್ದು ಒಂದೆರಡು ಸಲ ಕೋಣೆಯಲ್ಲಿ ತಿರುಗಿ ನಿಂತು ಆಶ್ಚರ್ಯದಿಂದ) ಎಲಾ ಇವನs

ಕಾ.—(ನಗುತ್ತಾ) ಏನಾಯ್ತು? ನಡೀಅಲಾ, ನಿಂತ್ಯಾಕ?

ಕ.—ಮುಗದೇ ಬಿಟ್ತು.

ಕಾ.—ಏನ ಮುಗೀತು.?

ಕ.—ನೆಲ ಮುಗೀತು. ಹೀಂಗೊಂದ ಸಲ ಬಂದ ಹಾಂಗೊಂದ ಸಲ ಬಂದ. ಆಯ್ತು. ಇಷ್ಟು ನಡ್ದ ಕೂಡಲೆ ನೆಲ ಮುಗದೇ ಹೋಯ್ತು.

ಕಾ.—ಹಾಂs. ತಿಳೀತಲ್ಲ. ಬಂದೀಗ ಹಾದೀ ವ್ಯಾಲ—ನೆಲ ಮುಗೀತದ, ಆದ್ರ ಹಾದಿ ಮುಗೆಂಗಿಲ್ಲ—

ಕ.—(ವಿಚಾರ ಮಾಡಿ) ಖರೇನೆ ಹೇಳ್ತಿ (ತಡೆದು) ಆದ್ರ ನಂದೊಂದು ವಿಚಾರ.

ಕಾ.—ಹೇಳು, ಹೇಳು

ಕ.—ನೀ ನಗಬಾರದಪ್ಪ.

ಕಾ.—ನಗಂಗಿಲ್ಲಪ (ನಗುತ್ತಾನೆ)

ಕ.—ನಕ್ಕಂದ್ರ.

ಕಾ.—ಬೆನ್ನಾಗೆರಡ್‌ಗುದ್ದ ಪ.

ಕ.—ಕೇಳಲ್ಯಾ ಅಂದ್ರ?

ಕಾ.—ಕೇಳು.

ಕ.—ನೋಡು ನೀ ಇದೇ ಈಗ ಹೇಳಿದೆಲ್ಲ ನೆಲಾ ಮುಗೀತದ ಆದ್ರ ಹಾದಿ ಮುಗೆಂಗಿಲ್ಲಂತ—

ಕಾ.—ಹೂಂ ಖರೆ ಮಾತದ

ಕ.—ಆದ್ರ ಈ ಖರೆ ಮಾತನ್ಯಾಗ ನನಗೊಂದು ಘ್ಯಾಡೆ ಅನುಮಾನ ಬಂದದ.

ಕಾ.—ಅನುಮಾನೇನ ಬಂತುs ?

ಕ.—ಏನಂದ್ರ—ನೆಲ ಮುಗೀತದ, ಹಾದೀ ನೆಲ್ದ ಮ್ಯಾಲೆ ಇರತದ ಅಂದ ಮ್ಯಾಲ ನೆಲದ ಮ್ಯಾಲಿದ್ದ ಹಾದೀನು ಮುಗೀಲೇ ಬೇಕಲ್ಲಾಂತ—

ಕಾ.—ಲಾಂssssತ್—ಏನ ಧನಿ ತಗದು ಸೂರ ಹಚ್ತಿ? ನೆಲ ಮುಗದರನು ಹಾದಿ ಮುಗೆಂಗಿಲ್ಲ. ಎಂದೆಂದು ಮುಗೆಂಗಿಲ್ಲ. ನೀ ಮುಗೀತಿ, ನಾ ಮುಗೀತೀನಿ ಕಾಣ್ಣದು ಕಾಣ್ಣಲಾರದು ಏನೇನಿರತಾವ ಆದೆಲ್ಲ ಮುಗೀತಾವ, ಆದ್ರ ಹಾದಿ ಮಾತ್ರ ಮುಗೆಂಗಿಲ್ಲ.

ಕ.—ಏನೇನಿರತದ ಆದೆಲ್ಲ ಮುಗೀತದೇನು ?

ಕಾ.—ಹೂಂ.

ಕ.—ಮತ್ತಂದ್ರ ಹಾದೀನು ಇರತದಲ್ಲ—ಇದ್ದ ಮ್ಯಾಲ ಅದನು ಮುಗೀನೇ ಬೇಕಲ್ಲs—ಯಾಕ ಮುಗೆಂಗಿಲ್ಲ ?

ಕಾ.—ಯಾಕ ಮುಗೆಂಗಿಲ್ಲಂದ್ರs ಯಾಕ ಮುಗೆಂಗಿಲ್ಲಂದ್ರ, ಮುಗೆಂಗಿಲ್ಲ

ಕ.—(ನಗುತ್ತ) ಇದೇ ಏನು ನಿನ್ ಜವಾಬ, ಯಾಕ ಮುಗೆಂಗಿಲ್ಲಂದ್ರ ಮುಗೆಂಗಿಲ್ಲಾಂತ (ತಡೆದು) ಇರಲಿ ಬಿಡು ನಿನಗನೂ ತಿಳಿದಿಲ್ಲಾಂತ ಸಿದ್ಧಾಯ್ತು. ಇದು ನನ್ನ ಖಾತ್ರಿಲಿಂದ ತಿಳಿದ ಮ್ಯಾಲ ನಾಯಾಕ ಕೆದರಿ ಕೆದರಿ ಕೇಳಲೀ. (ತಡೆದು) ನೀ ನಿದ್ದಿ ಬುರಕ ('ಕ' ಎದ್ದು ನಿಲ್ಲುತ್ತಾನೆ. 'ಕಾ' ಕೂಡುತ್ತಾನೆ.) ದಿನಾ ಹಗಲ ಹನ್ನೆರಡ ತಾಸು, ರಾತ್ರಿ ಹದಿಮೂರ ತಾಸ ನಿದ್ದೀನೆ ಮಾಡತಿ. ನಿದ್ದ್ಯಾಗ ಕನಸ ನೋಡತಿ. ನಿನ್ನ ಕನಸನ್ಯಾಗರೆ ಅಂಥಾದೇನರೆ ಬರತದೋ ಏನೋ !

ಕಾ.—ಏನ ಬರತದಂದ್ರs ? ಏನ ಬರಬೇಕು ಅದೆಲ್ಲ ಬರತದ.

ಕ.—ಏನ ಬರತದ ಹೇಳು, ಒಂದೆರಡು ಉದಾಹರಣೆ ಹೇಳು.

ಕಾ.—ಹೇಳಲ್ಯಾ ? ಕೇಳಂದ್ರ. ಮೊನ್ನಿನ ಕನಸನ್ಯಾಗ ನಾ ಭಾಳ ದೊಡ್ಡ ಮನಷ್ಯಾ ಆಗಿದ್ದ.

ಕ.—ದೊಡ್ಡ ಮನಷ್ಯಾ ಆಗಿದೆಂದ್ರ ?

ಕಾ.—ದೊಡ್ಡ ಮನಷಾ ಅಂದ್ರ ಗೊತ್ತಿಲೇನು ? (ತಡೆದು) ನಾ ಕನಸನ್ಯಾಗ ಭಾಳ ಸಾವಕಾರಾಗಿದ್ದ.

ಕ.—ಸಾವಕಾರಾದ್ರ ದೊಡ್ಡ ಮನಷ್ಯಾ ಅಂತಾರೇನು.

ಕಾ.—ಹೂಂ ಮತ್ತ, ದೊಡ್ಡ ಮನಷ್ಯಾ ಆಗಬೇಕಾದ್ರ ಸಾವಕಾರಾಗಬೇಕಾಗ್ತದ. (ಕೇಳಿಸುವ ಧಾಟಿಯಲ್ಲಿ) ಕೇಳು, ನಾ ಏನಾಗಿದ್ದನಂತ ಹೇಳ್ತೀನಿ

(ತಡೆದು) ಸಾವಕಾರಾಗಿ ಭಾರಿ ದೊಡ್ಡ ಮನಿ ಕಟ್ಟಿದ್ದ. ಆಳುಗೀಳು ಸಾಕಿದ್ದ. ದೊಡ್ಡದೊಂದು ಲಕ್ಷ ತ್ರಿಜೋರಿ ಇಟ್ಟಿದ್ದ. ಅದರೊಳಗ ಕೆಂಪಾಗಿನ ಗಟ್ಟಿ ಬಂಗಾರಿಟ್ಟಿದ್ದ ರಾಶಿ ರಾಶಿ ನೋಟಗೋಳಿಟ್ಟಿದ್ದ. ಒಂದು ಬಿಳಿ ಕುಂದರಿ ಕಟ್ಟಿದ್ದ, ಎರಡು ಕರಿ ನಾಯಿ ಸಾಕಿದ್ದ ಮತ್ತೆನಂದ್ರ ಮತ್ತೆನಂದ್ರ, ದಿನಾ ಊಟಾ ಎಂಥಾದಂತ ಕೇಳ್ತಿ. ಕರಚಿಕಾಯಿ, ನಿಂಬಿಕಾಯಿ, ಜಾಜಿಕಾಯಿ, ಮಾಯಿನ ಕಾಯಿ, ಲಾಡು, ಬೂಂದಿ, ಬೆಸನ್ನು, ಚಿರೋಟಿ, ರಾಯ್ತಾ, ಕೊಸಂಬ್ರಿ, ಹಣ್ಣು ಹಂಪಲು, ಹಾಲುಗೀಲು ತಿಂದಿದ್ದೇ ತಿಂದಿದ್ದು, ತಿಂದಿದ್ದೇ, ತಿಂದಿದ್ದು. (ಒಮ್ಮಿಂದೊಮ್ಮೆಲೆ ಮಾತು ನಿಲ್ಲಿಸಿ) ಭಾಳ ಹಸಿವ್ಯಾಗೇದ ನಿನ್ನ ಜೇಬನ್ಯಾಗ ೨೦ ಪೈಸಾ ಇದ್ರ ಕೊಡು, ನಿನ್ನ ಹೆಸರ ಹೇಳಿ ಏನಾದ್ರು ತಿಂತೀನಿ. (ಕ ನ ಕಡೆಗೆ ದೀನತೆಯಿಂದ ನೋಡುತ್ತಾನೆ.)

ಕ.—(ನಗುತ್ತ) ಹುಚ್ಚಾ ನನ್ನಬಲ್ಲೆಲ್ಲಿಂದ ಬರಬೇಕು. ಇದು ನನ್ನದೀ ನಾಕನೆ ಉಪವಾಸ.

ಕಾ.—(ನಕ್ಕು ನೀನು ಉಪಾಸನೇನ? ಭಾಳ ಬೇಸಾಯ್ತು ಬಿಡು, ನಾನು ನೀನು ಜೋಡಿ, ನೀನು ನಾನು ಜೋಡಿ (ಕೈಮುಂದೆ ಚಾಚುತ್ತ) ಕೈ ಕಲಸು, ಕೈ ಕಲಸು ನೀ ನಾಕು, ನಾ ಮೂರು, ನಾ ಮೂರು, ನೀ ನಾಕು, ನಾಕು ಮೂರೇಳು. ಮೂರುನಾ ಕೇಳು. ಏಳೆರಡಲೆ .. ..?

ಕ.—ಸಾಕ ಮಾಡು, ಏಳು, ತಯಾರಾಗು.

ಕಾ.—ಎಲ್ಲಿ ತಯಾರಾಗ್ಲಿ ?

ಕ.—ಎಲ್ಲಾದ್ರು ಹೋಧ್ರಾಯ್ತು ನಡೀ.

ಕಾ.—ಎಲ್ಯಾದ್ರಂದ್ರ ಎಲ್ಲಿ ?

ಕ.—ಎಲ್ಲೆರ ಒಂದ ಕಡಿ.

[ಕಿ ನ ಪ್ರವೇಶ. ತಲೆಯ ಮೇಲೆ ಕಾಗದದ ಟೊಪ್ಪಿಗೆ ಕೈಯಲ್ಲಿ ಮಕ್ಕಳ ಖುಳ ಖುಳಿ. ಮತ್ತು ಬಾಯಲ್ಲಿ ಒಂದು ರಂಗಣ್ಣಿ. ಕುಣಿಯುತ್ತ. ಕುದುರೆಯ ನಡಿಗೆಯಂತೆ ನಡೆಯುತ್ತ ಬರುವನು.]

ಕಿ. —(ಖುಳಖುಳಿ ಬಾರಿಸುತ್ತ) ಕುಂತವ ಕೆರಿ, ನಿಂತವ ನದಿ, ಕುಂತವ ಕೆರಿ, ನಿಂತವ ನದಿ (ಕ, ಕಾ ಇಬ್ಬರ ಸುತ್ತ ತಿರುಗುತ್ತ ಮತ್ತೆ ಮತ್ತೆ ಕುಂತವ ಕೆರಿ ನಿಂತವ ನದಿ ಎಂದು ಹಾಡುತ್ತಾನೆ) ನದೀ ಹರೀsssತದ, ಕೆರಿ ನಿಂತಿರತದ.

ಕ.—(ಆಶ್ಚರ್ಯದಿಂದ ಕಿ ಗೆ) ಯಾರಪ್ಪ ನೀನು ? ನಾ ನಿಂತೀನಿ ನಾ ಕೆರಿ ಏನು ?

ಕಾ.—ನಾ ಕುಂತೀನಿ ನಾನದೀ ಏನು ?

ಕಿ.—(ತಲೆ ಅಲ್ಲಾಡಿಸುತ್ತ) ಅಲ್ಲಲ್ಲಾ, ಕುಂತವ ಕೆರಿ, ನಿಂತವ ನದಿ.

ಕಾ.—ಯಾರೋ ನೀನು ? ನಿಂತವ ಹರೀತಾನ ಹ್ಯಾಂಗ ? ತಲಿ ಕೆಟ್ಟದೇನು ?

ಕಿ.—ಇಲ್ಲಾ, ಕುಂತವನು ಹರೆಂಗಿಲ್ಲ, ನಿಂತವನು ಹರೆಂಗಿಲ್ಲ, ಹರೆವನೆ ಹರಿತಾನ. ಹರದ ನದಿ ಆಗ್ತಾನ. ನದಿ ಮತ್ತ ಸಮುದ್ರಾಗ್ತಾನ.

ಕ.—(ಕಿ ಗೆ) ಯಾರಪ್ಪಾ ನೀನು ?

ಕಿ.—(ಕ್ರಮವಾಗಿ ಕ, ಕಾ ಇಬ್ಬರತ್ತ ಬೆರಳುಮಾಡಿ, ತೋರಿಸುತ್ತ) ಅವ್ರಬಿಟ್ಟು ಇವ್ರ ಬಿಟ್ಟು ಇವರ್‍ಯಾರು, ಇವ್ರಬಿಟ್ಟು ಅವ್ರಬಿಟ್ಟು ಅವರ್‍ಯಾರು ? ಅವ್ರಬಿಟ್ಟ, ಇವ್ರಬಿಟ್ಟು ಇವರ್‍ಯಾರು ? ಅವ್ರ ಬಿಟ್ಟ ಅವ್ರ ಬಿಟ್ಟು ಅವರ್‍ಯಾರು ?

ಕಾ.—(ಎದ್ದು ಕಿ ನ ಹತ್ತಿರ ಹೋಗಿ) ಯಾರಪ್ಪ ನೀನು ಮಹಾರಾಯಾ?

ಕಿ.—ನಾನಃ ? ನಾ ನಾನು.

ಕಾ.—ನಿನ್ನ ಹೆಸರೇನು ?

ಕಿ.—ಬಸರಾದ್ರ, ಹೆಸರ ಗೊತ್ತು, ಬಸರಾಗಿಲ್ಲ.

ಕ.—ನೀ ಹ್ಯಾಂಗ ಬಸರಾಗತ್ಯೊ—

ಕಿ.—ಬಸರಿಗಿಡದಾಗ, ಬೇತಾಳ ಜೋತ ಬಿದ್ದsದ—ಬೇತಾಳ ಕಾಲಾಗ ಎಲಿ ಅsವ, ಎಲೀಮ್ಯಾಲ ಕಣ್ಣವ—ಕೂಸಿನ ಕಣ್ಣಾಗ ಕಾಡಿಗಿ, ನಿನ್ನ ಕಣ್ಣಾಗ ಸುಣ್ಣs—(ರಂಗನ್ನ ಬಾಯಿಯಲ್ಲಿ ಇಟ್ಟುಕೊಂಡು "ಳುಳುಳುಳು" ಎಂದು ಮಾಡು-ತ್ತಾನೆ)

ಕಾ.—(ಸಹಾನುಭೂತಿಯಿಂದ, ಕಿ ನ ಭುಜದ ಮೇಲೆ ಕೈಯಿಟ್ಟು) ಕೂಡಪ್ಪ ಕೂಡು— (ಕಿ, ಕ, ಕಾ, ಮೂವ್ವರು ಕೂಡುವರು).

ಕಿ.—ನೀವೆಲ್ಲಾರು ಕೂತ್ರ್ಯಾ?

ಕ.—ಹೂಂ ಕೂತೀವಿ.

ಕಿ.—(ಗಂಭೀರ ದನಿಯಲ್ಲಿ) ನೀವೇನಾದ್ರು ಆ ರಾಯನ ಮಗಳ್ನ ನೋಡಿದ್ರಾ ?

ಕಾ.—ಯಾ ರಾಯರ ಮಗಳು?

ಕಿ.—ರತ್ತೋ ರತ್ತೋ ರಾಯನ ಮಗಳು—

ಕ.—ಅವನ ಹೆಸರೇನು ?

ಕಿ.—ಬಿತ್ತೋ ಬಿತ್ತೋ ಭೀಮನ ಮಗಳೆ.

ಕಾ.—ಭೀಮ ಯಾರು ?

ಕಿ.—ಸುಮ್ನ ಕೂಡ್ರಿ—(ತನ್ನಷ್ಟಕ್ಕೆ ತಾನೆ) ಸುಮ್ನ ಕೂಡ್ರಿ.

ರತ್ತೋ ರತ್ತೋ ರಾಯನ ಮಗಳೆ
ಬಿತ್ತೋ ಬಿತ್ತೋ ಭೀಮನ ಮಗಳೆ
ಹದಿನಾರೆಮ್ಮಿ ಕಾಸಲಾರೆ, ಕಟ್ಟಲಾರೆ
ಬೈರ ಗುಬ್ಬಿ ಬಾಳೆ ಖಂಬ
ಕುಕ್ಕರ ಬಸವಿ, ಕೂರ ಬಸವಿ.

ಕ.—ನಿನ್ನ ರಾಯರ ಮಗಳ ಮನ್ಯಾಗ ಹದಿನಾರೆಮ್ಮಿ ಇದ್ದು ಏನು ?

ಕಾ.—ನನ್ನ ಕನಸನ್ಯಾಗ ಹದಿನಾರೆಮ್ಮಿ ಬಂದಿದ್ದು ಹಾಲು-ಮೊಸರು ಬೇಕಾದಷ್ಟಿತ್ತು.

ಕಿ.—ನಿನ್ನ ಮನಿಯೊಳಗ ಗುಬ್ಬಿ ಇತ್ತೇನು ? ಬಾಳೆಖಂಬಾ ಇತ್ತೇನು ?

ಕಾ.—(ವಿಚಾರಮಾಡಿ) ನೆನಪಿಲ್ಲ, ಇದ್ರನೂ ಇರಬೇಕು. ಈಗ ನಿನ್ನ ಮನೀ ಎಲ್ಲಿದ ತೋರಿಸು, ನಾ ನೋಡಕೊಂಡ ಬರತೀನಿ.

ಕಾ.—ಎಚ್ಚರಿದ್ರ ನನ್ನ ಮನಿ ಕಾಣಸಂಗಿಲ್ಲ.

ಕಿ.—ಕಾಣ್ಸಲಿಕ್ಕ ಏನ ಮಾಡಬೇಕು ?

ಕಾ.—ಮಲಗಬೇಕಾಗ್ತದ ಕಣ್ಮುಚ್ಚಿ ಕನಸ ಕಾಣಬೇಕಾಗ್ತದ.

ಕಿ,—ಅಂದ್ರ ನೀನೇ ನೋಡಿ ಬಾ, ಹೋಗು—ನೋಡಿ ಬಾ.

ಕಾ.—ನೋಡಿ ಬರಲ್ಯಾ ಅಂದ್ರು?

ಕ.—ಏ ಮಾರಾಯಾ, ಇಷ್ಟ ಹೇಳದ್ಯಾಯ್ತು. ಗೊರಕಿನೇ ಹೊಡಿಲಿಕ್ಕ ಸುರುಮಾಡತಾನ, ಸುಡಗಾಡ ಸಿದ್ಧ.

ಕಿ.—ನೋಡಿ ಬರಲಿ, ನನಗ ಭಾಳ ಕೆಲಸ ಆದ, ಆ ಮನೀ ಪತ್ತೆ ಹಚ್ಚಬೇಕಾಗೇದ.

ಕಾ.— ಹೋಗಿ ಬರತೀನಂದ್ರ. ನೀವೆಲ್ಲಾರು ನಾ ತಿರಿಗಿ ಬರ್ರ ತನಕ ಇಲ್ಲೇ ಇರ್ರಿ. (ಕಾಲು ಚಾಚಿ, ಕಣ್ಣುಮುಚ್ಚಿ ಮಲಗಿಬಿಡುತ್ತಾನೆ 'ಕಾ' ಅವನನ್ನು ದಿಟ್ಟಿಸಿ ನೋಡುತ್ತಾನೆ. ಕೆಲವು ನಿಮಿಷಗಳಾದ ನಂತರ 'ಕಾ' ಗೊರಕೆ ಹೊಡೆಯುವುದನ್ನು ಸುರುಮಾಡುತ್ತಾನೆ. ಕಿ ಅವನ ಹತ್ತಿರ ಬಂದು, ಕಾ ನ ಮುಖಲಕ್ಷಣಗಳನ್ನು ನೋಡಿ 'ನ್ಯಾಚ್ಯೆ' ಕೊಡುವಂತೆ ವರ್ಣಿಸಲು ಪ್ರಾರಂಭಿಸುತ್ತಾನೆ. ಕ, ಕಿ ಆಡುವ ಮಾತುಗಳನ್ನು ಆಶ್ಚರ್ಯದಿಂದ ಕೇಳುತ್ತಾನೆ.)

ಕಿ.—ಹಾಃ ಮನೀಗಿ ಬಂದ, ಎಷ್ಟು ಹಿಗ್ಗಿ ನೋಡು ಅಪ್ಪನ ಮಾರಿಮ್ಯಾಲ, ತಮ್ಮಪ್ಪನ ಮನೀ ಅಂತೇ ತಿಳದಾನ. ಈಗ ಪೋಲಿಯೊಳಗ ಹೋದಾನಂತ

ಕಾಣ್ಸತದ. ಹಾಂ ಹ್ಯಾಂಗ ಕುಂತಾನ ಮಂಚದ ಮ್ಯಾಲ ಜೋಕುಮಾರ ಕುಂತ್ಹಾಂಗ ಏನ್ ಠೀವಿ, ಏನ್ 'ಫೋಜು' ನವಾಬನ ಮೊಮ್ಮಗ ಕುಂತ್ಹಾಂಗ ಕುಂತಾನ. ಈಗ ಏನ ಮಾಡಲಿಕತ್ಯಾನಿವಾ? (ತಡೆದು) ಬಾಳ ಮಾಡಿ ಊಟಾ ಮಾಡಲೀಕತ್ಯಾನ. ಬಾಯಾಗ ಜೊಲ್ಲ ಬರಲೀಕತ್ತೈದ.

ಕ.—(ಆಶ್ಚರ್ಯದಿಂದ) ಊಟಾ ಮಾಡತಾನ? ಊಟಾನ?

ಕಿ.—ಹೂಂ ಊಟಾನೇ-ಊಟಾ ಅಂದಪಟನೆ ಹ್ಯಾಂಗ ಹಾರಿ ಬಿದ್ಯೊ? ಎಂದೂ ಕಂಡಿಲ್ಲೇನು ಊಟಾ? ಹುಟ್ಟಿದಾಗಿನಿಂದ ಉಪಾಸ ಬಿದ್ಹಾಂಗೆ ಮಾಡತೆಲ್ಲs. ಎಂದೂ ಕಂಡಿಲ್ಲೇನು?

ಕ.—ಕಂಡಿಲ್ಲಪ್ಪ, ಕಂಡಿಲ್ಲ—ನಾ ಕನಸನ್ಯಾಗನೂ ಊಟಾ ಕಂಡಿಲ್ಲ.

ಕಿ.—ನೀ ಹೊಟ್ಟಿ ತುಂಬ ಊಟಾ ಎಂದೂ ಮಾಡಿಲ್ಲೇನು?

ಕ.—(ತಲೆ ತಗ್ಗಿಸಿ, ಸೊಗ ಹೊತ್ತು ಎತ್ತಿನಂತೆ ತಲೆ ಅಲ್ಲಾಡಿಸುತ್ತ, ಖಿನ್ನತೆಯಿಂದ ಮಾತ ನಾಡುತ್ತಾನೆ) ಸುಳ್ಯಾಕ ಹೇಳಲಿ, ಎಂದು ಮಾಡಿಲ್ಲಪ್ಪ ಎಂದೂ ಮಾಡಿಲ್ಲ—(ತಡೆದು) ನಾ ಮನಷ್ಯಾ ಏನು? ನಾ ದನ, ನಾ ಎತ್ತು, ನಾ ಎಮ್ಮಿ. ಹಳೇ ಮಾಲೀಕ ತಿನ್ನಲಿಲ್ಲ, ಹೊಸದಾಗ ಬಂದವ ತಾನೇ ತಿನ್ನಲಿಕ್ಕಿ ಸುರುಮಾಡಿದಾ. ಹೊಸದಾಗಿದ್ದಂವ ಸಮ್ಮಂವ ಹಾನ, ಇವ್ರೊತ್ತಿಲ್ಲ ನಾಳ್ಯಾದರು, ತನ್ನ ಹೊಟ್ಟಿ ತುಂಬಿದ ಮ್ಯಾಲ ನನಗ ಕಡೀಗಿ ಉಳದಿದ್ದ ಸಳದಿದ್ದಾದ್ರು ಕೊಟ್ಟಾನಂತ ಸುಮ್ನ ಕೂತ್ರs. ಇಂವಾ ಬಕಾಸುರನ ವಂಶದಂವ ಹುಟ್ಟಿದಾ—ಇವನ ಹೊಟ್ಟೀನೆ ತುಂಬವಲ್ದು—ಅಂದಮ್ಯಾಲ ನನ್ನ ಹೊಟ್ಟಿಗೇನ ಕೊಡತಾನ? ಹೊಸ ಧಣಿ, ತಾತಿಂದು ತೇಗತಾನ, ಮಕ್ಕಳು ಮೊಮ್ಮಕ್ಕಳಿಗಿ ತಿನ್ಸತಾನ ಅವು ತಿಂದು ತಿಂದು ತೇಗತಾವು ಆದ್ರ ನನ್ನ ಗತೀ....ನನ್ನಗತೀ....ತುತ್ತು ರೊಟ್ಟಿ ಇಲ್ಲ. ಸಾಯಲಿಕತ್ತೀನಿ, ಸಾಯ್ತೀನಿ, ಸಾಯಲೇಬೇಕು. (ಕಾ ನನ್ನು ತೋರಿಸಿ) ಅವ್ನಗತೀನೂ ನನ್ಹಾಂಗ, ಆದ್ರ ಹುಚ್ಚ ಹಾನ ಅಂದಾ. ಕನಸ ಕಾಣತಾನ ಕನಸನ್ಯಾಗೆ ತಿಂತಾನ ಕನಸನ್ಯಾಗೆ ಉಣ್ಣತಾನ, ಡುರಕಿ ಹೊಡಿ ತಾನ—ಎಚ್ಚರ್‍ರದ ಮ್ಯಾಲ—ನನ್ನ ಮುಂದ ಕೈ ಚಾಚಿ "ಇಪ್ಪತ್ತು ಪೈಸಾ ಇದ್ರ ಕೊಡು ಅಪಾ ಹಸಿವ್ಯಾಗೇದ ಏನಾದ್ರು ತೊಗೊಂಡು ತಿಂತೀನಿ" ಅಂತ ಕೇಳ್ತಾನ ಹುಚ್ಚ ಹಾನ. ತಡೆದು) ಆದ್ರ ನನ್ಗ ಈಗ ಕನಸನೂ ಬರಂಗಿಲ್ಲ. ಅವನೂ ಬೇಜಾರ ಪಟ್ಟ್ಯಾವಂತ ಕಾಣ್ಸತದ. ಹೌದು ಗ್ಯಾದಿ ಇಲ್ದ ಮನ್ಯಾಗ ಹ್ಯಾಂಗ ಬಂದಾವು? ನೀರಿಲ್ದ ಮನ್ಯಾಗ ಹ್ಯಾಂಗ ನಕ್ಕಾವು? ಕಾಳಿಲ್ದ ಮನ್ಯಾಗ ಹ್ಯಾಂಗ ಉಂಡಾವು ಖರೇ ಅವು ಬರಂಗಿಲ್ಲೀಗ, ಬರಂಗಿಲ್ಲ.

(ಶೂನ್ಯದಲ್ಲಿ ನೋಡುತ್ತಾನೆ)

ಕಿ.—ನಾನೊಂದ ಮಾತ ಹೇಳ್ತೀನಿ. (ತಡೆದು) ನೀ ನಿನ್ನ ಕನಸೀಗಿ ಹರಾಜ ಮಾಡು.

ಕಾ.—ಯಾರು ತೊಗೋಂಡಾರು ?

ಕಿ.—ಯಾರು ತೊಗೋಮಂಗಿಲ್ಲ, ಗೊತ್ತು, ಆದ್ರ ಅದರ ಮ್ಯಾಲ ಒಂದು ಬಣ್ಣದ ಟೊಪ್ಪಿಗಿ ಹಾಕಿ ಹರಾಜಮಾಡಿ. ಮಂದಿ ಮಳ್ಳಿರತಾರ, ರಂಗ ನೋಡಿ ತೊಗೋತಾರ. ಒಳಗೇನಿದ್ರೇನು ರಂಗ ಛಂದ ಕಂಡ್ರಾಯ್ತು ಜೊಲ್ಲಸೂರ ಸ್ಗೊತ ತೊಗೋತಾರ. (ಕಾ ಕುರ್ಚಿಯ ಮೇಲೆ ಅಲುಗಾಡುತ್ತಾನೆ)

ಕ.—(ಕಾ ನನ್ನು ನೋಡಿ) ಅವನು ಕನಸಿನ ಬಾಗಲ್ದಿಂದ ಹೊರಗ ಬರಲೀಕತ್ಯಾನಂತ ಕಾಣಸಲೀಕತ್ಯೇದ.

ಕಿ.—ಇಲ್ಲ ಇನ್ನೂ ಬಂದಿಲ್ಲ (ತಡೆದು) ಕಣತೆರದ್ರ ಕನಸಿನ ಬಾಗ್ಲನೂ ತೆರದ್ಹಾಂಗ ಅವು ಮುಚ್ಚಿದ್ದು ಅಂದ್ರs ಅದನು ಇನ್ನೂ ಮುಚ್ಚದ್ಹಾಂಗಂತ ತಿಳೀಬೇಕು.

ಕ.— ಕಣ್ ತೆರದು ಕನಸ ನೋಡಲಿಕಿ ಬರಂಗಿಲ್ಲೇನು ?

ಕಿ.—ಬರತದ. ಆದ್ರ ಅಂಥಾ ಮಂದಿ ತರಾನೇ ಬ್ಯಾರೆ ಇರತದ.

ಕಾ.—(ಕಣ್ಣು ತೆರೆದು, ಆನಂದದಿಂದ) ಆಹಾ ! ಎನ್ ಖಾಸಾ ಖಾಸಾ ಕನಸಾ ಬಂದೂ ಅಪ್ಪಾ ಇವೊತ್ತs.

ಕಿ.—ನಿನ್ನ ಕನಸನ್ಯಾಗ ರಾಯರ ಮಗಳು ಕಾಣ್ಸದಳೇನು ?

ಕಾ.—ರಾಯರ ಮಗಳs. (ವಿಚಾರಮಾಡಿ) ನಾಲ್ಕಾರು ಪೋರಿಗೋಳುಬಂದಿದ್ದು ನನ್ನೀ(ಕೊರಳು ಮುಟ್ಟಿ) ಕೊಳ್ಳಾಗ ಜೋತ ಬಿದ್ದಿದ್ದು. (ತುಟಿ, ಗಲ್ಲ ಮುಟ್ಟಿ) ಇಲ್ಲೀ ಇಲ್ಲೀ ಇಲ್ಲಿ ಮುಕ್ಕಾ ಕೊಟ್ರು. ಆದರೊಳಗ ನಿನ್ನ ರಾಯರ ಮಗಳ್ಯಾರಂತ ಗೊತ್ತಾಗಲಿಲ್ಲ. (ತಡೆದು) ಅಕೀ ರೂಪಾ ಹ್ಯಾಂಗಿತ್ತು ಹೇಳು. ಅಂದ್ರ ನಾ ಹೇಳ್ತೇನಿ ಆಕೀ ಇದ್ಯs ಇಲ್ಲಾಂತ.

ಕಿ.—ಛಂದಿದ್ದಳು– ನೋಡದ್ರ ನೋಡದ್ರ ನೋಡೇಬೇಕನಸ್ಹಾಂಗಿದ್ದಳು.

ಕ.—ಖುಲಾಸಾ ಹೇಳು– ಎನ್ ಮಾತಾಡ್ತಿ ? ನೋಡದ್ರ ನೋಡೆಬೇಕಂತ ಅನಸ್ಹಾಂಗಿದ್ದಳಂತ. ಹಾಂಗ ಹಜ್ಜಾರ ಹಜ್ಜಾರ ಪೋರಿಗೋಳಿರತಾವ.

ಕಿ.—ಹಾಂ, ಹಾಂಗ ಹಜ್ಜಾರ ಹಜ್ಜಾರ ಪೋರಿಗೋಳೊಳಗನು, ನಮ್ಮ ರಾಯರ ಮಗಳು ಕಾಣಸ್ಹಾಂಗ್ಹಾಳ,

ಕ.—ನಿಮ್ಮ ರಾಯರ ಮಗಳು ಎನ್ ಮ್ಯಾಲಿಂದ ಉಚ್ಚಿಬಿದ್ಹಾಳೇನು ? ಎಲ್ಲಾರ ಮಗಳಗೋಳು ಕಾಣಸ್ಹಾಂಗ ಕಾಣಸ್ತಾಳಲ್ಲss !

ಕಿ.— ಇಲ್ಲ, ಎಲ್ಲಾರ ಮಗಳಗೋಳು ಕಣ್ಣ ತೆರದ್ರ ಕಾಣಸ್ತಾವ, ರಾಯರ ಮಗಳು ಕಣ್ ಮುಚ್ಚದ್ರನೂ ಕಾಣಸ್ತಾಳ.

ಕಾ.—(ಸಂತೋಷದಿಂದ) ಭೇಷ, ಭೇಷ ಭೇಷ—ಎನ್ ಮಾತಾಡ್ತಿ—ಮುತ್ತಿನಂಥ ಮಾತಾಡ್ತಿ– ನನಗೂ ಕಣ್ ಮುಚ್ಚಿದ್ರ ಕಾಣಸ್ತಾವ, ನಿನಗೊ ಕಣ್

ಕಾಣಸ್ತಾವ ಅಂದ್ರs ನಾವಿಬ್ರು ಕಣ್ಣ ಮುಚ್ಚಿನೇ ನೋಡವ್ರಾದವಿ. ನಮ್ಮ ರಾಜ್ಯ ನಮ್ಮ ಸಾಮ್ರಾಜ್ಯ, ನಮ್ಮ ಸುಖಾ ನಮ್ಮ ದುಃಖಾ, ನಮ್ಮ ನೋವು. ನಮ್ಮ ನರಳಾಟ ಎಲ್ಲವೂ ಕಣ್ ಮುಚ್ಚೇ ನಡೀತಾವ. ನಿದ್ದೀಗಣ್ಣಾಗೇ ಹುಟ್ಟಿ ನಿದ್ದಿಗಣ್ಣಾಗೇ ಸಾಯ್ತಾವ (ದನಿ ಎಳೆದು) ನಾನು ನೀನು ಜೋಡಿ, ನೀನು ನಾನು ಜೋಡಿ. ನಮ್ಮಂಥವ್ರಿಗಿ, ಎಚ್ಚರಂದ್ರ ಸಾವು. ನಿದ್ದೀ ಅಂದ್ರ ಜೀವು.

ಕ.—(ನಿರಾಶೆಯಿಂದ) ನನಗ ಮಾತ್ರ ನಿದ್ದೀ ಅಂದ್ರೂ ಸಾವು ಎಚ್ರಂದ್ರೂ ಸಾವು. ನನಗೆ ಎಚ್ಚರಂದ್ರ ನೋವು, ಎಚ್ಚರಂದ್ರ ಕೊಲೆ, ಸುಲಿಗಿ, ಖೂನಾ ಖೂನಿ, ಮೋಸ, ಧೊಕಾಬಾಜಿ. ಇಂಥದ್ರ, ಪ್ರಪಂಚ ನನ್ನ ಪಾಲಿಗಿ– ನನ್ನ ಎಚ್ಚರಂದ್ರ ಒಂದು ದೊಡ್ಡ ಕ್ವಾಣಿಯೊಳಗ ಕೂಡಿಸಿ ದಿವಸಾ ಒಂದು ಬೆಳಕಿನ ತುಂಡ ಕಸಗೊಂಡು ಹೋದ್ಹಾಂಗ. ದಿವಸಾ ಒಂದು ಹಿಡಿಗಾಳಿ ತಕ್ಕೊಂಡು ಹೋದ್ಹಾಂಗ, ದಿವಸಾ ಒಂದ್ಹನಿ ನೀರನ್ಯಾಗ ವಿಷ್ಯಾಬೆರಸ ದ್ಹಾಂಗ. ದಿವಸಾ ಒಂದು ಹೆಜ್ಜಿ ಸಾವಿನ ಕಡೆಗೆ ಕರಕ್ಕೊಂಡ್ಹೋದ್ಹಾಂಗ ಹಿಡಿದಿದ್ದೆಲ್ಲ ಹಾಂವಾದ್ಹಾಂಗ, ಬಂದಿದೆಲ್ಲ ಸಾವು ಬಂದ್ಹಾಂಗ (ಚಡಪಡಿಸಿ) ನಾ ಏನ ಮಾಡಲಿ, ಏನ ಮಾಡಲೀ ?

ಕಿ.—ಹುಚ್ಚಾಗು, ಹುದಲಾಗು, ಬದಕ ಬೇಕಾದ್ರs ಕಲ್ಲಾಗು, ಮಣ್ಣಾಗು. ನೀ ಮನಷ್ಯಾ ಅಂತ ತಿಳಕೊಂಡ್ರs ನಿನ್ನ ಹೆಣಾ ಎತ್ತಾರೋ ನಿನ್ನ ಹೆಣ್ಣೂ ಎತ್ತತಾರ. ನಿನ್ನ ಸುಡಗಾಡದಾಗ ಹಾಕಿ ಸುಟ್ಟು ಬರತಾರೋ. ಕುತ್ತಿಗಿ ಮುಟಾ ತೆಗ್ಗ ತೋಡಿ ಹೂಳಿ ಬರತಾರೋ. ಅದಕಂತ ಹೇಳತೀನಿ. ಹಗಲಾ ಹಾದೇ ಹೆಣ್ಣೂ ಆಗೋ, ಹುಚ್ಚಾಗೋ ಹುದಲಾಗೋ. ಇದು ತಿಳಿಲಿಲ್ಲಾಂದ್ರ ನಿನ್ನ ಹಾಡಾ ಸೂಳೇರ ಜಾತ್ರ್ಯಾಗ ಗರತಿ ಹಾಡ ಆದ್ಹಾಂಗಾಗ್ತದೋ, ಗರತಿ ಹಾಡಾ ಆದ್ಹಾಂಗಾಗ್ತದ.

ಕಾ.—(ಮಾತು ಬದಲಾಯಿಸಿ) ನಿನ್ನ ರಾಯನ ಮಗಳು ಹ್ಯಾಂಗಿದ್ದಳು ?

ಕಿ.—ರತ್ನೋ ರತ್ನೋ ಇದ್ದಳು.

ಕಾ.—ಹದಿನಾರೆಮ್ಮಿ ಸಾಕಿದ್ದಳೇನು ?

ಕಿ.—ಕಟ್ಟsಲಾರೇ– ಕಾಸಲಾರೇ ಅಂತ ಹೇಳಿ ಓಡಿ ಹೋದಳು ?

ಕಾ.—ಹ್ಯಾಂಗ ಓಡಿ ಹೋದಳು ?

ಕಿ.—ಗುಬ್ಬಿಹಾಂಗ ಫುರ್‌sss ಅಂತ ಹಾರಿ ಹೋದಳು.

ಕಾ.—ಆಗ ನೀ ಏನು ಅನ್ನಲಿಲ್ಲೇನು ?

ಕಿ.—ಬೈರ ಗುಬ್ಬಿ ಅಂದೆ.

ಕಾ.—ಆಗ ಆಕಿ ಏನೆಂದಳು ?

ಕಿ.—ಆಗ ಆಕಿ ಬಾಳೆ ಖಂಬಾ ಅಂದಳು.

ಕಾ.—ಅಂದ ವ್ಯಾಲ ನೀ ಎನ್ ಅಂದಿ ?

ಕಿ.—ನಾ, ಕುಕ್ಕುರ ಬಸವಿ, ಕೂರ ಬಸವಿ ಅಂದೆ.

ಕಾ.—ಆಗ ಆಕಿ ಎನ ಮಾಡಿದಳು.

ಕಿ.—ಆಕಿ ಬಸವಿಯಂತೆ ಪುರಂತ ಓಡಿ ಹೋದಳು.

("ರತ್ತೋ ರತ್ತೋ—" ಹಾಡಲು ಪ್ರಾರಂಭಿಸುತ್ತಾನೆ, ಕ ಮತ್ತು ಕಾ ಇಬ್ಬರು ದನಿಗೂಡಿಸುತ್ತಾರೆ. ಕಣ್ಣುಮುಚ್ಚಿ ಸಾಮೂಹಿಕ ಪ್ರಾರ್ಥನೆ ಮಾಡುವಂತೆ ಎಲ್ಲರೂ ಹಾಡುತ್ತಾರೆ.)

ರತ್ತೋ ರತ್ತೋ ರಾಯನ ಮಗಳೆ,
ಬಿತ್ತೋ ಬಿತ್ತೋ ಭೀಮನ ಮಗಳೆ
ಹದಿನಾರೆಮ್ಮಿ ಕಾಸ್ಸಲಾರೆ, ಕಟ್ಟಲಾರೆ
ಬೈತ ಗುಬ್ಬಿ ಬಾಳೆ ಖಂಬಾ,
ಕುಕ್ಕುರ ಬಸವಿ ಕೂರ ಬಸವಿ

(ಹೀಗ ಒಂದೆರಡು ನಿಮಿಷ ಹಾಡಿ, ತರುವಾಯ ಒಮ್ಮಿಂದೊಮ್ಮೆಲೇ ಹಾಡು ನಿಲ್ಲಿಸಿ ಮೌನರಾಗುತ್ತಾರೆ.)

(ಕಿ ತನ್ನ ಜೇಬಿನಲ್ಲಿದ್ದ ಒಂದು ಕೋಳಿ ಪುಚ್ಚವನ್ನು ತಗೆದುಕೊಂಡು ತಲೆಗೂದಲಿನಲ್ಲಿ ಸೇರಿಸಿಕೊಂಡು ಗಂಭೀರ ಮುಖ ಲಕ್ಷಣಗಳಿಂದ, ಅತ್ತಿತ್ತ ನೋಡಿ.)

ಕಿ.—ನಾ ನಿಮ್ಮೆಲ್ಲರ, ಈ ಪ್ರಪಂಚದ, ಈ ದೇಶದ, ಈ ಖಂಡದ, ಈ ಮಾಂಸದ ಈ ರಕ್ತದ, ಈ ವಿಶ್ವದ ಸಾಮ್ರಾಟನಿದ್ದೇನೆ, ಚಕ್ರವರ್ತಿ ಇದ್ದೇನೆ—ಮಹಾರಾಜಾಧಿರಾಜ, ರಾಜಾಧಿರಾಜ, ಮಹರಾಜ, ಶ್ರೀ ಶ್ರೀ ಶ್ರೀ ಗೆ........ಜಯವಾಗಲಿ, ಜಯವಾಗಲಿ (ಕ ಮತ್ತು ಕಾ ನ ಕಡೆ ನೋಡಿ) ಏ, ನೀವು ನನ್ನ ಜಯ ಜಯಕಾರ ಯಾಕ ಮಾಡದಿಲ್ಲ.

ಕ.—ನೀ ಯಾರೋ. ಹೀಂಗ ಹುಚ್ಚನ್ಹಾಂಗ ಯಾಕ ಬೊಗಳಲಿಕತ್ತೀದಿ ?

ಕಿ.—ನಾ ಹುಚ್ಚಲ್ಲ—ನಾ ನಿಮ್ಮ ರಾಜಾ, ನಿಮ್ಮ ಮಹರಾಜಾ, ನಿಮ್ಮ ಪೋತ ರಾಜ.

ಕ.—ಹೌದು, ನೀ ಪೋತರಾಜನೇ. ಪೋತರಾಜನು ತನ್ನಷ್ಟಕ್ಕೆ ತಾನು ರಾಜಾ

ಅಂತ ತಿಳಕೊಂಡಿದ್ದ. ಹೀಂಗಾಗೇದ ಗತಿ ನಮ್ಮ ರಾಜ್ಯದ್ದು. ದೇಶ ಹದಗೆಟ್ಟು ಹಾಳಾಗೇದ.

ಕಿ.—ನಿನ್ನ ದೇಶಾ ಯಾವಾದೋ ?

ಕ.—ನನ್ನ ದೇಶಾ ಭೂಮಿ ಮ್ಯಾಲಿಂದು.

ಕಿ.—ನಿನ್ನ ದೇಶಾ ಇರಲಿ ಭೂಮಿ ಮ್ಯಾಲ. ಆದ್ರ ಅಪಾ, ನಾ ರಾಜಾ ಅಲ್ಲಂತ ನಿನಗ್ಹ್ಯಾಂಗ ಗೊತ್ತು ?

ಕ.—ನಿನ್ನ ಮೋತೀನ ಹೇಳ್ತದ ನೀ ರಾಜಾ ಅಲ್ಲಂತ.

ಕಿ.—ನನ್ನ ಮೋತಿ ಏನ ಹೇಳ್ತದ ?

ಕ.—ನೀ ಲಫಂಗಾ, ನೀ ಲುಚ್ಚಾ, ನೀ ಹಲ್ಕಟ್, ನೀ ಕಳ್ಳಾ, ನೀ ಸುಳ್ಳಾ, ನೀ ಧೋಕೇಭಾಜಿ, ನೀ ಭಿಕನಾಶಿಗೇಡೀ ಅಂತ ಡೊಂಗರ ಹೊಡದು ಸಾರಕತ್ತೈದ ನಿನ್ನ ಈ ಮೋತಿ (ತಡದು ನೀ ರಾಜಾ ಹ್ಯಾಂಗೋ ?

ಕಿ.—ನೀ ಹ್ಯಾಂಗ ಪ್ರಜಾ ಹಾಂಗ ನಾ ರಾಜಾ.

ಕಾ.—ಮತ್ತಾಯ್ತು. ಇಬ್ರೂ ಒಬ್ರ್ಯಾಂಗ ಒಬ್ರಿದ್ರ ಮುಗೀತಲ್ಲ ಕತೀ. ಮತ್ತ್ಯಾಕ ತಕರಾರ ಮಾಡತೀರಿ. ನಿನ್ನ ಬಲಾ ಜಾಸ್ತಿ ಆಯ್ತಂದ್ರ ಇವ್ನ ತಿನ್ನು. ಅವನ ಬಲಾ ಜಾಸ್ತಿ ಆಯ್ತಂದ್ರ ನಿನ್ನ ತಿಂತಾನ. ನೀ ಇವ್ನ ತಿನ್ನು, ಇಂವಾ ನಿನ್ನ ತಿಂತಾನ. ಒಟ್ಟ, ಒಬ್ರಿಗೊಬ್ರು ತಿನ್ನೋ ಕೆಲಸಾನ ಮಾಡ್ರಿ—ಬರೇ ತಿನ್ನೊ ಕೆಲಸ. ತಿನ್ನದ ಸಿಕ್ತಂದ್ರ ಏನಾದ್ರೂ ತಿನ್ರಿ— ಹೆಂಡಿ ತಿನ್ರಿ ಹೇಲ ತಿನ್ರಿ ಕಲ್ಲು ತಿನ್ರಿ ಮಂಣ ತಿನ್ರಿ ತಿನ್ರಿ ತಿನ್ರಿ—ಅದೊಂದೆ ಮಾಡರಿ—ತಿಳೀತಾ.

ಕ.—('ಕಾ'ಗೆ ಕಿ ನನ್ನು ತೋರಿಸಿ) ಇವನು ಇಲ್ಯಾಕ ಬಂದಾನ ?

ಕಾ.—ಎದರೇ ಕುಂತಾನ ಕೇಳು.

ಕ.—(ಕಿ ಗೆ) ನೀ ಇಲ್ಯಾಕ ಬಂದ ಕುಂತಿದೆಪ್ಪ ?

ಕಿ.—ನಾನಂದ್ಯಾ ?

ಕ.—ಹೂಂ ನೀನೆ.

ಕಿ.—ಕೇಳಿ ಬರತೀನಿ ನಿಂದ್ರು.

ಕ.—(ಆಶ್ಚರ್ಯದಿಂದ) ಯಾರನ್ನು ಕೇಳಿ ಬರತೀ.

ಕಿ.—ಅಂವಾ ಅಲ್ಲಿ ಹೊರಗ ನಿಂತಾನ ಅವ್ನ ಕೇಳಿ ಬರತೀನಿ.

ಕಾ.—ಅಂವಾ ಯಾರು ? ಮತ್ಯಾರಾದ್ರೂ ಬಂದಾರೇನು ? ಬಂದ್ರ ಹೊರಗೇ ಯಾಕ ನಿಂತಾರ ?

ಕಿ.—ಹೊರಗ ಯಾಕ ನಿಂತಾನಂದ್ರ ಅಂವಾ ಹೊರಗಿನವನದಾನ.

ಕ.—ಅಂವಾ ನಮ್ಮೊಳಗ ಯಾಕ ಬಂದಿಲ್ಲ.

ಕಿ.—ಹೊರಗ ನಿಂತ್ರೇ ಛಲೋ ಅಂತ ತಿಳಕೊಂಡು ಅಲ್ಲೇ ನಿಂತಾನ.

ಕಾ.—ನಿನ್ನ ಹಾದೀ ಕಾಯಕೋತ ನಿಂತಾನೇನು ?

ಕಿ.—ಇಲ್ಲ, ನನ್ನ ಹಾದಿ ಕಾಯಕೋತ ನಿಂತಿಲ್ಲ, ಯಾಕಂದ್ರ ಬರಮುಂದ ಆವನ ಕೈಯಾಗ ನಾ ನನ್ನ ಹಾದಿ ಕೊಟ್ಟೇ ಬಂದೀನಿ.

ಕ.—ಆವನ ಕೈಯಾಗ ಕೊಟ್ಟು ಬಂದ್ಯಾ? (ತಡೆದು) ಆವನು ನಿನ್ನ ಹಾದಿ ತೊಗೊಂಡು ಓಡಿಹೋಗಿದ್ನಂದ್ರ ?

ಕಿ.—ಎಲ್ಲಿ ಹೋಗ್ತಾನವ ಮಗ!

ಕ.—ಎಲ್ಲಾದ್ರು ನಿನ್ನ ತಪ್ಪಿಸಿ ಹೋದ್ರs ?

ಕಿ.—ಹಾಂಗ ಹೋಗ್ಲಿಕ್ಕೆ ಬರಂಗಿಲ್ಲ ಆವನೀಗೆ.

ಕಾ.—ಯಾಕಿಲ್ಲ.

ಕಿ.—ಯಾಕಂದ್ರ ನನ್ನ ಹಾದಿ ತೊಗೊಂಡು ನನ್ನ ಹಾದೀ ಮ್ಯಾಲ ನಡೀಲಿಕ್ಕಿ ಬರಂಗಿಲ್ಲ. ನಡದ್ರ ನನ್ನ ಹಾದೀ ಮ್ಯಾಲೇ ನಡೀಬೇಕಾಗ್ತದ-ನಡದ್ರ ನನ್ನ ಬಲ್ಲೇ ಬರಬೇಕಾಗ್ತದ.

ಕಾ.— ಅಂದ್ರ ಅಂವಾ ಅಲ್ಲೇ ನಿಂತಾನೇನು ?

ಕಿ.— ಹೂಂ ನಿಂತಿರತಾನ.

ಕಾ.— ನಿಂತ್ರ ಒಳಗ ಕರಕೊಂಡು ಬಾ.

ಕಿ.— ಬ್ಯಾಡ, ಅವನೀಗೊಳಗ ತಂದು ಯಾಕ ಕೊಲ್ಲಲಿ.

ಕಾ.— ಕೊಲ್ಲಿಲಿಕ್ಕೇನಾಗೇದ ? ನಾವಿದ್ರಪ್ರೆರೇನು ಸತ್ತೀವೇನು ?

ಕಿ.— (ಭಯಂಕರ ನಗು) ನೀವು ಸತ್ತಿಲ್ಲಂದ್ರ ಬದುಕೀರೇನೂ? ಇಲ್ರ್ಯೋ ಇಲ್ಲ—ನೀವು ಹೆಣಗೋಳರ್‍ರ್ಯೋ, ನೀವು ಹೆಣಗೋಳು. ನೀವು ಹುಟ್ಟಿದ ಹತ್ತು ದಿನಾ ಮಾತ್ರ ಜೀವಂತಿದ್ರಿ ಆಲ್ಲಿಂದ ಸತ್ರಿ. ಸತ್ತೇ ಉಂಡ್ರಿ, ಸತ್ತೇ ತಿಂದ್ರಿ ಸತ್ತೇ ಬೆಳದ್ರಿ, ಸತ್ತೇ ದೊಡ್ಡವರಾದ್ರಿ, ಸತ್ತೇ ಮನೀ ಮಾಡಕೊಂಡ್ರಿ, ಸತ್ತೆ ಮಕ್ಕಳ ಹಡದರಿ, ಸತ್ತು ಸ್ವರ್ಗ ಕಂಡ್ರಿ, ಸತ್ತೇ ನರಕ ನೋಡಿದ್ರಿ—ಸತ್ತೇ ಉಸರಾಡಿಸಿದ್ರಿ— ಎಲ್ಲಾನೂ ಸತ್ತೇ ಮಾಡಿದ್ರಿ— ಅಂತೇ ನೀವು ಹೆಣಗೋಳರ್‍ಯೋ, ನೀವು ಹೆಣಗೋಳು. ನೀವು ಹೆಣಗೋಳರ್‍ಯೋ, ನೀವು ಹೆಣಗೋಳರ್‍ಯೋ. (ಕುಣಿಯುತ್ತಾನೆ).

ಕ.— ನೀನ್ಯಾರಪ್ಪಾ ?

ಕಿ.— ನಾ ನಿಮ್ಮ ರಾಜಾ, ನಾ ಬೇತಾಳ, ನೀ ತ್ರಿತಾಳ
ನಾದಿನ್ ದಿನಾ, ನಾ ತಿನ್ ತಿನಾ
ನಾ ತ್ರಿಕ ದಿನಾ— ನಾ ದಿಂ ದಿನಾ—
ನಾ ಹಾಡಾ ಹಾಡತೀನಿ, ನೀವು ನಾಚ ಮಾಡ್ರಿ.

ಕಾ.—ನಮಗ ನಾಚ ಬರಾಂಗಿಲ್ಲ.

ಕಿ.—ಅಂದ್ರ ನಾ ಭಾಷಣ ಮಾಡ್ತೀನಿ ನೀವು ಭಾಷಣ ಕೇಳ್ರಿ.

ಕ.— ಕೇಳತೀವಿ, ಕೇಳತೀವಿ, ನೀ ಸುರುಮಾಡು (ಕ ಮತ್ತು ಕಾ ಇಬ್ಬರೂ ಕಿ ನ ಹಿಂದುಗಡೆ ಇದ್ದ ಕುರ್ಚಿಯ ಮೇಲೆ ಕೂಡುತ್ತಾರೆ. ಕಿ ಮುಂದೆ ನಿಲ್ಲುತ್ತಾನೆ. ಎಲ್ಲರ ಮುಖ ಪ್ರೇಕ್ಷಕರ ಕಡೆಗಿರುವುವು)

ಕ.— ಏ, ನಿಮ್ಮ ಮಾರಿ ಕಾಣಸವಲ್ಲವು— ನಿಮ್ಮ ಮಾರೀನೆ ಇಲ್ಲೇನು ? ಮುಖಾನೆ ಇಲ್ಲೇನು ? ಕೇಳವ್ರಿಗಿ ಮುಖಾನೆ ಇಲ್ಲೇನು ?

ಕಾ.— ಏ ಮಾರಾಯಾ, ನಿನ್ನ ಮುಖಾನು ಕಾಣಸವಲ್ದು. ಹೇಳವ್ನಿಗೂ ಮುಖಾ ಇಲ್ಲೇನು ?

ಕಿ.— ಹಂಗೆ ಅನ್ನಲೀಕತ್ತೇದ— ನನ್ ಮುಖಾ ನಾ ಕಳಕೊಂಡೀನಿ ನಿಮ್ಮ ಮುಖಾ ನೀವು ಕಳಕೊಂಡೀರಂತ ಅನ್ನತದ. ಮಾತಾಡ್ಲಿಕ್ಕ ನನ್ಗ ಮುಖಾ ಇಲ್ಲ, ಮಾತು ಕೇಳಲಿಕ್ಕ ನಿಮ್ಗ ಮುಖಾ ಇಲ್ಲ— ಮುಖಾ ಇರಲಾರದವ್ರು ಏನ ಮಾತಾಡಬೇಕು? ಏನ್ ಮಾತು ಕೇಳಬೇಕು ?

ಕ.— ಮುಖಾ ಇರಲಾರದವ್ರನು ಮಾತು ಆದೇ ಆದ್ಹಾ್ತರ, ಆದೇ ಆದ್ಹಾ್ತರ, ಆದೇ ಆಡ್ತಾರ .

ಕಾ.— ಮುಖಾ ಇರಲಾರದೇನೆ ಮಾತಾಡ್ಲಿಕ್ಕ ನಾಚಕಿ ಬರಂಗಿಲ್ಲೇನು ?

ಕ.— ನಾಚಕಿ ಬರದು ಮುಖದ ಮ್ಯಾಲ, ಅದೇ ಇಲ್ಲ, ಅದು ಬರಬೇಕೆಲ್ಲಿ ?

ಕಿ.— ಇರಲಿರಲಿ— ನಾ ಭಾಷಣಾ ಕೊಡತೀನಿ, ನೀವು ಕೇಳ್ರಿ.

ಕ ಮತ್ತು ಕಾ— ನೀ ಕೊಡು, ನಾವು ಕೇಳತೀವಿ.

ಕ.— (ಭಾಷಣ ಮಾಡುವನು) ಒಂದಾನೊಂದ ದೇಶ, ನಮ್ಮ ದೇಶ, ಸೈನ್ಯ, ಶತ್ರು, ಕೋಳಿತತ್ತಿ, ನಮ್ಮ ಜಾತಿ— ಕರಡಿ, ಪಸ್ಕ ಪ್ರಾಣಿ. ಸತ್ಯ ಅಹಿಂಸಾ, ಕೊಲೆ ನಾರಾಯಣ, ದೇವರು, ಮಾತ್ರೆ, ಗುಳಿಗೆ, ಹಿಪ್ಪಿ, ಗಿಪ್ಪಿ ಬಿದ್ದವರು, ಇಲಿಗಳ ಸ್ಪರ್ಧೆ-- ಕಾಮದಹನ.... ನಾನು ದೇಶದ— ನೀನು— ಮಣ್ಣು.

ಕಾ.— ಏ ಮಾರಾಯಾ, ನಿನ್ನ ಮಾತೇ ತಿಳೀವಲ್ದು.

ಕ.— ತಿಳಿವಲ್ಲವಾ ? (ತಡೆದು) ಇವು ನಿಮ್ಗ ತಿಳೆಂಗಿಲ್ಲ.

ಕಾ.— ಯಾಕ ತಿಳೆಂಗಿಲ್ಲ ?

ಕಿ.— ಯಾಕಂದ್ರ ಇವು ನನ್ನಂತರಂಗದಿಂದ, ನನ್ನ ಹೃದಯದಿಂದ ನನ್ನೊಳಗಿಂದ ನನ್ನೆದ್ಯಾಗಿಂದ ಬಂದ ಮಾತ್ಗಳಿವು.

ಕಾ.— ಅಲ್ಲಿಂದ ಬಂದ್ರೇನಾಯ್ತು— ಯಾಕ ತಿಳೆಂಗಿಲ್ಲ ?

ಕಿ.— ಯಾಕಂದ್ರ ನಿಮ್ಗ ಬರೇ ಬಾಯಿಲಿಂದ ಬಂದ ಮಾತು ಕೇಳಽ ಚಟಾ ಬಿದ್ದದಽ ಅದನ್ನೇ ಕೇಳಿ ಕೇಳಿ ನೀವು ಒಳಗಿನಿಂದ ಬಂದ ಮಾತು ಕೇಳದು ಮರತ ಬಿಟ್ಟೇರಿ. ಆ ಭಾಷಾನೆ ನಿಮ್ಗ ಬರಂಗಿಲ್ಲ.

ಕ.— ತಿಳೀಲಾರದ ನಿನ್ನ ಭಾಷಣ ಸಾಕ ಮಾಡು.

ಕ.—ಸಾಕ ಮಾಡತೀನಿ. (ಕುರ್ಚಿಯ ಮೇಲೆ ಬಂದು ಕೂಡುವನು)

ಕಾ.—ಈ ಮನೀ, ಅಂದ್ರಽ ಈ ಜಾಗಾ ಯಾರದು ?

ಕಿ.—ಈ ಮನೀ ಮಂಗಂದು.

ಕಾ.—ಮಂಗೆಲ್ಲೇದ ?

ಕಿ.—ಗಿಡದ ಮ್ಯಾಲದ.

ಕಾ.—ಗಿಡಾ ಎಲ್ಲೇದ ?

ಕಿ.—ಗುಡ್ಡದ ಮ್ಯಾಲೇದ.

ಕಾ.—ಗುಡ್ಡಾ ಎಲ್ಲೇದ ?

ಕಿ.—ಮುಗಲ ಮ್ಯಾಲದ.

ಕಾ.—ಮುಗಲ ಎಲ್ಲೇದ ?

ಕಿ.—ಮಾಳಿಗಿ ಮ್ಯಾಲಽದ.

ಕಾ.—ಮಾಳಿಗೆಲ್ಲಽದ ?

ಕಿ.—ತಲಿ ಮ್ಯಾಲಽದ.

ಕಾ.—ತಲಿ ಎಲ್ಲೇದ ?

ಕಿ.—ಧಡದ ಮ್ಯಾಲದ.

ಕಾ.—ಧಡಾ ಎಲ್ಲೇದ ?

ಕಿ.—ಕಾಲ ಮ್ಯಾಲಽದ.

ಕಾ.—ಕಾಲೆಲ್ಲಽದ ?

ಕಿ.—ನೆಲ್ದ ವ್ಯಾಲsದ.

ಕಾ.—ನೆಲಾ ಎಲ್ಲೇದ ?

ಕಿ.—ನೆಲ್ದ ವ್ಯಾಲsದ.

ಕಾ.—ನೆಲ್ದ ವ್ಯಾಲsದ ?

ಕಿ.—ಹೂಂ ನೆಲ್ದವ್ಯಾಲsದ.

(ಮೂವರು ಚಪ್ಪಾಳೆ ಬಾರಿಸುತ್ತ " ನೆಲ್ದವ್ಯಾಲsದ. ನೆಲ್ದವ್ಯಾಲsದ. ನೆಲ್ದವ್ಯಾಲs "ದ ಎಂದು ಹಾಡುವರು.)

ಕ.—ನೆಲಾ ನೆಲ್ದವ್ಯಾsssಲsssದ........ಖೀ ಖೀ ಖೀ (ವಿಚಿತ್ರ ನಗು) ನೆಲಾ ನೆಲ್ದ ವ್ಯಾಲsssದ. ಅದರ ವ್ಯಾಲದು ಅದು, ಅದ್ರ ವ್ಯಾಲ ಅದು ಅದ (ತಡೆದು) ಅಲ್ಲಪ್ಪ ರಾಜಾ—

ಕಿ.—ಹೇಳಪ್ಪ ಪ್ರಜಾ.

ಕ.—ಇಗಾ ನೋಡು ನಿನ್ನ ಈಗ ಇಲ್ಲಿದ್ದಲ್ಲೆ, ಸಧ್ಯಾಕ್ಕ ಖಕಾಖಕಿ (ಕೈಮಾಡಿ ತೋರಿಸುತ್ತ) ಇಷ್ಟು ಬಂಗಾರ ಸಿಕ್ರs ನೀ ಏನ್ ಮಾಡ್ತಿ ?

ಕಿ.—(ವಿಚಾರ ಮಾಡಿ) ಏನ್ ಮಾಡ್ತಿನಂದ್ರs ಆ ಬಂಗಾರದಿಂದ ಒಂದು ದೊಡ್ಡ ಕಿರೀಟ ಮಾಡಿಸಿ ತಲಿವ್ಯಾಲ ಹಾಯಕೋತೀನಿ.

ಕಾ.—ಎಂಥ ಬಂಗಾರದಂಥ ವಿಚಾರಪ್ಪ ನಿಂದು. (ತಡೆದು) ಅಲ್ಲೋ ನಾವಿಬ್ರು ಹೊಟ್ಟಿಹಸಿದು ಹೊಯಕೋಳಿಕತ್ತೇವಿ ತಿನ್ನಾಕ್ಕ ಅನ್ನಿಲ್ಲಂತ—ನೀ ನಮ್ಗ ಒಂದಿಷ್ಟು ಸಹಾಯಾ ಮಾಡದ ಬಿಟ್ಟು ಕಿರೀಟ ಮಾಡಿಸಿ ಹಾಯಕೊಂಡು ಮೆರಿಬೇಕಂತ ಮಾಡೀದೆಲ್ಲೋ ? ಇದೆಂಥ ನಿನ್ನ ಮನಸಾ ?

ಕಿ.—ಎಂಥ ಮನಸಂದ್ರ ? ಬಂಗಾರದಂಥಾ ಮನಸಾ. ನಾ ಒಂದು ಬಾರಿ ಕಿರೀಟ ಹಾಯಕೊಂಡನಂದ್ರಾಯ್ತು (ತನ್ನ ತಲೆ ಮುಟ್ಟಿಕೊಂಡು) ಇಲ್ಲಿದ್ದ ಮನಸಾ ಇಲ್ಲಿ ಬಂದ ಸೇರತದ. ಮನಸ ತಲೀಗೇರತದ ಮನಸ ತಲೀಗೇರದ ವ್ಯಾಲ ಎಲ್ಲಾ ಬರೋ ಬರಿ ಆಗ್ತದ.

ಕ.—ಅಂದ್ರ ನೀ ಇದ್ದ್ಹಾಂಗೆ ಇರು ನಾ ನಿನ್ಗ ಶಾಪ ಕೊಡತೀನಿ.

ಕಾ.—ಹೌದು, ನೀ ಇದ್ದ್ಹಾಂಗೆ ಇರು ನಾನೂ ಶಾಪ ಕೊಡತೀನಿ.

ಕಿ.—ನಾ ಇದ್ದ್ಹಾಂಗೇ ಇರತೀನಿ ನನ್ಗ ಬದಲಾಸದು ಬ್ಯಾಡ. ನಾ ಹೊಟ್ಟೆದ್ದಿನಿ-ನನ್ನ ವ್ಯಾಲ ತೊಗಲದ, ತೊಗಲಿನ ವ್ಯಾಲ ಬಣ್ಣಾ ಅದ, ಆದ್ರ ಖರೇ ಖರೇ ಮಾತಂದ್ರ. ನಾ ಬರೇ ಹೊಟ್ಟೆದ್ದಿನಿ. ಸುಡಗಾಡ ಕಟಗಿ ಹೊಟ್ಟೆದ್ದೀನಿ. ನನ್ಗ

ಏನಾದ್ರು ಮಾಡಬೇಕಂತ ಯಾರಾದ್ರು ಕೈಮುಟ್ಟಿದ್ರs ನಾ ಹೊಟ್ಟಿ ಉದ್ರದ್ಹಾಂಗ ಉದರತೀನಿ, ಉದರಿ ಮಣ್ಣಪಾಲಾಗ್ತೀನಿ.

ಕ.—ಬರೋಬರಿ ಅದ. ನೀ ಹೊಟ್ಟೇ ಹೌದು—ಆದರೂ ನಿನ್ನ ಈ ದೇಹ ಬೇಕಾರಿಲ್ಲ. ಇದು ಕೆಲಸಕ್ಕ ಬರತದ ಇದರಿಂದ ಲಾಭಾಗ್ತದ. ಹೊಟ್ಟು ಸುಡಲಿಕ್ಕ ಬರತದ, ನೀರ ಕಾಸಲಿಕ್ಕ ಬರತದ.

ಕಾ.—ನೀ ಭಾಳ ಷ್ಯಾಣ್ಯಾ ಅಂತ ಕಾಣಸ್ತಿ.

ಕ. –ಕಾಣಸಬೇಕ್ಯಾಕ, ನಾ ಇದ್ದೀನಿ.

ಕಾ.—ಹ್ಯಾಂಗಿದಿs ತೋರ್ಸು.

ಕ.—ತೋರ್ಸತೀನಿ.

ಕಾ.—ಹ್ಯಾಂಗ ತೋರ್ಸತಿ ?

ಕ.—ನಡ್ಡ ತೋರಸ್ತೀನಿ, ಕುಂತ ತೋರಸ್ತೀನಿ, ನಕ್ಕು ತೋರಸ್ತೀನಿ, ಅತ್ತ ತೋರಸ್ತೀನಿ, ಕುಣದ ತೋರಸ್ತೀನಿ, ಮಣ್ಣ ತೋರಸ್ತೀನಿ.

ಕಿ.—ಇವೆಲ್ಲಾ ಮಾಡಿ ತೋರಸ್ದರ ಷ್ಯಾಣ್ಯಾ ಅಂತಾರೇನು ?

ಕ.—ಷ್ಯಾಣೇರು ಮತ್ತೇನ ಮಾಡತ್ಯಾರ ?

ಕಿ.—ಷ್ಯಾಣೇರು ಸತ್ತು ತೋರಸ್ತಾರ ತ್ಯಾಗ ಮಾಡತಾರ ಜೀಂವಾ ಬಲಿ ಕೊಡತಾರ, ಹಿಂಗ ಸಾಯ್ತಾರ, ಸತ್ತು ಷ್ಯಾಣೇರಂತ ಸಿದ್ಧಮಾಡಿ ತೋರಸ್ತಾರ.

ಕ.—ಹಾಂಗಿದ್ರ, ನಾ ಸತ್ತನೂ ತೋರಸ್ತೀನಿ.

ಕಿ.—ತೋರಸಂದ್ರ.

ಕ.—ಏಕಾ ಏಕಿ ಹ್ಯಾಂಗ ಸಾಯುಲಿ ?

ಕಾ.—ಉರಲ ಹಾಯಕೊ, ವಿಷಾ ಕುಡಿ, ಮಾಳಿಗಿ ಮ್ಯಾಲಿಂದ ಜಿಗಿ, ಏನಾದ್ರು ಮಾಡು, ಆದ್ರ ಸತ್ತು ತೋರಿಸು.

ಕ.—(ತನ್ನಷ್ಟಕ್ಕೆ ತಾನೆ–ಎದೆ ಮುಟ್ಟಿಕೊಂಡು) ಇದಕ ಉರಲ ಹಾಕದ್ರ, ವಿಷಾ ಕುಡಿಸ್ದ್ರs ಮ್ಯಾಲಿಂದ ಕೆಳಕೆ ಒಗದ್ರs ನಾ ಹ್ಯಾಂಗ ಸಾಯುಲಿ ?

ಕಿ.—(ಕನ ಮಾತು ಕೇಳಿ)ಅದು ಸತ್ರs, ನೀ ಸತ್ತ ಹಾಂಗೆ. ನೀ ಇದ್ಕ ಕೊಲ್ಲು, ಕೊಲ್ಲಿ ಷ್ಯಾಣ್ಯಾ ಅಂತ ಸಿದ್ಧಮಾಡು.

ಕ.—ಮಾಳಿಗಿ ಮ್ಯಾಲಿಂದ ಜಿಗಿ ಬೇಕಂದ್ರ, ಈ ಮನೀಗಿ ಮಾಳಗೀನೇ ಇಲ್ಲ. ಮ್ಯಾಲಹತ್ತಬೇಕಂದ್ರ ಪಾವಟಗೇನೇ ಇಲ್ಲ. ವಿಷಾ ಕುಡೀಬೇಕಂದ್ರ, ವಿಷಾ ತರಲಿಕ್ಕ ದುಡ್ಡಿಲ್ಲ. ಇನ್ನುಳಿದುದೊಂದೆ ಹಾದಿ. ಉರಲು ಹಾಯಕೊಂಡು ಸಾಯಬೇಕು. (ಕಾ ಗೆ) ನೀ ಹಗ್ಗಾ ತೊಗೊಂಡ ಬಾ ನಾ ಸಾಯ್ತಿನಿ.

[ಕಾ ಗೋಡೆಯ ಹತ್ತಿರ ಬಟ್ಟೆಹಾಕುವುದಕ್ಕೆ ಕಟ್ಟಿದ ಹಗ್ಗ ಬಿಚ್ಚಿಕೊಂಡು ತಂದು ಅದನ್ನು ಮೇಲೆ ಜಂತಿಗೆ ತೂಗು ಹಾಕುತ್ತಾನೆ. ನಂತರ ನೇಣಿನಂತೆ ಮಾಡಿ— ಕ ನ ಕೈಗೆ ಕೊಡುತ್ತ. ಸಮೀಪದ ಸ್ಟೂಲೊಂದನ್ನು ಮುಂದೆ ಸರಿಸುತ್ತಾನೆ.]

ಕ.—(ಸ್ಟೂಲಿನ ಮೇಲೆ ಹತ್ತಿ) ಬರಾಬರಿ ಹಾಯಕೋತೀನಿ. ನಾ ಅಂಜಪುಕಳಿ ಅಲ್ಲಾ, ನಾ ಷ್ಯಾಣ್ಯಾ ಅದೇನಿ. (ಕೊರಳಿಗೆ ಹಗ್ಗ ಸೇರಿಸಿಕೊಳ್ಳುತ್ತಾನೆ. ಕ ಮತ್ತು ಕಿ ಕಾ ನ ಎಡಬಲಕ್ಕೆ ಬಂದು ನಿಲ್ಲುತ್ತಾರೆ.) ಒಂದು, ಎರಡು, ಮೂರು, (ಎಂದು ಸ್ಟೂಲಿಗೆ ಕಾಲಿನಿಂದ ಸರಿಸುತ್ತಾನೆ. ಅವನ ಭಾರ ತಾಳಲಾರದೆ ಹಗ್ಗ ಹರಿದು, ಕೆಳಗೆ ಬೀಳುತ್ತಾನೆ. ಯಾವ ಸದ್ದಿಲ್ಲದೆ ಹಾಗೆ ನೆಲದ ಮೇಲೆ ಬಿದ್ದಿರುತ್ತಾನೆ.)

ಕಿ.—(ಆನಂದದಿಂದ) ಸತ್ತಾ ಸತ್ತಾ ಷಾಣ್ಯಾ ಮನಷ್ಯಾ ಸತ್ತಾ (ಕುಳಿತು ಕ ನ ಎದೆಯ ಮೇಲೆ ಕಿವಿಯಿಟ್ಟು ನೋಡುತ್ತಾನೆ. ಕಾ ನಾಡಿ ಪರೀಕ್ಷೆ ಮಾಡುತ್ತಾನೆ. ನಂತರ ಅವನು ಸತ್ತಾನೆಂದು ಖಾತ್ರಿ ಮಾಡಿಕೊಂಡು ಪರಸ್ಪರ ಮುಖ ನೋಡಿ ಅಳುವುದಕ್ಕೆ ಪ್ರಾರಂಭಿಸುತ್ತಾರೆ—ಹಾಸ್ಯಾಸ್ಪದ ಅಳು.)

ಕಾ.—(ಅಳುವುದನ್ನು ನಿಲ್ಲಿಸಿ) ಗಿಳಿಯು ಪಂಜರದೊಳಿಲ್ಲ ರಾಮಾ ರಾಮಾ ಗಿಳಿಯು ಪಂಜರದೊಳಿಲ್ಲ [ಎಂದು ಹಾಡುತ್ತಾನೆ. ಕಿ ದನಿಗೂಡಿಸುತ್ತಾನೆ. ಒಂದೆರಡು ನಿಮಿಷಗಳಾದ ನಂತರ ಹಾಡುತ್ತಲೆ 'ಕ' ನಿಧಾನವಾಗಿ ಏಳುತ್ತಾನೆ. ಕ ಮತ್ತು ಕಾ ಒಂದೇ ಸಾಲಿನಲ್ಲಿ ಕೂಡುತ್ತಾರೆ. ಕಿ ಅವರಿಬ್ಬರ ಹಿಂದೆ ನಿಲ್ಲುತ್ತಾನೆ. ಕ ಮತ್ತು ಕಾ ಗಿಳಿಯು ಪಂಜರದೊಳಿಲ್ಲ ಎಂದು ಹಾಡುವಾಗ 'ಕ' ಹಿಂದೆ ನಿಂತು]

"ರತ್ತೋ ರತ್ತೋ ರಾಯನ ಮಗಳೆ ಬಿತ್ತೋ ಬಿತ್ತೋ ಭೀಮನ ಮಗಳೆ—"

[ಹಾಡುತ್ತಾನೆ. ನಂತರ ಕ್ರಮೇಣ ದನಿ ಕುಗ್ಗುತ್ತದೆ. ಎಲ್ಲರೂ ಹೆಣಗಳಂತೆ ನಿಶ್ಚಲರಾಗಿ ಬಿಡುತ್ತಾರೆ.]

(ತೆರೆ)

★ ಚಂದ್ರಕಾಂತ ಕುಸನೂರ

ಪಂಪನ ಅಗ್ರಹಾರ ರನ್ನನ ಬತ್ತಗಾವೆ

ಉದಯಾಸ್ತೋನ್ನತ ಶೈಲಸೇತು ಹಿಮವತ್ ಕುತ್ಕೀಲ ಪರ್ಯಂತ ಸಂ|
ಪದೆಯುಂ ವಾರ್ಧಿ ತರತ್ತರಂಗ ನಿನದತ್ ಕಾಂಚೀಕಳಾಪಾಂಚಿತಾ|
ಸ್ಪದೆಯುಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ|
ರ್ಚಿದಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೇ||

ಕಾವ್ಯಾವಲೋಕನ (೧೭೫) ಶಬ್ದಮಣಿದರ್ಪಣ (೧೬೭) ಗಳಲ್ಲಿ ಕಂಡುಬರುವ ಈ ಪದ್ಯ, ಪೊನ್ನನ ಅನುಪಲಬ್ಧ ಭುವನೈಕರಾಮಾಭ್ಯುದಯಕ್ಕೆ ಸಂಬಂಧಿಸಿರಬಹುದು. ಇಲ್ಲಿ 'ಕಬ್ಬಿಗಂಗೆ' ಬದಲು 'ಕಚ್ಚೆಗಂಗೆ' ಪಾಠವಿರಬಹುದೆಂಬ, ಭುವನೈಕರಾಮ ಬಿರುದಿನ ರಾಜವ್ಯಕ್ತಿಯು ಸಮಸ್ತಭಾರತವನ್ನು ಗೆದ್ದು (ಚಕ್ರವರ್ತಿಯಾಗಿದ್ದ) ಆ ಕಚ್ಚೆಗನಿಗೆ ಒಪ್ಪಿಸಿದನೆಂಬ ಹೊಸ ಅರ್ಥವೊಂದು ಇತ್ತೀಚೆಗೆ ತಲೆಯೆತ್ತಿದೆ.[೧] ಈ ಅರ್ಥ ಬಹುಜನ ವಿದ್ವಾಂಸರ ಒಪ್ಪಿಗೆ ಪಡೆಯುವವರೆಗೆ ಮತ್ತು 'ಕಚ್ಚೆಗ' ಎಂಬ ಹೊಸಪಾಠ ಸಿಗುವ ವರೆಗೆ ಭುವನೈಕರಾಮ ಬಿರುದಿನ ಅರಸನೊಬ್ಬನು ಸಮಸ್ತ ಭಾರತವನ್ನು ಗೆದ್ದು ಕಬ್ಬಿಗನಿಗೆ (ಪೊನ್ನನಿಗೆ) 'ನೆಲ' ವನ್ನು ನೀಡಿದನೆಂದು ಈ ಪದ್ಯಕ್ಕೆ ಅರ್ಥಹೇಳಬಹುದು. ಪೊನ್ನನಿಗೆ ದಾನವಾಗಿ ದೊರೆತ ಈ ನೆಲ ಯಾವ ಪ್ರದೇಶದ್ದು? ಅದರ ಸ್ವರೂಪವೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಈಗ ಸಾಕಷ್ಟು ಆಧಾರಗಳಿಲ್ಲ. ಇದೇರೀತಿ ಪಂಪನು 'ಅಗ್ರಹಾರ' ವನ್ನು ರನ್ನನು 'ಬತ್ತಗಾವೆ' ಯನ್ನು ಪಡೆದಿರುವರು. ಇವುಗಳನ್ನು ಕುರಿತು ಇಲ್ಲಿ ವಿವೇಚಿಸಬಹುದು.

ಬಹುದಿನಗಳಿಂದ ನಡೆದ 'ಅಗ್ರಹಾರ' ವನ್ನು ಕುರಿತ ಚರ್ಚೆ ಅತ್ಯಂತಿಕವಾಗಿ ಬಗೆಹರಿಯದಿದ್ದರೂ, ಈಗಿನ ಪರಿಸ್ಥಿತಿಯಲ್ಲಿ ಅದನ್ನು ಹೀಗೆ ಅರ್ಥೈಸಬಹುದು. ಶ್ರೇಷ್ಠರಸ್ಥಳ [ಅಗ್ರ (=ಶ್ರೇಷ್ಠ) + ಆಹಾರ(= ಸ್ಥಳ)] ಎಂಬ ಅರ್ಥದ 'ಅಗ್ರಾಹಾರ' ಪದದಿಂದ 'ಅಗ್ರಹಾರ' ರೂಪತಾಳಿದೆ. ಒಂದು ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಿದ್ದರು. ಹೀಗೆ ದಾನ ಪಡೆದ ಬ್ರಾಹ್ಮಣರೇ ಆ ಅಗ್ರಹಾರದ ಮಹಾಜನರು. ಅಲ್ಲಿ ಬೇರೆ ಜಾತಿಯವರೂ ಇರಬಹುದು. ಆದರೆ ಊರ ಉತ್ಪನ್ನದ ಪಾಲು ಹೋಗುವುದು ಅರಸು ಭಾಂಡಾರಕ್ಕಲ್ಲ, ಈ ಮಹಾಜನರಿಗೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಅಗ್ರಹಾರವನ್ನು ಬ್ರಾಹ್ಮಣರಿಗೆ ಕೊಡಬೇಕು. ಅದು

---

೧. ಪೊನ್ನನ ಭುವನೈಕ ರಾಮಾಭ್ಯುದಯ — ಎಂ. ಬಿ. ನೇಗಿನಹಾಳ (ಕ. ಭಾ. ೩-೨).

ಜಾತಿಗೌರವದ ಪ್ರಶ್ನೆ. ಆದರೆ ಜಾತಿಯಿಂದ ಜೈನನಾದ ಪಂಪನು 'ಧರ್ಮಪುರ' ಹೆಸರಿನ ಒಂದು ಅಗ್ರಹಾರವನ್ನು ಪಡೆದನೆಂದು—

ಬೀರದಳಪಿಯು ನನ್ನಿಯು ಜಾಗದ ಶಾಸನಂ ಚಂದ್ರಾರ್ಕ ತಾರಂಬರಂ |
ಮೇರುನಿಲ್ವಿನಂ ನಿಲವೇಟ್ಟುಂ ಕಾವ್ಯಕ್ಕೆ ತಾನಿತ್ತಂ ಶಾಸನದಗ್ರಹಾರಂ |
ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮಭಂಡಾರದಂತೆ |
ಸಾರವಾದುದು ಬಿಟ್ಟಗ್ರಹಾರವಾಬಚ್ಚೆಸಾಸಿರದೊಳಂ ಧರ್ಮಪುರಂ ||೨

ಎಂಬ ಪದ್ಯವನ್ನವಲಂಬಿಸಿ ಪಂಡಿತರು ಅಭಿಪ್ರಾಯಪಡುತ್ತಾರೆ. ಅರ್ಥ ದೃಷ್ಟಿಯಿಂದ ಕ್ಲಿಷ್ಟವಾಗಿರುವ ಈ ಪದ್ಯದಿಂದ, ಒಂದು ಊರನ್ನು ಅಗ್ರಹಾರವಾಗಿಸಿ ಬ್ರಾಹ್ಮಣರಿಗೆ ಕೊಡುವಂತೆ ಜೈನನಾದ ಪಂಪನಿಗೆ ಕೊಟ್ಟರೆ? ಅಥವಾ ಈ ಮೊದಲು ಬ್ರಾಹ್ಮಣರ ಅಗ್ರಹಾರವಾಗಿದ್ದ ಒಂದು ಊರನ್ನು ಪಂಪನಿಗೆ ನೀಡಿದರೆ? ಧರ್ಮಪುರವೆಂಬುದು ಒಂದು ಊರಿನ ಅಂಕಿತನಾಮವೇ? ಅಥವಾ ಅಗ್ರಹಾರದಂತಹ ಒಂದು ಪಾರಿಭಾಷಿಕಪದವೇ? ಎಂಬ ಸಂದೇಹಗಳು ಹುಟ್ಟುತ್ತಿದ್ದು ಇವುಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಎರಡು ಊಹೆಗಳನ್ನು ಮಾಡಬಹುದು.

೧. ಪಂಪನಿಗೆ ಒಂದು ಊರನ್ನು ಅಗ್ರಹಾರವೆಂದು ಕೊಡುವಾಗ ಅದಕ್ಕೆ 'ಧರ್ಮಪುರ' ವೆಂಬ ಹೆಸರನ್ನಿಟ್ಟರೆಂದು ವಿದ್ವಾಂಸರ ಅಭಿಪ್ರಾಯ. ಅವರು ಹೇಳುವಂತೆ (ಒಂದು ಹೊಸ ಊರನ್ನು ಕಟ್ಟಿಸಿಯೋ ಇಲ್ಲವೆ ಒಂದು ಊರಿನ ಮೊದಲಿದ್ದ ಹೆಸರನ್ನು ತೆಗೆದುಹಾಕಿಯೋ) ಅದಕ್ಕೆ ಧರ್ಮಪುರವೆಂದು ಹೆಸರಿಟ್ಟರಲಿ ಬಿಡಲಿ ಆದರೆ ಜಾತಿಯಿಂದ ಜೈನನಾದ ಪಂಪನಿಗೆ ಅಗ್ರಹಾರ ನೀಡಿರಲು ಸಾಧ್ಯವೆ? ಎಂಬ ಮೂಲಭೂತ ಸಂದೇಹ ಹುಟ್ಟುತ್ತದೆ. ಮೇಲಾಗಿ ಜೈನರಿಗೆ ಅಗ್ರಹಾರ ನೀಡಿದ ಇಂಥ ಬೇರೆ ಉದಾಹರಣೆಗಳು ಎಲ್ಲಿಯೂ ಲಭಿಸಿಲ್ಲ. ಈ ಪ್ರಸಂಗದಲ್ಲಿ, ಪಂಪನು ಮೂಲತಃ ಬ್ರಾಹ್ಮಣನೆಂದೋ ಶ್ರೀಧರಾಚಾರ್ಯ ಮೊದಲಾದವರಂತೆ ಜೈನಬ್ರಾಹ್ಮಣನೆಂದೋ ಒಂದು ಊರನ್ನು ಅಗ್ರಹಾರವಾಗಿ ಕೊಟ್ಟಿರಬಹುದೆಂದು ಇದಕ್ಕೆ ಸಮಾಧಾನ ಹೇಳಬಹುದಾದರೂ ಕರ್ನಾಟಕದ ಅಗ್ರಹಾರಗಳ ಇತಿಹಾಸದಲ್ಲಿ ಇದೊಂದು ಅಪೂರ್ವ ಸಂಗತಿಯೆನ್ನಬೇಕಾಗುತ್ತದೆ.

೨. ಅಗ್ರಹಾರದಂತೆ ಪರಿವರ್ತಿಸಿಕೊಡದೆ ಕೇವಲ ದಾನವಾಗಿ ಕೊಟ್ಟ ಗ್ರಾಮಕ್ಕೆ 'ಧರ್ಮಪುರ'ವೆಂದು ಕರೆದ ಕೆಲವು ಉಲ್ಲೇಖಗಳಿವೆ. "...ಉತ್ತ

೨. ಪಂಪಭಾರತ ೧೪-೫೬ ("ತಾಂ ಶಾಸನ [ದಿಸ್ಸಂಸಾರ] ಮೆಂಬಂತಿರೆ ಸಲಿಸಿದಂ" ಎಂಬ ಜೋಡವನಗ್ರಾಮದ ಶಾಸನದಲ್ಲಿಯ 'ಸಾರ' ಪದವನ್ನೂ ಈ ಪದ್ಯದಲ್ಲಿಯ 'ಸಾರ' ಪದವನ್ನೂ ಗಮನಿಸಿರಿ.)

ರಾಯಣ ಸಂಕ್ರಮಣದಂದು ಆರಿದವಾಳಿಕೆಯು ತೊಗರವಾಡಿಯುಂ, ಮನ್ನೆಯ ಬೂವನಹಳ್ಳಿ ಒಳಗಾದ ಹಳ್ಳಿಗಳು ಸಹಿತ **ಧರ್ಮಪುರ**ವೆಂಬ ಹೆಸರಂ ಮಾಡಿ ಶ್ರೀಕೇಶವೇಶ್ವರಂಗಭೋಗ....ಕ್ಕಂ....ಸಲುವಂತಾಗಿ .. ಅಲ್ಲಿಯ ಶ್ರೀಧರೆಯನ ಕೈಯಲು ಶ್ರೀನಾರಸಿಂಹದೇವನು ಕೊಟ್ಟ .. ದತ್ತಿ...." ೩

ಈ ಹಿನ್ನೆಲೆಯಲ್ಲಿ ನೋಡಿದರೆ ಬ್ರಾಹ್ಮಣನಲ್ಲದ ಪಂಪನಿಗೆ ಒಂದು ಊರನ್ನು ಅಗ್ರಹಾರವಾಗಿಸಿ ಕೊಡಲು ಬಾರದ ಕಾರಣ೩A ಧರ್ಮಪುರವಾಗಿಸಿ ಕೊಟ್ಟಿರ ಬಹುದೆನಿಸುತ್ತದೆ. ಇದು ನಿಜವಿದ್ದರೆ ಈ ಮೊದಲು ಅಗ್ರಹಾರವಾಗಿದ್ದ ಒಂದು ಗ್ರಾಮವನ್ನು ಪಂಪನಿಗೆ 'ಧರ್ಮಪುರ'ವಾಗಿಸಿಕೊಟ್ಟರೆಂದು ಮೇಲಣ ಪದ್ಯಕ್ಕೆ ಅರ್ಥಹಚ್ಚಬೇಕಾಗುತ್ತದೆ. 'ಧರ್ಮಪುರ'ವೆಂಬ ಈ ಪಾರಿಭಾಷಿಕ ಪದವೇ ಮುಂದೆ ಆ ಊರಿನ ಅಂಕಿತನಾಮವಾಗಿ ಬಳಕೆಗೊಂಡಿರಬಹುದು.೪

ಇನ್ನೂ ಆಧಾರಗಳನ್ನು ಬಯಸುವ ಊಹೆಗಳಿವು.೫ ಇವುಗಳ ಹಿನ್ನೆಲೆಯಲ್ಲಿ ಪಂಪನ ದತ್ತಿ ಗ್ರಾಮದ ಸ್ವರೂಪವನ್ನು ನಿರ್ಣಯಿಸುವುದು ವಿದ್ವಾಂಸರಿಗೆ ಬಿಟ್ಟ ಪ್ರಶ್ನೆ. ಈ ಪ್ರಸಂಗದಲ್ಲಿ 'ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳ್' ಎಂದು ನಂಬಿದ ಪರಮಜಿನಭಕ್ತ ಪಂಪನು "ತನ್ನಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ" ಎಂದು ಯಜ್ಞವನ್ನು ತಿರಸ್ಕರಿಸಿದ್ದರೂ ಆತನ ಧರ್ಮಪುರವು—

---

೩. EC. IV ಹುಣಸೂರ ೧೩೭. ಧರ್ಮಪುರ.

೩A ಆಂಧ್ರ ಪ್ರದೇಶದಲ್ಲಿ ವೈಶ್ಯರಿಗೂ ಅಗ್ರಹಾರ ನೀಡಿದ ಉದಾಹರಣೆಗಳಿವೆಯೆಂದು ತಿಳಿದುಬಂದಿದೆ. ಆದರೆ ಇದು ಪಂಪನಷ್ಟು ಪ್ರಾಚೀನವೆ? ನೋಡಬೇಕು. ಅದೇನೇ ಇದ್ದರೂ ಅಗ್ರಹಾರವನ್ನು ಬ್ರಾಹ್ಮಣರಿಗೆ ಮಾತ್ರ ನೀಡಬೇಕೆಂಬುದು ಮೂಲ ತಿಳುವಳಿಕೆ ಎಂಬುದನ್ನು ಮರೆಯುವಂತಿಲ್ಲ.

೪. ಕೆಲವು ಊರುಗಳಿಗೆ ಈಗಲೂ 'ಅಗ್ರಹಾರ' 'ಶಿವಪುರ' ಎಂಬ ಹೆಸರಿರುವುದನ್ನು ಗಮನಿಸಬೇಕು.

೫. ಬ್ರಾಹ್ಮಣರಿಗೆ ಕೊಡುವ ಗ್ರಾಮಕ್ಕೆ 'ಅಗ್ರಹಾರ' ಶೈವರಿಗೆ ಕೊಡುವ ಗ್ರಾಮಕ್ಕೆ 'ಶಿವಪುರ' ಎಂಬ ಪರಿಭಾಷೆಗಳನ್ನು ಬಳಸುವಂತೆ ಭಿಕ್ಷುಗಳಿಗೆ (ಜೈನರಿಗೆ?) ಕೊಡುವ ಗ್ರಾಮಕ್ಕೆ 'ಧರ್ಮಪುರ' ಎಂಬ ಪರಿಭಾಷೆಯನ್ನು ಪ್ರಾಚೀನ ಕಾಲದಲ್ಲಿ ಬಳಸುತ್ತಿರಬಹುದೇ?) ಇಂತಹ ಬೇರೆ ಉದಾಹರಣೆಗಳು ಲಭಿಸದ ಕಾರಣ ಇಲ್ಲಿಯೇ ಅಂಥ ಪರಿಭಾಷೆಯನ್ನು ಬಳಸಲು ಮೊದಲು ಮಾಡಿರಬಹುದೇ? ಎಂದು ಊಹಿಸಿದ ಪಕ್ಷದಲ್ಲಿ ಧರ್ಮಪುರವೆಂಬುದು ಅಂಕಿತನಾಮವಲ್ಲ, ಕೇವಲ ದಾನವಾಗಿ ಕೊಟ್ಟ ಗ್ರಾಮಕ್ಕೆ ಹೇಳುವ ಪಾರಿಭಾಷಿಕ ಪದವಲ್ಲ, ಜೈನರ (?) ಅಗ್ರಹಾರವನ್ನು ಸೂಚಿಸುವ ಹೊಸ ಪಾರಿಭಾಷಿಕ ಪದವೆನ್ನಬೇಕಾಗುತ್ತದೆ. ಈ ಊಹೆಗೆ ಆಧಾರಗಳು ಬೇಕು.

ಪೆಸೆ ಮಖಧೂಮದಿಂ ದ್ವಿಜರ ಸೋಮಗಿನೊಳ್ಪಿಜಿ ಹಂಸಕೋಕ ಸಾ|
ರಸ ಕಳನಾದದಿಂದೊಳಗೆ ವೇದ ನಿನಾದದಿನೆತ್ತ ಮೆಯ್ವ್ವೆ ಕೋ|
ಭಿಸೆ ಸುರನುಹ್ಯವಾನ ವಸಧಿ ಕ್ಷುಭಿತಾರ್ಣವ ಘೋಷದಂತೆ ಘೂ|
ರ್ಣಿಸುತಿರ [ಲಿ] ಗುಣಾರ್ಣವನ ಧರ್ಮದ ಧರ್ಮಪುರಂ ಮನೋಹರಂ ||೫A

ಹೀಗೆ ಯಜ್ಞಧೂಮ, ವೇದ ಘೋಷಗಳಿಂದ ಕೂಡಿ ಬ್ರಾಹ್ಮಣರ ಅಗ್ರಹಾರವನ್ನು ಚಿತ್ರವತ್ತಾಗಿ ಪ್ರತಿಬಿಂಬಿಸುತ್ತದೆ. ಹೀಗಾಗಿ ಜೈನನಾದ ಪಂಪನು ಪಡೆದ ಗ್ರಾಮದಲ್ಲಿಯ ಈ ವೈಭವಪೂರ್ಣ ಬ್ರಾಹ್ಮಣ ಆಚರಣೆಗಳು ಸೋಜಿಗವನ್ನುಂಟುಮಾಡುತ್ತದೆ.

ಪಂಪನು 'ಅಗ್ರಹಾರ'ವನ್ನು ಪಡೆದರೆ ರನ್ನ ಪಡೆದುದು 'ಬತ್ತಗಾವೆ'ಯನ್ನು.

ಮದನಾವತಾರಮುಂ ಕನ|
ಕದಂಡ ಚಾಮರಮುನುನ್ನದೇಭಮುನುತ್ತಮಂ|
ಗದ ಬತ್ತಗಾವೆಯುಂ ಪಡೆ|
ದುದಾತ್ತ ಕವಿತಿಲಕನೆನಿಸಿದಂ ಕವಿರತ್ನಂ ||೬

ಅಜಿತಪುರಾಣದ ಈ ಪದ್ಯದಿಂದ ರನ್ನನು ಮದನಾವತಾರವೆಂಬ ಅಪೂರ್ವ ಛತ್ರ, ಚಿನ್ನದ ಹಿಡಿಕೆಯುಳ್ಳ ಚಾಮರ, ಶ್ರೇಷ್ಠವಾದ ಆನೆ, ಸುಪ್ರಸಿದ್ಧ ಬತ್ತಗಾವೆ-ಇವುಗಳನ್ನು ಪಡೆದನೆಂದು ತಿಳಿದುಬರುತ್ತದೆ. ಈ ಬತ್ತಗಾವೆಯನ್ನು ಪ್ರಮ (ಮಡಗಾಂವ, ವಡಗಾಂವಗಳಂತೆ ಇದು ಬತಗಾಂವ) ಒಂದು ಊರ ಹೆಸರಾಗಿರಬಹುದೆಂದು ವಿದ್ಯಾರ್ಥಿಯಾಗಿರುವಾಗ ನನ್ನಷ್ಟಕ್ಕೆ ಭಾವಿಸಿದ್ದೆನು. ಮುಂದೆ ಡಾ. ಡಿ.ಎಲ್.ಎನ್. ಅವರ 'ಮದನಾವತಾರ' ಲೇಖನ ಕಣ್ಣಿಗೆ ಬಿದ್ದಿತು. ಮದನಾವತಾರ ಪದವನ್ನು ಮುಖ್ಯವಾಗಿ ಚರ್ಚಿಸುತ್ತ ಅವರು, ಆನುಷಂಗಿಕವಾಗಿ ಬತ್ತಗಾವೆಯೆಂದರೆ ನೆಲ್ಲು ಬೆಳೆಯುವ ಗ್ರಾಮ ಎಂದು ಅಲ್ಲಿ ಹೇಳಿರುವರು. ನೆಲ್ಲು ರನ್ನನ ಜನ್ಮಪ್ರಾಂತವಾದ ಉತ್ತರ ಕರ್ನಾಟಕ ಪ್ರಮುಖ ಬೆಳೆಯಲ್ಲ. ಮೇಲಾಗಿ ಊರ ಹೆಸರನ್ನು ಬಿಟ್ಟು, ನೆಲ್ಲು ಬೆಳೆಯುವ ಗ್ರಾಮವನ್ನು ಪಡೆದನೆಂದು ಹೇಳುವಲ್ಲಿಯೂ ಅಂಥ ಔಚಿತ್ಯವಿಲ್ಲ. ಹೀಗಾಗಿ ಅವರ ಅರ್ಥ ನನಗೆ ಸಮ್ಮತವೆನಿಸದೆ ಇದು ಊರ ಹೆಸರಾಗಿರಬಹುದು, ಇಲ್ಲವೆ ಇದಕ್ಕೆ ಬೇರೊಂದು ಅರ್ಥವಿರಬಹುದು ಎಂಬ ಆಶೆ ನನ್ನ ಮನದಲ್ಲಿ ಉಳಿದುಕೊಂಡಿತು. ಕೆಲವು ವರ್ಷಗಳ ಹಿಂದೆ ಶಾಸನಗಳನ್ನು ಓದುತ್ತಿರುವಾಗ ಅಲ್ಲಿ 'ಬತ್ತಗ್ರಾಮ' ಎಂಬ

೫A ಪಂಪಭಾರತ ೧೪-೫೭.
೬. ಅಜಿತ ಪುರಾಣ ೧೨-೫೧.
೭, ಮದನಾವತಾರ—ಪ್ರ. ಕ.

ಪದ ನನ್ನ ಗಮನಕ್ಕೆ ಬಂದು ಇದಕ್ಕೂ ರನ್ನನ ಬತ್ತಗಾವೆಗೂ ಏನೋ ಸಂಬಂಧವಿರಬಹುದೆಂದು ಆಲೋಚಿಸುತ್ತಿರುವಲ್ಲಿ ಡಾ. ಪಿ. ಬಿ. ದೇಸಾಯಿ ಅವರ 'Epigraphical dis coveries' ಎಂಬ ಲೇಖನ ನನ್ನ ಗಮನಕ್ಕೆ ಬಂದಿತು.[೮] ಅವರು ಲಿಂಗಸೂಗೂರ ಹುಣಸೀಹಡಗಲಿ ಸಿರಗುಪ್ಪಾ ಸೂಡಿಶಾಸನಗಳಲ್ಲಿ ಬರುವ,

"ಶ್ರೀಮದಬ್ಬಲದೇವಿಯರು ಕರಡಿಕಲ್ಲಾನೂಱಱ ಬಱಿಯ ಬತ್ತಗ್ರಾಮಂ ಲಿಂಗಮನಾಳುತ್ತಮಿರೆ"[೯]

"ಶ್ರೀಮತ್ ಪಿರಿಯರಸಿ ಚಂದಲದೇವಿಯರು ಆಲಂದೆ ಸಾಸಿರಪ್ರಮುಖವನೇಕ ಬತ್ತಗ್ರಾಮಂಗಳುಮಂ--- ಅರಸುಗೆಯ್ಯುತ್ತಮಿರೆ--"[೧೦]

"ಶ್ರೀಮದಭಿನವಸರಸ್ವತಿ ಪಿರಿಯ ಕೇತಲದೇವಿಯರು ಭಲ್ಲಕು × × ನೂಱಱ ಬಱಿಯ ತೆಕ್ಕೆಕಲ್ಲ ಪನ್ನೆಱಡಱೊಳಗಣ ಸಿರಿಗುಪ್ಪೆ × × ರ ಕೊಳನೂರಂತು---"[೧೧]

"ಶ್ರೀಮತ್ರಿಭುವನಮಲ್ಲ × × ಪಾದಾಬ್ಜ ಬ್ರಿಂಗ ಶ್ರೀಮನ್ಮಹಾಮಣ್ಡಳೇಶ್ವರಂ ತ್ರಿಭುವನಮಲ್ಲ ಪಾಂ[ಡ್ಯರು]ಸರು ಕುತ್ತುಂಭಿತ್ತಿ ಭತ್ತಗ್ರಾಮೆ × × -- × × --ರಾಜ್ಯಂಗೆಯ್ಯುತ್ತಿರೆ × × × --- ರೊಳಗಣ ಭತ್ತಗಾಮೆ × × --ಮೂಱೂರುಮಂ × × ಪ್ರತಿಪಾಟಿ × ಮಿತ್ತಮಿರೆ--"[೧೨]

"(ನಾಗದೇವನೆಂಬವನು) ಬಾಳ್ಗುಳಿ ಕಾರಿಟ್ಟಗೆ ಮೊದಲಾಗೆ ಪಲವುಂ ಬತ್ತಗ್ರಾಮೆಗಳುಮಂ--- ಪ್ರತಿಪಾಳನಂಗೆಯ್ದು--"[೧೩]

---

೮. The quarterly journal of the Mythic Society. Volume XLIX No. 2. 1959

೯. A corpus of inscriptions in the Kannada districts of Hyderabad State No. 9. AD. 1124.

೧೦. Bom. Gaz. Vol. I–II p. 485. AD. 1098.

೧೧. SII IX-i. No. 159. ಚಾಳುಕ್ಯ ವಿಕ್ರಮನ ೧೬ನೆಯ ವರ್ಷ.

೧೨. SII IX-i. No. 167 AD. 1102.

೧೩. EI XV. p. 88. AD. 1060.

ಇಂಥ ಇನ್ನೂ ಕೆಲವು ಉದಾಹರಣೆಗಳನ್ನು ಇಲ್ಲಿ ಸಂಗ್ರಹಿಸಬಹುದು.

೧ "......ಜಗದೇಕಮಲ್ಲನೊಳಂಬ ಪಲ್ಲವ ಪೆರ್ಮಾ[ನ]ಡಿದೇವರು...ನಾಸವಾಡಿಯೊಳಗಣ ಭತ್ತಗಾವೆ ಪಂಚಗ್ರಾಮಮುಮಂ...ಆಳುತ್ತಮಿರೆ..." (SII IX-i. 88 AD. 1034. ಚಿನ್ನಹಳ್ಳಿ.)

೨. "...ಗಣ್ಡರಾದಿತ್ಯರಸರ್ ಸಿನ್ದವಾಡಿಸಾಸಿರಮುಂ ಬೆಣ್ಣೆವೂರ್ ಪನ್ನೆರಡುಮಂ ತಂನು ಭತ್ತಗ್ರಾಮೆ ನಱುಗುನ್ದಮುಂ...... ರಾಜ್ಯಂಗೆಯ್ಯುತ್ತಮಿರೆ..." (SII. IX-i· 105. AD. 1047 ಕಂಚಗಾರ ಬೆಳಗಲ್ಲು)

ಎಂಬ ವಾಕ್ಯಗಳನ್ನೂ ರೋಣಶಾಸನದಲ್ಲಿ ಬರುವ 'ಭತ್ತಾಯ' ಎಂಬ ಪದವನ್ನೂ ಕುಕ್ಕನೂರ ಶಾಸನದಲ್ಲಿ ಬರುವ 'ಭತ್ತಾಯ' 'ಸಿದ್ಧಾಯ' ಎಂಬ ಪದಗಳನ್ನೂ ಮುಂದಿಟ್ಟುಕೊಂಡು 'ಬೇಯಿಸಿದ ಅಕ್ಕಿ' ಎಂಬರ್ಥದ 'ಭಕ್ತ' ಎಂಬ ಸಂಸ್ಕೃತ ಪದದಿಂದ ಕನ್ನಡದ 'ಭಕ್ತ' ರೂಪತಾಳಿದೆ. ಇಷ್ಟು ಹೇಳಿದರೆ ಸಾಕು ಶಾಸನಗಳಲ್ಲಿ ಬರುವ 'ಭತ್ತಗ್ರಾಮ'ವೆಂದರೆ ಭತ್ತಬೆಳೆಯುವ ಗ್ರಾಮ ಎಂಬ ಅರ್ಥ ಮಾಡಲು ಆತುರ ಹುಟ್ಟುತ್ತದೆ. ಆದರೆ ಮೇಲೆ ಹೇಳಿದ ಕೆಲವು ಗ್ರಾಮಗಳಲ್ಲಿ ಭತ್ತಬೆಳೆಯುವದೇ ಇಲ್ಲ. ಅಲ್ಲದೆ ಕೇವಲ ಭತ್ತ ಬೆಳೆಯುವ ಗ್ರಾಮಗಳನ್ನೇ ಆರಿಸಿಕೊಂಡು ಆಳಿದರು ಎಂಬ ಅರ್ಥವೂ ಸರಿಹೊಂದುವುದಿಲ್ಲ. ಅದಕ್ಕಾಗಿ ಈ ಅರ್ಥ ಅಸಮಂಜಸ. ಇನ್ನು ಸಂಸ್ಕೃತದ ಭಜ್ [To obtain as one's share, enjoy, to allot) ಧಾತುವಿನ ಭೂತನ್ಯೂನರೂಪವಾದ 'ಭಕ್ತ' ಎಂಬುದು ಮುಂದೆ 'ಭತ್ತ' ಎಂದಾಗಿದೆ. ಸ್ವ ಉಪಭೋಗಕ್ಕೆ ಮೀಸಲಾಗಿರುವ ಪಾಲು, ಆಸ್ತಿ ಎಂದು ಇದರ ಅರ್ಥ. ಅದಕ್ಕಾಗಿ ಭತ್ತಗ್ರಾಮವೆಂದರೆ ಸ್ವಂತ ಉಪಭೋಗಕ್ಕೆ ಪಡೆದ ಗ್ರಾಮ ಅಂದರೆ ಈಗಿನ ಅರ್ಥದಲ್ಲಿ ಇನಾಮು ಅಥವಾ ಜಹಗೀರು ಗ್ರಾಮ ಎಂದು ಶ್ರೀ ದೇಸಾಯಿ ಅವರ ಅಭಿಪ್ರಾಯ.

ಶ್ರೀ ದೇಸಾಯಿ ಅವರು ವಿವೇಚಿಸಿದ ಶಾಸನೋಕ್ತ 'ಭತ್ತಗ್ರಾಮ' ಮತ್ತು ರನ್ನ ಹೇಳುವ ಅಜಿತಪುರಾಣೋಕ್ತ 'ಬತ್ತಗಾವೆ'ಗಳು ಸಮಾನಾರ್ಥಕ ಪದಗಳೆಂಬುದು ಸ್ಪಷ್ಟ. ಹಾಗಿದ್ದ ಪಕ್ಷದಲ್ಲಿ ಶ್ರೀ ಡಿ. ಎಲ್. ಎನ್. ಹೇಳುವಂತೆ ರನ್ನನು ಭತ್ತ ಬೆಳೆಯುವ ಗ್ರಾಮವನ್ನು ಪಡೆದನೆನ್ನುವುದಕ್ಕಿಂತ ಒಂದು ಗ್ರಾಮವನ್ನು ಇನಾಮು ಇಲ್ಲವೆ ಜಹಗೀರ ರೂಪದಲ್ಲಿ ಪಡೆದನೆನ್ನಬೇಕಾಗುತ್ತದೆ. ಇಷ್ಟು ವಿವೇಚನೆಯ ಹಿನ್ನೆಲೆಯಲ್ಲಿ ಎರಡು ಹೊಸ ಊಹೆಗಳನ್ನು ಮಾಡಬಹುದು.

೧. 'ಭತ್ತಗಾವೆ' ಎನ್ನುವುದು ಗ್ರಾಮಗಳಿಗೆ ಹೇಳುವ 'ಅಗ್ರಹಾರ'ದಂಥ ಒಂದು ಪಾರಿಭಾಷಿಕ ಪದ. ಆದರೆ ಬ್ರಾಹ್ಮಣರ ಉಪಭೋಗಕ್ಕೆ ಕೊಟ್ಟ

---

೩. "...ಶ್ರೀಮತ್ತರ್ದವಾಡಿ ನಾಡ ಬಳಿಯ ಭತ್ತಗ್ರಾಮಂ ಕನ್ನವಳ್ಳಿಯ ಪ್ರಭುಗಳುಂ.." (SII.XX. 140 A. D. 1164 ಕನ್ನೊಳ್ಳಿ.)

೪. "...ತರ್ದ್ದವಾಡಿ ಸಾಸಿರದೊಳಗಣ [ಮುಂ] ನಾಡದ ಬಳಿಯ ಬತ್ತಗಾಮ ಹೊಂನವಾಡಿ [ಯಿಂ]ಳೆಯ..(SII. XI-i. 83. A. D. 1049. ಜಾಗೆವಾಡಿ.)

೫. "...ಶ್ರೀಮತು ಮೈಳಲದೇವಿಯರ್ ಬತ್ತಗ್ರಾಮ ಕುಣಿಲಂಗೆಜೆಯುಂ ಆಳುತ"

೬. "......ಮೈಕಳಲದೇವಿಯರು ತಮ್ಮಾಳ್ಕೆ ಭತ್ತಗ್ರಾಮ ಕುಣಿಲಂಗೆಜೆಯ......"

೭. "...ಶ್ರೀಮತು ಮೈಳಲದೇವಿಯರ ತಮ್ಮೊಳ್ಕೆ ಭತ್ತಗ್ರಾಮ ಕುಣಿಲಂಗೆಜೆ..." (ಕೊನೆಯ ಮೂರು ಶಾಸನಗಳು ಗುಲ್ಬರ್ಗಾ ಜಿಲ್ಲೆಯ ಕುಳಗೇರಿ ಗ್ರಾಮಕ್ಕೆ ಸಂಬಂಧಿಸಿದುವು. ಅಪ್ರಕಟಿತ.)

ಗ್ರಾಮ 'ಅಗ್ರಹಾರ', ಕುಲಭೇದವಿಲ್ಲದೆ ಯಾರೊಬ್ಬರ ಉಪಭೋಗಕ್ಕೆ ಕೊಟ್ಟ ಗ್ರಾಮ 'ಬತ್ತಗಾವೆ'. (ಪಂಪನು ಜೈನ ಬ್ರಾಹ್ಮಣನೆಂದು ಅಗ್ರಹಾರ ಕೊಟ್ಟರೆ ರನ್ನನು ಜೈನವೈಶ್ಯನೆಂದು ಬತ್ತಗಾವೆ ಕೊಟ್ಟಿರಬಹುದೇ?)

೨. ಸಾಮಾನ್ಯವಾಗಿ ಹಳೆಯ ಮೈಸೂರು ಪ್ರದೇಶದ ಶಾಸನಗಳಲ್ಲಿ ಈ ಪದ ಕಂಡುಬರದೆ[೧೪] ಉತ್ತರ ಕರ್ನಾಟಕದ ಶಾಸನಗಳಲ್ಲಿ ಮಾತ್ರ ವಿಶೇಷ ಕಂಡುಬರುತ್ತದೆ. ಆದಕ್ಕಾಗಿ ರನ್ನನು ಮೈಸೂರು ಪ್ರದೇಶವನ್ನಾಳಿದ ಗಂಗರ (ಚಾವುಂಡರಾಯ) ಆಶ್ರಯದಲ್ಲಿರುವಾಗ ಈ ಬತ್ತಗಾವೆಯನ್ನು ಪಡೆಯದೆ ಉತ್ತರ ಕರ್ನಾಟಕವನ್ನಾಳಿದ ಕಲ್ಯಾಣಚಾಲುಕ್ಯ ಅರಸನಿಂದ (ತೈಲಪ) ಪಡೆದಿರಬೇಕು. ಇದು ಬಹುಶಃ ಸ್ವಗ್ರಾಮವಾದ ಮುಧೋಳದ ಸಮೀಪ ಇಲ್ಲವೆ ಕಲ್ಯಾಣಚಾಲುಕ್ಯರ ರಾಜಧಾನಿಗಳಾದ ಮಳಖೇಡ (?) ಯಾತಗಿರಿ ಪೊಟ್ಟಲಕೆರೆ ಕಲ್ಯಾಣಗಳ ಸಮೀಪ ಇಲ್ಲವೆ ಅತ್ತಿಮಬ್ಬೆಯ ನೆಚ್ಚಿನ ಗ್ರಾಮವಾದ ಲಕ್ಕುಂಡಿಯ ಸಮೀಪ ಇರಬಹುದು.

ಇಷ್ಟಾಗಿಯೂ ರನ್ನನು ತಾನು ಪಡೆದ ಬತ್ತಗಾವೆ (ಇನಾಮು ಗ್ರಾಮ)ಯ ಹೆಸರನ್ನು ಹೇಳದುದು ಕುತೂಹಲವನ್ನು ಹುಟ್ಟಿಸುತ್ತದೆ. ಈ ಬತ್ತಗಾವೆಯನ್ನು ಹುಡುಕಿದಲ್ಲಿ, ರನ್ನನಿಗೆ ಸಂಬಂಧಿಸಿದ ಶಾಸನ ಮೊದಲಾದುವು ದೊರೆತು ಹೊಸವಿಷಯಗಳು ಬೆಳಕಿಗೆ ಬರಬಹುದು.

★ ಎಂ. ಎಂ. ಕಲಬುರ್ಗಿ

---

೧೪. " ಪದಿನೆಂಟು ಭತ್ತಗ್ರಾಮಂಗಳಂ......" MAR 1930. ಶಿಕಾರಿಪುರ ತಾಲೂಕ. ಪು. ೨೩೫. ಕ್ರಿ. ಶ. ೧೦೪೦.
" ಬತ್ತಕ್ಕೆ ಬಿಡಿಸಿ...... ಬತ್ತಸೂಟಿ " MAR 1932. ಪು. ೧೭೨. ಹೀಗೆ ಒಂದೆರಡು ಉದಾಹರಣೆಗಳು ಮಾತ್ರ ಮೈಸೂರ ಪ್ರದೇಶದ ಶಾಸನಗಳಲ್ಲಿ ಗೋಚರಿಸುತ್ತವೆ.

ಅಭಿವೃದ್ಧಿಪರ ರಾಷ್ಟ್ರದಲ್ಲಿ ವಿಶ್ವವಿದ್ಯಾಲಯ*

ಪರಿವರ್ತನೆಯ ಪರ್ಯಾವರಣ (Climate of Change) :

ಇಂದಿನ ಜಗತ್ತಿನ ಎದ್ದು ತೋರುವ ಲಕ್ಷಣವೆಂದರೆ, ಅದರ ಪರಿವರ್ತನೆಯ ಧಾವಂತಗತಿ. ಇಂಥ ಭರದಿಂದ ಬದಲಾಯಿಸುತ್ತಿರುವ ಜಗತ್ತಿನಲ್ಲಿ ಹಳೆಯ ವಿಚಾರಗಳು, ಗ್ರಹಿಕೆಗಳು, ಮೌಲ್ಯಗಳು ಎಲ್ಲವೂ ಮುಗ್ಗರಿಸುವಂತೆಯೂ, ಜೀರ್ಣಪರ್ಣಗಳಂತೆ ಹಾರಾಡುವಂತೆಯೂ ಆಗುವವು. ಪ್ರಾಚೀನದಲ್ಲಿಯ ಪರಂಪರಾಗತ ಸದ್ಗುಣಗಳನ್ನು ಉಳಿಸಿಕೊಳ್ಳುವುದೂ, ಭವಿಷ್ಯತ್ತಿನೆಡೆಗೆ ದೃಢತೆ, ಭರವಸೆಗಳಿಂದ ಕೂಡಿ ನಿಟ್ಟಿಸುವುದೂ ಇಂದಿನ ಅವಶ್ಯಕತೆಗಳಾಗಿವೆಯೆನ್ನಬಹುದು.

ಇಂಥ ಬದಲಾವಣೆಯ ಪರಿಸ್ಥಿತಿಯಲ್ಲಿ, "ವಿಶ್ವವಿದ್ಯಾಲಯ"ದ ಮೂಲ ಕಲ್ಪನೆಯೇ ಬದಲಾಗಬೇಕಾಗುತ್ತದೆ—ಬದಲಾಗುತ್ತಲೂ ಇದೆ. ಭಾರತೀಯ ಪ್ರಾಚೀನ ಗುರುಕುಲ ಪದ್ಧತಿಯಾಗಲೀ, ವಿದ್ಯೆಯೊಂದು 'ವಿರಾಮದ ವಿಲಾಸ'ವೆಂಬ ಸಾಂಪ್ರದಾಯಿಕ (Classic) ಕಲ್ಪನೆಯಾಗಲೀ, ಪ್ರೌಢ ಶಿಕ್ಷಣದ ಗುರಿ 'ಸಭ್ಯಮಾನವ'ನ ನಿರ್ಮಾಣವೆಂದೆಂಬ ೧೯ ನೇ ಶತಮಾನದ ತಿಳುವಳಿಕೆಯಾಗಲೀ, ಅವುಗಳ ವಿಶಿಷ್ಟ ಐತಿಹಾಸಿಕ, ಸಾಮಾಜಿಕ ಸನ್ನಿವೇಶಗಳಲ್ಲಿ ಯಾವ ಬೆಲೆಯನ್ನೇ ಪಡೆದಿದ್ದರೂ—ಇಂದಿನ ಶೈಕ್ಷಣಿಕ ಸಾಮಾನ್ಯ ಸಿದ್ಧಾಂತದಲ್ಲಿ ಮಾತ್ರ ಅವು ಇದ್ದಕ್ಕಿದ್ದಂತೆ ಎಡೆಪಡೆಯಲಾರವು. ಹಳೆಯ ಧಾರ್ಮಿಕ ಪರಂಪರೆಗಳಾಗಲೀ, ಹಳೆಯ ಸಾಮಾಜಿಕವರ್ಗಕ್ರಮಗಳಾಗಲಿ ಇಂದು ಬಳಕೆಯಲ್ಲಿಲ್ಲವಷ್ಟೇ ಅಲ್ಲ, ಸಾಮಾನ್ಯವಾಗಿ ಅವುಗಳಿಗೆ ಮೊದಲಿನ ಮನ್ನಣೆಯೂ ಇಲ್ಲ. ಸಾರ್ವತ್ರಿಕ ಪ್ರಜಾಪ್ರಭುತ್ವದ ಈ ಯುಗದಲ್ಲಿ ವಿಶಿಷ್ಟವರ್ಗಕ್ಕಾಗಿ ಮಾತ್ರವೇ ಯೋಜನೆಗಳನ್ನು ರೂಪಿಸುವುದು ಸಾಧ್ಯವಿಲ್ಲ. ನಿರಂತರ ಕ್ರಾಂತಿಯ ಈ ಕಾಲದಲ್ಲಿ ವಿರಾಮವಾಗಿ ಕುಳಿತು ಜೀವನದ ಸಂಸ್ಕೃತಿ-ಸೌಮನಸ್ಯಗಳನ್ನು ಅನುಭವಿಸುವದಕ್ಕಾಗಲಿ, ಆತ್ಮಾನುಸಂಧಾನದ ಏಕಾಂತದ ಮರೆಗೆ ಸೇರುವದಕ್ಕಾಗಲಿ ಅವಕಾಶವೇ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಹಾಗೂ ಸಮಾಜಕ್ಕೆ ತಾನು ಹೆಚ್ಚು ಪ್ರಯೋಜನಕಾರಿಯಾಗುವದಕ್ಕೆ ಹದವಾದ ಮಟ್ಟದಲ್ಲಿ, ಜೀವನದ ರಣರಂಗವನ್ನು ಪ್ರವೇಶಿಸಬೇಕಾಗುತ್ತದೆ.

---

* ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ| ಎ.ಎಸ್. ಅಡಕೆಯವರು ಯುಗೋಸ್ಲಾವಿಯಾ ರಾಷ್ಟ್ರದ ಡುಬ್ರೊವ್ನಿಕ್‌ದಲ್ಲಿ ೧೯೭೦ನೇ ಸಾಲಿನ ಆಗಸ್ಟ್ ೧೫ರಿಂದ ೨೫ನೇ ದಿನಾಂಕದ ವರೆಗೆ ನಡೆದ "The University Today" ಎಂಬ ವಿಚಾರಸಂಕಿರಣದ ಕಾಲಕ್ಕೆ ಪ್ರಸ್ತುತಪಡಿಸಿದ ವಿಚಾರ ಪ್ರಬಂಧ.

ವಿಜ್ಞಾನದ ಪಾತ್ರ :

ಈ ಪರಿವರ್ತನೆಯ ಪರ್ಯಾವರಣದ ಪ್ರಧಾನ ಕಾರಣವೆಂದರೆ ವಿಜ್ಞಾನ. "ಪೂರ್ಣ ಮಾನವನ" ನಿರ್ಮಾಣವೇ ಶಿಕ್ಷಣವೆಂಬ ಹಳೆಯ ಕಲ್ಪನೆ— (ಆದರಿಂದಲೇ "ಮಾನವೀಯ ವ್ಯಾಸಂಗ" ವೆಂಬ ಪದಪ್ರಯೋಗದ ಪರಿಪಾಟ)– ಮಾನವನ ನೈಜಸ್ವಭಾವ, ಧ್ಯೇಯಗಳ ಕುರಿತಾದ ಸಂಧಿಗ್ಧತೆಯಿಂದಾಗಿ ತಡೆ, ಗೊಂದಲಗಳಿಗೆ ಎಡೆಗೊಟ್ಟಿತು. ಸಂಘರ್ಷಕರ ಧಾರ್ಮಿಕ ಸಿದ್ಧಾಂತಗಳ, ತತ್ವ ಜ್ಞಾನದ ಅನ್ಯೋನ್ಯ ಛೇದಕ ಪ್ರಮೇಯಗಳ, ಕಲೆಗಳ ಧ್ಯೇಯ ವೈವಿಧ್ಯಗಳ ನಡುವಿನಿಂದಲೇ "ವಿಜ್ಞಾನ"ದ ಮಾರ್ಗ ತೆರೆಯಿತು. ಖಂಡಿತವಾಗಿಯೂ "ವಿಜ್ಞಾನ"ಕ್ಕೆ "ಮಾನವೀಯ ವ್ಯಾಸಂಗಕ್ಕೆ ಪ್ರಾಪ್ತವಾಗದ ಅನುಕೂಲ್ಯ ವೊಂದಿದೆ; ಅದೆಂದರೆ ವಿಜ್ಞಾನದ ನಿಷ್ಕೃಷ್ಟತೆಯಿಂದ ಲಭ್ಯವಾಗುವ ಪೂರ್ಣ ಸರಳತೆ.

ವಿಜ್ಞಾನವು ಏಕರೂಪಿಯೂ, ಸರಳವೂ ಆಗಿದೆ. ಅದಕ್ಕಿರುವ ಗುರಿ ಒಂದೇ; ಸತ್ಯಶೋಧನೆ. ಅದರ ಕ್ರಮಪದ್ಧತಿಯೂ ಒಂದೇ. ಸತ್ಯಶೋಧನೆಗಾಗಿ "ಬುದ್ಧಿ"ಯ ನಿಸ್ಪೃಹವಾದ ಅನುಸಂಧಾನ. ಖಂಡಿತವಾಗಿಯೂ ಇದ ಕ್ಕೊಂದು ಮಿತಿ(Limitation ಯಿದ್ದೇ ಇವೆ. ಏಕೆಂದರೆ, ಮಾನವನು "ಬುದ್ಧಿ"ಗಿಂತ ಅಧಿಕಾಂಶವುಳ್ಳ ವ್ಯಕ್ತಿಯಾಗಿದ್ದಾನೆ. ವಿಜ್ಞಾನದ ಸತ್ಯವು, ಸತ್ಯದ ಸರ್ವಮುಖಗಳನ್ನು ಪ್ರತಿನಿಧಿಸುವುದಿಲ್ಲ ಆದರೆ ಬುದ್ಧಿಗೆ ಇರುವ ಅಧಿಕ ಅನುಕೂಲ್ಯವೆಂದರೆ ಅದು ಸಾರ್ವತ್ರಿಕ ಸಂಧಿಸ್ಥಲ (Universal meeting ground) ವಾಗುವ ಸಾಧ್ಯತೆಯಿರುವದು. ಅದು ರಾಷ್ಟ್ರ, ವರ್ಗಗಳ ಎಲ್ಲೆಯನ್ನು ಮನ್ನಿಸುವದಿಲ್ಲ; ಹಾಗೂ ವಿವಿಧ ಮಾನಸಿಕ ಹಾಗೂ ಭಾವ ನಾತ್ಮಕ ಪ್ರವೃತ್ತಿಗಳ ಅಂತರವನ್ನು ಮೀರಿ ನಿಲ್ಲುತ್ತದೆ. ವಿಜ್ಞಾನದ ಏಕಮೇವ ವಲ್ಲದಿದ್ದರೂ ಮಹತ್ವದ ಸಾಧನವಾದ ಬುದ್ಧಿಗೆ ಸಾರ್ವತ್ರಿಕ ಸಿಂಧುತ್ವ (Universal Validity) ವಿದೆ. ಅದರ ತೀರ್ಮಾನಗಳನ್ನು ಪ್ರಯೋಗಶಾಲೆ ಗಳಲ್ಲಿಯಾಗಲಿ, ಔದ್ಯೋಗಿಕ ಹಾಗೂ ತಾಂತ್ರಿಕ ಸನ್ನಿವೇಶಗಳಲ್ಲಿಯಾಗಲಿ ವ್ಯಾವಹಾರಿಕವಾಗಿ ಸಿದ್ಧಪಡಿಸಬಹುದು.

ಪ್ರಜಾಪ್ರಭುತ್ವ ಮತ್ತು ವಿಜ್ಞಾನ:

ನಮ್ಮದು ವಿಜ್ಞಾನಯುಗ ಮಾತ್ರವೇ ಅಲ್ಲ; ಪ್ರಜಾಪ್ರಭುತ್ವದ ಯುಗವೂ ಅಹುದು. ನಿಜವಾಗಿಯೂ ಪ್ರಜಾಪ್ರಭುತ್ವ ಮತ್ತು ವಿಜ್ಞಾನಗಳ ಸಂಬಂಧವು ಅತಿ ನಿಕಟವಾದುದಾಗಿದೆ. ವಿಜ್ಞಾನವು ಯಾವುದೇ ವರ್ಗ ಇಲ್ಲವೆ ಪರಂಪರೆಯನ್ನು ಆಧರಿಸಿರುವುದಿಲ್ಲ. ತನ್ನ ಪ್ರಾಚೀನ ಸಿದ್ಧಾಂತಗಳ ಕುರಿತು ಅದು ಯಾವ ಪಾವಿತ್ರ್ಯಾಂಧತೆಯ ಭಾವವನ್ನು ತಾಳುವದಿಲ್ಲ. ಅದರಲ್ಲಿಯ

ಅಭಿನವ ಶೋಧವೊಂದು ಯಾವ ಪಾಪಶಂಕೆಯನ್ನೂ ಇಟ್ಟುಕೊಳ್ಳದೆ, ಹಳೆಯ ಸಿದ್ಧಾಂತ ಹಾಗೂ ಗ್ರಹಿಕೆಗಳ ಸರಮಾಲೆಯನ್ನೇ ಬುಡ ಮೇಲು ಮಾಡಬಹುದು. ಸತ್ಯಾನ್ವೇಷಣೆ ನಡೆಸಬೇಕು, ಎಷ್ಟೇ ಕಹಿ ಯಾಗಿದ್ದರೂ ಸತ್ಯವನ್ನು ಮನ್ನಿಸಲೇಬೇಕೆಂಬುದಷ್ಟೇ ಅದು ಎತ್ತಿ ಹೇಳುವ ವಿಷಯವಾಗಿದೆ. ಆದ್ದರಿಂದ ಅದು ಆಧ್ಯಾತ್ಮಿಕ ಮತ್ತು ನೈತಿಕ ನಿಯಮನ (Dicipline)ದಂತೆಯೇ ಇದೆ ಎನ್ನಬಹುದು. ಆಸ್ತಿ, ಸಂಸ್ಕೃತಿ, ಧರ್ಮಗಳಂತೆ ವಿಜ್ಞಾನವು ಉಚ್ಚಮಟ್ಟದವರ (Aristocracies) ಸ್ವಾಮ್ಯಕ್ಕೊಳಪಟ್ಟುದಲ್ಲ: ಸಂಪದ್ವಿಹೀನ ನಿಮ್ನವರ್ಗದ ವ್ಯಕ್ತಿಯ ಎಟಕಿನೊಳಗೂ ನಿಲ್ಲುವದಾಗಿದೆ. ಹಾಗೆ ನೋಡಿದರೆ, ಕಳೆದ ನೂರು ವರ್ಷಗಳಲ್ಲಿ ಆಗಿಹೋದ ಶ್ರೇಷ್ಠ ವಿಜ್ಞಾನಿ ಗಳಲ್ಲಿ ಕೆಲವರು ಸಮಾಜದ ಬಡ ಮತ್ತು ಹೆಸರುವಾಸಿಯಲ್ಲದ ವರ್ಗಗಳಿಂದ ಬಂದವರಾಗಿದ್ದಾರೆ. ಆರ್ಥಿಕ ಸಮಾನತೆಯ ಗುರಿಗಾಗಿ ದಾರಿದ್ರ್ಯನಿರ್ಮೂಲನ ವನ್ನು ಸಾಧಿಸಬಲ್ಲ ಸಾಮರ್ಥ್ಯವಿರುವದು ವಿಜ್ಞಾನಕ್ಕೆ ಮಾತ್ರವೇ. ರಾಜಕೀಯ ಪ್ರಜಾಪ್ರಭುತ್ವ ಸಾಧನೆಗಾಗಿ ವರ್ಗಭೇದ ನಿವಾರಣೆಯ ವಿಷಯದಲ್ಲಿ ಕೂಡ ಆ ಮಾತು ಅನ್ವಯಿಸುತ್ತದೆ. ನಿಜವಾಗಿ ನೋಡಿದರೆ, ಇಂದು ಅನೇಕ ಸಂಘರ್ಷ, ಸಂಕ್ಲೇಶಗಳ ಮೂಲಕ ಸಮಾಜವನ್ನು ಪರಿವರ್ತಿಸುವದಕ್ಕೆ ಪ್ರಧಾನ ಕಾರಣ ವಾಗಿರುವದೂ ವಿಜ್ಞಾನವೇ.

ದ್ವಿ–ಸಂಸ್ಕೃತಿಗಳೇ ? (Two Cultures ?):

ಇಂದು ವಿಜ್ಞಾನಕ್ಕೆ ದೊರಕಿರುವ ಪ್ರಭಾವ, ಪ್ರತಿಷ್ಠೆಗಳನ್ನು ಗಮನಿಸಿ C. P. Snow ಎಂಬವರು ದ್ವಿ-ಸಂಸ್ಕೃತಿ (Two Cultures) ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ, ವಿಜ್ಞಾನ, ಮತ್ತು ಮಾನ ವೀಯ ವ್ಯಾಸಂಗಗಳು ಅನ್ಯೋನ್ಯ ನಿರಾಕರಣೆಯಲ್ಲಿ ಆಗಲಿ, ನಿರಂತರ ಘರ್ಷಣೆ ಯಲ್ಲಿ ಆಗಲಿ ತೊಡಗಿರಬೇಕಾಗಿಲ್ಲ. ಕೊಟ್ಟು-ಕೊಳ್ಳುವ ಹಾಗೂ ಬದುಕಿ-ಬದುಕ ಗೊಡುವ ಮನೋಧರ್ಮವನ್ನನುಸರಿಸುತ್ತ ತಮ್ಮ ತಮ್ಮ ಪ್ರತ್ಯೇಕ ದಾರಿ ಗಳನ್ನು ಕ್ರಮಿಸಬಹುದು. ಭಿನ್ನವಾದರೂ ಅಷ್ಟೇ ಮೌಲಿಕವಾದ ಜೀವ- ನೋದ್ದೇಶಗಳ ಸಾಧನೆಯಲ್ಲಿಯ ಪರಸ್ಪರ ಉಪಯುಕ್ತತೆಯನ್ನು ಮುಕ್ತವಾಗಿ ಮನ್ನಿಸಬಹುದು.

ಆದರೆ ಇದೊಂದು ದುರಂತ ಪ್ರಮಾದವಾಗಬಹುದು. ಪ್ರತ್ಯೇಕ ಮಾರ್ಗ ಕ್ರಮಣದ ವಿಭಿನ್ನ (ದ್ವಿ) ಸಂಸ್ಕೃತಿಯ ಇಂಥ ಸಿದ್ಧಾಂತವು ಒಂದೆಡೆ, ಅತಿಹೆಚ್ಚು ವ್ಯಾಪಕವಾದ ಮಾನವೀಯ ಪ್ರಜಾಪ್ರಭುತ್ವದ ಧ್ಯೇಯಕ್ಕೆ ವಿಸಂಗತವಾಗು ವದು. ಏಕೆಂದರೆ ಅದು ಮಾನವಜನಾಂಗವನ್ನು ಎರಡು ಭಿನ್ನ ಮತ್ತು ಪರಸ್ಪರ ದುರ್ಭೇದ್ಯ ಶಿಬಿರಗಳಾಗಿ ಒಡೆಯುವದು. ಇನ್ನೊಂದೆಡೆ, ಪೂರ್ಣಮಾನವನ

ಅತ್ಯುಚ್ಚ ಕಲ್ಯಾಣ ಸಾಧನೆಯಲ್ಲಿ ಮಾನವನ ಸರ್ವ ಮನಸ್ಸಾಮರ್ಥ್ಯದ ಸಮಗ್ರ ವಿನಿಯೋಗವು ಸಾಧ್ಯವಾಗದಂತೆ ಮಾಡುವದು.

ಸಾಮಾನ್ಯ ಶಿಕ್ಷಣ (General Education):

ಈಗ ಬೇಕಾಗಿರುವದು ಪ್ರತಿಯೊಬ್ಬನಿಗೂ—ಅಂದರೆ ಅಭಿರುಚಿಯುಳ್ಳ ಪ್ರತಿಯೊಬ್ಬನಿಗೂ–ವೈಜ್ಞಾನಿಕ ಶಿಕ್ಷಣ. ಆದರೆ ಅದು ಮಾನವನ ಭಾವನಾತ್ಮಕ, ಕಲ್ಪನಾತ್ಮಕ, ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳೆಲ್ಲವಕ್ಕೂ ಯೋಗ್ಯ ಲಕ್ಷ್ಯ ಪೂರೈಸುವ ವ್ಯಾಪಕವೂ, ಸಾಮಾನ್ಯ ಸ್ವರೂಪದ್ದೂ ಆದ ಶಿಕ್ಷಣದ ನೆಲೆಗಟ್ಟಿನ ಮೇಲೆ ನೆಲಸಿರಬೇಕು. ಕೆಲವರ್ಷಗಳ ಹಿಂದೆ ನಮ್ಮ ರಾಷ್ಟ್ರದಲ್ಲಿ ಸಾಮಾನ್ಯ ಶಿಕ್ಷಣಕ್ಕೆ ಇದ್ದಕ್ಕಿದ್ದಂತೆ 'ಪರ್ವಕಾಲ'ವೊದಗಿತ್ತು. ಉನ್ನತವಾಗಿ ಅಭಿವೃದ್ಧಿ ಹೊಂದಿದವೂ ವೈಜ್ಞಾನಿಕವಾಗಿ ಪ್ರಗತಿ ಸಾಧಿಸಿದವೂ ಆದ ರಾಷ್ಟ್ರಗಳು ಇದ್ದ-ಕ್ಕಿದ್ದಂತೆಯೇ ಈ ಕೆಳಗಿನ ಸಂಗತಿಗೆ ಕಣ್ದೆರೆದಂತಿತ್ತು: ವಿಶೇಷಜ್ಞತೆಯೆಂಬುದು ದೂರದ ಮಟ್ಟವನ್ನು ಮುಟ್ಟಿದೆ; ಯಾವನೊಬ್ಬನ ಜೀವನದ ಹಲವು ವರ್ಷಗಳನ್ನೊಳಗೊಳ್ಳುವ ಶಿಕ್ಷಣದ ಗಾಢಪದ್ಧತಿ (intensive system) ಯಿಂದಾಗಿ ಅವನ ಪೂರ್ಣಮಾನವತೆಯ ಒಂದಿಲ್ಲೊಂದು ಅಂಶವನ್ನು ತೀವ್ರವಾಗಿ ಉಪೇಕ್ಷಿಸಲಾಗಿದೆ. ಇದೊಂದು ಗಂಡಾಂತರವೇ ಸರಿ. ಸಾಮಾನ್ಯ ಶಿಕ್ಷಣವೇ ಇದಕ್ಕೆ ಉತ್ತರವಾಗಬಲ್ಲದು. ದುರ್ದೈವದಿಂದ, ಸಾಮಾನ್ಯ ಶಿಕ್ಷಣವೆಂಬುದರ ಮೂಲ ಕಲ್ಪನೆಯೇ ಸಾಮಾನ್ಯತಃ ತಪ್ಪಾಗಿ ಗ್ರಹಿಸಲ್ಪಟ್ಟಿತು. ಭಾಷೆ ಹಾಗೂ ಸಾಮಾಜಿಕ ವಿಜ್ಞಾನಗಳ ವ್ಯಾಸಂಗದಲ್ಲಿ ಪ್ರಾಕೃತಿಕ ವಿಜ್ಞಾನ ವಿಷಯಕವಾದ, ವಿಜ್ಞಾನ ವ್ಯಾಸಂಗದಲ್ಲಿ ಸಾಮಾಜಿಕ ವಿಜ್ಞಾನ ವಿಷಯಕವಾದ ಪ್ರತ್ಯೇಕ ಸೇರ್ಪಡೆಯಿಂದಾಗಿ ಪಠ್ಯಕ್ರಮದಲ್ಲಿ ಪತ್ರಿಕೆಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು, ಅಷ್ಟೇ! ಆದರೆ ಅದರಿಂದೇನೂ ಸಾಧಿಸಲಾಗಲಿಲ್ಲ. ಅದನ್ನೊಂದು ಹೊರೆಯೆಂದು ತಾಳಿಕೊಂಡದ್ದಷ್ಟೇ ಆಯಿತು. 'ಸಾಮಾನ್ಯ ಶಿಕ್ಷಣ'ವನ್ನು ಸಮರ್ಥವಾಗಿ ಅಧ್ಯಾಪನ ಮಾಡಲು ತಕ್ಕ ವಿಶೇಷಜ್ಞತೆಯುಳ್ಳವರಾರೂ ಇರಲಿಲ್ಲ. ಆ ಯೋಜನೆಯನ್ನು ಕೈಬಿಡುವ ಮುನ್ನವೇ ಮಾತ್ರ ನಿಜಾಂಶ ಮನ-ವರಿಕೆಗೆ ಬಂದಿತೆನ್ನಬಹುದು. ಅದೇನೆಂದರೆ, ಮೂಲೋದ್ದೇಶವು ಉದ್ದಕ್ಕೂ ವ್ಯಾಸಂಗ ಪತ್ರಿಕೆಗಳ ಸಂಖ್ಯೆ ಹೆಚ್ಚಿಸುವದಾಗಿರದೆ, ಮೊದಲಿದ್ದ ಪತ್ರಿಕೆಗಳ ವ್ಯಾಸಂಗವನ್ನೇ ಸಾಮಾನ್ಯ ಶಿಕ್ಷಣದ ಮನೋಧರ್ಮದಿಂದ ಪ್ರೇರಿತವಾಗುವ ರೀತಿಯಲ್ಲಿ ಅಧ್ಯಾಪನ ವ್ಯವಸ್ಥೆಗೊಳಪಡಿಸುವದಾಗಿದೆ. ಯಾವದೇ ಪಠ್ಯಕ್ರಮ ವಿಭಾಗದ ವಿಷಯವಾದರೂ ಜೀವನ ಹಾಗೂ ಮಾನವೀಯ ಸಂಬಂಧಗಳ ಧ್ಯೇಯೋದ್ದೇಶಗಳನ್ನೇ ಲಕ್ಷ್ಯವಾಗಿರಿಸಿಕೊಳ್ಳಬೇಕಾದುದು ಯುಕ್ತ. 'ವಿಶೇಷಜ್ಞ'ತೆಯ ಸಂಪಾದನೆಯ ಗುರಿಯಲ್ಲಿ ಮೂಲತಃ ತಪ್ಪೇನೂ ಇಲ್ಲ.

ಅದರೊಟ್ಟಿಗೆ ಬರಬಹುದಾದ ದೃಷ್ಟಿಸಂಕೋಚ ಮಾತ್ರ ದೋಷವಾಗುತ್ತದೆ. ಅದನ್ನೇ ಮಾನವ್ಯರಾಹಿತ್ಯ(Inhumanism)ವೆನ್ನುವದು. ತುಂಬಾ ಅಭಿವೃದ್ಧಿಗೊಂಡ ರಾಷ್ಟ್ರಗಳಲ್ಲಿ ತಾಂತ್ರಿಕ ಶಿಕ್ಷಣವನ್ನು "ಮಾನವೀಯ ಸಂಸ್ಪರ್ಶಸಮನ್ವಿತ"ವಾಗಿ (Humanise) ಮಾಡುವದೇ ಪ್ರಥಮಾವಶ್ಯಕತೆಯೆಂಬ ಭಾವನೆ ಬೆಳೆದಿದೆ.

ಸಂವರ್ಧನೆಯ ಶಕ್ತಿ ಸೆಲೆ (Dynamics of Development) :

ತೀವ್ರ ಪರಿವರ್ತನೆಯ ವಾತಾವರಣದಲ್ಲಿ ಶೈಕ್ಷಣಿಕ ವಿಚಾರಗಳನ್ನೊಳಗೊಂಡು ಯಾವವೂ ಯಥಾಸ್ಥಿತಿಯಲ್ಲಿಯೇ ಇರಲಾರವು. ಈ ಮಾತು, ನಾನಿಲ್ಲಿ ಪ್ರತಿನಿಧಿಸುವ ಗೌರವವನ್ನು ಪಡೆದಿರುವ, ಅಭಿವೃದ್ಧಿ ಮುಖವಾಗಿರುವ ದೇಶಕ್ಕೆ ವಿಶೇಷವಾಗಿ ಅನ್ವಯಿಸುತ್ತದೆ. ಸಮಗ್ರರೂಪದ ಸಂವರ್ಧನೆಯು ಶಕ್ತಿ-ಸೆಲೆಯೊಂದಿದ್ದು ಅದು ಒಂದು ರಾಷ್ಟ್ರದ (ಕೆಲವು ಸಲ ಅದರ ನೆರೆಯವರು ಸ್ನೇಹಿತರು ಸಹಿತವಾಗಿ) ಇಡಿಯ ಜೀವನವನ್ನು ಹಲವು ಮುಖಗಳಲ್ಲಿ ಪ್ರಭಾವಿತವಾಗಿ ಮಾಡುವದು; ಅದರಲ್ಲಿ ಶೈಕ್ಷಣಿಕ ಧ್ಯೇಯ, ಶೈಕ್ಷಣಿಕ ಪದ್ಧತಿಗಳಿಗೆ ಸಂಬಂಧಪಟ್ಟ ಮಹತ್ವದ ಅಂಶಗಳೂ ಒಳಗೊಳ್ಳುವವು. ಅಭಿವೃದ್ಧಿಪರವಾದ ರಾಷ್ಟ್ರವು ತನಗೇ ವಿಶಿಷ್ಟವಾದ ಸಮಸ್ಯೆಗಳಿಂದ ಪೀಡಿತವಾಗಿರುತ್ತದೆ. ಕೆಲ ಕ್ಷೇತ್ರಗಳಲ್ಲಿಯ ವಿಶಿಷ್ಟಸಾಧನೆಗಳ ಮೂಲಕ ಭದ್ರತಾಭಾವವನ್ನನುಭವಿಸುತ್ತಿರುವ ಅಭಿವೃದ್ಧ ರಾಷ್ಟ್ರಗಳಿಗೆ ಅನೇಕ ಸಲ ಅದು ಅರಿವಿಗೆ ಬಾರದೆ ಹೋಗುತ್ತದೆ.

ವಿಜ್ಞಾನ ಮತ್ತು ಪ್ರಜಾಪ್ರಭುತ್ವ :

ನನ್ನ ದೇಶಕ್ಕೆ ನ್ಯಾಯವಾಗಿ ಹೆಮ್ಮೆಪಡಬಹುದಾದಂಥ ಸಂಪನ್ನವೂ ಪ್ರಾಚೀನವೂ ಆದ ಪರಂಪರೆಯಿದೆ. ಅದರ ಆಧ್ಯಾತ್ಮಿಕತೆ ಹಾಗೂ ಅಂತರಾತ್ಮದ ಮಹಿಮೆಯಿಂದ ವ್ಯಾಪ್ತವಾದ ಸಂಗೀತ, ಶಿಲ್ಪಕಲೆಗಳ ನೆಲೆಯಿಂದ ತಂತ್ರಪ್ರಧಾನ ಪಾಶ್ಚಿಮಾತ್ಯ ರಾಷ್ಟ್ರಗಳನ್ನೊಳಗೊಂಡ ಸಕಲ ಜಗತ್ತು ಸಾರವನ್ನು ಹೀರತೊಡಗಿದೆ. ಆದರೆ ಪಶ್ಚಿಮದ ರಾಷ್ಟ್ರಗಳಿಂದ, ಕಳೆದ ಎರಡು ಶತಮಾನಗಳಲ್ಲಿ ಅದು ಸಾಧಿಸಿದ ವಿಜ್ಞಾನದ ಶಕ್ತಿವಂತವೂ, ಸಫಲವೂ ಆದ ಅನ್ವಯದಿಂದ ನಾವು ಕಲಿಯುವದು ಇನ್ನೂ ಬಹಳವಿದೆ. ಬೃಹತ್ಪ್ರಮಾಣದ, ಅಸ್ಫೋಟನ ಮಟ್ಟದ ಜನಸಂಖ್ಯೆಯ ಸನ್ನಿವೇಶದಲ್ಲಿ, ನಮಗೆ ಒದಗಿ ಬಂದಿರುವ ರಾಷ್ಟ್ರೀಯ ಆರ್ಥಿಕವ್ಯವಹಾರದ ಸಮಸ್ಯೆಗಳನ್ನು ನಾವು ಬಗೆಹರಿಸಬೇಕಾಗಿದೆ— ಅದೂ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಆಗಬೇಕಾಗಿದೆ.

ನಮ್ಮ ಶೈಕ್ಷಣಿಕ ಗುರಿ, ಪದ್ಧತಿಗಳೆರಡನ್ನೂ ನಮ್ಮ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳಿಗೂ, ಈ ಕ್ಷಣದ ಆವಶ್ಯಕತೆಗಳಿಗೂ ಬಿಡದೆ ಹೊಂದಿಸಲೇ

ಬೇಕಾಗುವದೆಂಬುದು ಸುಸ್ಪಷ್ಟ. "ಪ್ರಯೋಜನರಹಿತ"(Useless)—ಅರ್ಥಾತ್, ಜೀವನದ ಆವಶ್ಯಕತೆಗಳಿಗೆ ನೇರವಾಗಿ ಸಂಬಂಧಿಸದ—ಎಂದು ಹೇಳಲಾದ ವಿಶ್ವ ವಿದ್ಯಾಲಯ ಶಿಕ್ಷಣವು ೧೯ನೇ ಶತಮಾನದ ಇಂಗ್ಲಂಡಿನ ಸಿರಿವಂತವರ್ಗದ ದೃಷ್ಟಿ ಯಲ್ಲಿ ಸಮಾಧಾನಕರವಾಗಿ ಕಂಡಿರಬಹುದು. ಆದರೆ ನಾವು ಮಾತ್ರ ನಮ್ಮ ಶೈಕ್ಷಣಿಕ ಗುರಿಗಳನ್ನು ಉಪಯುಕ್ತತೆಯ ಮಾನದಂಡದಿಂದಲೇ ಅಳೆಯಬೇಕಾ ಗುತ್ತದೆ. ವಿಜ್ಞಾನವೇ ಮಾತ್ರ ನಮ್ಮನ್ನುಳಿಸುವುದೆಂಪಾದರೆ, ನಾವು ಉದ್ದೇಶ ಪೂರ್ವಕವಾಗಿ ವಿಜ್ಞಾನದ ಬೆನ್ನಿಗೇ ಬೀಳಬೇಕಾಗುತ್ತದೆ. ಅತ್ಯಲ್ಪಕಾಲದಲ್ಲಿ ನಮ್ಮ ತರುಣರ ಶಿಕ್ಷಣ ಸಾಧ್ಯವಾಗುವದಕ್ಕೆ ಅತಿ ಪ್ರಗತಿಪರವಾದ ಶಿಕ್ಷಣ ವಿಧಾನಗಳು ಸಹಾಯಕವಾಗುವದಾದರೆ, ಅಂಥ ಅತ್ಯಾಧುನಿಕ ವಿಧಾನಗಳನ್ನೇ ನಾವು ಅನುಸರಿಸಬೇಕಾಗುತ್ತದೆ. ಜೀವವಿಜ್ಞಾನದ ತೀವ್ರ ಸಂಶೋಧನೆ ಯೊಂದರಿಂದ "ಒಂದಕ್ಕಿಮ್ಮಡಿ" ಉತ್ಪಾದನೆಗೆ ನೆರವಾಗುವದಾದರೆ, ನಾವೂ ಬಿಡದೆ ಆದರ ಬೆನ್ನು ಹತ್ತಬೇಕಾಗುತ್ತದೆ. ಅಂತೂ, ಪ್ರವರ್ಧಮಾನ ಸ್ತ್ರೀ-ಪುರುಷರಿಂದೊಡಗೂಡಿದ ನಮ್ಮ ಬೃಹಜ್ಜನತೆಗೆ ಅವರು ಸಮರ್ಥರೂ, ಪ್ರಯೋಜಕರೂ, ಎಲ್ಲಕ್ಕೂ ಹೆಚ್ಚಾಗಿ ದೃಢವಾದ ಆಶಾವಾದಿ ಮನೋಧರ್ಮ ವುಳ್ಳವರೂ ಆಗುವಂಥ ಶಿಕ್ಷಣವನ್ನು ಏರ್ಪಡಿಸಬೇಕಾಗುತ್ತದೆ. ಜೀವನವು ಸಂಪನ್ನವೂ, ಸಾರ್ಥಕವೂ ಆಗುವದು ಶಿಕ್ಷಣದಿಂದ. ಶಿಕ್ಷಣವೆಂಬುದು ಬರಿಯ ಒಂದು ಭೂಷಣವಾಗಲಿ, ಕೌಶಲ್ಯಮಾತ್ರವಾಗಲಿ ಆಗಿರದೆ ನಮ್ಮ ಸ್ವಂತಕ್ಕೂ ಸಮಾಜಕ್ಕೂ ಇಡಿಯ ಜಗತ್ತಿಗೂ ಸೇವೆಸಲ್ಲಿಸುವ ಉದ್ದೇಶಕ್ಕೆ ಸಮರ್ಥವಾದ ಸಾಧನವಾಗಿದೆ. ಈ ಶ್ರದ್ಧೆಯನ್ನು ನಾವು ನಮ್ಮ ತರುಣರ ಮನಸ್ಸಿನಲ್ಲಿ ಊರ ಬೇಕಾಗಿದೆ. ಅನೇಕ ಪ್ರಸಂಗಗಳಲ್ಲಿ, ಅಜ್ಞಾನದ ಮೂಲಕ ನಾವು ಸಿಡಿದು ಹೋಗುತ್ತಿದ್ದೇವೆ. ಅದರ ಪರಿಣಾಮವೆಂದರೆ ಹಿನ್ನಡೆ, ಅಸಾಮರ್ಥ್ಯ, ಅಪ-ನಂಬಿಕೆ, ಅಪಕಲ್ಪನೆ, ಮಾತ್ಸರ್ಯ ಮತ್ತು ಸಂದೇಹಗಳು. ಜ್ಞಾನ–ವಿಶಾಲವೂ, ಯಥಾರ್ಥವೂ ಆದ ಜ್ಞಾನ—ವೊಂದೇ ನಮ್ಮನ್ನು ಒಗ್ಗೂಡಿಸಬಲ್ಲದು. ಆದ ರಿಂದಲೇ ಪರಸ್ಪರ ತಿಳುವಳಿಕೆ, ಸಮಾಲೋಚನೆ, ಸಹಾಯ ಹಾಗೂ ನೈಪುಣ್ಯ-ಯುತ ಸಹಕಾರಗಳು ಸಾಧ್ಯ. ಅಂಥ ಸಹಕಾರದಿಂದಲೇ ಯುದ್ಧ, ದಾರಿದ್ರ್ಯ, ಸಾಮಾಜಿಕ ಭೇದಭಾವ, ಆರ್ಥಿಕ ಅಸಮಾನತೆಗಳನ್ನು ನಿವಾರಿಸಬಹುದು. ಹಾಗೆಯೇ ವಿವೇಕ (Reason) ಮತ್ತು ಮಧುರ ಮನೋಭಾವದಿಂದೊಡಗೂ ಡಿದ ಏಕ ಜಗತ್ತನ್ನು ನಿರ್ಮಿಸಬಹುದು. ಅದರಲ್ಲಿ, ನಿರಪಾಯಕಾರಿಯಾದ ಭಿನ್ನತೆಗಳಿಗಾಗಿ ಹೆಮ್ಮೆಪಡುತ್ತಿರುವಾಗಲೂ, ಯಥಾರ್ಥ ಮೌಲ್ಯ, ಮೂಲ ಭೂತ ಪ್ರಯೋಜನಗಳ ವಿಷಯಕ್ಕೆ ಸಂಬಂಧಪಟ್ಟು ಸಮಾನಾನುಭಾವದ ಮೂಲಕ ಗಾಢವಾದ ಐಕ್ಯ ಮನೋಧರ್ಮವನ್ನು ಮೆರೆಸಬಹುದು. ಅಮೇರಿ ಕದ ವಿಶ್ವವಿದ್ಯಾಲಯವೊಂದು 'ಮಾನವನು ತಿಳುವಳಿಕೆಯಿಂದಲೇ ಉದಾತ್ತ

ನಾಗುವ' ನೆಂಬ ನಂಬಿಗೆಯನ್ನೇ ಆಧರಿಸಿ ಸ್ಥಾಪಿತವಾಗಿದೆ. ಅದರಂತೆಯೇ ಎಲ್ಲ ವಿಶ್ವವಿದ್ಯಾಲಯಗಳೂ ಆಗಬೇಕಾದುದು ಆವಶ್ಯಕವಾಗಿದೆ.

ವಿಶ್ವವಿದ್ಯಾಲಯ ಮತ್ತು ಸಂವರ್ಧನೆ:

ಅಭಿವೃದ್ಧಿಪರವಾದ ರಾಷ್ಟ್ರವೊಂದರ ಆವಶ್ಯಕತೆಗಳಿಗೆ ತಕ್ಕುದಾದ ವಿಶ್ವವಿದ್ಯಾಲಯದ ನನ್ನದೇ ಆದ ಸಾಕಾರ ಕಲ್ಪನೆಯಿದು. ಈ ಧ್ಯೇಯಕ್ಕಾಗಿ ನಾವು ಹೆಣಗುತ್ತ ಮಾತ್ರ ಇದ್ದೇವೆ. ಆದರೆ ವಿಷಾದದ ಸಂಗತಿ ಎಂದರೆ, ಇದನ್ನು ಪೂರ್ತಿಯಾಗಿಯೂ, ಸಮರ್ಪಕವಾಗಿಯೂ ಸಾಧಿಸುವ ಭರವಸೆ ಮಾತ್ರ ಸಾಕಷ್ಟಿಲ್ಲ. ನನ್ನ ವಿಶ್ವವಿದ್ಯಾಲಯದಲ್ಲಿ ಮಾತ್ರ ಈ ಕೆಳಗಿನ ನಿಶ್ಚಿತ ಹಾಗೂ ವ್ಯವಹಾರ್ಯ ಧ್ಯೇಯಗಳು ಸಾಧ್ಯವಾಗುವಂತೆ, ಶಿಕ್ಷಣದ ಸಮಗ್ರ ವ್ಯವಸ್ಥೆಯನ್ನು ನವೀನ ದೃಷ್ಟಿ, ಪರಿಶೀಲನೆಗಳಿಗೊಳಪಡಿಸಲು ವ್ಯಾಪಹಾರಿಕ ಮಟ್ಟದಲ್ಲಿ ಪ್ರಯತ್ನಿಸಲಾಗುತ್ತಿದೆ.

(i) ಪ್ರತಿ ವಿಷಯದ ಪಠ್ಯಕ್ರಮವನ್ನೂ, ಉಪಯುಕ್ತತೆಯನ್ನು ಕಳೆದುಕೊಂಡ ಅಂಶಗಳನ್ನೆಲ್ಲ ಕೈಬಿಟ್ಟು, ಇಂದಿನ ಸಮಾಜ ಜೀವನಕ್ಕೂ, ಆಧುನಿಕ ಜಗತ್ತಿನ ಆಶೋತ್ತರಗಳಿಗೂ ಸಂಬಂಧಪಡುವಂತೆ, ಅವಶ್ಯಕಂದರೆ, ಪೂರ್ತಿ ಪುನಃ ರೂಪಿಸುವದು. ವಿದ್ಯಾರ್ಥಿಗಳಿಂದ ಅತಿಹೆಚ್ಚಿನ ಕ್ರಿಯಾಶೀಲತೆ, ಸ್ವಪ್ರೇರಿತ ಮುನ್ನಡೆ ಅಭಿವ್ಯಕ್ತವಾಗುವಂತೆ, ಪಠ್ಯಕ್ರಮ-ಅಧ್ಯಾಪನಕ್ರಮಗಳು ಕೈಗೂಡಿಸಿ ನಡೆಯಬೇಕಾಗಿವೆ.

(ii) ಕಾಲೇಜುಗಳೂ, ವಿಶ್ವವಿದ್ಯಾಲಯಗಳೂ ಪರಮ ಶ್ರದ್ಧಾಯುತ (Impassioned) ಪರಿಗ್ರಹಸಾಧಕ (Infections) ಮತ್ತು ಪ್ರಮಾಣವರ್ಧಕ (Broadning) ವಿದ್ಯೆಯಿಂದ ಪರ್ಯಾಪ್ತವಾದ ಎದೆಗಳಾಗಿ ಬೆಳೆಯುವದಕ್ಕೆ ತಕ್ಕ ಪ್ರಾಧ್ಯಾಪಕ ವರ್ಗವನ್ನು ಪಡೆದಿರುವಂತೆ ನೋಡಿಕೊಳ್ಳುವದು. ಮತ್ತು ಆದೇಕಾಲಕ್ಕೆ ಪರದೇಶದ ಪ್ರಾಧ್ಯಾಪಕರು, ಶೈಕ್ಷಣಿಕ ಪದ್ಧತಿಗಳೊಡನೆಯ ಸಂಪರ್ಕದ ಮೂಲಕ ಅಧ್ಯಾಪನಪದ್ಧತಿಯನ್ನು ಅತ್ಯಾಧುನಿಕಗೊಳಿಸುವದು.

(iii) ಮಾರ್ಗದರ್ಶನ (Tutorial) ಮತ್ತು ಚರ್ಚಾ (Seminar) ಪದ್ಧತಿಗಳನ್ನು ತೀವ್ರಗೊಳಿಸುವದರ ಜೊತೆಗೆ, ಸ್ವಶಿಕ್ಷಣ – ಮತ್ತು ಗ್ರಂಥಾಲಯಗಳ ಉಪಯೋಗಗಳಿಗೆ ಅಧಿಕ ಮಹತ್ವವನ್ನು ನೀಡುವದು.

(iv) ಹೆಚ್ಚು ಹೆಚ್ಚಿನ ಸಂಶೋಧನೆಗೆ ಪ್ರೋತ್ಸಾಹವೀಯುವದಲ್ಲದೆ, ಅಧ್ಯಾಪನ-ಸಂಶೋಧನೆಗಳ ನಡುವಿನ ಸಂಬಂಧ ಗಾಢತರವಾಗುವಂತೆ ಏರ್ಪಡಿಸುವದು. ಇದರಿಂದ ಸಂಶೋಧನೆ-ಅಧ್ಯಾಪನಗಳು ಅನ್ಯೋನ್ಯ ಸಾಮರ್ಥ್ಯ-

ಚೈತನ್ಯದಾಯಿಗಳಾಗುವವು; ವಿಶ್ವವಿದ್ಯಾಲಯ ಶಿಕ್ಷಣವು ಜ್ಞಾನಪ್ರಸಾರದ ಜೊತೆಯಲ್ಲಿಯೇ ಜ್ಞಾನ ಪರಿವರ್ಧನೆಯನ್ನೂ ಸಾಧಿಸುವ ನಿಶ್ಚಿತಸಾಧನವಾಗಿ, ಸಿದ್ಧಾಂತ-ಅನ್ವಯ, ಭೂತ-ಭವಿಷ್ಯತ್ತುಗಳ ನಡುವಿನ ಸೇತುವೆಯಾಗುವದು. ಇತ್ತೀಚಿನ ಅಭಿಪ್ರಾಯದಂತೆ, ವಿದ್ಯಾರ್ಥಿಯೇ ಆಗಲಿ, ಪ್ರಾಧ್ಯಾಪಕರೇ ಆಗಲಿ ಮಲೆತ ಮಡುವನ್ನು ಬಿಟ್ಟು, ಹರಿವ ತೊರೆಯಿಂದ ಜ್ಞಾನಾರ್ಜನೆ ಮಾಡುವಂತಾಗುವದೇ ಲೇಸು.

(v) ವಿದ್ಯಾರ್ಥಿಯ ನೈಜಯೋಗ್ಯತಾ ಮಾಪಕವಾಗುವಂತೆ ಪರೀಕ್ಷಾ ಪದ್ಧತಿಯನ್ನು ಸಮಗ್ರವಾಗಿ ಸಮಂಜಸ ವ್ಯವಸ್ಥೆಗೊಳಪಡಿಸುವದು ಮತ್ತು ಯಾವದೇ ಪರೀಕ್ಷಾಕ್ರಮವನ್ನೂ ಸಂದೇಹದೃಷ್ಟಿಯಿಂದ ಕಾಣುವ ಮನೋಧರ್ಮವನ್ನು ಭರದಿಂದ ಬೆಳೆಸಿಕೊಳ್ಳುತ್ತಿರುವ ತರುಣ ಜನಾಂಗಕ್ಕೆ, ಅದರ ಔಚಿತ್ಯ, ಅವಶ್ಯಕತೆ, ನಿಷ್ಪಕ್ಷಪಾತತೆಗಳ ವಿಷಯದಲ್ಲಿ ಬಲವಾದ ವಿಶ್ವಾಸ ಬೆಳೆಯುವಂತೆ ತಿಳವಳಿಕೆ ನೀಡುವದು.

(vi) ದ್ವಿ-ಸಂಸ್ಕೃತಿಗಳ ಸಿದ್ಧಾಂತವನ್ನು ಒಪ್ಪಿಕೊಳ್ಳುವದರ ಬದಲು ಆವೆರಡೂ ಸಂಸ್ಕೃತಿಗಳು ಅನ್ಯೋನ್ಯಪೂರಕವೂ, ಪೋಷಕವೂ ಆಗುವಂತೆ ನೋಡಿಕೊಳ್ಳುವದು, ಅವುಗಳ ಪರಸ್ಪರ ಪ್ರಭಾವದಿಂದಾಗಿ, ಮಾನವೀಯ ವ್ಯಕ್ತಿತ್ವದ ಪರಿಪೂರ್ಣ ಬೆಳವಣಿಗೆಗೆ ಅನುಕೂಲವಾದ ಹೊಸ ಸಾಮರಸ್ಯ, ಮುನ್ನಡೆಯ ಪ್ರಯತ್ನ ಆವಿರ್ಭವಿಸಬಹುದು. ನಮ್ಮ ಗುರಿ ಸ್ಪಷ್ಟ: ಬೌದ್ಧಿಕ ವಿಸ್ತಾರ ಸಾಧ್ಯವಾಗುವಂತೆ ಮೂಲಭೂತ ವಿಜ್ಞಾನದ ವಿನಿಯೋಗದ ಮೂಲಕ ಮನಸ್ಸಿನ ಮಣಿಬಲ್ಲತನ (Flexibility) — ಅರ್ಥಾತ್, ವಿದ್ಯಾರ್ಥಿಯನ್ನು ಯಾವ ಅಗತ್ಯಕ್ಕೇ ಆಗಲಿ, ತನ್ನ ವ್ಯಾಸಂಗ ಇಲ್ಲವೆ ವೃತ್ತಿಗೆ ಸಂಬಂಧಪಟ್ಟ ಪರಿವರ್ತನಕ್ಕೇ ಆಗಲಿ ಸಿದ್ಧನಾಗಿರುವಂತೆಸಗುವದು ಮತ್ತು ಅದೇ ಕಾಲಕ್ಕೆ ಸ್ವಂತದ ಬೆಳವಣಿಗೆಯ ಆಂತರಿಕ ಆವಶ್ಯಕತೆಗನುಸಾರವಾಗಿ ಕೆಲ ಸೃಷ್ಟ್ಯಾತ್ಮಕ ಮೌಲ್ಯ, ದೃಷ್ಟಿಕೋನಗಳನ್ನು ಪಡೆಯುವದಕ್ಕೂ, ಅವುಗಳನ್ನೇ ಪರಿವರ್ತಿಸುವ ಸಾಮರ್ಥ್ಯಸಿದ್ಧತೆಗಳನ್ನು ಹೊಂದಿರುವದಕ್ಕೂ ತಕ್ಕವನನ್ನಾಗಿ ಮಾಡುವದು.

(vii) ವಿಶ್ವವಿದ್ಯಾಲಯಕ್ಕೆ ಅತಿ ಹೆಚ್ಚಿನ ಪ್ರಮಾಣದ ಸ್ವಾಯತ್ತತೆ (Autonomy) ದೊರಕುವಂತೆ ಯೋಜನೆಗಳನ್ನು ಕೈಗೊಳ್ಳುವದು. ಮತ್ತು ಅದೇ ಕಾಲಕ್ಕೆ, ಶಿಕ್ಷಣ ಮತ್ತು ಶೀಲ ನಿರ್ಮಾಣದ ಧ್ಯೇಯಗಳಿಗೆ ವಿಸಂಗತವಾಗದ ಮಟ್ಟದಲ್ಲಿ ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರುಗಳಲ್ಲಿ ಅತ್ಯಧಿಕ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಿ, ಪರಿಪೋಷಿಸುವದು, ಸ್ವಾತಂತ್ರ್ಯದ ವಾತಾವರಣದಲ್ಲಿಯಲ್ಲದೆ, ಬುದ್ಧಿಯ ಪೂರ್ಣಾನುಸಂಧಾನ ಸಾಧ್ಯವಾಗದು; ಅದೇ ರೀತಿಯಲ್ಲಿ, ಬಾಹ್ಯ ಕಟ್ಟು-ಕಟ್ಟಳೆಗಳಿಂದ ಶೀಲನಿರ್ಮಾಣವು ಒದಗದು.

ಮಹನೀಯರೊಬ್ಬರ ಅಭಿಪ್ರಾಯದ ಪ್ರಕಾರ, ಶೀಲವು ಇತರ ಕ್ರಮಗಳಿಂದ ಪರ-ಪ್ರೇರಿತವಾಗಿ ಆವಿರ್ಭವಿಸಿದಾಗ ಬರಿಯ ಭಾರಭೂತವಾಗುತ್ತದೆ.

(viii) ಭೌತಿಕ ವಿಜ್ಞಾನ, ಸಾಮಾಜಿಕ ವಿಜ್ಞಾನ ಮತ್ತು ಮಾನವೀಯ ಶಿಕ್ಷಣ ಮುಂತಾದ ವ್ಯಾಸಂಗ ಕ್ರಮಗಳ ಮೂಲಕ ಮಾನವೀಯ ಗೌರವ ಹಾಗೂ ಸಕಲಕಾರ್ಯಗಳ ಘನತೆಯ ಪ್ರಜ್ಞೆ ಒಡಮೂಡುವಂತೆಸಗುವದು; ಪ್ರತಿಯೊಬ್ಬ ಪುರುಷನೂ, ಸ್ತ್ರೀಯೂ ತನ್ನ ತನ್ನ ಕ್ಷೇತ್ರ ಮತ್ತು ಪ್ರಮಾಣಕ್ಕನುಸಾರವಾಗಿ ಪ್ರಜಾಪ್ರಭುತ್ವದ ಅರ್ಥಯೋಜನೆಯನ್ನು ರೂಪಿಸಬೇಕಾದ ತೀವ್ರ ಹೊಣೆಗಾರಿಕೆಯ ಒಟ್ಟಿನ ಪ್ರಯತ್ನದ ಪ್ರಗತಿ ಮತ್ತು ಯಶೋಸಾಧನೆಯಲ್ಲಿ ತಾವೂ ಪಾಲುಗಾರರಾಗಬೇಕೆಂಬ ಭಾವವನ್ನು ವಿದ್ಯಾರ್ಥಿಗಳಲ್ಲಿ ಪ್ರೇರಿಸುವದು; ಎಲ್ಲ ಬಗೆಯ ಸೇವೆಗಳ ಪಾವಿತ್ರ್ಯವೂ ಸೇರಿದಂತೆ ನೈಜ ನೈತಿಕ-ಮೌಲ್ಯಗಳ ಮತ್ತು ವಿಜ್ಞಾನಗಳ ನಿಯಮ (Law) ಪ್ರಜ್ಞೆ, ಮಾನವೀಯ ಶಿಕ್ಷಣದಲ್ಲಿಯ ರೂಪ (Form) ಪ್ರಜ್ಞೆ ಸಕಲ ವಸ್ತುಗಳ ಉಚ್ಚ ವಿನಿಯೋಗದ ಪ್ರಜ್ಞೆಗಳ ಪರಿಣಾಮವಾಗಿ ಒದಗುವ ಕ್ರಮಸ್ಥಿತಿ, ಸಾಮರಸ್ಯ (Order and harmony) ಭಾವದಿಂದ ಸಹಜವಾಗಿ ಒಡಮೂಡುವ ಸ್ವ-ನಿಯಮನ (descipline) ಮೂಲಾವಶ್ಯಕತೆಗಳನ್ನು ಬಿಂಬಿಸುವದು. ಇವುಗಳಿಂದಾಗಿ, ನಮ್ಮ ವಿಶ್ವವಿದ್ಯಾಲಯ ಶಿಕ್ಷಣವು ಮನುಷ್ಯನ ಅಂತರಾತ್ಮದ ಅಸ್ತಿತ್ವವನ್ನು ಎತ್ತಿಸಾರಲು ತಕ್ಕುದಾಗುವುದು; ಆ ಆತ್ಮದಿಂದ ಸೂಸಿ ಬರುವ ಬೆಳಕು-ಜಲವುಗಳಲ್ಲಿ ಎಲ್ಲರೂ ಒಂದಾಗುವದು.

ನಿಜ, ಮಾನವನ ಆಧ್ಯಾತ್ಮಿಕ ಪ್ರವೃತ್ತಿಯಲ್ಲಿ ನನಗೆ ವಿಶ್ವಾಸವಿದೆ. ಅವನ ಆತ್ಯಂತಿಕ ಹಿರಿಮೆಗೆ ಕಾರಣ ಅವನ ಆತ್ಮಾನ್ನತವೇ ಆದರೆ ಮಾನವನೂ ಭೌತಿಕ ಅವಶ್ಯಕತೆಗಳುಳ್ಳ ಪ್ರಾಣಿ; ಈ ಅವಶ್ಯಕತೆಗಳನ್ನು ತಕ್ಕಮಟ್ಟಿಗೆ ಪೂರೈಸುವದರಿಂದಲೇ ಅವನ ಅಂತರಾತ್ಮದ ಅತ್ಯುಚ್ಚಧ್ಯೇಯಗಳು ಉತ್ತಮ ರೀತಿಯಲ್ಲಿ ಸಾಧಿಸಲ್ಪಡುತ್ತವೆ.—ಎಂದು ನಾನು ದೃಢವಾಗಿ ನಂಬುತ್ತೇನೆ ಆದ್ದರಿಂದಲೇ ನಮ್ಮ ವಿಶ್ವವಿದ್ಯಾಲಯದ ಮೊದಲ ಬೆಳವಣಿಗೆಗಳಿಂದಾಗಿ ನಾನು ಮುಂದಿಸಿದ ಯೋಜನೆಗಳಲ್ಲಿ ನೈರ್ಮಲ್ಯೀಕರಣ (Sanitation), ಮೀನುಗಾರಿಕೆ, ಕೃಷಿ ಮುಂತಾದ ಶುದ್ಧ ವಿಜ್ಞಾನವನ್ನು ವ್ಯಾವಹಾರಿಕ ಪ್ರಯೋಜನೆಗಳಿಗೆ ಬಳಸುವ ವಿಭಾಗಗಳಿದ್ದವು. "ಮನುಷ್ಯನು ರೊಟ್ಟಿಯೊಂದರಿಂದಲೇ ಬದುಕುವದಿಲ್ಲ ನಿಜ. ಆದರೆ ರೊಟ್ಟಿಯಿಲ್ಲದಿದ್ದರೆ ಅವನು ಬದುಕುವದೇ ಇಲ್ಲ." ನಾನಿನ್ನೂ ತರುಣನಿರುವಾಗಲೇ, ಗ್ರಾಮೀಣ ಯಂತ್ರ ವಿಜ್ಞಾನ (Engineery)ದ ಮೇಲೊಂದು ಮಹಾಪ್ರಬಂಧವನ್ನು ಬರೆದೊಪ್ಪಿಸಿದ್ದೆ. ಆದಕ್ಕಾಗಿ ನಾನು ಮಾಡಿದ್ದಿಷ್ಟೇ! ನೀರು, ಕಾಲುವೆ, ವಿದ್ಯುದೀಕರಣ, ಒಳಚರಂಡಿ ವ್ಯವಸ್ಥೆ, ಸಂಪರ್ಕ, ಉದ್ಯಮ

ಮುಂತಾದ ಮೂಲಭೂತವಾದ ಭೌತಿಕ ಆವಶ್ಯಕತೆಗಳು ಪೂರಯಿಸಲ್ಪಡು ವಂಥ ಮಾದರಿಯ ಗ್ರಾಮವನ್ನು ಯೋಜಿಸಿದ್ದು. ಅದೇ ದೃಷ್ಟಿಯಿಂದಲೇ ವಿಶ್ವ ವಿದ್ಯಾಲಯವೊಂದನ್ನೂ ನಾನು ಯೋಜಿಸಬಯಸುವೆ; ಬುದ್ಧಿ–ಆತ್ಮಗಳ ಉಚ್ಚತಮ ಆವಶ್ಯಕತೆಗಳನ್ನೆಲ್ಲ ಪೂರೈಸುವ ಎಡೆಯಾಗಬೇಕಾಗಿದೆ ಅದು. ಹಾಗೆಯೇ ಅಭಿವೃದ್ಧಿ ಪರ ಅರ್ಥ ಯೋಜನೆಯ ಹಲವು ವಿಭಾಗಗಳಲ್ಲಿ ಉಪ ಯುಕ್ತ ಸೇವಾಕಾರ್ಯಕ್ಕೆ ಯುವಕ ಯುವತಿಯರನ್ನು ಆಣಿಗೊಳಿಸುವ ಕಣ ವಾಗಬೇಕಾಗಿದೆ ಅದು. ಹಾಗಾದರೆ ಮಾತ್ರ ಅವರೆಲ್ಲರೂ ಸಾರ್ವಜನಿಕ ಮನೋ ಧರ್ಮ ಹಾಗೂ ಸಾಮಾಜಿಕ ಹೊಣೆಗಾರಿಕೆಯ ಪ್ರಜ್ಞೆಯಿಂದ ಕೂಡಿ ಮಹಾ ಕಾರ್ಯಕ್ಕೆ ಹೆಗಲೊಡ್ಡುವದರಲ್ಲಿ ಸಂತೋಷವನ್ನೂ, ಅಭಿಮಾನವನ್ನೂ ತಾಳು ವಂತಾಗುವದು.

★ **ಡಾ॥ ಎ. ಎಸ್. ಅಡಕೆ**

ಶಾಸನ ಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೧೦, ಭಾಗ ೧)

(ಕಳೆದ ಸಂಚಿಕೆಯಿಂದ)

ಮ

(ಮುಂದುರಿಯುವುದು)

ಗ್ರಂಥಾವಲೋಕನ

" ಕರ್ನಾಟಕದ ಅರಣ್ಯವೃಕ್ಷಗಳು " ಎಂಬ ಈ ಪುಸ್ತಕ ಶ್ರೀಯುತ ಎಸ್. ಎಸ್. ರಾಮಸ್ವಾಮಿಯವರಿಂದ ಬರೆಯಲ್ಪಟ್ಟಿರುವ ಒಂದು ಉತ್ತಮವಾದ ಪ್ರಥಮಕೃತಿ. ಈ ಪುಸ್ತಕವನ್ನು ಅವರು ಬಹು ಶ್ರಮವಹಿಸಿ ಬರೆದಿದ್ದಾರೆ. ಈ ಹೊತ್ತಿಗೆ ಕನ್ನಡ ಜನತೆಗೆ, ಸಸ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಹಾಗೂ ಅರಣ್ಯ ಮತ್ತು ವ್ಯವಸಾಯ ಇಲಾಖೆಗಳ ಆಡಳಿತವರ್ಗದವರಿಗೆ ಅಗತ್ಯವಾಗಿರಬೇಕಾದ ಒಂದು ಉಪಯುಕ್ತ ಪುಸ್ತಕವಾಗಿದೆ, ಪುಸ್ತಕವನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಈ ಕೃತಿಯೂ ಶ್ರೀಯುತರ ಒಂದು ಸಂಶೋಧನಾ ಫಲವೆ ಎಂದು ಹೇಳಬಹುದು.

ಶ್ರೀಯುತರು ತಮ್ಮ ' ಲೇಖಕನ ಮಾತು ' ಎಂಬುದರಲ್ಲಿ ಇಂತಹ ಒಂದು ಪುಸ್ತಕವನ್ನು ಬರೆಯುವ ಕಾರ್ಯಕ್ಕೆ ತಾವು ಕೈಹಾಕಲು ಕೂಡಿ ಬಂದ ಪ್ರಸಂಗಗಳು, ಮೂಡಿ ಬಂದ ಉತ್ಸಾಹಸ್ಫೂರ್ತಿಗಳು ಮತ್ತಿತರ ಎಡರು-ತೊಡರುಗಳ ಬಗ್ಗೆ ನಿರೂಪಣೆ ನೀಡಿದ್ದಾರೆ. ಸಸ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಇಂತಹ ಒಂದು ಪುಸ್ತಕದಲ್ಲಿ ಅವರು ಬಳಸಿರುವ ಹೃದ್ಯ ಹಾಗೂ ಸರಳ ಶೈಲಿ-ಯನ್ನು ನೋಡಿದರೆ ಶ್ರೀಯುತರ ಭಾಷಾಸಂಪತ್ತಿನ ಅರಿವು ಎಂಥವರಿಗೂ ಮನದಟ್ಟಾಗುತ್ತದೆ. ಕೆಲವೊಮ್ಮೆ ಅವರ ವಿವರಣೆಗಳು ಸುಂದರವಾಗಿದ್ದು ಕಾವ್ಯಮಯವಾಗಿವೆ.

ನಮ್ಮ " ಪೀಠಿಕೆ " ಎಂಬ ಅಧ್ಯಾಯದಲ್ಲಿ ಶ್ರೀ ರಾಮಸ್ವಾಮಿಯವರು ಕರ್ನಾಟಕದ ಅರಣ್ಯಗಳ ಪ್ರಾಚೀನತೆ, ಇತಿಹಾಸ ಕಾಲದಿಂದಲೂ ರಾಜ್ಯ ಉಳಿಸಿ, ಬೆಳೆಸಿಕೊಂಡು ಬಂದಿರುವ ಅರಣ್ಯ ಸಂಪತ್ತು, ಪ್ರಾಚೀನಕಾಲದಲ್ಲಿ ಕರ್ನಾಟಕ ಪರದೇಶಗಳೊಡನೆ ಹೊಂದಿದ್ದ ಅರಣ್ಯ ವಸ್ತುಗಳ ವ್ಯಾಪಾರ ಸಂಪರ್ಕ, ಕರ್ನಾಟಕದಲ್ಲಿ ಬ್ರಿಟಿಷರ ಕಾಲದಲ್ಲಿ ಸ್ಥಾಪಿತವಾದ ಅರಣ್ಯ ಶಾಖೆಯ ಇತಿಹಾಸ ಮತ್ತು ಸಂಶೋಧನಾಭಿವೃದ್ಧಿ ಕಾರ್ಯ ಮುಂತಾದ ವಿಷಯಗಳನ್ನು ವರ್ಷಾನುಕ್ರಮವಾಗಿ ವಿವರಿಸಿದ್ದಾರೆ.

ಕರ್ನಾಟಕ ಅರಣ್ಯ ಪ್ರದೇಶಗಳ ವೈವಿಧ್ಯತೆಯನ್ನು ಹವಾಮಾನ, ವಾರ್ಷಿಕ ಮಳೆ, ಭೂಮಿಯರೀತಿ, ಆಯಾ ಪ್ರದೇಶಗಳಲ್ಲಿರುವ ಪ್ರಬಲ ವೃಕ್ಷಗಳು, ಮುಂತಾದವನ್ನೆಲ್ಲಾ ಗಣನೆಗೆ ತೆಗೆದುಕೊಂಡು, ಕರ್ನಾಟಕದ ಅರಣ್ಯಗಳನ್ನು ೫ ವಿಧಗಳಾಗಿ ವಿಂಗಡಿಸಿದ್ದಾರೆ. ವಿಂಗಡಿಸಿದ ಈ ವಿವಿಧ ಅರಣ್ಯಗಳನ್ನು ಕರ್ನಾಟಕದ ನಕ್ಷೆಯಲ್ಲಿ ಚಿತ್ರಿಸಿದ್ದಾರೆ. ಈ ಪ್ರತಿಯೊಂದು ವಿಭಾಗದಲ್ಲೂ ಇರುವ ವೈವಿಧ್ಯತೆ, ಸಮುದ್ರಮಟ್ಟಕ್ಕೆ ಆ ಪ್ರದೇಶಗಳು ಇರುವ ಎತ್ತರ, ಅಲ್ಲಿಯ ಖನಿಜಸಂಪತ್ತು, ಖರತ್ವ, ಮಾರುತಗಳು, ವೃಕ್ಷಗಳ ಬೆಳವಣಿಗೆಗೆ ಆ ದೇಶಗಳಲ್ಲಿ ಸ್ವಾಭಾವಿಕ ಅನುಕೂಲಗಳು ಹಾಗೂ ಅನಾನುಕೂಲಗಳು ಮುಂತಾದ ವಿಷಯ

ಗಳನ್ನೆಲ್ಲಾ ಲೇಖಕರು ಅಂಕೆಸಂಖ್ಯೆಗಳ ಸಹಿತವಾಗಿ ವಿವರಿಸಿದ್ದಾರೆ. ವಿವಿಧ ಅರಣ್ಯಗಳಲ್ಲಿ, ವಿವಿಧ ಹಂತಗಳಲ್ಲಿ ಕಂಡು ಬರುವ ತರುಲತೆಗಳ ಪಟ್ಟಿಯನ್ನೆಲ್ಲಾ ಸಸ್ಯಶಾಸ್ತ್ರದ ಹೆಸರು ಮತ್ತು ಅವುಗಳ ಕನ್ನಡದ ಹೆಸರುಗಳ ಸಹಿತವಾಗಿ ಕೊಟ್ಟಿದ್ದಾರೆ.

ಈ ಪುಸ್ತಕದಲ್ಲಿ ಒಟ್ಟು ೫೨೫ ಮರಗಳ ವರ್ಣನೆಯಿದೆ. ಇವುಗಳನ್ನು ವರ್ಣಮಾಲೆಯ ಅಕ್ಷರಗಳ ಸರಣಿಯಲ್ಲಿ ವಿವರಿಸಲಾಗಿದೆ. ಪ್ರತಿ ಮರವನ್ನು ವಿವರಿಸುವಾಗಲೂ, ಆಯಾ ಮರದ ಭೌಗೋಲಿಕ ವಿವರಣೆ, ಸಸ್ಯಶಾಸ್ತ್ರದ ವಿವರಣೆ, ಮತ್ತು ಅದನ್ನು ಬೆಳೆಸುವ ಬಗೆ, ಅವುಗಳ ಆರ್ಥಿಕ ಪ್ರಾಮುಖ್ಯತೆ ಮತ್ತು ಉಪಯೋಗಗಳು ಇವುಗಳ ಬಗ್ಗೆ ವಿಶದವಾಗಿ ವಿವರಣೆ ನೀಡಿದ್ದಾರೆ. ಪ್ರತಿ ಮರವನ್ನು ವಿವರಿಸುವಾಗಲೂ ಮೊದಲು ಕೊಟ್ಟಿರುವ ಸಾಮಾನ್ಯ ವರ್ಣನೆಯಲ್ಲಿ ವೃಕ್ಷಗಳು ಬೆಳೆಯುತ್ತಿರುವ ಪ್ರದೇಶ ಅಥವ ಸ್ಥಳಗಳ ಹೆಸರು, ಆ ಸ್ಥಳಗಳು ಸಮುದ್ರಮಟ್ಟಕ್ಕಿರುವ ಎತ್ತರ ಆ ಮರಗಳನ್ನು ಬೆಳೆಸುವ ಪದ್ಧತಿಗಳು ಇವುಗಳ ಬಗ್ಗೆ ವಿವರಣೆ ಇತ್ತಿದ್ದಾರೆ. ಸಸ್ಯಶಾಸ್ತ್ರದ ವಿವರಣೆಯಲ್ಲಿ ಮರದ ಕುಟುಂಬದ (family) ಹೆಸರು ಸಸ್ಯಶಾಸ್ತ್ರದ ಪ್ರಕಾರ ಅವನ್ನು ಗುರುತುಹಿಡಿಯಲುಬೇಕಾದ ಗುಣಗಳು, ಮರದ ಕಾಂಡ, ಎಲೆ, ಹೂವುಗಳು, ಕಾಯಿಗಳು ಇವುಗಳ ವರ್ಣನೆ ಇದೆ. ವರ್ಣ ತಂತುಗಳ (Chromosomes) ಸಂಖ್ಯೆಯನ್ನೂ ಕೊಡಲಾಗಿದೆ. ಅಲ್ಲಲ್ಲಿ ಕೆಲವು ಛಾಯಾಚಿತ್ರಗಳನ್ನೂ ನೀಡಲಾಗಿದೆ. ಉಪಯೋಗಗಳ ಬಗ್ಗೆ ಬಹು ಕೂಲಂಕಷವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮರದ ವಿವಿಧ ಭಾಗಗಳನ್ನೂ ಉಪಯೋಗಿಸಿಕೊಳ್ಳುವ ವಿಧಾನ, ಅವುಗಳನ್ನು ಬೆಳೆಸುವಿಕೆ, ಕೈಗಾರಿಕೆಗಳಲ್ಲಿ ಅವುಗಳ ಪಾತ್ರ, ವ್ಯಾಪಾರ ಮತ್ತು ವೈದ್ಯಕೀಯ ದೃಷ್ಟಿಯಿಂದ ಅವುಗಳ ಪ್ರಾಮುಖ್ಯತೆ ಮುಂತಾದುವನ್ನೇ ವಿಶದೀಕರಿಸಿದ್ದಾರೆ. ಸಂಸ್ಥೆಗಳು ಹಾಗೂ ಸಾಮಾನ್ಯ ಜನರು ಈ ಮರಗಳಿಂದ ಸಣ್ಣ ಹಾಗೂ ದೊಡ್ಡ ಪ್ರಮಾಣದ ಉಪಯೋಗಗಳನ್ನು ಹೇಗೆ ಪಡೆದುಕೊಳ್ಳಬಹುದು ಎಂಬ ಬಗ್ಗೆ ಸಲಹೆಗಳನ್ನೂ, ಸೂಚನೆಗಳನ್ನೂ ಮನಮುಟ್ಟುವಂತೆ ಕೊಟ್ಟಿದ್ದಾರೆ.

ಪುಸ್ತಕದ ಕೊನೆಯಲ್ಲಿ ವರ್ಣಿತಮರಗಳ ಪಟ್ಟಿಯೊಂದನ್ನು ಕೊಟ್ಟು, ಆ ವೃಕ್ಷಗಳ ಸಸ್ಯಶಾಸ್ತ್ರದ ಹೆಸರುಗಳು ಮತ್ತು ಆಯಾಮರಗಳು ವರ್ಣಿತವಾಗಿರುವ ಪುಟಗಳ ಸಂಖ್ಯೆ ಇಷ್ಟನ್ನೆಲ್ಲಾ ಕೊಟ್ಟಿದ್ದಾರೆ. ಇದೊಂದು ನಿಜಕ್ಕೂ ಪ್ರಶಂಸನಾರ್ಹ ಉಪಯುಕ್ತ ಕೆಲಸವಾಗಿದೆ. ಲೇಖಕರು ಕೊಟ್ಟಿರುವ "ಗ್ರಂಥಋಣ"ವನ್ನು ಪರಿಶೀಲಿಸಿದರೆ ಅವರು ಈ ಪುಸ್ತಕವನ್ನು ಬರೆಯುವ ಮೊದಲು ಈ ವಿಷಯಕ್ಕೆ ಸಂಬಂಧಿಸಿದ ಹಿಂದಿನ ಅನೇಕ ಪ್ರಕಟನೆಗಳನ್ನು ಕೂಲಂಕಷವಾಗಿ ಓದಿ ತಿಳಿದುಕೊಂಡಿರುವುದು ಗಮನಕ್ಕೆ ಬರುತ್ತದೆ.

ನಮ್ಮ ದೇಶಕ್ಕೂ ಮತ್ತು ರಾಜ್ಯಕ್ಕೂ ಇರುವ ಒಂದು ಮುಖ್ಯ ಆದಾಯದ ಭಂಡಾರವೆಂದರೆ ನಮ್ಮ ಅರಣ್ಯಸಂಪತ್ತು. ಅರಣ್ಯಗಳು ತಮ್ಮದೇ ಆದ ರೀತಿಯಲ್ಲಿ ಹವಾಮಾನದ ಮೇಲೆ ನಿಯಂತ್ರವಿಟ್ಟುಕೊಂಡಿರುವುದರಿಂದ ಮುಂದಿನ ಮಾನವಪೀಳಿಗೆಯ ಹಿತದೃಷ್ಟಿಯಿಂದ ಅವನ್ನು ಪೋಷಿಸಿ, ಬೆಳೆಸುವುದು ಕ್ಷೇಮಕರ ವಿಷಯವಾಗಿದೆ. ಅರಣ್ಯವೃಕ್ಷಗಳನ್ನು ಕಂಡಲ್ಲಿ ಪುನರುಜ್ಜೀವನಗೊಳಿಸಿ, ಹೆಚ್ಚಾಗಿ ಬೆಳೆಸಬೇಕಾದದ್ದು ಅನಿವಾರ್ಯ. ಹಾಗಲ್ಲದೆ, ಒಂದೇಸಮನೆ ಅವನ್ನು ಕಡಿದು ಹಾಳುಮಾಡುತ್ತಾ ಹೋದರೆ ದೇಶಕ್ಕೆ ಹಾನಿ. ಲೇಖಕರು ಈ ದೃಷ್ಟಿಯಿಂದ ಹಾಗೂ ಆಗುವ ದುರಂತಗಳನ್ನು ತಪ್ಪಿಸುವ ದೃಷ್ಟಿಯಿಂದ ಸಾಮಾನ್ಯ ಜನತೆಯೂ ಪ್ರಶಂಶಿಸುವಂತೆ ಮನಮುಟ್ಟುವ ಶೈಲಿಯಲ್ಲಿ ತಮ್ಮದೇ ಆದ ರೀತಿಯಲ್ಲಿ ಕನ್ನಡನಾಡಿನ ಜನತೆಯನ್ನು ಅರಣ್ಯ ನಿರ್ಮೂಲನದಿಂದ ಆಗುವ ಅಪಾಯಗಳ ಬಗ್ಗೆ ಎಚ್ಚರಿಸಿದ್ದಾರೆ. ತಪಸ್ವಿಗಳಂತೆ ಮರ-ಮರಕ್ಕೂ ಊರೆನ್ನದೆ ಕಾಡೆನ್ನದೆ ತಿರುಗಿ ಸರ್ವರೀತಿಯಿಂದಲೂ ಎಲ್ಲ ವಿವರಗಳನ್ನೂ ಸಂಗ್ರಹಿಸಿ ಸರಳಗನ್ನಡದಲ್ಲಿ ಈ ಪುಸ್ತಕವನ್ನು ಬರೆದಿರುವ ಶ್ರೀ ಎಸ್. ಎಸ್. ರಾಮಸ್ವಾಮಿಯವರ ಪ್ರಯತ್ನವು ಅವರ ಪ್ರಥಮ ಹೆಜ್ಜೆಯಾದರೂ ಅದು ಯಶಸ್ವೀ ಸಾಫಲ್ಯತೆ ಪಡೆದಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಇಂಥ ಪುಸ್ತಕಗಳು ಕನ್ನಡದಲ್ಲಿ ಒಂದೂ ಇಲ್ಲ.

ಪುಸ್ತಕದ ಕೆಲವು ಛಾಯಾಚಿತ್ರಗಳು ಅಷ್ಟು ಸಮರ್ಪಕವಾಗಿಲ್ಲ ಮರದ ಅಡ್ಡಸೀಳಿನ ಛಾಯಾಚಿತ್ರಗಳು ಪುಸ್ತಕಕ್ಕೆ ಉಪಯೋಗಿಸಿರುವ ಕಾಗದದ ಕಾರಣದಿಂದ ಅವನ್ನು ನೋಡಿ ಮರವನ್ನು ಗುರುತಿಸಲು ಸಹಾಯಮಾಡುವಂತಿಲ್ಲ. ಗ್ರಂಥಕರ್ತರು ಕಪ್ಪುಮಸಿಯಲ್ಲಿ ದೊಡ್ಡ ದೊಡ್ಡ ಕೈಚಿತ್ರಗಳನ್ನು ಮುಂದಿನ ಆವೃತ್ತಿಯಲ್ಲಿ ಅಳವಡಿಸಿದರೆ ಅವು ಬಹಳ ಚೆನ್ನಾಗಿರಬಲ್ಲವು. ಗ್ರಂಥಕರ್ತರು ಪುಸ್ತಕದಲ್ಲಿ ಕೊಟ್ಟಿರುವ ಅರಣ್ಯವೃಕ್ಷಗಳ ಪಟ್ಟಿ ಇನ್ನೂ ಅಪೂರ್ಣ ಎಂದಿದ್ದಾರೆ. ಈ ಪುಸ್ತಕದ ಮುಂದಿನ ಭಾಗ ಪ್ರಕಟವಾಗುವಾಗ ಲೇಖಕರು ಸಸ್ಯಶಾಸ್ತ್ರದ ಅಭ್ಯರ್ಥಿಗಳಿಗೂ ಅರಣ್ಯ ಇಲಾಖೆಯ ಎಲ್ಲ ವರ್ಗದ ನೌಕರರಿಗೂ ಇನ್ನೂ ಹೆಚ್ಚು ಉಪಯೋಗವಾಗುವಂತೆ ವಿವಿಧ ಮರಗಳನ್ನು ಗುರುತಿಸಲು ಅನುಕೂಲವಾಗುವಂತೆ ಸಸ್ಯಶಾಸ್ತ್ರದ ಸೂತ್ರಗಳನ್ನು (Keys) ತಯಾರಿಸಿ ಬರೆದುಕೊಟ್ಟರೆ ಅದು ಬಹು ಉಪಯುಕ್ತವಾಗಬಲ್ಲದು.

ಶ್ರೀಯುತ ಎಸ್. ಎಸ್. ರಾಮಸ್ವಾಮಿಯವರು ಶ್ರಮವಹಿಸಿ ಬರೆದಿರುವ "ಕರ್ನಾಟಕದ ಅರಣ್ಯವೃಕ್ಷಗಳು" ಎಂಬ ಈ ಪುಸ್ತಕ ಕನ್ನಡ ಜನತೆಗೆ ಅವರು ನೀಡಿರುವ ಒಂದು ಮಹಾ ಕಾಣಿಕೆ ಮಾತ್ರವೇ ಅಲ್ಲ. ಅದೊಂದು ಉಪಯುಕ್ತ ಗ್ರಂಥ.

★ ಎಂ. ಜೆ. ಪಂಚಾಕ್ಷರಪ್ಪ

ಸಾದರ ಸ್ವೀಕಾರ

೧. ಧರ್ಮ ಮತ್ತು ರಾಷ್ಟ್ರ

ಲೇಖಕರು : ವೇ. ಸುರೇಶಸ್ವಾಮಿ ಹಿರೇಮಠ (ಬಸಪಟ್ಟಿ).

ಪ್ರಕಾಶಕರು : ಶ್ರೀ ಷ. ಬ್ರ. ರಾಚೋಟಿ ಶಿವಾಚಾರ್ಯರು, ಗೋರಟಾ, ಬಿ.

ಬೆಲೆ : ರೂ. ೧, ಪುಟ : ೫೬.

೨. ಸಮಾಗಮ

ಲೇಖಕರು : ಪ್ರೊ. ಸಂಗಮನಾಥ ಜಿ. ಹಂಡಿ.

ಪ್ರಕಾಶಕರು : ಶೈಲಜಾ ಪ್ರಕಾಶನ, ವಿಜಾಪುರ.

ಬೆಲೆ : ರೂ. ೫, ಕ್ಯಾಲಿಕೋ ರೂ. ೬, ಪುಟ : xi+೧೫೯.

೩. ಭಾವಸಂಗಮ

ಲೇಖಕರು : ಶಂ. ಗು. ಬಿರಾದಾರ. (ಕವನ ಸಂಕಲನ).

ಪ್ರಕಾಶಕರು : ಭಾರತೀ ಸಾಹಿತ್ಯ ಭಂಡಾರ, ವಿಜಾಪುರ.

ಬೆಲೆ : ರೂ. ೨, ಪುಟ : ೫೫.

೪. ಜ್ಞಾನ ಗಂಗೋತ್ರಿ

ಕಿರಿಯರ ವಿಶ್ವಕೋಶ, ಸಂಪುಟ : ೧.

ಮನುಕುಲದ ಕಥೆ.

ಪ್ರಧಾನ ಸಂ. : ನಿರಂಜನ.

ಪ್ರಕಾಶಕರು : ಕರ್ನಾಟಕ ಕೋ-ಆಪರೇಟಿವ್ ಪಬ್ಲಿಸಿಂಗ ಹೌಸ್, ಲಿ. ಬೆಂಗಳೂರು.

ಪುಟ : xvi+೬೪೫+ಪ್ಲೇಟ್ಸ್; ಬೆಲೆ: ರೂ. ೫.

ಸಂಪಾದಕೀಯ

ಡಾ|| ಅಡಕೆ ಅವರ ಪುನರಾಯ್ಕೆ

ಸರ್ವಶ್ರೀ ಆರ್. ಎ. ಜಾಗೀರದಾರ, ಸಿ. ಸಿ. ಹುಲಕೋಟಿ, ಡಿ. ಸಿ. ಪಾವಟೆ, ಅವರಂಥ ಎತ್ತರದ ವ್ಯಕ್ತಿಗಳು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದುದು ಹೆಮ್ಮೆಯ ಸಂಗತಿ. ಈ ಶ್ರೀಮಂತ ಪರಂಪರೆಯಲ್ಲಿ ಅಧಿಕಾರಕ್ಕೆ ಬಂದ ಡಾ|| ಎ. ಎಸ್. ಅಡಕೆ ಅವರು ಮೂರು ವರುಷಗಳ ಕಾಲ 'ಜನಪ್ರಿಯ ಕುಲಪತಿಗಳು' ಎಂದು ಹೆಸರುಗಳಿಸಿದರು. ವಿಶ್ವವಿದ್ಯಾಲಯದ ಮುನ್ನಡೆಗೆ ಪಾತ್ರರಾದರು. ಇದರ ಪ್ರತೀಕವೆನ್ನುವಂತೆ ಅವರು ಈ ಸಲದ ಚುನಾವಣೆಯಲ್ಲಿಯೂ ಕುಲಪತಿಗಳಾಗಿ ಆರಿಸಿ ಬಂದಿರುವರು. 'ಭಾರತಿ' ಅವರಿಗೆ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು-ಸುವರ್ಣಮಹೋತ್ಸವ

ಕರ್ನಾಟಕದ ಹೆಸರಾಂತ ಸಾಂಸ್ಕೃತಿಕ ಸಂಸ್ಥೆಯಾದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸುವರ್ಣ ಮಹೋತ್ಸವವನ್ನು ೧೯೭೦ ಡಿಶಂಬರ ೨೫, ೨೬ ರಂದು ವೈಭವದಿಂದ ಆಚರಿಸಿತು. ಇದರ ಅಂಗವಾಗಿ ನಾಡಿನ ೩೨ ವಿದ್ವಾಂಸರನ್ನು, ಕಲಾವಿದರನ್ನು ಸತ್ಕರಿಸಿತು. ಕನ್ನಡ ನಾಡು ನುಡಿ ಸಾಹಿತ್ಯದ ಏಳ್ಗೆಗೆ ನಿರಂತರ ದುಡಿದ, ದುಡಿಯುತ್ತಿರುವ ಈ ಸಂಸ್ಥೆ, ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು 'ಭಾರತಿ' ಹಾರೈಸುತ್ತದೆ.

೪೭ ನೆಯ ಸಾಹಿತ್ಯ ಸಮ್ಮೇಲನ

ಕನ್ನಡ ಸಾಹಿತ್ಯ ಪರಿಷತ್ತು ೪೭ ನೆಯ ಕನ್ನಡ ಸಾಹಿತ್ಯ ಸಮ್ಮೇಲನವನ್ನು ಈ ಸಲ ಬೆಂಗಳೂರಿನಲ್ಲಿ ಅಭೂತಪೂರ್ವ ರೀತಿಯಲ್ಲಿ ನೆರವೇರಿತು. ಪುಸ್ತಕ ಪ್ರದರ್ಶನ ಕಲಾ ಪ್ರದರ್ಶನಗಳಿಂದ ಆಕರ್ಷಯುತವಾಗಿದ್ದ ಈ ಸಮ್ಮೇಲನದ ವೈಶಿಷ್ಟ್ಯ 'ಅಂತರ್ ಭಾರತಿ'. ಇಂತಹ ಸಮ್ಮೇಲನಗಳು ಉತ್ತರೋತ್ತರ ನಡೆದು ಕನ್ನಡದ ಮುನ್ನಡೆಗೆ ನೆರವಾಗಲಿ ಎಂದು 'ಭಾರತಿ' ಹಾರೈಸುತ್ತದೆ.

ದೇಜಗೌ-ಸಮ್ಮೇಲನಾಧ್ಯಕ್ಷತೆ

ಬೆಂಗಳೂರಿನಲ್ಲಿ ಜರುಗಿದ ಈ ಸಲದ ಸಾಹಿತ್ಯ ಸಮ್ಮೇಲನಕ್ಕೆ ಮೈಸೂರು ವಿಶ್ವವಿದ್ಯಾಲಯದ ಇಂದಿನ ಕುಲಪತಿಗಳೂ, ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ನಿರ್ದೇಶಕರೂ ಆದ ಶ್ರೀ ದೇ. ಜವರೇಗೌಡ ಅವರು ಅಧ್ಯಕ್ಷರಾದುದು

ಸಂತೋಷದ ಸಂಗತಿ. ಕನ್ನಡ ವೈಪುರಿದು ಉಳುತ್ತಿರುವ ಮತ್ತು ಕನ್ನಡಕ್ಕೆ ವಿದ್ವತ್ತಿನ ತಳಹದಿ ಅವಶ್ಯವಾಗಿರುವ ಈ ಪ್ರಸಂಗದಲ್ಲಿ ಅವರ ಆಯ್ಕೆ ಔಚಿತ್ಯಪೂರ್ಣವಾಗಿದೆ. ಅವರ ಘನ ಅಧ್ಯಕ್ಷತೆಯಲ್ಲಿ ಸಮ್ಮೇಲನ ಯಶಸ್ವಿಯಾಗಿ ನೆರವೇರಿತು. ಮಾತೃ ಭಾಷಾ ಅಭಿಮಾನವನ್ನು ಬೆಳೆಸಿಕೊಳ್ಳಲು ಕ್ರಿಯಾಶೀಲರಾಗಲು ಕನ್ನಡಿಗರಿಗೆ ಕರೆ ನೀಡಿರುವರು. 'ಭಾರತಿ' ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಅರುವತ್ತು ತುಂಬಿದ ಪ್ರೊ. ಮಾಳವಾಡ

ಉತ್ತರ ಕರ್ನಾಟಕದ ಹಿರಿಯ ತಲೆಮಾರಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಸ್. ಎಸ್. ಮಾಳವಾಡ ಅವರಿಗೆ ೧೪ ನವಂಬರ ೧೯೭೦ ರಂದು ೬೦ ವರ್ಷ ತುಂಬಿದವು. ತಮ್ಮ ಬೋಧನ, ಲೇಖನ, ಮತ್ತು ಉಪನ್ಯಾಸಗಳ ಮೂಲಕ ಕನ್ನಡವನ್ನು ಉಳಿಸಿದ, ಬೆಳೆಸಿದ ಹಿರಿಯರಲ್ಲಿ ಅವರೂ ಒಬ್ಬರು. ಗ್ರಂಥವಿಮರ್ಶೆ–ಅಧ್ಯಾತ್ಮ ಚಿಂತನಗಳ ಸಂಗಮವಾದ ಅವರಿಗೆ 'ಭಾರತಿ' ಆಯುರಾರೋಗ್ಯ ಭಾಗ್ಯವನ್ನು ಹಾರೈಸುತ್ತದೆ.

ಐವತ್ತು ತುಂಬಿದ ಶ್ರೀ ಪಾಟೀಲ ಪುಟ್ಟಪ್ಪ

ಕನ್ನಡ ಪತ್ರಿಕೋದ್ಯಮದಲ್ಲಿ ಪುಟ್ಟಪ್ಪನವರದು ದೊಡ್ಡ ಹೆಸರು. 'ಪ್ರಪಂಚ'ದ ಮೂಲಕ ಈ ಉದ್ಯಮವನ್ನು ಪ್ರಾರಂಭಿಸಿ 'ವಿಶ್ವವಾಣಿ' 'ಸಂಗಮ' 'ಸ್ತ್ರೀ' 'ಉದ್ಯೋಗ' 'ಮನೋರಮಾ'ಗಳ ಮುಖಾಂತರ ಪತ್ರಿಕಾ ಪ್ರಪಂಚದಲ್ಲಿ 'ಅನೇಕ'ಗಳನ್ನು ಪ್ರತಿಷ್ಠಾಪಿಸಿದ ಮಹಾ ಶಕ್ತಿ ಅವರು. ಕನ್ನಡ ಪತ್ರಿಕೆಯ ತಂತ್ರ, ಭಾಷೆಗಳಿಗೆ ಹೊಸ ಸತ್ವ ಹೊಸ ತೇಜ ನೀಡಿ ಮನ್ವಂತರವನ್ನೇ ತೆರೆದ ಅವರಿಗೆ ೫೦ ವರ್ಷ ತುಂಬಿದ ಪ್ರಸಂಗದಲ್ಲಿ ಸ್ನೇಹಿತರು, ಅಭಿಮಾನಿಗಳು ಅವರ ಹುಟ್ಟುಹಬ್ಬವನ್ನು ಆಚರಿಸಲಿದ್ದಾರೆ. 'ಭಾರತಿ' ಪುಟ್ಟಪ್ಪನವರಿಗೆ ಇನ್ನೂ ದೊಡ್ಡ ಶಕ್ತಿಯನ್ನು ಕೋರುತ್ತದೆ.

ಐವತ್ತು ತುಂಬಿದ ತ. ರಾ. ಸು.

'ತ. ರಾ. ಸು' ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಂಸ್ಮರಣೀಯರಾದ ಲೇಖಕರು. ಕಾದಂಬರಿ ಕ್ಷೇತ್ರದಲ್ಲಿ ಅವರು ಮೈಲುಗಲ್ಲುಗಳನ್ನು ನೆಟ್ಟಿರುವರು. ಐತಿಹಾಸಿಕ ಕಾದಂಬರಿಗಳಿಗೊಂದು ಆದರ್ಶವನ್ನಿತ್ತಿರುವರು. ಕನ್ನಡದ ಮಹಾಶಕ್ತಿಯೇ ಮೈದಾಳಿದಂತಿದ್ದ ತ. ರಾ. ಸು. ಕನ್ನಡಕ್ಕಾಗಿ ಹಗಲಿರುಳು ಪರಿಶ್ರಮಿಸುತ್ತಿರುವರು. ಅವರ ಐವತ್ತರ ಐಸಿರಿಯಲ್ಲಿ 'ಭಾರತಿ' ಪರಮಾನಂದವನ್ನು ಅಭಿವ್ಯಕ್ತಪಡಿಸುತ್ತದೆ.

ಸಿ. ವಿ. ರಾಮನ್ : ಶ್ರದ್ಧಾಂಜಲಿ

ಕರ್ನಾಟಕಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟ ಪುಣ್ಯ ಪುರುಷರಲ್ಲಿ ವಿಶ್ವವಿಖ್ಯಾತ ಸಿ. ವಿ. ರಾಮನ್ ಒಬ್ಬರು. ಅವರ ಆಕಸ್ಮಿಕ ಮರಣದಿಂದ ಜಗತ್ತಿಗೆ, ವಿಜ್ಞಾನ ಜಗತ್ತಿಗೆ ತುಂಬಿಬಾರದ ಹಾನಿಯುಂಟಾಗಿದೆ. ಈ ಸುಪ್ರಸಿದ್ಧ ವಿಜ್ಞಾನಿಗೆ 'ಭಾರತಿ' ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ವೀರಕೇಸರಿ ಸೀತಾರಾಮಶಾಸ್ತ್ರಿ : ಶ್ರದ್ಧಾಂಜಲಿ

ಕನ್ನಡದ ಐತಿಹಾಸಿಕ ಕಾದಂಬರಿಕಾರರಲ್ಲಿ ವೀರಕೇಸರಿ ಸೀತಾರಾಮಶಾಸ್ತ್ರಿಗಳದು ಎದ್ದು ಕಾಣುವ ಹೆಸರು. ಹೈದರ್, ಟೀಪುಗಳ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯಗಳನ್ನು ಕುರಿತು ಬರೆದ ಕಾದಂಬರಿಗಳು, ಮತ್ತು ಕೈನೀರೆರೆದು ಪೋಷಿಸುತ್ತ ಬಂದ 'ವೀರಕೇಸರಿ' ಪತ್ರಿಕೆ ಇವು ಅವರ ಕೃಷಿ ವಿಶೇಷ. ಶ್ರೀಯುತರ ನಿಧನದಿಂದ ಕನ್ನಡ ಸಾಹಿತ್ಯ, ಒಬ್ಬ ಸುಪ್ರಸಿದ್ಧ ಸಾಹಿತಿಯನ್ನು ಕಳೆದುಕೊಂಡಿದೆ. ಅವರ ಆತ್ಮಕ್ಕೆ 'ಭಾರತಿ' ಶಾಂತಿಯನ್ನು ಕೋರುತ್ತದೆ.

ಕನ್ನಡ ಅಧ್ಯಯನ ಸಂಸ್ಥೆ

ಕರ್ನಾಟಕ ವಿಶ್ವವಿದ್ಯಾಲಯದ ಸಿನೆಟ್ ಸಭೆ ೨೩-೧೨-೧೯೭೦ ರಂದು ಕನ್ನಡ ವಿಭಾಗವು 'ಕನ್ನಡ ಅಧ್ಯಯನ ಸಂಸ್ಥೆ'ಯಾಗಲು ಮನ್ನಣೆ ನೀಡಿತು. ಕನ್ನಡ ಜಗತ್ತನ್ನು ವಿಸ್ತರಿಸಲು ಅನುವುಮಾಡಿಕೊಟ್ಟ ಈ ಪ್ರಸಂಗ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಕನ್ನಡದ ಬೋಧನ, ಸಂಶೋಧನ, ಪ್ರಕಟನೆಗಳಿಗೆ ಇದರಿಂದ ಸಾವಿರದ ಶಕ್ತಿ ಸಂಪ್ರಾಪ್ತವಾಗಿದೆ.

ಲೇಖಕರ ಪರಿಚಯ

೧ ಶ್ರೀ ಚೆನ್ನವೀರ ಕಣವಿ

ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನಾ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಡಾ. ಬುದ್ದಣ್ಣ ಹಿಂಗಮಿರೆ

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೩. ಕು. ವೀಣಾ ಎಲಬುರ್ಗಿ

ಇಂಗ್ಲೀಷ್ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೪. ಡಾ. ನಾರಾಯಣ ಮಹಿಷಿ

ಸಹಾಯಕ ಸಂಶೋಧಕರು, ಟಾಟಾ ವಿಜ್ಞಾನ ಸಂಸ್ಥೆ ಬೆಂಗಳೂರ.

೫. ಡಾ. ಆರ್. ಎಮ್. ಗುರವ

ರೆವಿನ್ಯೂ ಆಡಳಿತಗಾರರಾಗಿ ನಿವೃತ್ತಿ ಹೊಂದಿದ ಇವರು ಶಾಸನ ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿ ಉಳ್ಳವರು.

೬. ಶ್ರೀ ಸಿ. ಕೆ. ಎನ್. ರಾಜ್

ಕಾಯದೆ ಅಧ್ಯಾಪಕರು ವಿಶ್ವವಿದ್ಯಾಲಯದ 'ಲಾ' ಕಾಲೇಜ, ಧಾರವಾಡ.

೭. ಶ್ರೀ ಗುರುಲಿಂಗ ಕಾಪಸೆ

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೮. ಶ್ರೀ ವ್ಹಿ. ಜಿ. ಮರಿಹಾಳ

ಅಧ್ಯಾಪಕರು, ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

೯. ಡಾ. ಎಂ. ಎಸ್. ಸದಾಶಿವಯ್ಯ

ಪ್ರಮುಖ ಪ್ರಾಧ್ಯಾಪಕರು, ಭೂವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಶ್ರೀ ಬಿ. ಪಿ. ಗೋವಿಂದರಾಜುಲು

ರೀಡರ್, ಮಾನಸಗಂಗೋತ್ರಿ, ಮೈಸೂರು.

೧೧. ಶ್ರೀ ಪ್ರಭುಸ್ವಾಮಿಮಠ

ಕನ್ನಡ ಅಧ್ಯಾಪಕರು, ಲಾಲಬಹದ್ದೂರಶಾಸ್ತ್ರಿ ಕಾಲೇಜು, ಸಾಗರ.

೧೨. ಡಾ. ಎಂ. ಬಿ. ಕೊಟ್ರಶೆಟ್ಟಿ

ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩. ಶ್ರೀ ಅ. ಸುಂದರ

ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಶ್ರೀ ಎಮ್. ವಿ. ಜಂಬುನಾಥನ್

ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಕನ್ನಡ ಸಾಹಿತ್ಯ ಅಭ್ಯಾಸದಲ್ಲಿ ವಿಶೇಷವಾದ ಆಸ್ಥೆಯುಳ್ಳವರು.

೧೫. ಶ್ರೀ ಕೆ. ಎ. ಬನ್ನಟ್ಟಿ

ಇಂಗ್ಲೀಷ್ ಅಧ್ಯಾಪಕರು, ವಿಜಯಮಹಾಂತೇಶ ಕಾಲೇಜ, ಇಲಕಲ್ಲ.

೧೬. ಶ್ರೀ ಸೋಮಶೇಖರ ಸೋಮ

ಹಿಂದೀ ಅಧ್ಯಾಪಕರು, ಕಿಟೆಲ್ ಕಾಲೇಜ್, ಧಾರವಾಡ.

೧೭. ಶ್ರೀ ಚಂದ್ರಕಾಂತ ಕುಸನೂರ

ಟ್ರೇನಿಂಗ ಕಾಲೇಜ, ಗುಲಬರ್ಗಾ.

೧೮. ಡಾ. ಎಂ. ಎಂ. ಕಲಬುರ್ಗಿ

ಅಧ್ಯಾಪಕರು, ಕನ್ನಡ ಅಧ್ಯಯನಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯. ಡಾ. ಎ. ಎಸ್. ಅಡಕೆ

ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦. ಡಾ. ಎಂ. ಜೆ. ಪಂಚಾಕ್ಷರಪ್ಪ

ಪ್ರಾಧ್ಯಾಪಕರು, ಸಸ್ಯಶಾಸ್ತ್ರವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

KARNATAK UNIVERSITY PUBLICATIONS
ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books
(ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ ಭಾಗ ೧, ಸಂಪುಟ ೩	2·00

II. Research Publications Series
(ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	—*R. V. Joshi*	15·00
2	The Karnatak Theatre —*H. K. Ranganath*	Ord. binding Half Calico	3·00 5·00
3	Some Problems in Jaina Psychology —*T. G. Kalghatgi*	Full cal. Half calico	7·00 6·00
4	ಕನ್ನಡ ಜಾನಪದ ಗೀತಗಳು	—ಜಿ. ಎಸ್. ಗದ್ದಗಿಮಠ	10·00
5	The Concept of Comedy	—*G. S. Amur*	7·00 $ 2 or Sh. 13
6	Local Self-Government in Mediaeval Karnatak —*G. S. Dikshit*		7·00 $ 2 or Sh. 13
7	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	—ಎಂ. ಎಸ್. ಸುಂಕಾಪುರ	8·00
8	Basic Syllabus in Practice	—*N. R. Hiremath*	10·00 $ 3 or £. 1

9 The Later Phase in the Development of
W. B. Yeats —*S. R. Mokashi* 10.00
$ 3 or £. 1

10 Some Studies in Boolean Algebra 7.00
—*E. Sampathkumarachar* $ 2 or Sh. 14

11 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

12 A History of South Kanara —*K. V. Ramesh* 30·00

13 A Critical Study of the Hindu Astronomy in the Light and Language of the Modern 12.00
—*D. A. Somayaji* $ 4 or Sh. 25

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.00
—*R. D. Ranade*

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa —*R. D. Karmarkar* 4.00

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 ಮಹಾಕವಿ ಷಡಕ್ಷರದೇವ ಹಾಗು ಅವನ ಕೃತಿಗಳು 3·00
—ಬಿ. ಶಿವಮೂರ್ತಿಶಾಸ್ತ್ರೀ

10 Śaṅkara's Advaita —*R. D. Karmarkar* 3·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ 4·00
— ವಿ. ಸೀತಾರಾಮಯ್ಯ

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರಸಾಹಿತ್ಯನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯು ಪುರೋಭಿವೃದ್ಧಿ 2·50
—ಆದ್ಯ ರಂಗಾಚಾರ್ಯ

15 ಸಾಹಿತ್ಯವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the under-developed regions in Italy —*T. K. Meti* 10·00
$ 5 or Sh. 30

V. ಕನ್ನಡ ಕಾವ್ಯಮಾಲೆ

Kannada Classical Series

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12·00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20·00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨ 8·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3·50
ಸಂ. : ಆರ್. ಸಿ. ಹಿರೇಮಠ

9	ನೇಮಿನಾಥಪುರಾಣಂ	ಸಂ. : ಬಿ. ಎಸ್. ಕುಲಕರ್ಣಿ	6·00
10	ಅಕ್ರೂರಚರಿತ್ರೆ	ಸಂ. : ಬೆಟಗೇರಿ ಕೃಷ್ಣಶರ್ಮಾ	4·00
11	ಜೀವಂಧರಚರಿತೆ	ಸಂ. : ಬಿ. ಎಸ್. ಕುಲಕರ್ಣಿ	7·00

VI. ಉಪನ್ಯಾಸ ಗ್ರಂಥಮಾಲೆ

Kannada Extension Lectures Booklets Series

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂ. ವಾ. ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5 ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿ'ಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ

27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎನ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ಸ್‌ಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ಧಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು — ಬಿ. ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ

60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ — ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಜಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು — ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜೆ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ

92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ

93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ

94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ

95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ

96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ

97. ಲಕ್ಷ್ಮಣದಂಡೇಶ — ವ್ಹಿ. ಶಿವಾನಂದ

98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ

99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ

100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ

101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ

102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ — ಎಂ. ಎಸ್. ಎಸ್. ರಾವ್

103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ

104. ಪೇಟೆ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ

105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ

106. ಮೈಲಾರದೇವರು — ಶ್ರೀನಿವಾಸ ರಿತ್ತಿ

107. ಭಗವದ್ಗೀತೆ — ಎಲ್. ಸಿ. ಪಾಟೀಲ

108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ

109. ಜನಪದ ಕಾವ್ಯದಲ್ಲಿ ಜೀವನಧರ್ಮ — ಸಿ. ವ್ಹಿ. ಮಲ್ಲಾಪುರ

110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ

111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ

112. ತಮಿಳು ಶಿವಭಕ್ತೆ ಕಾರಿಕಾಲಮ್ಮೆ — ಎಂ. ಎಸ್. ಲಠ್ಠೆ

113. ಜಾನಪದ ವೀರಗೀತೆಗಳು — ಜಿ. ಬಿ. ಮಹೀಶವಾಡಿ

114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ

115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ

116. ಭಾರತದ ಪ್ರಾಚೀನ ಸಾಮ್ರಾಜ್ಯಗಳು — ಎ. ಎಂ. ಅಣ್ಣಿಗೇರಿ

117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ

VI ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

		PRICE
1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2·50

VIII. Other Publications

(ಇತರ ಪ್ರಕಟನೆಗಳು)

1	Hubli City—A Study in Urban Economic Life —*B. R. Dhekney*	10·00 $ 3 or £ 1
2	Private International Law — *N. K. Dixit & Negalur Ranganath*	10·00
3	The Structure of Kannada — *R. C. Hiremath*	5·00
4	विवेकचिंतामणि (Marathi rendering of Nijaguna Shivayogi's Viveka Chintamani in Kannada) (Joint publication of the Karnatak University, Dharwar & the Poona University, Poona) —Ed. *D. N. Awalikar*	6·75
5	ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ	1·50
6	ರಸಾಯನಶಾಸ್ತ್ರ — ಆರ್. ಎಸ್. ಹವಾಸಾಗರ	4·00
7	ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ	3·00
8	ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ —(ಅನು. : ಎಂ. ಎಸ್. ದೇಶಪಾಂಡೆ)	5·00
9	ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ	2·50
10	Studies in State Administration —Ed. *G. S. Halappa*	15·00

11	Yashodhara Charita —Ed. *K. Krishnamoorthy*	5·00 $ 1·50 or Sh. 10
12	Essays in Sanskrit Criticism —*K. Krishnamoorthy*	5·00
13	The First General Elections in Goa —*G. S. Halappa, A. M. Rajashekharaiah & K. Raghavendra Rao*	3·00
14	Sunyasampadane—Vol. I (*English version of a Kannada work with Commentary & Notes*) —Ed. *S. C. Nandimath, L. M. A. Menezes and R. C. Hiremath*	12·00 $ 4 or Sh· 20
15	Kavi Kaumudi —Ed. *K. Krishnamoorthy*	1·50
16	ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ	15·00
17	ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ	7·00
18	ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ	20·00
19	ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) —ಸಂ. ಆರ್. ಸಿ. ಹಿರೇಮಠ	20·00
20	Sunyasampadane—Vol. II —Ed. *S. S. Bhoosanurmath & Armando Menezes*	20·00 $ 5 or Sh· 30
21	ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ	20·00
22	ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ	7·00
23	ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5·00
24	ಇಪ್ಪತ್ತೇಳು ಶಿವಶರಣೆಯರ ವಚನಗಳು —ಸಂ. ಆರ್. ಸಿ. ಹಿರೇಮಠ	5·00
25	ಅಮುಗೆ ರಾಯಮ್ಮನ ವಚನಗಳು ಮತ್ತು ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5·00
26	Critical Essays on Indian Writing in English —Ed. *M. K. Naik, S. K. Desai and G. S. Amur*	20·00 $ 4 or Sh. 30
27	Sāyana's Subhāṣita-Sudhānidhi —Ed. *K. Krishnamoorthy*	10·00
28	ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, ಎಂ. ಎಂ. ಕಲಬುರ್ಗಿ	2·00

29 Urban Studies : An Aid to Research — 30·00
—B. N. Sinha & T. N. Achut Rao — $ 10

30 Sunyasampadane - Vol. III — 20·00
—Ed. S. S. Bhoosnurmath & Armando Menezes — $ 5 or Sh. 30

31 Old People of Makunti — 10·00
—H. M. Marulasiddaiah

32 Sunyasampadane - Vol. IV. — 20.00
-Ed. S.S. Bhoosnurmath & Armando Menezes — $ 5 or Sh. 30

33 Sirsi: An Urban Study — 20·00
—Dr. B. N. Sinha — $ 7

34 Contributions to the Understanding of Indian Civilization. — 3.00
—Baidyanath Saraswati — $ 1 or Sh. 8

IX. UNIVERSITY JOURNALS

Annuals :

1 Journal of the Karnatak University — Science

2 Journal of the Karnatak University — Humanities

3 Journal of the Karnatak University — Social Sciences

Rate of Annual Subscription for Each Journal :

Rs. 5-00 (In India)

2 Dollars
14 Shillings } (Foreign)

Quartarly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. ೮/- (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨.೫೦ (ಅಂಚೆವೆಚ್ಚ ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Monthly : 50 paise

Annual : Rs. 6/-

X. ಕನ್ನಡ ಪಠ್ಯಪುಸ್ತಕ ಮಾಲೆ

ಪಿ.ಯು.ಸಿ. ಪಠ್ಯಪುಸ್ತಕಗಳು

			ರೂ. ಪೈಸೆ
೧.	ರಾಜ್ಯಶಾಸ್ತ್ರ ಪರಿಚಯು	....	೩ – ೦೦
೨.	ಸಂಸ್ಕೃತ ಗದ್ಯಪದ್ಯ ಪರಿಚಯು	....	೩ – ೦೦
೩.	ಉದ್ಯಾನಶಾಸ್ತ್ರ ಪರಿಚಯು	....	೩ – ೭೫
೪.	ಅರ್ಥಶಾಸ್ತ್ರ ಪರಿಚಯು	....	೪ – ೦೦
೫.	ವಾಣಿಜ್ಯಶಾಸ್ತ್ರ ಪರಿಚಯು	....	೫ – ೦೦
೬.	ತರ್ಕಶಾಸ್ತ್ರ ಪರಿಚಯು	....	೩ – ೦೦
೭.	ಜಗತ್ತಿನ ಇತಿಹಾಸ	....	೪ – ೫೦
೮.	ಬೀಜಗಣಿತ – ಕಲನಶಾಸ್ತ್ರ ಪರಿಚಯು	....	೪ – ೫೦
೯.	ಸಮಾಜಶಾಸ್ತ್ರ ಪರಿಚಯು	....	೩ – ೦೦
೧೦.	ಮಾನವಶಾಸ್ತ್ರ ಪರಿಚಯು	....	೩ – ೦೦
೧೧.	ಸಸ್ಯಶಾಸ್ತ್ರ ಪರಿಚಯು	....	೫ – ೫೦
೧೨.	ಪ್ರಾಯೋಗಿಕ ರಸಾಯನಶಾಸ್ತ್ರ	....	೩ – ೫೦
೧೩.	ಗಣನಶಾಸ್ತ್ರ ಪರಿಚಯು	....	೫ – ೦೦

ಪದವಿ ಪ್ರಥಮ ಭಾಗದ ಪಠ್ಯಪುಸ್ತಕಗಳು

೧೪.	ಸಂಸ್ಕೃತ ಗದ್ಯ–ಪದ್ಯ	....	೨ – ೫೦
೧೫.	ರಾಜ್ಯಶಾಸ್ತ್ರ	....	೪ – ೦೦
೧೬.	ಮಾರಾಟ ಹಾಗು ವಿಕ್ರಯು ಶಾಸ್ತ್ರ	....	೪ – ೫೦